
ಕಸ್ತೂರಿ

ಮಾರ್ಚ್, ೧೯೮೨

ಬೆಲೆ : ರೂ. ೨-೫೦



ಕಸ್ತೂರಿ

ಕನ್ನಡ ಡೈಜೆಸ್ಟ್

ಸಹಾಯಕ ಸಂಪಾದಕ :
ಮಾಧವ ನಾ. ಮಹಿಷಿ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ಕೆರೆಯಂ ನೆರೆಯುಲಿ ಕಾಯ್ವೆಂ

ಚಿತ್ರ :
ಎನ್. ಎಸ್. ಗೀತಾ

ಜನವರಿ ೧೯೮೨ರಿಂದ ಜಾರಿಯಲ್ಲಿ ಬಂದಿರುವ ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

ಬೆಳಕಿಂಡಿ

ದೇವರು ಮಾಡಿದ ಎರಡನೆಯ ತಪ್ಪೆಂದರೆ ಸ್ತ್ರೀಯನ್ನು ಸೃಷ್ಟಿಸಿದ್ದು.

—ಫ್ರೆಡರಿಕ್ ನೀತ್ಸೆ

•

"ದೂರು ಕೊಡೋದೆಲ್ಲಿ?"

"ಇಲ್ಲಿಯೆ. ಬೋರ್ಡ್ ಹಾಕಿದೀವಲ್ಲಾ..."

"ಹೌದ್ರಿ-ಅದ್ರ ನಿಮ್ಮ ಬಗ್ಗೆ ದೂರು ಕೊಡೋದೆಲ್ಲಿ ಅಂತ?"

—ಬ್ಲಾಂಡೆಲ್ ಲಿನ್

*

ಈ ಜಗತ್ತಿನಲ್ಲಿ ಹರಿದು ಹಂಚಿದಷ್ಟೂ ಹತ್ತು ಪಟ್ಟು ಹೆಚ್ಚಾಗುವ ವಸ್ತುವೆಂದರೆ ಸಂತೋಷ ಮಾತ್ರ.

—ಜೊಸೆಫ್ ಫೋರ್ಟ್ ನ್ಯೂಟನ್

*

ಗಂಡನೆಂದರೆ ಮೊಟ್ಟೆಯಿದ್ದ ಹಾಗೆ; ಸದಾಕಾಲ ಕುದಿಯುವಂತೆ ಮಾಡುತ್ತಲೇ ಇದ್ದರೆಂದರೆ ಗಟ್ಟಿಯಾಗಿ ಬಿಡುತ್ತಾನೆ. ಕರಗಿಸುವುದೇ ಕಷ್ಟವಾಗುತ್ತದೆ.

—ಫ್ರೆಡ್ ಅನ್‌ಸ್ಟರ್

*

ಕೆಲ ಜನ ಕುದುರೆಯಂತೆ ಕೆಲಸ ಮಾಡುತ್ತಾರೆ. ಬಾಸ್ ಬೆನ್ನೇರಿ ನಿಂತಾಗ.

—ಗ್ಯಾಬಿಯೆಲ್ ಹೆಟರ್

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಉತ್ತಮ ಲೇಖನ

ಡಾ. ಸಿ. ಬಿ. ದೇಸಾಯಿಯವರ 'ಪ್ರಾಚೀನ ಭಾರತದಲ್ಲಿ ಅಕ್ಯುಪಂಕ್ಚರ್' ನಿಜಕ್ಕೂ ಒಂದು ಉತ್ತಮ ಬರಹ. ಸೂಜಿ ಚಿಕಿತ್ಸೆ ಬಗ್ಗೆ ಓದುತ್ತಿದ್ದಂತೆ 'ಅಬ್ಬಾ!' ಎನ್ನುವಷ್ಟು ಆಶ್ಚರ್ಯವಾಯಿತು. ಪ್ರಕಟಿಸಿದ ನಿಮಗೆ ಧನ್ಯವಾದಗಳು. ಒಂದು ಮಾತು: ಈಚೀಚೆಗಂತೂ 'ಕಸ್ತೂರಿ'ಯಲ್ಲಿ ಬರೀ ಅನುವಾದಿತ ಕತೆಗಳೇ ಪಚ್ಚಾಗಿರುತ್ತವೆ. ನನಗಂತೂ ಬೇಜಾರಾಗಿಬಿಟ್ಟಿದೆ. ಇನ್ನಾದರೂ ಸ್ವತಂತ್ರವಾಗಿ ರಚಿಸಿದ ಕತೆಗಳನ್ನು ಪ್ರಕಟಿಸುತ್ತೀರೆಂದು ಆಶಿಸುತ್ತೇನೆ.

ದೊಡ್ಡಬಳ್ಳಾಪುರ —ಡಿ. ಎನ್. ಶ್ರೀನಿವಾಸ

ಧನ್ಯವಾದಗಳು

ಫೆಬ್ರುವರಿ ಸಂಚಿಕೆಯ (೧೯೮೨) ಉದಯ ಜಾದೂಗಾರರ 'ಮಂತ್ರವೋ ಮಾಟವೋ ಮೋಸವೋ' ವೈಚಾರಿಕ ಲೇಖನ ಜನಸಾಮಾನ್ಯರನ್ನು ಮೋಸ ಮಾಡಿ ಹಣ ಕಸಿಯುವ ಹಗಲುಗಳ್ಳರ ಬಣ್ಣ ಬಯಲು ಮಾಡಿದೆ. ಲೇಖಕರಿಗೆ ಧನ್ಯವಾದಗಳು.

ಗುಳಿಗೇನಹಳ್ಳಿ —ಜಿ. ಕೆ. ನಾಗಲಿಂಗಪ್ಪ

ಕಾರಸ್ಥಾನ

'ಕಸ್ತೂರಿ'ಯನ್ನು ನಾನೂ ನನ್ನ ತಂದೆಯವರೂ ಓದುತ್ತೇವೆ. ಅದರಲ್ಲಿಯೂ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ವಿಭಾಗವನ್ನು ಮರೆಯದೇ ಓದುತ್ತೇವೆ. ಆದರೆ ಒಮ್ಮೊಮ್ಮೆ ಕೆಲವೊಂದು ತಪ್ಪುಗಳನ್ನು ಕಂಡಾಗ ವಿಷಾದವಾಗುತ್ತದೆ.

ಜನವರಿ ೧೯೮೨ರ ಸಂಚಿಕೆಯಲ್ಲಿ "ಕಾರಸ್ಥಾನ" ಫಾರಸಿ ಶಬ್ದವೆಂದು ಪ್ರಕಟವಾಗಿದೆ. ಆದರೆ ಅದು ಭಾರತೀಯ ಭಾಷೆಯಾದ ಉರ್ದು ಶಬ್ದವೆಂದು ನನ್ನ ತಂದೆಯವರು ತಿಳಿಸಿದರಲ್ಲದೇ ಉರ್ದು ಭಾಷೆಯ ಶಬ್ದಕೋಶದಲ್ಲಿ ಉರ್ದು ಎಂದು ನನಗೆ ಮನದಟ್ಟು ಮಾಡಿಕೊಟ್ಟರು. ಮುಂದಿನ ಪ್ರಕಟಣೆಯಲ್ಲಿ ಸರಿಯಾದ ಮಾಹಿತಿ ವಾಚಕರಿಗೆ ಒದಗಿಸುವಿರೆಂದು ನಂಬುತ್ತೇನೆ.

ಕೊಪ್ಪಳ —ಕೆ. ಎಸ್. ಎಚ್. ಕೊಪ್ಪಳ

[ಈಗ ಬಳಸುವ ವಂಚನೆ, ಒಳಸಂಚು ಇತ್ಯಾದಿ ಅರ್ಥದಲ್ಲಿ ಕಾರಸ್ಥಾನ ಶಬ್ದವನ್ನು ಮರಾಠಿಯಿಂದ ನಾವು ತೆಗೆದುಕೊಂಡಿದ್ದು ಅದಕ್ಕೆ ಪರ್ಷಿಯನ್ 'ಕಾರಸ್ತಾನೀ'ಯೇ ಆಧಾರವಾಗಿದೆ. ಉರ್ದುವಿಗೆ ಅದು ಬಂದುದು ಫಾರಸಿಯಿಂದಲೇ ಉರ್ದು ಕೋಶಗಳಲ್ಲಿ ಈ ಪದಕ್ಕೆ ಫಾರಸಿ ಮೂಲವನ್ನೇ ಹೇಳಿದೆ. ಹಲ ಶತಮಾನಗಳ ಕಾಲ ಈ ದೇಶದಲ್ಲಿ ಫಾರಸಿ ಸರಕಾರಿ ಭಾಷೆಯಾಗಿದ್ದು ಉರ್ದು ಸಹಿತ ಕೆಲ ದೇಶಭಾಷೆಗಳು ಅಲ್ಲಿಂದಲೇ ಅದನ್ನು ತೆಗೆದುಕೊಂಡಿರಬೇಕು. ಸಂಸ್ಕೃತದಲ್ಲಿ ಕಾರ್ಯಸ್ಥಾನ ಶಬ್ದ ಉಂಟು. ಅದರ ಅರ್ಥ ಕಚೇರಿ, ನ್ಯಾಯಸ್ಥಾನ ಇತ್ಯಾದಿ. —ಸಂ.]

ಅಪ್ಪಟ ಕೃತಿಚೌರ್ಯ...

'ಕಸ್ತೂರಿ'ಯ ಜೂನ್ ೧೯೮೧ರ ಸಂಚಿಕೆಯಲ್ಲೊಂದು ಕವನ 'ನಿನ್ನ ನೆನಪು' ಪ್ರಕಟವಾಯಿತು. ಶ್ರೀ ಸುಲೇಮಾನ್ ಖಿಮಾರ್ ಎಂಬವರ ಉರ್ದು ಕವನದ ಕನ್ನಡ ಅನುವಾದವಿದೆಂದು ಬೆಂಗಳೂರಿನ ಶ್ರೀ ಎನ್. ಶಿವಮೂರ್ತಿ ನಮಗೆ ಕಳಿಸಿದ್ದ ಹಸ್ತಪ್ರತಿಯನ್ನೇ ನಾವು ಪ್ರಕಟಿಸಿದ್ದು. ಆದರೆ ನಂತರ ನಮ್ಮ ಗಮನಕ್ಕೆ ಬಂದ ಅಂಶ ವಿಚಿತ್ರ ಸಂಗತಿಯನ್ನು ಬಯಲು ಮಾಡಿತು. 'ನಿನ್ನ ನೆನಪು' ಬೇರೆ ಭಾಷೆಯಿಂದ ಅನುವಾದಿತ ಕವನವಲ್ಲ, ಮೂಲತಃ ಕನ್ನಡದಲ್ಲೇ ಅದನ್ನು ಬರೆದವರು ಹುಬ್ಬಳ್ಳಿಯ ಶ್ರೀ ರಮಜಾನ್ ದರ್ಗಾ. ಅದು ಮೊದಲು ಬಂದುದು 'ಸಂಕ್ರಮಣ'ದ ಅಗಸ್ಟ್-ಸಪ್ಟಂಬರ್ ೧೯೭೮ರ ಸಂಚಿಕೆಯಲ್ಲಿ. ಅನಂತರ ಅದು ಅವರದೇ ಕವನ ಸಂಕಲನ 'ಕಾವ್ಯ ಬಂತು ಬೀದಿಗೆ' (ಅಕ್ಟೋಬರ್ ೧೯೭೮) ಯಲ್ಲಿ ಬಂತು. ಆದರೆ ಒಂದೇ ವ್ಯತ್ಯಾಸವೆಂದರೆ 'ಸಂಕ್ರಮಣ'ದಲ್ಲಿ ಬಂದುದರಲ್ಲಿ ೨೦-೨೧ ನೆಯ ಸಾಲುಗಳು "ಹೆತ್ತವರ ಒಡಲಲ್ಲಿ ಬೆಂಕಿ ಬಿತ್ತು ಅದು

ಬಾಂಬಿಗಿಂತಲೂ ಮಿಗಿಲಾಗಿತ್ತು" ಎಂದಿದ್ದುದು ಸಂಕಲನದಲ್ಲಿ "ಹೆತ್ತವರ ಒಡಲಲ್ಲಿ ಬೆಂಕಿ ಬಾಂಬು ಬಿತ್ತು" ಎಂದಾಗಿದೆಯಷ್ಟೆ. ಆದರೆ 'ಕಸ್ತೂರಿ'ಯಲ್ಲಿ ಬಂದುದು 'ಸಂಕ್ರಮಣ'ದಲ್ಲಿರುವುದರ ತದ್ವತ್ ಪ್ರತಿ. ಶಿವಮೂರ್ತಿಯವರನ್ನು ಕೇಳಿದಾಗ ಅವರು ಈ ಕವನ ಸಂಕಲನ ನೋಡಿಯೇ ಇಲ್ಲವೆಂದು ತಿಳಿಸಿದ್ದಾರೆ. 'ಸಂಕ್ರಮಣ' ಅಷ್ಟೊಂದು ವ್ಯಾಪಕ ಪ್ರಸಾರವುಳ್ಳ ಪತ್ರಿಕೆಯಲ್ಲವೆಂಬ ಕಾರಣಕ್ಕಾಗಿ ಅಲ್ಲಿ ಬಂದುದನ್ನು ಎತ್ತಿ ಹೊಡೆದುಬಿಟ್ಟರೆ ಯಾರಿಗೂ ತಿಳಿಯಲಿಕ್ಕಿಲ್ಲವೆಂದು ಅವರು ನಂಬಿರಬೇಕು.

ಈ ಬಗೆಯ ಕೃತಿಚೌರ್ಯವನ್ನು ನಾವು ಖಂಡಿಸುತ್ತೇವೆ. 'ಕಸ್ತೂರಿ'ಯಲ್ಲಿ ಬೇರೆಯವರ ಹೆಸರಿನಲ್ಲಿ ಬಂದುದರಿಂದ ನೊಂದುಕೊಂಡಿರುವ ಶ್ರೀ ರಮಜಾನ್ ದರ್ಗಾ ಅವರ ಕ್ಷಮೆಯನ್ನೂ ಕೋರುತ್ತೇವೆ.

—ಸಂಪಾದಕ

ಬಾಲಿಶ

ಇಷ್ಟು ಕಾಲ ಪುಸ್ತಕ ವಿಭಾಗದಲ್ಲಿ ವೈಶಿಷ್ಟ್ಯಪೂರ್ಣ ಗಂಭೀರ ಬರಹಗಳನ್ನೇ ನೋಡುತ್ತಿದ್ದ ನನಗೆ ಫೆಬ್ರುವರಿ ಪು. ವಿ.ದ 'ಜೇಬುಗಳ್ಳರು' ತೀರ ಬಾಲಿಶವಾಗಿ ಎಳಸಲಾಗಿ ತೋರಿತು. ನಿಶ್ಚಿತ ಸೈದ್ಧಾಂತಿಕ ನೆಲೆಗಟ್ಟಿಲ್ಲದ ವೈಚಾರಿಕತೆಯ ಸೋಗಿನ ಅನಗತ್ಯ ಪದಪುಂಜಗಳ ವ್ಯರ್ಥ ವಿಶ್ಲೇಷಣೆ ಇದು ಎಂದು ಯಾವ ಓದುಗನಿಗೂ ಅರ್ಥವಾಗುತ್ತದೆ. ಅರ್ಧ ಕ್ಕರ್ಧ ಆಂಗ್ಲ ವಾಕ್ಯಗಳೇ ತುಂಬಿ ಗೋಜಲುಗೋಜಲಾಗಿದೆ. ಡಿವಾಲಿಶ್, ಫ್ಲರ್ಟೇಷನ್, ಬ್ರಿಲಿಯಂಟ್, ಡಿಪ್ರೆಶನ್, ಫ್ಯೂಚರ್, ಡೆಸ್ಪರೇಟ್, ಎಕ್ಸ್‌ಪೆಲ್, ಗ್ರೆವಿಟಿ, ಕ್ರೇಜೀ ಮುಂತಾದ ಇನ್ನೂ ಅನೇಕ ಪದಗಳಿಗೆ, ಪಂಜಾಬಿ ಅಥವಾ ಕನ್ನಡ ಭಾಷೆಯಲ್ಲಿ ಶ್ರೀಮಂತ ಪದಗಳೇ ಲಭ್ಯವಿರುವಾಗ, ಅವುಗಳಿಗೆ ಮೊರೆಹೋಗುವ ಔಚಿತ್ಯ ನನಗೆ ಒಗಟಾಯಿತು. ಕಾರಿಗೆ ಗಾಡಿ ಎಂದುಪಯೋಗಿಸಿದ್ದು, ವಿನೋದನ ಕವಿತೆಯ ಸಮರ್ಥ ಕನ್ನಡ ಅನುವಾದ (ಸೂರ್ಯ ಚಿನ್ನದ ಬಟ್ಟಲಾಗಿದ್ದ...) ಹೀಗೆ ಕೆಲವೊಂದು ಕಪ್ಪೆ ಚಿಪ್ಪುಗಳಿಂದಾಯ್ದ ಮುತ್ತಿನಂತೆ ಅರ್ಥವತ್ತಾಗಿಯೂ ಇದ್ದು ಲೇಖಕರು ಇಬ್ಬಂದಿಯಾದರೇ ಎಂದು ಅನಿಸುತ್ತದೆ. ಹೆಮ್ಮೆಯ ಪುಸ್ತಕ ವಿಭಾಗದಲ್ಲಿ ಇಂಥ ಅಪಕ್ವ ಬರಡು ಕೃತಿಗಳನ್ನು ಪ್ರಕಟಿಸಬೇಡಿ ಎಂದು ನನ್ನ ಕಳಕಳಿಯ ವಿನಂತಿ.

ಬೂದಿ ಮುಚ್ಚಿದ ಕೆಂಡದಂತಿದ್ದ ಅಖಿಲ ಭಾರತ ಕೀಟನಾಶಕ ಸಂಸ್ಥೆಯ ಸ್ಥಾಪಕ ಅಧ್ಯಕ್ಷ ಮತ್ತು ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳೂ ಆದ ಶ್ರೀ ನಲ್ಲೂರು ಶ್ರೀಪಾದರಾಯರನ್ನು ಓದುಗರಿಗೆ ಪರಿಚಯಿಸಿದ್ದು ಸಮರ್ಥನೀಯ.

ಹಾರೇಕೊಪ್ಪ —ಎಚ್. ಎಸ್. ಶ್ರೀಪಾದಭಟ್ಟ

'ಪ್ರಯಾಣ'

ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟಗೊಂಡ ಶಶಿಕಲಾ ವಸ್ತ್ರದರ ಪ್ರಯಾಣವನ್ನು ಪ್ರಯಾಸಪಟ್ಟು ಓದಬೇಕಾಯಿತು. ಕಥೆಗೆ ಆಡುಭಾಷೆಯ ಬಳಕೆ ಸಮರ್ಥನೀಯ ಎನಿಸಿದರೂ ಬೇರೆ ಭಾಗದ ಓದುಗರಿಗೆ ತೀರಾ ಅಪರಿಚಿತವೆನ್ನಿಸುವ ಶಬ್ದ ಅಥವಾ ವಾಕ್ಯಗಳನ್ನು ಆದಷ್ಟು ಕಡಿಮೆ ಪ್ರಮಾಣದಲ್ಲಿ ಬಳಸುವದು ಉಚಿತವಲ್ಲವೆ?

ಕಥೆಯಲ್ಲಿನ ಪಾತ್ರಗಳ ಮಾನಸಿಕ ತುಮುಲ ಸಹಜವಾಗಿ ಮೂಡಿಬಂದಿದ್ದರೂ ವಸ್ತುನಿರೂಪಣೆ ಓದುಗರ ಮೇಲೆ ಅಷ್ಟಾಗಿ ಪರಿಣಾಮ ಬೀರದೆ ಹೋಗಿದೆ. ಆಕರ್ಷಕ ಶೈಲಿಯ ಕೊರತೆ ನಿರೀಕ್ಷಿತ ಪರಿಣಾಮವನ್ನು ವಿಫಲಗೊಳಿಸಿದೆ.

ಇರುವ ಮೂರು ಕಥೆಗಳಲ್ಲಿ ಇನ್ನೆರಡು ಮೆಚ್ಚಿಗೆಯಾದರೂ ಅವು ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡಂಥವು. ಉತ್ತಮ ಕಥೆಗಳನ್ನು ನೀಡುವ 'ಕಸ್ತೂರಿ'ಗೆ ಕನ್ನಡದಲ್ಲಿ ಓದುಗರ ಮೇಲೆ ಪ್ರಭಾವ ಬೀರಬಲ್ಲ ಸತ್ವಶಾಲಿ ಬರಹಗಳ ಕೊರತೆಯೇನು?

ಬೆಂಗಳೂರು —ಗೀತಾ ಸಿಂದಗಿ

ವರ್ಷ : ೨೬ ಮಾರ್ಚ್, ೧೯೮೨ ಸಂಚಿಕೆ : ೭

ಪಂಚತಂತ್ರ

ಕ್ರಿ. ಶ. ೫೩೧ ರಿಂದ ಕ್ರಿ. ಶ. ೫೭೯ರ ವರೆಗೆ ಪರ್ಶಿಯಾ ದೇಶವನ್ನು ಅನೋಶಿರ್ವಾನ್ ಎಂಬ ಅರಸು ಆಳುತ್ತಿದ್ದನು. ಅವನ ಸಂಸ್ಥಾನದಲ್ಲಿ ಗ್ರೀಸ್, ಭಾರತ ಮತ್ತು ಪರ್ಶಿಯದ ವೈದ್ಯರು ಇದ್ದರು. ಅವರಲ್ಲಿ ಪರ್ಶಿಯದ ವೈದ್ಯ ಬೂರೆಝೋಯಿ ಗ್ರಂಥ ಓದುವುದರಲ್ಲಿ ಅತ್ಯಾಸಕ್ತನಾಗಿದ್ದ. ಭಾರತದ ಪರ್ವತದ ತುದಿಯೊಂದರಲ್ಲಿ ಸತ್ತವರನ್ನು ಬದುಕಿಸುವ ಅತ್ಯದ್ಭುತ ಒಂದು ಔಷಧೀಯ ಸಸ್ಯವಿದೆಯೆಂಬುದನ್ನು ಅವನು ಓದಿದ್ದ. ಆ ಸಸ್ಯವನ್ನು ತೆಗೆದುಕೊಂಡು ಬರಬೇಕೆಂಬ ತನ್ನ ಇಚ್ಛೆಯನ್ನು ಅರಸನೆದುರು ವ್ಯಕ್ತಮಾಡಿ ಭಾರತಕ್ಕೆ ಪ್ರಯಾಣಿಸಲು ಎಲ್ಲ ಅನುಕೂಲತೆ ಅರಸನಿಂದ ಮಾಡಿಸಿಕೊಂಡ ಬೂರೆಝೋಯಿ ಭಾರತಕ್ಕೆ ಬಂದು ಆ ಗಿಡ-ಮೂಲಿಕೆಯನ್ನು ಎಷ್ಟೋ ದಿನ ಶೋಧಿಸಿದರೂ ಸಿಗಲಿಲ್ಲ. ಬರಿಗೈಯಿಂದ ತಿರುಗಿ ದೇಶಕ್ಕೆ ಹೋಗುವ ಮನಸ್ಸು ಅವನಿಗಿರಲಿಲ್ಲ. ಅಂಥ ನಿರಾಶೆಯಲ್ಲಿ ಬುರೆಝೋಯಿ ಇರುವಾಗ ಒಬ್ಬ ಅನುಭವಿಕನಾದ ಮುದುಕ ಅವನಿಗೆ ಹೇಳಿದನಂತೆ– "ಬುರೆಝೋಯಿ! ನಿನಗೆ ಒಂದೇ ಅರ್ಥ ಗೊತ್ತಾಗಿದೆ. ಆದರೆ ನೀನು ಹೇಳಿದ ವಾಕ್ಯದಲ್ಲಿ ಇನ್ನೊಂದು ಅರ್ಥವಿರುವುದು ನಿನ್ನ ಗಮನಕ್ಕೆ ಬಂದಿಲ್ಲ…ಪರ್ವತ ಎಂದರೆ ಪಂಡಿತರು: ಗಿಡಮೂಲಿಕೆ ಎಂದರೆ ಶಬ್ದಗಳು; ಸತ್ತವರು ಎಂದರೆ

(ಡಾ. ವರದರಾಜ ಹುಯಿಲಗೋಳರ 'ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ'ಯಿಂದ)

ಅಜ್ಞಾನಿಗಳು." ಬುರ್ಝೋಯಿಗೆ ತನ್ನ ತಪ್ಪಿನ ಅರಿವಾಯಿತು. ಕೂಡಲೇ ಅವನು ಆ ಗ್ರಂಥವಿದ್ದ ಅರಸನ ಕಡೆಗೆ ಹೋಗಿ ಆ ಅಪೂರ್ವ ಗ್ರಂಥವನ್ನು ಓದಲು ಕೊಡಬೇಕೆಂದು ಕೇಳಿದ. ಭದ್ರವಾಗಿ ತೆಗೆದಿಟ್ಟ ಗ್ರಂಥವನ್ನು ಆರಸನು ಕೆಲವು ಕರಾರುಗಳೊಡನೆ ಓದಲು ಕೊಟ್ಟ. ವೈದ್ಯನು ಅದನ್ನು ಹೊರಗೆ ತೆಗೆದುಕೊಂಡು ಹೋಗದೇ ಅಲ್ಲಿಯೇ ಓದಬೇಕು ಮತ್ತು ಗ್ರಂಥದಲ್ಲಿ ಇದ್ದುದನ್ನು ಏನೂ ಬರೆದುಕೊಳ್ಳಬಾರದು. ಇವೇ ಅರಸನ ಕರಾರುಗಳು. ಬುರ್ಝೋಯಿ ಹಾಗೆಯೇ ಮಾಡಿದ ಮತ್ತು ಮನೆಗೆ ಬಂದು ನೆನಪಿನಿಂದ ಕಥೆಗಳನ್ನು ಬರೆದ. ಈ ಕಥೆಗಳಲ್ಲಿ ತಾನು ಕೇಳಿದ ಕೆಲವು ಮಹಾಭಾರತದ ಕಥೆಗಳನ್ನು ಸೇರಿಸಿದ.

ಔಷಧೀಯ ಸಸ್ಯದ ಬದಲು ಒಂದು ಗ್ರಂಥವನ್ನು ಸಿದ್ಧಪಡಿಸಿಕೊಂಡು ಬುರ್ಝೋಯಿ ವೈದ್ಯ ತನ್ನ ದೇಶಕ್ಕೆ ಹಿಂದಿರುಗಿದ. ವೈದ್ಯನು ತೆಗೆದುಕೊಂಡು ಹೋದುದು "ಪಂಚತಂತ್ರ" ಗ್ರಂಥ. ಖುಸ್ರೋ ಅನೋಸರ್ವನ್ ಪಂಚತಂತ್ರ ಕಥೆಗಳನ್ನು ಕೇಳಿ ಅತ್ಯಾನಂದಪಟ್ಟ. ಸಂಜೀವಿನಿ ಮೂಲಿಕೆ ದೊರೆತದ್ದಕ್ಕಿಂತಲೂ ಅವನಿಗೆ ಹೆಚ್ಚು ಸಂತೋಷವಾಯಿತು.

—ಸಂಗ್ರಹ: ಕೆ. ಕಾಳಯ್ಯ

ಧರ್ಮವಿನ್ನೂ ಸತ್ತಿಲ್ಲ!

ಧರ್ಮರಾಜನೊಂದಿಗೆ ಧರ್ಮವೂ, ಹರಿಶ್ಚಂದ್ರನೊಂದಿಗೆ ಸತ್ಯವೂ ಸ್ವರ್ಗ ಸೇರಿರುವುದರಿಂದ ಸತ್ಯ-ಧರ್ಮಗಳು ಈಗ ಭೂಮಿಯಲ್ಲಿ ಕಾಣ ಸಿಗುತ್ತಿಲ್ಲ," ಎನ್ನುವವರ ವಾದವನ್ನು 'ಹುರುಳಿಲ್ಲದ್ದು' ಎನ್ನಲಾರದ ಗುಂಪಿಗೆ ಸೇರಿರುವೆ ನಾನು. ಆದರೆ ಕೆಲ ದಿನಗಳ ಹಿಂದಿನ ಘಟನೆಯೊಂದರಿಂದ ನಾನು ನಿರ್ಭಯಳಾಗಿ ಈ ಮೇಲಿನ ವಾದವನ್ನು ಖಂಡಿಸಲಾರೆನೇನೋ, ಎನಿಸುತ್ತಿದೆ. ಅಂದು ಖಾಲಿಯಿದ್ದ ಬಸ್ಸಿನಲ್ಲಿ ಒಂದು ಸೀಟನ್ನಾಕ್ರಮಿಸಿದೆ. ನನ್ನ ಮುಂದಿನ ಸೀಟಿನಲ್ಲಿ ಸಾಧಾರಣ ನನ್ನದೇ ವಯಸ್ಸಿನ ಹುಡುಗಿಯೊಬ್ಬಳು ಬಂದು ಕುಳಿತಳು.


ಪೆಟ್ರೋಲ್ ಬಂಕ್ ಬಳಿ ಬಸ್ಸು ನಿಂತಾಗ ಅವಳು ಗಡಬಡಿಸಿ ಎದ್ದುನಿಂತು ಕಂಡಕ್ಟರನಿಗಾಗಿ ನೋಡಿದಳು. ಆತ ಹಿಂದೆ ಯಾರಿಗೋ ಟಿಕೆಟ್ ಕೊಡುವ ತರಾತುರಿಯಲ್ಲಿದ್ದ. ಆದರೆ ಅವಳು ಒಂದರ್ಧ ನಿಮಿಷ ಕಾದು, ನಂತರ ಅಲ್ಲಿಯೇ ಕುಳಿತಿದ್ದ ನನ್ನ ಕೈಯಲ್ಲಿ ೩೦ ಪೈಸೆ ಕೊಟ್ಟು, "ಟಿಕೆಟ್ ತೆಗೆದುಕೊಳ್ಳಿ," ಎಂದು ಹೇಳಿ ಇಳಿದುಹೋದಳು. ಅವಳು ನನಗೆ ಹಣ ನೀಡಿದ್ದನ್ನು ಕಂಡ ಕಂಡಕ್ಟರ್ ನನ್ನ ಬಳಿ ಬಂದಾಗ ನಾನು ೩೦ ಪೈಸೆ ಕೊಟ್ಟೆ. ಆತ ಗಡಿಬಿಡಿಯಲ್ಲಿದ್ದುದರಿಂದಲೋ ಏನೋ ಟಿಕೆಟ್ ಕೊಡದೆ ಮುಂದುವರಿದ. ನಾನು 'ಹಣವೇನೋ ನನ್ನದಲ್ಲ, ನಮ್ಮಪ್ಪನದಲ್ಲ' ಎಂದುಕೊಂಡು ಸುಮ್ಮನಿದ್ದೆ. ಆದರೆ ಆ ಕಂಡಕ್ಟರ್ ಮಾತ್ರ ಮರೆಯದೇ ಬಸ್‌ಸ್ಟ್ಯಾಂಡಿನಲ್ಲಿ ಟಿಕೆಟ್ ಕೊಟ್ಟುಬಿಟ್ಟ!

—ಸವಿತಾ ಕೊಪ್ಪೀಕರ

ನನ್ನನ್ನೀ ದೇವಮಿತ್ರರಿಂದ
ಬದುಕಿಸಿ ಸ್ವಾಮಿ,
ಮಿಕ್ಕೆಲ್ಲ ಶತ್ರುಗಳನ್ನು
ನಾನೊಬ್ಬನೆ ಹೊಡೆದೋಡಿಸಿಯೇನು...

—ಅಶೋಕಕುಮಾರ ಶರ್ಮಾ

'ಹಾರ್ಮೋನಿಯಂ ಮಾಸ್ತರ' ಕಬಾಡಿಯವರು



ಗೋವಾ

ಕರ್ನಾಟಕದ ರಂಗಭೂಮಿಯ ಇತಿಹಾಸ ಕುರಿತು ಮಾತಾಡುವಾಗಲೆಲ್ಲ ಶಿರಹಟ್ಟಿ ವೆಂಕೋಬರಾಯರ ಕಂಪನಿಯ ಹೆಸರು ಮರೆಯದೇ ಉಲ್ಲೇಖಿಸಲ್ಪಡುತ್ತದೆ. ವೆಂಕೋಬರಾಯರು ರಂಗಭೂಮಿಯ ಏಳ್ಗೆಗೆ ಶ್ರಮಿಸಿದಂತೆಯೇ ಆಗ ನಾಟಕದ ಅವಿಭಾಜ್ಯ ಅಂಗವಾಗಿದ್ದ ಸಂಗೀತ ಕ್ಷೇತ್ರಕ್ಕೂ ಸಾಕಷ್ಟು ಕೊಡುಗೆ ನೀಡಿದವರು– ಪ್ರತಿಭಾವಂತ ಸಂಗೀತಪಟುಗಳಿಗೆ ಪ್ರೋತ್ಸಾಹ ನೀಡಿ ಅವರು ಬೆಳೆದು ಬೆಳಗುವಂತೆ ಮಾಡುವುದರ ಮೂಲಕ. ಅಂಥ ಪ್ರತಿಭಾವಂತರಲ್ಲಿ ಇತ್ತೀಚೆ ನಿಧನರಾದ (ಜನೆವರಿ ೧೩, ೧೯೮೨) ಹಾರ್ಮೋನಿಯಂ ಪಟು ವಿಠ್ಠಲಸಾ ಕಬಾಡಿಯವರೂ ಒಬ್ಬರು.

'ಕಬಾಡಿ ಮಾಸ್ತರ'ರೆಂದೇ ಪರಿಚಿತರಾಗಿದ್ದ ಈ ವಾಮನಮೂರ್ತಿ, ಕೈಗೆ ಹಾರ್ಮೋನಿಯಂ ತೆಗೆದುಕೊಂಡರೆ ತ್ರಿವಿಕ್ರಮನಾಗಿ ಬಿಡುತ್ತಿದ್ದರು. ಅಂಥ ಕೈಚಳಕ ಅವರದು. ಅಖಂಡ ನಲವತ್ತು ವರ್ಷ ಹಾರ್ಮೋನಿಯಂ ಮಾಸ್ತರರಾಗಿ ರಂಗಭೂಮಿಯ ಸೇವೆಗೈದರು. ಅಷ್ಟೇ ಅಲ್ಲ. ಇಂದಿನ ಸುಪ್ರಸಿದ್ಧ ಹಿಂದೂಸ್ತಾನಿ ಗಾಯಕರನೇಕರಿಗೆ ಸಾಥ ನೀಡಿ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣರಾದರು. ಮೊನ್ನೆ ಮೊನ್ನೆಯವರೆಗೂ ಪರವೂರುಗಳಿಗೆ ಹೋಗಿ ಸಾಥ ಕೊಟ್ಟು ಬರುತ್ತಲೇ ಇದ್ದ ಕಬಾಡಿ ಮಾಸ್ತರರು ಹಾರ್ಮೋನಿಯಂ ಕಲಿಯಲು ಆಸಕ್ತರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ 'ಹಾರ್ಮೋನಿಯಂ ಸ್ವಯಂ ಶಿಕ್ಷಕ'



ಹಾರ್ಮೋನಿಯಮ್ ವಾದಕ ವಿಠ್ಠಲಸಾ
ತಾರುಣ್ಯದಲ್ಲಿ

ಎಂಬ ಉಪಯುಕ್ತ ಕೈಪಿಡಿಯನ್ನೂ ರಚಿಸಿದರು.

ಹಾಗೆ ನೋಡಿದರೆ ಸಂಗೀತದಲ್ಲಿ ಅವರಿಗೆ ಆಸಕ್ತಿ ಹುಟ್ಟಲು 'ಪರಂಪರೆ'ಯೇನೂ ಕಾರಣವಾಗಲಿಲ್ಲ. ಅಲ್ಲದೆ ಈ ದಿಸೆಯಲ್ಲಿ ಮಗನಿಗೆ ತರಬೇತಿಯನ್ನು ಕೊಡಿಸುವಷ್ಟು ಸ್ಥಿತಿವಂತರೂ ಆಗಿರಲಿಲ್ಲ ಅವರ ತಂದೆ. ತಂದೆ ರಾಮಾಸಾ ಅವರದು ನೇಕಾರ ವೃತ್ತಿ. ಬಡ ನೇಕಾರನ ಮಗ ವಿಠ್ಠಲಸಾ (ಜನನ ೧೯೦೪) ಗದಗಿನಲ್ಲಿದ್ದು ಶಾಲೆ ಕಲಿಯುವುದಂತೂ ಸಾಧ್ಯವಿರಲಿಲ್ಲ. ಆದರೆ ಉಂಡುಕೊಂಡು ಹಾಯಾಗಿರಲೂ ಆಗಲಿಲ್ಲ. ಎಂಟು ವರ್ಷದ ಹಸುಳೆ ವಿಠ್ಠಲಸಾ ಓಣಿಯ ಕೂಸಾಗಿ ಬೆಳೆದ.

ಓಣಿಯ ಮಂದಿ ಭಕ್ತ ಪುಂಡಲೀಕ ನಾಟಕವನ್ನು ಅಭಿನಯಿಸುವಾಗ ಈ ಚೂಟಿ ಹುಡುಗ ಕಣ್ಣಿಗೆ ಬಿದ್ದ. ಒಂದು ಬಾಲ ಪಾತ್ರಕ್ಕೆ ಆಯ್ಕೆ ಮಾಡಿದರು. ನಿರೀಕ್ಷೆಗೆ ಮೀರಿ ಉತ್ತಮ ಅಭಿನಯ ನೀಡಿದ ಬಾಲಕ ವಿಠ್ಠಲಸಾನಿಗೆ ಅಂದು ಅಂಟಿದ ಬಣ್ಣದ ನಂಟು ಬಿಡಲೇಯಿಲ್ಲ. ಸಂಬಂಧಿಯಾಗಿದ್ದ ಸಾಬಣಸಾ ಕಲಬುರ್ಗಿಯವರು ಹುಡುಗನನ್ನು ಹೊಂಬಳ ಕಂಪನಿಯಲ್ಲಿ ಬಾಲ ನಟನಾಗಿ ಸೇರಿಸುವ ವಿಚಾರ ವ್ಯಕ್ತಪಡಿಸಿದಾಗ ತಂದೆ ಆಗಲೆಂದರು. ತಿಂಗಳಿಗೆ ಆರು ರೂಪಾಯಿ ಸಂಬಳದ ಮೇಲೆ ಎಂಟು ವರ್ಷದ ಹುಡುಗ ಬಣ್ಣದ ಲೋಕದ ಬಂಟನಾದ.

ಕಂಪನಿಯ ಮಾಲಕ ಶಂಕರಗೌಡರಿಗೆ ವಿಠ್ಠಲಸಾ ಭರವಸೆದಾಯಕನಾಗಿ ಕಂಡ. ಹೀಗಾಗಿ ಲಕ್ಷ್ಮಣಸಿಂಗ ಗವಾಯಿಗಳೆಂಬವರಿಂದ ನೃತ್ಯ ಅಭಿನಯ ಸಂಗೀತ ಮೂರರಲ್ಲೂ ಹೆಚ್ಚಿನ ತರಬೇತಿ ಕೊಡಿಸಿದರು. ವಿಠ್ಠಲಸಾ ಈಗ ಪರಿಣತ ತರುಣನಾದ. ಆಗಲೇ ಶಿರಹಟ್ಟಿ ವೆಂಕೋಬರಾಯರ ಕಂಪನಿಯನ್ನು ಸೇರಿದರು ವಿಠ್ಠಲಸಾ. ನಟನೆಗಿಂತ ಹೆಚ್ಚಾಗಿ ನೃತ್ಯ ಸಂಗೀತಗಳಲ್ಲಿ ಇದ್ದ ಇವರ ಆಸಕ್ತಿಯನ್ನು ಗಮನಿಸಿದ ವೆಂಕೋಬರಾಯರು ಕೇಶವರಾವ ಮಿರಜಕರ ಎಂಬವರಿಂದ ಇನ್ನೂ ಹೆಚ್ಚಿನ ಶಿಕ್ಷಣ ಕೊಡಿಸಿದರು.

೧೯೨೪ ರಲ್ಲಿ ವೆಂಕೋಬರಾಯರು ತಮ್ಮ ನಾಮಾಂಕಿತ ನಾಟಕಗಳನ್ನು ಮೈಸೂರಿನ ಶ್ರೀ ಕೃಷ್ಣರಾಜ ಒಡೆಯರರ ಸಮ್ಮುಖದಲ್ಲಿ ಪ್ರದರ್ಶಿಸಿದರು. ವಿಠ್ಠಲಸಾರದು ಮುಖ್ಯವಾಗಿ ನೃತ್ಯ ಸಂಗೀತಗಳೇ ಪ್ರಧಾನವಾಗಿದ್ದ ಪಾತ್ರಗಳು ಕೃಷ್ಣಲೀಲಾ, ಶನಿಪ್ರಭಾವ, ಪದ್ಮಾವತೀ ಪರಿಣಯ ಮೊದಲಾದವುಗಳಲ್ಲಿ ವಿಠ್ಠಲಸಾ ಅವರ ನರ್ತನ ಚಾತುರ್ಯಕ್ಕೆ ಸುಮಧುರ ಸಂಗೀತಕ್ಕೆ ಮಾರುಹೋದ ಮಹಾರಾಜರು ಪ್ರಶಸ್ತಿ ಪದಕಗಳೊಂದಿಗೆ 'ಬಾಲಭಾರತ ನಟನ ವಿಠಲ' ಎಂಬ ಬಿರುದನ್ನು ನೀಡಿ ಬೆನ್ನು ಚಪ್ಪರಿಸಿದರು.

ಅನೇಕ ನಾಟಕಗಳಲ್ಲಿ ಪಾತ್ರ ವಹಿಸಿ ನರ್ತಿಸಿದರೂ ವಿಠ್ಠಲಸಾರಿಗೆ ಹಾರ್ಮೋನಿಯಮ್ಮಿನ "ಪಟ್ಟಿ"ಗಳ ಮೇಲೆ ಕೈ ಆಡಿಸಿದಾಗಲೇ ಸಮಾಧಾನವೆನಿಸುತ್ತಿತ್ತು. ಹೀಗಾಗಿ ಸತತಾಭ್ಯಾಸದಿಂದ ಅದನ್ನು ರೂಢಿಸಿಕೊಂಡ ವಿಠ್ಠಲಸಾ ಅವರಿಗೆ

ನಾಗೋಸಾ ಕಲಬುರ್ಗಿಯವರು ಹಾರ್ಮೋನಿಯಂ ದೀಕ್ಷೆಯಿತ್ತರು. ನಂತರ ಹಾರ್ಮೋನಿಯಂ ಮಾಸ್ತರರೆಂದೇ ಖ್ಯಾತರಾದ ವಿಠ್ಠಲಸಾ ಲಕ್ಷ್ಮೇಶ್ವರದ ಬಚ್ಚಾಸಾನಿಯ ಶ್ರೀ ನಾಟಕ ಮಂಡಳಿ, ಅಬ್ಬಿಗೇರಿ ಶಂಕರಗೌಡರ ಕಂಪನಿ, ಕಂದಗಲ್ ಹನುಮಂತರಾಯರ ಕಂಪನಿ, ತಳಕಲ್ ವೆಂಕರೆಡ್ಡಿ ಕಂಪನಿ, ಗರುಡ ಸದಾಶಿವರಾಯರ ಕಂಪನಿ, ಎರ್ಕಾಳಿ ಧೊಂಡಪ್ಪನವರ ಮಾಣಿಕಲಾಲ ಕಂಪನಿ. ಹಾಲಿಂಡಿ ವೀರಪ್ಪನವರ ಚಿತ್ರರಂಜನ ಕಂಪನಿ, ಹುಲಗೇರಿ ಶೆಟ್ಟರ ಚಿತ್ರಕಲಾ ರಂಜನ ಕಂಪನಿ ಮುಂತಾದವುಗಳಲ್ಲಿ ಹಾರ್ಮೋನಿಯಂ ಆರ್ಗನ್ ವಾದಕರಾಗಿ ದುಡಿದ ಮೇಲೆ ಹುಬ್ಬಳ್ಳಿಗೋಳ ನಾರಾಯಣರಾಯರ "ಯಂಗ್ ಮೆನ್ ಫುಟ್‌ಬಾಲ್ ಕ್ಲಬ್"ನ ಪದ್ಯಗಳ. ಅಧ್ಯಕ್ಷ ... ಹುಬ್ಬಳ್ಳಿಗೋಕುಲದ ಬಳಿಕ ... ತ್ರಿಭುವನ ...



ವಿಠ್ಠಲಸಾ ಬಾಲನಟನಾಗಿ ಸೇರಿದ್ದ (೧೯೨೦) ಜೋಬಳದ ಶ್ರೀ ಶಂಕರಲಿಂಗ ಪ್ರಾಸಾದಿಕ ಕಂಪನಿಯನ್ನು. ಹಿಪ್ಪರಗಿ ನೀಲಕಂಠಪ್ಪ ಮತ್ತು ಇತರ ನಟರೊಂದಿಗಿರುವ ವಿಠ್ಠಲಸಾ ಎರಡನೆಯ ಸಾಲಿನಲ್ಲಿ ಬಲತುದಿಗೆ ನಿಂತಿದ್ದಾರೆ.

ಶಿಕ್ಷಣ ಸಂಭ್ರಮ, ವಿದ್ಯಾರಣ್ಯ ಮುಂತಾದ ನಾಟಕಗಳಿಗೆ ಹಾರ್ಮೋನಿಯಂ ಮಾಸ್ತರ್ ಆದರು.

೧೯೪೨ರಲ್ಲಿ ಕಬಾಡಿ ಮಾಸ್ತರರು ಮುಂಬೈಗೆ ಹೋದರು—ರೇನ್‌ಬೋ ರೆಕಾರ್ಡಿಂಗ್ ಕಂಪನಿಯಲ್ಲಿ ಹಾರ್ಮೋನಿಯಂ ವಾದ್ಯಗಾರನಾಗಿ ಸೇವೆ ಸಲ್ಲಿಸಲು. ಆಗಲೇ ಅವರು ರಂಗಭೂಮಿಯನ್ನು ಬಿಟ್ಟು ಹೊರ ಬಂದದ್ದು. ಕನ್ನಡ ಭಾವಗೀತೆಗಳ ಡಿಸ್ಕುಗಳಿಗೆ ಸಂಗೀತ ಸಂಯೋಜಿಸುವುದರೊಂದಿಗೆ ಎಚ್. ಎಂ. ವಿ. ಗಾಗಿಯೂ ಕೆಲಸ ಮಾಡಿದರು. ಮುಂಬೈ ಆಕಾಶವಾಣಿಗೆ ಕಾರ್ಯಕ್ರಮಗಳನ್ನೂ ನೀಡಿದರು. ಅದೇ ಸಂದರ್ಭದಲ್ಲಿ ಕಬಾಡಿಯವರು ಬಾಲಗಂಧರ್ವ, ಶಂಕರರಾವ ಗೋತಡಕರ್ ಮುಂತಾದವರಿಗೆ ಸಾಥ ನೀಡಿದರು.

ಮೂರು ವರ್ಷಗಳ ನಂತರ ಮತ್ತೆ ಗದಗಿಗೆ ಮರಳಿದ ವಿಠ್ಠಲಸಾ ಸಂಗೀತ ಮಾಸ್ತರರಾಗಿ ಕೆಲಸ ಮಾಡಲಾರಂಭಿಸಿದರು, ಖಾಸಗಿಯಾಗಿ. ಅನಂತರ ಮಾಸ್ತರರಾಗಿ ನೌಕರಿಯನ್ನೂ ಮಾಡಿದರು, ವಿದ್ಯಾದಾನ ಸಮಿತಿಯ ಪ್ರೌಢಶಾಲೆಗಳಲ್ಲಿ. ಅದೇ ವೇಳೆಗೆ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ "ವಿಶಾರದ" ಪರೀಕ್ಷೆ ಪಾಸು ಮಾಡಿದರು.

ಹದಿನೆಂಟು ವರ್ಷ ಈ ವೃತ್ತಿಯಲ್ಲಿದ್ದು ನಿವೃತ್ತರಾದ ಕಬಾಡಿಯವರು ಸೊಂಡೂರಿನ ಮುರಾರಿರಾವ ಘೋರ್ಪಡೆ ರೆಸಿಡೆನ್ಸಿಯಲ್ ಸ್ಕೂಲಿನಲ್ಲಿ ನೃತ್ಯ ಶಿಕ್ಷಕರಾಗಿ ನೇಮಕಗೊಂಡರು. ಹತ್ತು ವರ್ಷ ಅಲ್ಲಿದ್ದು ಮತ್ತೆ ಗದುಗಿಗೆ ಬಂದರು.

ಕಬಾಡಿ ಮಾಸ್ತರರಲ್ಲಿ ಪ್ರಾರಂಭಿಕ ಸಂಗೀತ ಶಿಕ್ಷಣ ಪಡೆದವರಲ್ಲಿ ಅನೇಕರು ಇಂದು ಆ ದಿಶೆಯಲ್ಲಿ ಖ್ಯಾತಿ ಗಳಿಸಿದ್ದಾರೆ. ಏಣಗಿ ಬಾಳಪ್ಪನವರು, ಸೋನೂಬಾಯಿ ದೊಡ್ಡಮನಿ, ಶ್ರೀಪಾದರಾವ ಗರೂಡ, ಅರ್ಜುನಸಾ ನಾಕೋಡ, ವಸಂತ ಕನಕಾಪೂರರಲ್ಲದೇ ತಮ್ಮ ಮಗ ವಾಯ-ಲಿನ್ ವಾದಕ ತುಕಾರಾಮಸಾ ಕಬಾಡಿಯವರಿಗೆಲ್ಲ ಮಾಸ್ತರರೇ ಸ್ವತಃ ಗುರು.

ಪಂಡಿತ ಬಸವರಾಜ ರಾಜಗುರು, ಶ್ರೀಮಂತ ಭಾವೆ ಮುಂತಾದವರಲ್ಲದೇ ಅನೇಕ ಖ್ಯಾತ ನಾಮರೊಂದಿಗೆ ಉದಯೋನ್ಮುಖರೊಂದಿಗೆ ಹಾರ್ಮೋನಿಯಂ ಸಾಥ ಮಾಡಿ ಆ ವಾದ್ಯದಲ್ಲಿ ಪ್ರಭುತ್ವ ಗಳಿಸಿಕೊಂಡ ಅವರು ಮುಂದಿನವರಿಗೆ ಉಪಯುಕ್ತವಾಗಬಲ್ಲ ಎರಡು ಗ್ರಂಥಗಳನ್ನು ನೀಡಿದ್ದಾರೆ. ಮೊದಲನೆಯದು ಈಗಾಗಲೇ ವಿವರಿಸಿದ 'ಹಾರ್ಮೋನಿಯಂ ಸ್ವಯಂ ಶಿಕ್ಷಕ' ಪ್ರಾಥಮಿಕ ಸಂಗೀತ ಅಭ್ಯಾಸಿಗಳಿಗೆ ಅರ್ಥವಾಗಬಲ್ಲಂಥ ನಿರೂಪಣೆ ಸರಳ ಭಾಷೆಯ ವ್ಯಾಖ್ಯೆ ವಿವರಣೆಗಳೊಂದಿಗೆ ಮೂಡಿಬಂದಿರುವ ಈ ಗ್ರಂಥವನ್ನು, ಪಟ್ಟರಾಜ ಗವಾಯಿಗಳು, ಮಲ್ಲಿಕಾರ್ಜುನ ಮನ್ಸೂರ, ಭೀಮಸೇನ ಜೋಶಿ ಹಾಗೂ ಗಂಗೂಬಾಯಿ ಹಾನಗಲ್ಲರು ಮೆಚ್ಚಿಕೊಂಡು ಕಬಾಡಿಯವರ ಸಂಗೀತ ಸೇವೆಯನ್ನು ಶ್ಲಾಘಿಸಿದ್ದಾರೆ. ಮತ್ತೊಂದು 'ಸ್ವರ ಮಾತಾ ಲಯ ಪಿತಾ'. ಮುದ್ರಣಗೊಂಡು ಪ್ರಕಟವಾಗಲು ದಾರಿ ಕಾಯುತ್ತಿರುವ ಈ ಗ್ರಂಥವನ್ನು ನೋಡುವ ಆಸೆ ಇಟ್ಟುಕೊಂಡೇ ಅವರು ಕಣ್ಮುಚ್ಚಿದರು. ಆ ಗ್ರಂಥಗಳು ಸಂಗೀತ ವಿದ್ಯಾರ್ಥಿಗಳಿಗೆ ಆಸರೆಯಾಗಿವೆ.

ಎರಡು ಹನಿ ಕಣ್ಣೀರು

ದಿ. ವಿಠ್ಠಲಸಾ ಕಬಾಡಿಯವರ ಬಗೆಗಿನ ಈ ಲೇಖನ ಅವರು ಇನ್ನೂ ಜೀವಿಸಿರುವಾಗಲೇ ಪ್ರಕಟವಾಗಬೇಕಿತ್ತು. ಆದರೆ ಕಾರಣಾಂತರಗಳಿಂದ ಆ ಸೌಭಾಗ್ಯ 'ಕಸ್ತೂರಿ'ಯ ಪಾಲಿಗೆ ಉಳಿಯಲಿಲ್ಲ. ಅಗಲಿಹೋದ ಈ ಅಪರೂಪದ ವ್ಯಕ್ತಿಗೆ ಕಣ್ಣೀರಿನ ಶ್ರದ್ಧಾಂಜಲಿಯನ್ನಲ್ಲದೆ ಬೇರೇನನ್ನು ನೀಡಬಹುದು! ಈ ಶಬ್ದಚಿತ್ರ ಅವರ ಕಲಾನೈಪುಣ್ಯಕ್ಕೆ, ಅವರ ಯೋಗ್ಯತೆಗೆ ಸರಿಸಾಟಿಯಲ್ಲವೆಂಬ ಅರಿವು ನಮಗಿದೆ.

— ಸಂಪಾದಕ

Statement about ownership and other particulars about Monthly **Kasturi**, *to be published in the first issue every year after the last day of February.*

FORM IV

(See Rule 8)

1. Place of publication	..	HUBLI
2. Periodicity of its publication	:	Monthly
3. Printer's name	..	H. M. Kaujalgi
Whether citizen of India?	..	Yes
Address	..	Samyukta Karnataka P.B. No. 30 Koppikar Road, Hubli-20
4. Publisher's name	..	H. M. Kaujalgi
Whether citizen of India?	..	Yes
Address	..	Samyukta Karnataka P.B. No. 30 Koppikar Road, Hubli-20
5. Editor's name	..	M. N. Mahishi Asstt. Editor
Whether citizen of India?	..	Yes
Address	..	Samyukta Karnataka P.B. No. 30 Koppikar Road, Hubli-20
6. Names and addresses of individuals who own the newspaper and partners or share-holders holding more than one percent of the total capital.	..	Administrator Loka Shikshana Trust Hubli

I, H. M. Kaujalgi, hereby declare that the particulars given above are true to the best of my knowledge and belief.

Hubli
Dated 1-3-1982

H. M. KAUJALGI
Signature of Publisher

ಮುಂಬೈ ನಗರದ ಶವಾಲಯ

ವಾಲ್ಟರ್ ಲಾಸ್ರಾದೊ

ಮುಂಬೈ ನಗರದ ಶವಾಲಯ ಜೆ. ಜೆ. ಆಸ್ಪತ್ರೆಯ ಪರಿಸರದಲ್ಲಿದೆ. ಇಲ್ಲಿಯೇ ದುರ್ಮರಣದ ವಿಚಾರಣಾಧಿಕಾರಿಯ (ಕೊರೋನರ್) ನ್ಯಾಯಾಲಯವೂ ಉಂಟು. ಅಸ್ವಾಭಾವಿಕವಾಗಿ ಸಂಭವಿಸಿದ ಮರಣಗಳು ಬಚ್ಚಿಹೋಗದಂತೆ ನೋಡುವುದೇ ಕೊರೋನರ್‌ನ ಮುಖ್ಯ ಕೆಲಸ.

ಕೊರೋನರ್ ಕೋರ್ಟಿನ ಪದ್ಧತಿಯನ್ನು ೧೮೭೧ನೆ ಇಸವಿಯಲ್ಲಿ ಬ್ರಿಟಿಶರು ಭಾರತದಲ್ಲಿ ಜಾರಿಗೆ ತಂದರು. ಪ್ರಥಮವಾಗಿ ಈ ಕೋರ್ಟುಗಳನ್ನು ಮುಂಬೈ ಮತ್ತು ಕಲಕತ್ತಗಳಲ್ಲಿ ಸ್ಥಾಪಿಸಲಾಯಿತು. ಕಲಕತ್ತದ ಕೋರ್ಟನ್ನು ಕೆಲವು ವರ್ಷಗಳ ಹಿಂದೆ ತೆಗೆದುಹಾಕಿದ್ದರಿಂದ ಈಗ ಇಡೀ ಭಾರತದಲ್ಲಿ ಇರುವುದು ಒಂದೇ ಒಂದು ಕೋರ್ಟು–ಮುಂಬೈಯಲ್ಲಿ. ಇತ್ತೀಚೆಗೆ ಮುಂಬೈಯ ವಿಲೆ ಪಾರ್ಲೆಯ ಆರ್. ಎನ್. ಕೂಪರ್ ಆಸ್ಪತ್ರೆಯಲ್ಲಿ ಇನ್ನೊಂದು ಕೋರ್ಟನ್ನು ಸ್ಥಾಪಿಸಲಾಗಿದೆ. ಮೂರನೇ ಕೋರ್ಟನ್ನು ಘಾಟ್ ಕೋಪರಿನ ರಾಜಾವಾಡಿ ಆಸ್ಪತ್ರೆಯ ಬದಿಯಲ್ಲಿ ಕಟ್ಟಲಾಗುತ್ತಿದೆ. ಭಾರತದ ಇತರ ಭಾಗಗಳಲ್ಲಿ ಕೊರೋನರರ ಕೆಲಸವನ್ನು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ನೆರವೇರಿಸುತ್ತಾರೆ.

ಶವಾಲಯದಲ್ಲಿ ಪ್ರವೇಶ ಮಾಡುವುದು ಒಂದು ಸಾಹಸದ ಕೆಲಸವೆಂದೇ ಹೇಳಬೇಕು. ತಮ್ಮ ಸಂಬಂಧಿಕರ ಶವವನ್ನು ಗುರುತಿಸಿ ವಶಕ್ಕೆ ತೆಗೆದುಕೊಳ್ಳಲು ಶವಾಲಯವನ್ನು ಪ್ರವೇಶಿಸಬೇಕಾಗುತ್ತದೆ.

ಇದೊಂದು ಭಯಾನಕ ಸ್ಥಳ. ಇದನ್ನು ಪ್ರವೇಶಿಸುವವರು ಮೊದಲು ಧೈರ್ಯಕ್ಕಾಗಿ ಮತ್ತು ಕೆಟ್ಟ ವಾಸನೆ ಸಹಿಸುವ ಸಲುವಾಗಿ ಹೆಂಡ ಕುಡಿಯುವುದು ಸ್ವಾಭಾವಿಕ. ಈ ಸ್ಥಳ ಅಂಜುಬುರುಕರಿಗಲ್ಲ. ಇಲ್ಲಿಯ ಸಾಮಾನ್ಯ ಕೆಲಸಗಾರರು ಹೆಂಡದ ಅಮಲಿನಲ್ಲಿಯೇ ಇರುತ್ತಾರೆ. ಇಲ್ಲದಿದ್ದರೆ ಈ ದುರ್ನಾತದಲ್ಲಿ ಹೆಣಗಳ ನಡುವೆ ಅವರು ಕೆಲಸ ಮಾಡುವಂತೆಯೇ ಇಲ್ಲ. ಇಲ್ಲಿ ಹಲವಾರು ಕಾರಣದಿಂದ ಮರಣ ಹೊಂದಿದ ನಗ್ನ ಹೆಣಗಳ ರಾಶಿ ನೋಡಲು ಸಿಗುತ್ತದೆ. ಹೆಣ್ಣು–ಗಂಡು, ಮುದುಕ–ಮಕ್ಕಳ ಶವಗಳು ಯಾವ ಭೇದಭಾವವಿಲ್ಲದೆ ಒಂದೇ ರಾಶಿಯಲ್ಲಿ ಬಿದ್ದುಕೊಂಡು ಅಂತಿಮ ಕ್ರಿಯೆಗೆ ಕಾದುಕೊಂಡಿರುತ್ತವೆ.

ಇಲ್ಲಿ ಹೆಣಗಳನ್ನು ಪರೀಕ್ಷಿಸಿ ಮರಣದ ಕಾರಣವನ್ನು ಕಂಡುಹಿಡಿಯುತ್ತಾರೆ. ಕೊಲೆಯಾದುದಾದರೆ ಕೊಲೆಗಾರನನ್ನು ಹಿಡಿದು ಗಲ್ಲಿಗೇರಿಸಲು ಇದರಿಂದ ಅನುಕೂಲವಾಗುತ್ತದೆ. ಕಿವಿಯಿಂದ ಕಿವಿಯವರೆಗೆ ಕಪಾಲದ ಮೇಲಿಂದ ಸಿಗಿದು ತಲೆಬುರುಡೆಯನ್ನು ತೆರೆದು ಸರ್ಜನರು ಪರೀಕ್ಷೆಗಾಗಿ ಬೇಕಾದ ಮಿದುಳಿನ ಭಾಗಗಳನ್ನು ತೆಗೆಯುತ್ತಾರೆ. ಹಾಗೆಯೇ ಕುತ್ತಿಗೆಯಿಂದ ಸೊಂಟದವರೆಗೆ ನೇರವಾಗಿ ಸೀಳಿ ದೇಹವನ್ನು

ತೆರೆದು ಕರುಳು, ಹೃದಯದ, ಶ್ವಾಸಕೋಶ, ಇತ್ಯಾದಿಗಳನ್ನು ಕೊಯ್ದು ರಾಸಾಯನಿಕ ಪರೀಕ್ಷೆಗೆ ಬೇಕಾದ ನೆತ್ತರಿನ ಮತ್ತಿತ್ತರ ಅಂಶಗಳನ್ನು ತೆಗೆಯುತ್ತಾರೆ. ನಂತರ ಶವವನ್ನು ಹೊಲಿದು ಶುಚಿ ಮಾಡಿ ಸಂಬಂಧಿಕರಿಗೆ ಒಪ್ಪಿಸುತ್ತಾರೆ.

ಹೆಣಗಳನ್ನು ಸಿಗಿಯುವ ಮತ್ತು ಹೊಲಿಯುವ ಕೆಲಸವನ್ನು ಹೆಂಡ ಕುಡಿದು ಅರ್ಧಮತಿಯಲ್ಲಿದ್ದ ಕಸಗುಡಿಸುವವರು ನೆರವೇರಿಸುತ್ತಾರೆ. ಕೆಲವೊಮ್ಮೆ ಹೊಲಿಯುವ ಕೆಲಸ ಸರಿಯಾಗದೆ ಹೊಲಿಗೆಯ ಎಡೆಗಳಿಂದ ಹೊಟ್ಟೆಯೊಳಗಿನ ಭಾಗಗಳು ಹೊರಗೆ ಕಾಣಸಿಗುವುದು ಸಾಮಾನ್ಯ.

ಹೆಣ ಸಿಗಿಯುವ ಮೊದಲು ಸಂಪೂರ್ಣ ಬಟ್ಟೆ ಕಳಚಿ ನಗ್ನ ಮಾಡುತ್ತಾರೆ. ಹೀಗೆ ಕಳಚಿದ ಬಟ್ಟೆ ಕ್ಷಣಮಾತ್ರದಲ್ಲಿ ಮಾಯವಾಗಿ ಚೋರ್ ಬಜಾರಿನ ದಾರಿ ಹಿಡಿಯುತ್ತದೆ! ಕೆಲವೇ ದಿನಗಳಲ್ಲಿ ಒಗೆದು ಶುಭ್ರವಾಗಿ, ಖಡಕ್ ಇಸ್ತ್ರಿಯಾಗಿ ರಸ್ತೆ ಬದಿಯಲ್ಲಿ ಮಾರಾಟವಾಗುತ್ತದೆ!


ಕೆಲವು ಹೆಣಗಳು ವೈದ್ಯಕೀಯ ವಿದ್ಯಾರ್ಥಿಗಳ ಕೈಯಿಂದ ವಿಕಾರವಾಗಿ, ವಸ್ತ್ರವಿಲ್ಲದೆ ಬಿದ್ದುಕೊಂಡಿದ್ದು ಗುರುತುಹಿಡಿಯಲು ಬಹಳ ತೊಂದರೆಯಾಗುತ್ತದೆ.

ದಿನಕ್ಕೆ ಸರಾಸರಿ ೩೦ ಹೆಣಗಳು ಶವಾಲಯಕ್ಕೆ ಬರುತ್ತವೆ. ಅವುಗಳೆಲ್ಲಾ ಕೊಲೆ, ಆತ್ಮಹತ್ಯೆ, ಅಘಘಾತ, ಬೆಂಕಿ ಅನಾಹುತ, ವಿಷಪ್ರಾಶನ ಮುಂತಾದ ಕಾರಣಗಳಿಂದ. ಸತ್ತವರ ಶವಗಳ ಮರಣೋತ್ತರ ಪರೀಕ್ಷೆ ಮುಗಿಸಲು ಸುಮಾರು ಒಂದೂವರೆ ಗಂಟೆ ಕಾಲ ಹಿಡಿದರೆ ಇದರ ವರದಿ ಪಡೆಯಲು ಸಾಮಾನ್ಯ ವ್ಯಕ್ತಿಗೆ ಮೂರು ತಿಂಗಳ ಕಾಲ ಬೇಕಾಗುತ್ತದೆ. ಲಂಚ ಕೊಟ್ಟರೆ ಒಂದು ವಾರದೊಳಗೆ ಪಡೆಯಬಹುದು. ಅಂತ್ಯಕ್ರಿಯೆ ತೀರಿಸಲು ಶವ ಬೇಗ ಸಿಗಬೇಕಾದರೆ ಮತ್ತು ಹೊಲಿಗೆಯ ಕೆಲಸ ಸರಿಯಾಗಿ ಮಾಡಬೇಕಾದರೆ ಮೇಜಿನ ಅಡಿಯಿಂದ ಹಣ ಕೊಡಬೇಕಾಗುತ್ತದೆಯಂತೆ. ಸತ್ತವನ ಬಟ್ಟೆ ರಸ್ತೆ ಬದಿಯಲ್ಲಿ ಮಾರಾಟಕ್ಕೆ ಸಿಗುವಂತೆ ಹೆಣದ ಮೇಲೆ ಹಾಕಿದ ಹೂಮಾಲೆಗಳೂ ಮತ್ತೆ ಹೂವಿನ ಪೇಟೆಗೆ ಹೋಗುವುದುಂಟು.

ಇಂಥ ಪರಿಸ್ಥಿತಿಯಲ್ಲಿ ತಮ್ಮ ಆಪ್ತರು ಯಾರಾದರೂ ಆಚಾನಕ ಮರಣಕ್ಕೆ ಬಲಿಯಾಗಿ ಶವಾಲಯವನ್ನು ಸೇರಿದರೆ ಆ ಶವವನ್ನು ಸ್ವಾಧೀನ ಪಡಿಸಿಕೊಳ್ಳುವ ಕೆಲಸ ದೊಡ್ಡ ಸಾಹಸವೇ ಸರಿ. ಕೆಲವು ಸಲ ಶವ ಸ್ವಾಧೀನ ಮಾಡಲು ಇಡೀ ದಿವಸ ತಾಗುತ್ತದೆ.

ಯಶವಂತ ಇಂಗಳೆ ಎಂಬ ಒಬ್ಬ ಹೈಕೋರ್ಟಿನ ವಕೀಲರು ತಮ್ಮ ಅನುಭವವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆ ಘಟನೆ ಹೀಗಿದೆ:

"೧೯೭೮ರಲ್ಲಿ ಶೇಖ್ ಎಂಬ ಮುಂಬೈ ಸಿಟಿ ಸಿವಿಲ್ ಮತ್ತು ಸೆಶೆನ್ಸ್ ಕೋರ್ಟಿನ ಜಜ್ ನಾಸಿಕದಲ್ಲಿ ಹಠಾತ್ತನೆ ತೀರಿಕೊಂಡರು. ಅಂತ್ಯಕ್ರಿಯೆ ತೀರಿಸುವ ಸಲುವಾಗಿ ಅವರ ಶವವನ್ನು ಮುಂಬೈಗೆ ತರಲಾಯಿತು. ನಾಸಿಕದ ವೈದ್ಯರು ಜಜ್ ಹೃದಯಘಾತದಿಂದ ತೀರಿಕೊಂಡಿದ್ದಾರೆಂದು ಸರ್ಟಿಫಿಕೇಟು ಕೊಟ್ಟಿದ್ದರೂ ಶವವನ್ನು ಹೊರಗಿನಿಂದ ಮುಂಬೈಗೆ ತಂದಿದ್ದರಿಂದ ಅದನ್ನು ದಫನ ಮಾಡುವುದಕ್ಕಾಗಿ ಮುಂಬೈಯ ಕೊರೋನರರ ಅನುಮತಿ ಬೇಕಿತ್ತು. ನಾಸಿಕದ ವೈದ್ಯರು ಕೊಟ್ಟ ಸರ್ಟಿಫಿಕೇಟನ್ನು ತಿರಸ್ಕರಿಸಿ ಪೋಸ್ಟ್ ಮಾರ್ಟಮ್ ನಡೆಸಲು ಆದೇಶ ಕೊಡಲಾಯಿತು. ತಮ್ಮ ಸಂಗಡಿಗನ ಶವವನ್ನು ಸ್ವಾಧೀನ ಮಾಡಲು ಆ ರಾತ್ರಿ ಅಲ್ಲಿ ಸುಮಾರು ೧೬ ಜನ ಜಜ್ಜರು ಹಾಜರಿದ್ದರಂತೆ. ಅವರು ಎಷ್ಟು ಬೇಡಿಕೊಂಡರೂ ಹೆಣ ಸಿಗಿಯದೆ ಬಿಟ್ಟು ಕೊಡಲಿಕೆ ಕೊರೋನರ್ ಒಪ್ಪಲಿಲ್ಲ. ಪೋಸ್ಟ್‌ಮಾರ್ಟಮ್ ಮುಗಿಸಿ ಶವ ಬಿಟ್ಟುಕೊಡುವಾಗ ರಾತ್ರಿ





"ಕಾಲಾವಕಾಶ ಕಡಿಮೆ ಇರೋದ್ರಿಂದ ಎರಡೂ ಪಂದ್ಯಗಳನ್ನ ಒಟ್ಟಿಗೇ ಓಡಿಸ್ತಾ ಇದೀವಿ...... ಅಷ್ಟೇ!"

ಎರಡು ಗಂಟೆಯಾಗಿತ್ತು."

ಕಾನೂನಿನ ತಜ್ಞರಾದ ಜಡ್ಜರು ಮತ್ತು ವಕೀಲರೇ ಇಂಥ ಪರಿಸ್ಥಿತಿಯಲ್ಲಿ ಅಸಹಾಯಕರಾದಾಗ ಸಾಮಾನ್ಯ ಜನರ ಪಾಡೇನು?

ಒಬ್ಬನ ಜೀವ ಹೇಗೆ ಹೋಯಿತೆಂದು ಸುಲಭವಾಗಿ ನಿರ್ಧರಿಸಲು ಅಸಾಧ್ಯ; ಕೊಲೆಯಾಗಲೂ ಸಾಧ್ಯವಿದೆ. ಪೋಲೀಸರ ವಿಚಾರಣೆಯಲ್ಲಿ ಏನಾದರೂ ಸ್ವಲ್ಪ ಸಂಶಯ ಹುಟ್ಟಿದರೆ ಹಾಗೂ ಮರಣದ ಸರ್ಟಿಫಿಕೇಟು ಕೊಡುವ ವೈದ್ಯನಿಗೆ ಮರಣದ ಕಾರಣ ಸ್ಪಷ್ಟವಾಗಿ ತಿಳಿಯದೆ ಹೋದರೆ ಶವವನ್ನು ಸೀಳಿ ಕಾರಣ ತಿಳಿಯುವ ಅಗತ್ಯ ಬೀಳುತ್ತದೆ. ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿ ಇರುವಾಗ ಸತ್ತರೂ ಕೆಲವು ಸಂದರ್ಭಗಳಲ್ಲಿ ಪೋಸ್ಟ್‌ಮಾರ್ಟಮ್ ಮಾಡಿಸುತ್ತಾರೆ. ವೈದ್ಯರ ಅಥವಾ ಇತರ ಕೆಲಸಗಾರರ ಬೇಜವಾಬ್ದಾರಿ ವರ್ತನೆಯಿಂದ ಜೀವ ಹೋಗಿದೆಯಾದರೆ ಇದರಿಂದ ತಿಳಿಯುತ್ತದೆ.

ಸಹಜ ರೀತಿಯಲ್ಲಿ ಸತ್ತಿಲ್ಲವೆಂದು ಯಾರಾದರೂ ಪೋಲೀಸರಿಗೆ ದೂರು ಕೊಟ್ಟರೆ ಅಂಥ ಶವವನ್ನು ಸೀಳಿಯುತ್ತಾರೆ. ದಫನ ಮಾಡಿ ಹಲವಾರು ದಿನಗಳ ನಂತರವೂ ಮರಣದ ಸಂಬಂಧದಲ್ಲಿ ಸಂಶಯಕ್ಕೆ ಕಾರಣ ಸಿಕ್ಕಿದರೆ ಅದನ್ನು ಮಣ್ಣಿನಿಂದ ಅಗೆದು ತೆಗೆದು ಶವಪರೀಕ್ಷೆಗೆ ಒಳಪಡಿಸಲು ಕೋರೋನರ್ ಆದೇಶ ಕೊಟ್ಟ ದಾಖಲೆಗಳಿವೆ. ಉರಿಯುವ ಚಿತೆಯಿಂದ ಶವವನ್ನು ಹೊರತೆಗೆಸುವ ಅಧಿಕಾರವೂ ಕರೋನರಿಗೆ ಇದೆ.

ಕೆಲವು ವರ್ಷಗಳ ಹಿಂದೆ ಒಂದು ಪಾರ್ಸಿ ಮಹಿಳೆಯ ಶವವನ್ನು ಎಲ್ಲಾ ವಿಧಿಗಳನ್ನು ತೀರಿಸಿ "ಟವರ್ ಆಫ್ ಸೈಲೆನ್ಸ್" (ಪಾರ್ಸಿಗಳ ಶವಗಳನ್ನು ರಣಹದ್ದುಗಳಿಗೆ ಅರ್ಪಿಸುವ ಎತ್ತರದ ಸ್ಥಳ)ದಲ್ಲಿ ಇರಿಸಲಾಗಿತ್ತು. ಅಷ್ಟರಲ್ಲಿ ಮರಣದ ಬಗ್ಗೆ ಸಂಶಯಪಟ್ಟ ಅವಳ ಸೋದರ ಕೊರೋನರರಿಗೆ ದೂರು ಕೊಟ್ಟ. ಆ ಸಮಯದಲ್ಲಿ ಕೊರೋನರ್ ಹೋಮಿ ಚಿನೋಯ್ ಪಾರ್ಸಿಯಾಗಿದ್ದರು. ಧಾರ್ಮಿಕ ಭಾವನೆಗಳನ್ನು ತೊರೆದು ಅವರು ತಕ್ಷಣ ಸ್ಥಳಕ್ಕೆ ಧಾವಿಸಿ ಶವವನ್ನು ವಶಪಡಿಸಿ ಶವಾಲಯಕ್ಕೆ ತಂದು ಸಾಗಿಸಲು ಆಜ್ಞೆ ಕೊಟ್ಟರು. ಈ ವಿಷಯದಲ್ಲಿ ಪಾರ್ಸಿಗಳು ಬಹಳ ಗಲಾಟೆ ಮಾಡಿದ್ದರು. ಪಾರ್ಸಿಗಳ ಶವವನ್ನು ಒಮ್ಮೆ ಟವರಿಗೆ ಸಾಗಿಸಿದ ನಂತರ ಅದನ್ನು ಪುನಃ ಹೊರಗೆ ತರಲು ಧಾರ್ಮಿಕ ನಿಯಮದಲ್ಲಿ ಅವಕಾಶವಿಲ್ಲವಂತೆ. ಆದರೆ ಶವಾಲಯದಲ್ಲಿ ಕಾನೂನು ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯಿಸುತ್ತದೆ. ✡

ಸಂಗೀತವೆಂದರೆ ಭಾವನೆಗಳ ಶಾರ್ಟ್‌ಹ್ಯಾಂಡೇ ಸರಿ

—ಟಾಲ್‌ಸ್ಟಾಯ್

ಘೋರ ರಾತ್ರಿಗಳ್ !

ವಿ. ಎ. ಜೋಶಿ

ಇದಾವುದೊ ಪಾಶ್ಚಿಮಾತ್ಯ ಚಿತ್ರಪಟದ ಶೀರ್ಷಿಕೆಯಂತೆ ಅನಿಸುತ್ತಿದೆಯಲ್ಲ?– ಹಾಗೆ ನೀವು ಚಿಂತಿಸುತ್ತಿರಬೇಕು. 'ಅರೇಬಿಯನ್ ರಾತ್ರಿಗಳ್.' 'ಬಿಳಿ ರಾತ್ರಿಗಳು'. 'ಛತ್ರದಲ್ಲಿ ಒಂದು ರಾತ್ರಿ' 'ಒಂದು ನಿಮಿಷದ ಸುಖ', 'ಕಾಮನ ಹಸಿವು'. 'ಸಾವಿರದ ಒಂದು ಹುಣ್ಣಿ'. 'ಪ್ರತಿರೋಧ' 'ಕಾಮುಕರಾತ್ರಿ'– ಈ ಸಿನ್ಮಾ ಚಿತ್ರಗಳ ಸರಮಾಲೆಯ ಸುದ್ದಿ ಕೇಳಿರುವ (ನೋಡಿರಲೂಬಹುದು!) ನಿಮಗೆ ಹೊಸದಾದುದು ನಾನು ಸುತರಾಂ ಬರೆಯುವುದಿಲ್ಲ. ಈ ಮಾಲಿಕೆಯಲ್ಲಿ ನನ್ನ ಪರಿಚಯ ಶೀರ್ಷಿಕೆಯನ್ನು, ವಿಷಯವನ್ನು ಬದಲಿಸಿ ಹೇಳುವೆನೆಂದು ತಿಳಿಯಿರಿ. ಉಳಿದ ವಿಷಯಗಳು ಹೇಗೂ ಇರಲಿ. ಢಣಾಢಂಗುರವಾಗಿ ಅನುಭವವನ್ನು ನಾನು, ಹೌದು ನಾನೇ, ಪ್ರಕಟಿಸಲಾರೆ. ಆದರೆ, ಮೇಲಿನ ಹೆಸರಿನ ಚಿತ್ರಗಳನ್ನು ನೀವು ಬೇಗನೆ ಯಾಗಿ ನೋಡಿರಬಹುದು. ಆ ಮಾತು ಬೇರೆ!

ನನ್ನ ಬದುಕಿನ ಮೂರು ಘೋರ ರಾತ್ರಿಗಳ ಭಯಾನಕತೆಯನ್ನು ನಿಮ್ಮೊಡನೆ ಹಂಚಿಕೊಳ್ಳುವ ಹಂಬಲ ನನ್ನದು. ಸುಖವನ್ನು ಹಂಚಿಕೊಂಡರೆ ಅದು ಹೆಚ್ಚಾಗುವುದೆಂದೂ ದುಃಖವನ್ನು ಹಂಚಿಕೊಂಡರೆ ಅದು ಕಡಿಮೆಯಾಗುವುದೆಂದೂ ಹಿರಿಯರು ಹೇಳುತ್ತಾರೆ. ನಾನು ಅನುಭವಿಸಿರುವ ಭಯಾನಕತೆಯ ತೀವ್ರತೆ ಸಹೃದಯರಾದ ನಿಮ್ಮ ಸಮ್ಮುಖದಲ್ಲಿ ಸ್ವಲ್ಪವಾದರೂ ಕಡಿಮೆಯಾಗಬಹುದೆಂದು ನಂಬಿರುವೆ.

ಕಳೆದ ವರ್ಷ ಕಾರ್ಯನಿಮಿತ್ತ ಬೆಂಗಳೂರಿಗೆ ಹೋಗಿದ್ದೆ. ಮಿತ್ರಪ್ರಿಯನಾದ ನನ್ನ ಮನಸ್ಸು ನನಗೆ ಲಾಡ್ಜಿನಲ್ಲಿ ವಾಸಮಾಡಲು ಬಿಡಲಿಲ್ಲ, ಬಾಲ್ಯ ಸಹಪಾಠಿ ರಿಸರ್ವ್ ಬ್ಯಾಂಕಿನಲ್ಲಿ ಅಧಿಕಾರಿಯಾಗಿದ್ದುದು ಬರಾಬರಿ ನೆನಪಾಗಿ ಅಲ್ಲಿಗೆ ಹೆಜ್ಜೆ ಹಾಕಿದೆ. ಆ ಬ್ಯಾಂಕಿನ ಸಿಬ್ಬಂದಿ ಸಾಗರದಲ್ಲಿ ಒಂದೆರಡು ತಾಸುಗಳ ಅವಿರತ ಶೋಧದ ನಂತರ ಬಕರಾ ಬಲೆಗೆ ಬಿದ್ದಿತು. ನನ್ನ ಭೆಟ್ಟಿಯಿಂದ ನನಗಿಂತ ಹೆಚ್ಚಿನ ಸಂತೋಷವನ್ನು ಆತ ಪಟ್ಟಂತಿತ್ತು. ಆತ ಇನ್ನೂ ಚತುರ್ಭುಜನಾಗಿಲ್ಲವೆಂದೂ ರಾಜಾಜಿನಗರದಲ್ಲಿ ರೂಮ್ ಮಾಡಿಕೊಂಡಿದ್ದಾನೆಂದೂ ತಿಳಿಯಿತು. ಅಂದಿನ ಸಂಜೆ ನನ್ನ ಲಗೇಜಿನೊಡನೆ ಆತನ ರೂಮು ಸೇರಿದೆ. ರಾತ್ರಿಯ ಊಟದ ನಂತರ ಎಷ್ಟೋ ಹೊತ್ತು ಮಾತನಾಡುತ್ತ ಉಳಿದೆವು. ನನ್ನ ದಣಿದ ದೇಹ ಹಾಸಿಗೆಯನ್ನು ಹುಡುಕುತ್ತಿತ್ತು. ಆದರೆ ನನ್ನ ಗೆಳೆಯನ ಮಾತು ಮುಗಿಯುವ ಲಕ್ಷಣ ಕಾಣಲಿಲ್ಲ. ಕೊನೆಗೂ ಅವನ ಮಾತಿನ ಮಧ್ಯೆ ನಾನು ಒಂದೆರಡು ಸಲ ತೂಕಡಿಸಿದಾಗ ಆತ ನನ್ನ ಕೈಬಿಟ್ಟ. ಬದುಕಿದೆಯಾ ಬಡ ಜೀವವೆ ಎಂದುಕೊಂಡು ಚಾದರು ಹೊದ್ದುಕೊಂಡೆ.

ಮಧ್ಯರಾತ್ರಿ ನನಗೆ ಒಮ್ಮೆಲೆ ಎಚ್ಚರವಾಯಿತು. ಗೊರ್, ಗೊರ್, ಗೊರ್ ಎಂಬ ಅಖಂಡ ಕೊರೆತ ನಡೆದಿತ್ತು. ಹತ್ತಿರದಲ್ಲಿ ಎಲ್ಲಿಯಾದರೂ ಸಾ ಮಿಲ್ ಇದೆಯೋ ?

ಇದ್ದಿದ್ದರೆ ಸಂಜೆಯ ಮುಂದೆ ಅದರ ಸಪ್ಪಳ ಹೇಕೆ ಕೇಳಿಸಲಿಲ್ಲ? ನನ್ನ ಊಹೆಯ ಕುದುರೆ ಸಿಕ್ಕಾಪಟ್ಟೆ ಹರಿದಾಡಿತು. ಅದು ನನ್ನ ಲಂಗೋಟಿ ಗೆಳೆಯನ ಗೊರಕೆಯ ಸಪ್ಪಳ ಎಂದು ತಿಳಿಯಲು ನನಗೆ ಹತ್ತಾರು ನಿಮಿಷಗಳೆ ಹಿಡಿದವು. ಬೆಡ್ ಲ್ಯಾಂಪಿನ ಮಂದ ಬೆಳಕಿನಲ್ಲಿ ಕಣ್ಣರಳಿಸಿ ನೋಡಿದೆ, ಆತ ಅಸ್ತವ್ಯಸ್ತವಾಗಿ ಮಲಗಿದ್ದ. ತೆರೆದ ಬಾಯಿ ಹಾಗೂ ಅಗಲಿಸಿದ ಮೂಗಿನ ಹೊರಳೆಗಳಿಂದ ಧ್ವನಿ ಪುಂಖಾನುಪುಂಖವಾಗಿ ಹೊರಬರುತ್ತಿತ್ತು. ಆ ವಿಷಮ ಗಳಿಗೆಯಲ್ಲಿ ಕೂಡ ನನ್ನ ಮಂಗ ಮನಸ್ಸು ಆ ಧ್ವನಿಯ ನಿರ್ದಿಷ್ಟ ಉಗಮ ಸ್ಥಾನದ ಬಗ್ಗೆ (ಬಾಯಿಯೊ, ಮೂಗೊ ಎಂದು) ಕುತೂಹಲ ಹೊಂದಿತ್ತು. ಇದಾವುದರ ಪರಿವೆಯೂ ಇಲ್ಲದೆ, ನನ್ನ ಗೆಳೆಯ ಆಗಾಗ ಮಗ್ಗಲು ಬದಲಿಸುತ್ತ ಗೊರಕೆ ಹೊಡೆಯುತ್ತಿದ್ದ. ಆತ ಮಗ್ಗಲು ಬದಲಿಸಿದಾಗೊಮ್ಮೆ ನನಗೆ ಅನಿಸುತ್ತಿತ್ತು, ಗೇರ್ ಬದಲಿಸುತ್ತಿದ್ದಾನೆ ಎಂದು, ನನ್ನ ನಿದ್ದೆ ಹಾರಿ ಹೋಯಿತು. ಕೋಣೆಯಲ್ಲಿಯ ಕೆಲೆಂಡರಿನ ಕನ್ಯೆಯರನ್ನು ಕಣ್ತುಂಬ ನೋಡುತ್ತ ಒರಗಿದೆ. ಬೇಸರವಾದಾಗ ಸೂರು ದಿಟ್ಟಿಸಿದೆ. ಬೆಳ್ಳಂಬೆಳಗೂ ಜಾಗರಣೆಯಾಯಿತು. 'ರಾತ್ರಿರೇವಂ ವ್ಯರಂಗೀತ್' ಬೇಕಾದರೆ 'ರಾತ್ರಿರೇವ ವ್ಯರಾಸೀತ್'ಅನ್ನಿ. ಅಂತೂ ಬೆಳಗಾಯಿತು.

ಅಂದು ರಾಜಧಾನಿಯಲ್ಲಿಯ ನನ್ನ ಖಾಸಗಿ ಕೆಲಸ ಪೂರ್ಣವಾಗಲಿಲ್ಲ. ವಿಧಾನಸೌಧದಲ್ಲಿ ಒಬ್ಬಿಬ್ಬರನ್ನು ಕಾಣಬೇಕಿತ್ತು. ಅವರ ಕೋಟುಗಳು ಮಾತ್ರ ಕಂಡವಷ್ಟೆ, ದರ್ಶನಭಾಗ್ಯ ಲಭಿಸಲಿಲ್ಲ. ಇನ್ನೊಂದು ದಿನ ಉಳಿಯಲು ನನ್ನ ಗೆಳೆಯ ಇನ್ನಿಲ್ಲದಂತೆ ಒತ್ತಾಯಪಡಿಸಿದ. ಆದರೂ ಅದೇಕೊ ಅಂದಿನ ಸಂಜೆ ನಾನು ಬೆಂಗಳೂರು ಬಿಟ್ಟೆ! ಆನಂತರ ನಾನು ಬೆಂಗಳೂರಿಗೆ ಹೋಗಿಲ್ಲ. ಹೋದರೆ, ನನ್ನ ಹಳೆಯ ಗೆಳೆಯನನ್ನು ಕಾಣದೆ ಹೇಗಿರಲಿ? ಎಂಬ ವಿಚಾರದಲ್ಲಿ ಅಲ್ಲಿಗೆ ಹೋಗುವುದನ್ನೇ ಮುಂದೂಡುತ್ತಿದ್ದೇನೆ.

ಹಿಂದಿನ ತಿಂಗಳು ಎಷ್ಟೋ ದಿನಗಳ ನಂತರ ನನ್ನ ಹಳ್ಳಿಗೆ ಹೋಗಿದ್ದೆ. ಅಜ್ಜಿ ಅಪರೂಪದ ನನ್ನ ಭೆಟ್ಟಿಯಲ್ಲಿ ಹಿಗ್ಗಿ ಹೀರೇಕಾಯಿಯಾದಳು, ನನಗೆ ರಾಜೋಪಚಾರ ನೀಡಿದಳು. ಅವಳ ಮುದಿ ಕಣ್ಣುಗಳಲ್ಲಿ ಉಮೇದಿಯ ಮಿಂಚನ್ನು ಗುರುತಿಸಿದೆ. ಅವಳ ಚಟುವಟಿಕೆ ಕಂಡು ಅಂದುಕೊಂಡೆ, ಪರವಾಯಿಲ್ಲ, ಇವಳು ಇನ್ನೊಂದು ದಶಕ ಗಾಡಿ ದೂಡುತ್ತಾಳೆ. ಮುದುಕಿ ತನ್ನ ಹಳೆಯ ನೆನಪುಗಳನ್ನು ಮಧ್ಯರಾತ್ರಿಯ ವರೆಗೂ ಮೀಟುತ್ತಲೆ ಉಳಿಯಿತು. ನಾನು 'ಸೋ' ಎನ್ನುತ್ತ ಅವಳೆದುರು ಕುಳಿತೇ ಇದ್ದೆ. ಅವಳನ್ನು ನೋಡುತ್ತಿದ್ದಂತೆ ನನಗೆ ನನ್ನ ಬಾಲ್ಯ ಮರುಕಳಿಸಿತು. ಆಗ ದೆವ್ವದ ಕತೆಗಳನ್ನು ಹೇಳಿ ಆಶ್ಚರ್ಯ–ಅಂಜಿಕೆಗಳನ್ನು ಜೊತೆಯಾಗಿ ಹುಟ್ಟಿಸಿದವಳು ಈ ಅಜ್ಜಿಯೆ ತಾನೆ? ಜೋಗುಳ ಪದಗಳನ್ನು ಹಾಡುತ್ತ ತೊಟ್ಟಿಲು ತೂಗಿದ್ದು ಈ ಮುದಿ ಕೈಗಳಷ್ಟೇ? ಅವಳ ಮಾತುಗಳು ಈಗ ನನ್ನ ಮೇಲೆ ಇನ್ನೊಮ್ಮೆ ಜೋಗುಳದ ಪರಿಣಾಮ ಬೀರಿದವು. ಒಂದೆರಡು ದಿನ ನಿಲ್ಲುವೆನೆಂಬ ಭರವಸೆ ಸಿಕ್ಕ ಮೇಲೆಯೆ ಅಜ್ಜಿ ನನ್ನನ್ನು ಆ ರಾತ್ರಿ 'ರಿಲೀವ್' ಮಾಡಿದಳು.

ಹಾಸಿಗೆ ಕಂಡೊಡನೆ ನಿದ್ರೆ ತೆಗೆಯುವ ಜಾತಿ ನನ್ನದು. ಆದರೆ ಅರಗಳಿಗೆಯಲ್ಲಿ ಇದ್ದಕ್ಕಿದ್ದ ಹಾಗೆ ಎಚ್ಚರಾಯಿತು. ಲೈಟ್ ಆನ್ ಮಾಡಿ ನೋಡುತ್ತೇನೆ, ನನ್ನ ಹಾಸಿಗೆಯಲ್ಲಿ ಹತ್ತೆಂಟು ತಗಣಿಗಳು ರಾಜಾರೋಷವಾಗಿ ಹರಿದಾಡುತ್ತಿವೆ. ಗೋಡೆಯ ಸುತ್ತಲು ಅವು ಸ್ವಚ್ಛಂದವಾಗಿ ಚಲಿಸುತ್ತಿರುವ ದೃಶ್ಯವನ್ನು ಕಂಗೆಟ್ಟೆನು. ಅಧೀರನಾದೆ, ಕೈ ಚೆಲ್ಲಿ ಕುಳಿತೆ. ಅಜ್ಜಿಯ ತೊಗಲಿನ ಚೀಲದಲ್ಲಿ ರಕ್ತ ಸಿಗದೆ ವರ್ಷಗಳಿಂದ ಹಸಿದ ತಗಣಿಗಳು, ಈಗ ನನ್ನ ಮಾಂಸಲ ಶರೀರದ ರುಚಿ ಕಂಡು ಹುಚ್ಚೆದ್ದಿರಬೇಕು. ಓ ದೇವರೆ, ಅವುಗಳ ಎಲ್ಲ ಹಾದಿಗಳೂ ನನ್ನ ಹಾಸಿಗೆಯ ಕಡೆಗೇ ಮುಖ ಮಾಡಿಕೊಂಡಂತಿತ್ತು. ಅಹಿಂಸಾವಾದಿಯಾದ ನನಗೆ ತಗಣಿಗಳನ್ನು ಕೊಲ್ಲುವುದೆಂದರೆ ಮೈ ಮೇಲೆ ಮುಳ್ಳು ಮೂಡಿದ ಅನುಭವ. ನಾನು ಎಚ್ಚರಾದದ್ದನ್ನು ತಿಳಿದು, ಬದಿಯ ಕೋಣೆಯಲ್ಲಿ ಮಲಗಿದ್ದ ಅಜ್ಜಿ ಮತ್ತೆ ಮಾತಿಗಿಳಿಯುವಳೊ ಎಂಬ ಭೀತಿ ಬೇರೆ ಇತ್ತು.

ತೊಡಗಿತು!

ಮಗ್ಗುಲು ಬದಲಿಸುತ್ತ ರಾತ್ರಿ ನೂಕುತ್ತಿದ್ದಾಗ ನನಗೆ ದಿ. ತೀ. ನಂ. ಶ್ರೀಕಂಠಯ್ಯ ಅವರ 'ತಗಣೆ' ಪ್ರಬಂಧದ ನೆನಪಾಯಿತು. ಅವರು ಪಶ್ಚಿಮ ಕರಾವಳಿಯ ಪಟ್ಟಣವೊಂದಕ್ಕೆ ಉಪನ್ಯಾಸಕ್ಕೆ ಹೋದಾಗ ತಗಣೆಗಳ ಪಟಾಲಂ ಕೈಯಲ್ಲಿ ಸಿಕ್ಕಿ ಬಿದ್ದಿದ್ದರು. ಅಲ್ಲಿ ತಗಣೆಗಳು ಮಾಡಿದ ಮಹೋಪಕಾರವೇನೆಂದರೆ ಕನ್ನಡಕ್ಕೆ 'ತಗಣೆ' ಎಂಬ ರಮ್ಯ ಲಲಿತ ಪ್ರಬಂಧವೊಂದು ದೊರಕಿದ್ದು! ತೀ. ನಂ. ಶ್ರೀ. ಬರೆಯುತ್ತಾರೆ, "ತಗಣೆಗಳ ಇಂಥ ಸಾಮೂಹಿಕ ದಾಳಿಯನ್ನು ಹಿಂದೆಲ್ಲೂ ನಾನು ಕಂಡಿರಲಿಲ್ಲ... ಹೊದಿಕೆಯನ್ನು ತೆಗೆದು ದೂರಕ್ಕೆ ಎಸೆದೆನು... ಟಾರ್ಚನ್ನು ಎಲ್ಲ ದಿಕ್ಕುಗಳಿಗೂ ತಿರುಗಿಸಿ ಸದ್ಯಕ್ಕೆ ಹೊಸ ಪಟಾಲಂ ಯಾವುದೂ ಬರುತ್ತಿಲ್ಲವೆಂದು ದೃಢ ಮಾಡಿಕೊಂಡು, ಮತ್ತೆ ಮಲಗಿ ಕಣ್ಣು ಮುಚ್ಚಿಕೊಂಡೆನು. ನಿದ್ದೆಯೇನೋ ಬಂದಿತು; ಆದರೆ ಅರ್ಧ ಘಂಟೆಯೊಳಗೆ ಮತ್ತೆ ಮೈಯುರಿ, ಮತ್ತೆ ಎಚ್ಚರ, ಮತ್ತೆ ತಗಣೆಗಳ ಸಾಲಿನ ದರ್ಶನ, ಮತ್ತೆ ಅವುಗಳೊಡನೆ ಹೋರಾಟ. ರಾತ್ರಿಯೆಲ್ಲಾ ಹೀಗೆಯೇ ನಡೆಯಿತು. ಅಂದು ನಾನು ಪಟ್ಟ ಹಿಂಸೆಯ ನೆನಪಿನ ಗಾಯ ಇಂದಿಗೂ ಪೂರ್ತಿಯಾಗಿ ವಾಸಿಯಾಗಿಲ್ಲ..."


ಒಂದೇ ಮಾತಿನಲ್ಲಿ ಹೇಳುತ್ತೇನೆ. ತೀ. ನಂ. ಶ್ರೀಯವರ ನೋವನ್ನು ಅಂದು ನಾನು ಇನ್ನೊಮ್ಮೆ ಅನುಭವಿಸಿದೆನಷ್ಟೆ. ವ್ಯಕ್ತಿ, ಸ್ಥಳ ಮತ್ತು ಕಾಲ ಮಾತ್ರ ಬೇರೆ ಬೇರೆ. ಎರಡು ದಿನಗಳ ವಿಶ್ರಾಂತಿಗೆಂದು ಹಳ್ಳಿಗೆ ಬಂದಿದ್ದ ನಾನು ಅಜ್ಜಿಯ ಅಕ್ಕರೆಯ ಆಗ್ರಹವನ್ನು ಆ ಬದಿಗೆ ತಳ್ಳಿ, ಮಾರನೆ ದಿನ ಬೆಳಗಿನ ಮೊದಲ ಬಸ್ಸಿಗೆ ಅಲ್ಲಿಂದ ಕಂಬಿ ಕಿತ್ತೆ. ಅಲ್ಲಿಯ ತಗಣೆಗಳಗೆ ನೆನಪು ಹಸಿರಾಗಿರುವವರೆಗೆ ಪ್ರಾಯಶಃ ಅಲ್ಲಿ ಹೋಗುವ ಧೈರ್ಯವನ್ನು ನಾನು ತೋರಲಾರೆ— ಅನಿಸುತ್ತದೆ!

ಸ್ವತಃ ಭಾಷಣಕಾರರಾಗಿರುವವರು ಇತರರ ಭಾಷಣಗಳಲ್ಲಿ ಆಸಕ್ತಿ ತೋರಿಸುವುದು ತೀರ ವಿರಳ ಎಂದು ಕೇಳಿರುವೆ. ಆದರೆ ನಾನು ಈ ಸಾಮಾನ್ಯ ನಿಯಮಕ್ಕೆ ಅಪವಾದವಾಗಿರುವೆ.

ನಾನು ಆಗಾಗ ಇತರರ ಭಾಷಣಗಳನ್ನು ಕೇಳಬಯಸುತ್ತೇನೆ. 'ಯಾತಕ್ಕಂತೀರಾ, ನನಗಿಂತಲೂ ಅವರೆಷ್ಟು ಕೆಟ್ಟದಾಗಿ ಮಾತನಾಡುತ್ತಾರೆ ಎಂದು ತಿಳಿಯುವ ಬಯಕೆಯಿಂದ. ಮೊನ್ನೆ ಸಂಜೆ ಪೇಟೆಯಿಂದ ಹಿಂತಿರುಗುತ್ತಿದ್ದಾಗ, ನಗರ ಭವನದ ಮುಂದೆ ಜನಜಂಗುಳಿ ಕಂಡಿತು. ಏನೆಂದು ಕುತೂಹಲದಿಂದ ಹತ್ತಿರ ಹೋದೆ.

ಭವನದಲ್ಲೊಬ್ಬ ದೇ. ಭ. ಗಜಾನು

ಕಡಲತೀರದಲ್ಲಿ ದೊರೆತ ಗುರುತು ಹಿಡಿಯಲಾಗದ ಮೃತದೇಹದ ಬಗ್ಗೆ ತನಿಖೆಯಲ್ಲಿ ಪೋಲೀಸರ ಆಸಕ್ತಿ... - ಸುದ್ದಿ



"ಈ ಹಿಂದೆಯೇ ಎರಡು ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದನಂತೆ ಸಾರ್ ಈತ. ಹಾಗಾಗಿ ಆ ಹೆಣ ಇವನದ್ದಿರಬಹುದೇ ಎಂಬ ಅನುಮಾನ ಹುಟ್ಟಿ, ವಿಚಾರಿಸ್ಕೊಂಡು ಹೋಗೋಣಾಂತ ಇಲ್ಲಿಗೇ ಕರೆತಂದೆ"

ಬಾಹು, ಕೊರೆಯುತ್ತಿದ್ದ– "ನಮ್ಮ ದೇಶ ಜಗತ್ತಿನಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ನಮ್ಮಲ್ಲಿ ವಿರೋಧ ಪಕ್ಷಗಳು ಸೋತಾಗಲೆಲ್ಲ ಚುನಾವಣೆಗಳು ಸರಿಯಾಗಿ ನಡೆದಿಲ್ಲ ಎಂದು ಹೇಳುತ್ತಿರುತ್ತವೆ. ನಾಯಿ ಹೋಗುತ್ತಿರುತ್ತದೆ, ಆನೆ ಬೊಗಳುತ್ತಿರುತ್ತದೆ, ಓಹ್! ಕ್ಷಮಿಸಿರಿ. ಸ್ವಲ್ಪ ತಿರುವು ಮುರುವಾಯಿತು, ಯಾರ ಬೊಗಳುವಿಕೆಯೂ ನಮ್ಮನ್ನು ತಡೆಯಲಾರದು. ನಾವಿರುವುದೆ ನಿಮಗಾಗಿ, ನಿಮ್ಮ ಸೇವೆಗಾಗಿ, ನಮ್ಮ ಜೀವನವೆಲ್ಲ ನಿಮ್ಮ ಸೇವೆಗೆ ಮೀಸಲಾಗಿದೆ. ನಮ್ಮ ಶಕ್ತಿ ಜನತೆಗೆ ಮುಡಿಪು. ನಮ್ಮಿಬ್ಬರದು ಪರಸ್ಪರ ಪೂರಕ ಜೀವನ. ನಾವು ನಿಲ್ಲುತ್ತೇವೆ, ನೀವು ಆರಿಸುತ್ತೀರಿ; ನಾವು ಮತ್ತೆ ನಿಲ್ಲುತ್ತೇವೆ, ನೀವು ಮತ್ತೆ ಆರಿಸುತ್ತೀರಿ. ನೀವು ಮತ ಹಾಕುತ್ತೀರಿ, ನಾವು ಮುಂದೆ ಹೋಗುತ್ತೇವೆ..."

ಅಡೆ ತಡೆಯಿಲ್ಲದೆ ಈ ಮಾತಿನ ಪಾತ ಉರುಳುತ್ತಿತ್ತು. ಬದಿಯವನನ್ನು ಕೇಳಿದೆ, ಇದು ಏನು? ಎಂದು. ಆತ ನನ್ನನ್ನು ಕಣ್ಣಿನಿಂದಲೆ ಅರ್ಧ ತಿಂದು, ಗುಡುಗಿದ "ಕಾಣಿಸೋದಿಲ್ಲೇನ್ರಿ, ಭಾಷಣ ಮಾಡಾಕ ಹತ್ಯಾರ?" ಹಾಂ, ಭಾಷಣವನ್ನು ನೋಡಬಹುದು, ಕೇಳಲಾಗದು ಎಂಬ ಸತ್ಯವನ್ನು ಆ ನನ್ನ ಅಜ್ಞಾತ ಬಾಧು ನನಗೆ ಅಂದು ಬಿಂಬಿಸಿದ. ಅವನನ್ನು ಮತ್ತೆ ಕೆಣಕುವುದು ಬೇಡ, ಎಂದು ಅವನಿಗೆ ಮನದಲ್ಲೆ ವಂದಿಸಿ ಅಲ್ಲಿಂದ ಕಾಲ್ದೆಗೆದೆ. ಆದರೆ ನಾನು ಬಿಟ್ಟರೆ, ದೇ. ಭ. ಬಿಡಬೇಕಲ್ಲಿ. ಅವರ ಮಾತುಗಳು ಮೈಕಾಸುರನ ಮೂಲಕ ನನ್ನ ಕಿವಿಯನ್ನು ಎಡೆಬಿಡದೆ ಅಪ್ಪಳಿಸುತ್ತಿದ್ದವು. "ನಾವು ನಿಲ್ಲುತ್ತೇವೆ. ನೀವು ಆರಿಸುತ್ತೀರಿ. ಹಿ...ಹಿ ...ಹಿ... ಈ ಅಟ್ಟಹಾಸ ಗಾಳಿಯಲ್ಲಿ ಕೇಕೆ ಹಾಕಿದಂತೆ ಅನಿಸಿತು. ಹಿ...ಹಿ...ಹಿ... ನನ್ನನ್ನು ಬೇತಾಳ"ದಂತೆ ಹಿಂಬಾಲಿಸಿತು.

ದೇ. ಭ.ರ ಭವ್ಯ ಭಾಷಣ ಕೇಳಿದ ನಂತರ ನನಗೊದಗಿದ ದುರವಸ್ಥೆಯನ್ನು ಎರಡು ಮಾತುಗಳಲ್ಲಿ ಚಿತ್ರಿಸುತ್ತೇನೆ. ಅಕ್ಷರಶಃ ದಿಗ್ಭ್ರಾಂತಿ ಕವಿಯಿತು. ತಲೆ ಚಿಟ್ ಎನ್ನತೊಡಗಿತು. ಮೈಯಲ್ಲಿಯ ನರನರಗಳನ್ನು ಅದಾರೊ ಏಕಕಾಲದಲ್ಲಿ ಮೀಟಿದಂತೆ ಆಯಿತು. ಮನೆಗೆಂದು ಹೊರಟವ ವಿರುದ್ಧ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿದ್ದೆ (ಇದೇ ನಮ್ಮ ಕಲ್ಪನೆಯ ದಿಗ್ಭ್ರಾಂತಿ ತಾನೆ?). ಮಾರ್ಗದಲ್ಲಿ ಮಿತ್ರನೊಬ್ಬ, ಸಿಕ್ಕ. ಅವನೆನ್ನನ್ನು ಗುರುತಿಸಿ ಮಾತನಾಡಿಸಿದ. ಸಾಹಿತಿಗಳು ಹೇಳುವಂತೆ, ನನ್ನ ಮನೋಭೂಮಿಕೆಯನ್ನು ಅವನೆದುರು ಸುಸ್ಪಷ್ಟವಾಗಿ ತೆರೆದು ತೋರಿದೆ. ಹಾಗೂ ನನ್ನ ಭಾವಾವೇಗವನ್ನು ತೀವ್ರವಾಗಿ ತೋಡಿಕೊಂಡೆ. ವಿಷಯ ತಿಳಿದು ಅರಗಳಿಗೆ ಅರ್ಧ ನಿಮೀಲಿತ ನೇತ್ರನಾದ ಆತ ನನ್ನ ಬೆನ್ನು ಚಪ್ಪರಿಸಿ ವಿಶ್ ಮಾಡಿದ–"ಅರೆ, ನೀನು ನಿನ್ನ ಮನೆಯ ವಿರುದ್ಧ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿದ್ದೀಯಾ, ಪೃಥ್ವಿ ದುಂಡಗಿದೆ ಕಣೊ, ನೀನು ಈ ದಿಕ್ಕಿ ಹೋದರೂ ನಿನ್ನ ಮನೆಗೆ ತಲುಪಿಯೇ ತಲುಪತ್ತೀಯಾ ಇಂದಲ್ಲ, ನಾಳೆ, ಹೌದೆ? ಎಂದು ಆಕಾಶ ನೋಡುತ್ತ ನಿಂತ. ಮಾನಸಿಕ ತುಮುಲದಲ್ಲಿ ಕಳೆಯಬಹುದಾದ ಅಂದಿನ ನಿದ್ರಾರಹಿತ ರಾತ್ರಿಯನ್ನು ನೆನೆದು ನಾನು ಇನ್ನಷ್ಟು ಖಿನ್ನನಾದೆ.

ಓಹ್, ನಾನು ಹಾರೈಸಿದಂತೆಯೆ, ನಾ ಕಳೆದ ಘೋರ ರಾತ್ರಿಗಳ ಭೀಕರತೆಯು ತೀವ್ರತೆ ನಿಮ್ಮ ಸನ್ನಿಧಿಯಲ್ಲಿ ಕರಗಿಹೋಗುತ್ತದೆ. ಅಂದ ಹಾಗೆ, ದಯವಿಟ್ಟು ತಿಳಿಸಿ, ಈ ನಿರೂಪಣೆ ನಿಮ್ಮ ಮೇಲೇನಾದರೂ ವಿಪರೀತ ಪರಿಣಾಮ ಮಾಡಿದೆಯೆ?




ನಾನು ದುಡಿಯುವ ಹೆಣ್ಣು. ತಿಂಗಳ ವೇತನ ಬರುವಾಗ
ಸ್ವಾವಲಂಬನದ ಪುಳಕ. ಆದರೆ, ಮುಂದೆ ಎಂದಾದರೂ
ಸಂಸಾರವನ್ನಪ್ಪಿ ನೌಕರಿ ಬಿಟ್ಟೆನಾದರೂ, ನನಗೆ ಆರ್ಥಿಕ
ಸ್ವಾತಂತ್ರ್ಯದ ಅನುಭವ ಬೇಕು.
ಅದು ಹೇಗೆ?
ನೌಕರಿ ಬಿಟ್ಟರೂ ನಿಮಗೆ ತಿಂಗಳ ವೇತನ ಸಿಗುತ್ತದೆ.
ಅಮರ್ ಡಿಪಾಜಿಟ್
ಸಿಂಡಿಕೇಟ್ ಬ್ಯಾಂಕಿನ
ಅಮರ್ ಡಿಪಾಜಿಟ್ ಯೋಜನೆಯೊಂದೇ
ಇದಕ್ಕೆ ಉತ್ತರ.
ರೂ. 200ರಂತೆ ಪ್ರತಿ ತಿಂಗಳು 84 ತಿಂಗಳ ತನಕ
ಅಮರ್‌ನಲ್ಲಿ ವಿನಿಯೋಗಿಸುತ್ತ ಬನ್ನಿ. ಅವಧಿಯ
ಕೊನೆಯಲ್ಲಿ ರೂ. 24,814ರ ದೊಡ್ಡ ಮೊತ್ತ-
ನಂತರ ಪ್ರತಿ ತಿಂಗಳು ರೂ. 200 ಬದುಕಿನುದ್ದಕ್ಕೂ
ನಿಮ್ಮದು.
ವಿನಿಯೋಗದ ಅವಧಿ 120 ತಿಂಗಳು ಆದಲ್ಲಿ
ಉಳಿತಾಯದ ಒಟ್ಟು ಮೊತ್ತ ರೂ. 41,114 ಮತ್ತು
ನಂತರ ಪ್ರತಿ ತಿಂಗಳು ರೂ. 339 ಬದುಕಿನುದ್ದಕ್ಕೂ.
ದುಡಿಯುವ ಮಹಿಳೆ, ನಿವೃತ್ತಿಗೆ ಅನುಕೂಲವಾದ
ಸೌಲಭ್ಯ, ಮಕ್ಕಳ ಪೋಷಣೆ-ಶಿಕ್ಷಣ-ಎಲ್ಲಕ್ಕೂ
ಹೇಳಿ ಮಾಡಿಸಿದ ಯೋಜನೆ ಇದು.
ಸಿಂಡಿಕೇಟ್ ಬ್ಯಾಂಕ್
ನಿಮ್ಮ ಬಾಳಿನ ನಿರಂತರ ಸಂಗಾತಿ
(S) SB 46 KAN

ಈ

ವಿಚಿತ್ರ

ತಪಸ್ವಿಗಳು!

ಆತನ ಹೆಸರು ಮನು. ಗುಜರಾತಿನ ಹರಿ ಎಂಬ ಗ್ರಾಮದ ನಿವಾಸಿ. ಮೂವತ್ತೂರು ವರ್ಷ ವಯಸ್ಸಿನ ಆತನಿಗೆ ೨೦ ವರ್ಷಗಳ ಹಿಂದೆ ತಾನೂ ಒಬ್ಬ ಸಂತನಾಗಬೇಕು, ಮಹಾತ್ಮನೆನಿಸಿಕೊಳ್ಳಬೇಕು ಎಂಬ ಹುಚ್ಚು ಹೊಕ್ಕಿತಂತೆ. ಅಂದಿನಿಂದ ತಪಸ್ಸು ಆಚರಿಸತೊಡಗಿದ. ಬೆತ್ತಲೆಯಾಗಿ ಊರ ಹೊರಗಿನ ಮರವೊಂದಕ್ಕೆ ಎರಡು ಮೀಟರಿನ ಸರಪಣಿಯೊಂದರಿಂದ ತನ್ನನ್ನು ಕಟ್ಟಿಸಿಕೊಂಡಿರುವ ಆತನದು ಮೌನ ತಪಸ್ಸು. ದಿನನಿತ್ಯ ಆತನ ೬೦ ವರ್ಷದ ತಾಯಿ ಆತನಿಗಾಗಿ ಊಟ – ತಿಂಡಿ ತರುತ್ತಾಳಲ್ಲದೆ ಆ ಮರದ ಸುತ್ತಲಿನ ಜಾಗವನ್ನು ಹಸನು ಮಾಡುತ್ತಾಳೆ.



ಹತ್ತಾರು ವರ್ಷಗಳಿಂದ ಆತ ಹೀಗೆ ತಪಸ್ಸನ್ನಾಚರಿಸುತ್ತಿರುವುದನ್ನು ನೋಡುತ್ತಲೇ ಬಂದಿರುವ ಹಳ್ಳಿಗರು ಮನುವಿನ ಆರೋಗ್ಯ ಎಂದೂ ಕೆಟ್ಟಿಲ್ಲ ಎನ್ನುತ್ತಾರೆ. ಆಗಾಗ ದಾರಿಹೋಕರು ಮನುವಿಗೆ ಬೀಡಿ ನೀಡುತ್ತಾರೆ; ಅದನ್ನಾತ ಸ್ವೀಕರಿಸಿ ಸನ್ನೆಯ ಮೂಲಕವೇ ಕೃತಜ್ಞತೆ ಅರ್ಪಿಸುತ್ತಾನೆ.

ಇಂದು ಆ ಮರ ಒಣಗಿದೆ. ಅವನನ್ನು ಬಿಗಿದ ಸರಪಣಿಗೆ ತುಕ್ಕು ಹಿಡಿದಿದೆ. ಮನುವಿಗಿನ್ನೂ ಮಹಾತ್ಮನೆಂಬ ಮನ್ನಣೆ ದೊರೆತಿಲ್ಲವಾದರೂ ಆತ ಸಂತನಾಗಬೇಕೆಂದು ಕಳೆದ ಇಪ್ಪತ್ತು ವರ್ಷಗಳಿಂದ ತಪಸ್ಸನ್ನು ಆಚರಿಸುತ್ತಿರುವುದನ್ನು ಬಾಹ್ಯ ಜಗತ್ತಿಗೆ ಅಧಿಕೃತವಾಗಿ ಸಾರಲೆಂದು ಲಿಖಿತ ಹೇಳಿಕೆಯನ್ನು ನೀಡಬೇಕೆಂದು ಗ್ರಾಮದ ಸರಪಂಚ ನಿರ್ಧರಿಸಿದ್ದಾನಂತೆ.

[‘ಸ್ಟೇಟ್ಸ್‌ಮನ್’ನಿಂದ]

ದಿಲ್ಲಿಯ ಹೊರವಲಯದಲ್ಲಿ– ಯಮುನೆಯ ದಡದಲ್ಲಿ– ಮತ್ತೊಬ್ಬ ವಿಚಿತ್ರ ತಪಸ್ವಿ ನೋಡಲು ಸಿಗುತ್ತಾನೆ. ಗುಡಾಣದಂಥ ಹೊಟ್ಟೆಯ ಕರಿ ಮೈಯ ಕುಳ್ಳ. ಮೈಮೇಲೆ ಕೇವಲ ಬೆಳ್ಳಿ ಚೇನು-ರುದ್ರಾಕ್ಷಿ ಸರಗಳನ್ನು ಧರಿಸಿ, ತಲೆಗೂ ಅಂಥದೇ ಒಂದು ಕಿರೀಟವಿಟ್ಟುಕೊಂಡು, ಬಲಗೈಯನ್ನು ಸದಾಕಾಲ ಮುಗಿಲೆಡೆ ಎತ್ತಿಕೊಂಡೇ ನಿಂತಿರುವ ಈ ನಗ್ನ ವ್ಯಕ್ತಿ ನಾಗ ಹನುಮಾನ ಗಿರಿ ಎಂಬ ಸಾಧು. ೪೮ ವರ್ಷದ ಈ ಸಾಧುವನ್ನು ಜನ ‘ಊಂಚೆ ಹಾಥ್‌ವಾಲೆ ಬಾಬಾ’ ಎಂದು ಕರೆಯುತ್ತಾರೆ.

ಈ ಮೇಲ್ಗೈಯ ಸಾಧು ಈ ಭಂಗಿಯಲ್ಲಿ ಹನ್ನೆರಡು ವರ್ಷಗಳನ್ನು ಕಳೆದಿದ್ದಾನೆ. ೧೯೩೨ರಲ್ಲಿ ಆಜಮಗಡ ಜಿಲ್ಲೆಯಲ್ಲಿ ಹುಟ್ಟಿದ ಈತ ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿ ಕಾಡುಮೇಡು ಸುತ್ತತೊಡಗಿದ. ಇಪ್ಪತ್ತರಲ್ಲೇ ತನ್ನ ತಂದೆ ಸಂನ್ಯಾಸ ಸ್ವೀಕರಿಸಿ ಬಿಟ್ಟದ್ದರಿಂದ ‘ಸಾಧು’ತನಕ್ಕೆ ಮಾರುಹೋದ ನಾಗ ಹನುಮಾನ ಗಿರಿ ತಾನು ಕೂಡ ಸಂನ್ಯಾಸ ಸ್ವೀಕರಿಸಿ ಪೂರ್ವಾಶ್ರಮದ ಸೂರಜನಾಥ ಎಂಬ ಹೆಸರನ್ನು ತ್ಯಜಿಸಿ ನಾಗ ಹನುಮಾನ ಗಿರಿ ಆದ. ತತ್ವಜ್ಞಾನ, ಶಿವ ಪುರಾಣಗಳ ಸತತ ಅಧ್ಯಯನದ ನಂತರ ಹನ್ನೆರಡು ವರ್ಷ ಬಲಗೈಯನ್ನು ಮೇಲೆತ್ತಿಕೊಂಡೇ ತಪಸ್ಸಾಚರಿಸುವ ಶಪಥಗೈದ. “ಯಾಕೆಂದರೆ, ಕೃಷ್ಣಪರಮಾತ್ಮನೂ ಇಂಥದೇ ತಪವನ್ನಾಚರಿಸಿದ ಎಂದು ನಮ್ಮ ಧರ್ಮಗ್ರಂಥಗಳಲ್ಲೇ ಹೇಳಿದೆ,” ಎನ್ನುವ ನಾಗ ಹನುಮಾನ ಗಿರಿ, “ಈ ಹನ್ನೆರಡು ವರ್ಷದ ಅವಧಿ ಮುಗಿದ ತಕ್ಷಣ ನಾನು ಶ್ರೀರಾಮನು ವನವಾಸದಲ್ಲಿ ಕಳೆದ ಹದಿನಾಲ್ಕು ವರ್ಷದ ಅವಧಿಯಂತೆ ಕಾಡಿನಲ್ಲಿ ಕೈ ಮೇಲೆತ್ತಿಕೊಂಡು ಆ ಅವಧಿ ಕಳೆಯಬೇಕೆಂದಿದ್ದೇನೆ,” ಎನ್ನುತ್ತಾನೆ.


ನಾಗ ಹನುಮಾನ ಗಿರಿ ನಿತ್ಯ ಬೆಳಗಿನಲ್ಲಿ ಯೋಗಾಭ್ಯಾಸ ಮಾಡುತ್ತಾನೆ. ಸಂತರ ಯಮುನಾತೀರ ವಿಹಾರ. ಮಿತಾಹಾರಿಯಾದ ಈತ ಕಾಮ ನಿಗ್ರಹಕ್ಕಾಗಿ ತನ್ನ ಜನನೇಂದ್ರಿಯಕ್ಕೆ ಬಿಗಿಯಾದ ಉಂಗುರ ಹಾಕಿ ಅದಕ್ಕೊಂದು ಅಗುಳಿಯಂಥ ಲೋಹದ ತುಂಡನ್ನು ಅಡ್ಡ ತೂರಿಸಿಕೊಂಡಿದ್ದಾನೆ!

(‘ಇಂಡಿಯಾ ಟುಡೇ’ಯಿಂದ)

← ಎದುರು ಪುಟದಲ್ಲಿಯ ಚಿತ್ರಗಳೆರಡೂ ಮೇಲ್ಗೈಯ ಸಾಧು ನಾಗ ಹನುಮಾನ ಗಿರಿಯದು. ಮೇಲಿನ ಚಿತ್ರದಲ್ಲಿ ಆತ ಬಲಗೈಯನ್ನು ಮೇಲೆತ್ತಿಕೊಂಡು ನಿಂತಿರುವುದನ್ನು ಕಾಣಬಹುದು. ಕೆಳಗಡೆಯಲ್ಲಿ ಇಷ್ಟು ವರ್ಷಗಳು ಬೆಳೆಯುತ್ತಲೇ ಇರುವ ಅವನ ಕೈಬೆರಳ ಉಗುರುಗಳನ್ನು ನೋಡಬಹುದು.



ವಿದ್ಯುತ್ ಉತ್ಪಾದಿಸುವ ಮೀನುಗಳು



ಎಚ್. ಎಸ್. ವೀರಪ್ಪಗೌಡ

ಈ ಜೀವ ಪ್ರಪಂಚದಲ್ಲಿ ಮೀನುಗಳು ಮಾತ್ರ 'ಸಜೀವ ಬ್ಯಾಟರಿ'ಯನ್ನು ಹೊಂದಿರುವ ಜೀವಿಗಳು. ಅಂದರೆ ಅವು ವಿಶೇಷ ವಿದ್ಯುತ್ ಅಂಶಗಳನ್ನು ಹೊಂದಿದ್ದು ಅವುಗಳ ಸಹಾಯದಿಂದ ವಿದ್ಯುತ್ ಉತ್ಪತ್ತಿ ಮಾಡುತ್ತವೆ. ೫೫೦ ವೋಲ್ಟ್‌ನ ಶಕ್ತಿಯ ವಿದ್ಯುತ್ ಉತ್ಪಾದಿಸಬಲ್ಲ ಕೆಲವು ಮೀನುಗಳೂ ಇವೆ!

ಇದುವರೆಗೆ ಸುಮಾರು ೨೫೨ ಜಾತಿಯ ಮೀನುಗಳು ಜೈವಿಕ ವಿದ್ಯುತ್ ಉತ್ಪಾದಿಸಬಲ್ಲವೆಂದು ತಿಳಿದಿದೆ. ಈ ವಿದ್ಯುತ್ ಅಂಗಗಳನ್ನು ಹೊಂದಿರುವ ಮೀನುಗಳಲ್ಲಿ ಉಷ್ಣವಲಯದ ಮತ್ತು ಸಮಶೀತೋಷ್ಣವಲಯಗಳ ಟಾರ್ಪೆಡೊ (Torpedoes), ಸ್ಕೇಟ್, ಆಫ್ರಿಕದ ಸ್ನಾಟ್ (Mormyrids), ವಿದ್ಯುತ್ ಈಲ್, (Electrophorus) ವಿದ್ಯುತ್ ಕ್ಯಾಟ್ (Malapterures) ಮತ್ತು ಸ್ಟಾರ್ ಗೇಜರ್ಸ್ (Uranoscopus) ಮುಂತಾದ ಜಾತಿಯ ಮೀನುಗಳು ಮುಖ್ಯವಾದುವು.

ಟಾರ್ಪೆಡೊ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಸಿಗುವ ವಿದ್ಯುತ್ ಉತ್ಪಾದಕ ಮೀನು. ಈ ಟಾರ್ಪೆಡೊ ಮೀನಿನಲ್ಲಿ ಎರಡು ದೊಡ್ಡ ಮತ್ತು ಎರಡು ಸಣ್ಣ ಡಿಸ್ಕ್ ಆಕಾರದ ವಿದ್ಯುತ್ ಅಂಗಗಳು ದೇಹದ ಎರಡೂ ಕಡೆಗಿದ್ದು, ತಲೆ ಮತ್ತು ಪೆಕ್ಟೊರಲ್ ರೆಕ್ಕೆಗಳ ಮಧ್ಯೆ ಇವೆ. (ಚಿತ್ರ ನೋಡಿ) ಒಂದೊಂದು ವಿದ್ಯುತ್ ಅಂಗವು ಮತ್ತೊಂದು ಅಂಗದಿಂದ ತಂತುಗಳ ಗೋಡೆಗಳಿಂದ ಬೇರ್ಪಟ್ಟಿದೆಯಲ್ಲದೆ ಕ್ರಮವಾಗಿ ಹೊಂದಿಸಿದ ಬಹು ಕೋಶ ಕೇಂದ್ರಗಳುಳ್ಳ ಜೀವಕೋಶಗಳಿಂದಾಗಿದೆ. ಈ ಜೀವಕೋಶಗಳನ್ನು ವಿದ್ಯುತ್ ಕೋಶ (Electroplaque) ಗಳೆನ್ನುತ್ತಾರೆ. ಈ ಕೋಶಗಳಿಗೆ ಮಿದುಳಿನಿಂದ ಹೊರಟ ಸೂಕ್ಷ್ಮ ತಂತುಗಳು ಬಂದು ಸೇರುತ್ತವೆ. ಈ ತಂತುಗಳು ಸೇರುವ ಭಾಗವು ಋಣ ಧ್ರುವವಾಗಿಯೂ, ಮತ್ತು ಅದರ ವಿರುದ್ಧದಲ್ಲಿರುವ ಭಾಗವು ಧನ ಧ್ರುವವಾಗಿಯೂ ವರ್ತಿಸುತ್ತವೆ. ವಿದ್ಯುತ್ತು ಧನ ಧ್ರುವದಿಂದ ಋಣ ಧ್ರುವದ ಕಡೆಗೆ ಸಾಗುತ್ತದೆ. ಈ ವಿದ್ಯುತ್ತಿನ ಶಕ್ತಿಯ ಪ್ರಮಾಣವನ್ನು ಪ್ರಯೋಗಾಲಯಗಳಲ್ಲಿ ಓಸಿಲ್ಲೋಗ್ರಾಫ್

ಉಪಯೋಗಿಸಿ ಕಂಡುಹಿಡಿಯಬಹುದು.

ಈ ವಿದ್ಯುತ್ ಅಂಗಗಳು ರೂಪಾಂತರಹೊಂದಿದ ಮಾಂಸಖಂಡಗಳು. ವಿದ್ಯುತ್ ಕೋಶ ಎರಡು ವಿದ್ಯುತ್ ಅಂಗಗಳನ್ನು ಬಾಲದ ಎರಡು ಕಡೆ ಹೊಂದಿದೆ. ಸ್ಕೇಟ್ ಮೀನುಗಳಲ್ಲಿ ವಿದ್ಯುತ್ ಅಂಗವೂ ಮೂಲ ರೂಪದ್ದಾಗಿದೆ. ಮತ್ತು ಅದು ಬಾಲದ ತುದಿಯ ಎರಡು ಕಡೆಗೂ ಇದೆ. ಈ ಎಲ್ಲ ಮೀನುಗಳಲ್ಲಿ ವಿದ್ಯುತ್ ಉತ್ಪಾದನೆಯು ಮಿದುಳಿನಿಂದ ಹೊರಟ ನರ ತಂತುಗಳಿಂದ ನಿಯಂತ್ರಿಸಲ್ಪಟ್ಟಿದೆ. ಈ ರೀತಿ ಉತ್ಪತ್ತಿಯಾದ ವಿದ್ಯುತ್ತಿನ ಶಕ್ತಿಯು ಮೀನಿನಿಂದ ಮೀನಿಗೆ ಬದಲಾಯಿಸುತ್ತದೆ. ಈ ವಿದ್ಯುತ್ ಶಕ್ತಿಯು ಮೀನಿನ ಹತ್ತಿರ ಬರುವ ಪ್ರಾಣಿಗಳನ್ನು ಮೂರ್ಛೆಗೊಳಿಸುವಷ್ಟು ಅಥವಾ ಕೊಲ್ಲುವಷ್ಟು ಬಲಯುತವಾಗಿರುತ್ತದೆ.

ಪ್ರಯೋಗಾಲಯಗಳಲ್ಲಿ ಅಳೆದ ಮೀನಿನ ವಿದ್ಯುತ್ ಶಕ್ತಿಯು ಈ ರೀತಿ ಇದೆ.

ಟಾರ್ಪೆಡೊ ಮೀನು	೪೦–೫೦	ವೋಲ್ಟ್ಸ್
ಈಲ್ ಮೀನು	೩೭೦–೫೫೦	"
ಕ್ಯಾಟ್ ಫಿಶ್	೩೫೦–೪೫೦	"

೧೭೭೫ರಲ್ಲಿ ಜೆ. ರಿಚರ್ ಎಂಬ ವಿಜ್ಞಾನಿಯು ವಿದ್ಯುತ್ ಈಲನ್ನು ಮತ್ತು ಅದರ ಚಲನವಲನವನ್ನು ಗುರುತಿಸಿದ. ಅವನು, "ವಿದ್ಯುತ್ ಈಲ್ ಉತ್ಪಾದಿಸಿದ ವಿದ್ಯುತ್ತು ಒಂದು ಕುದುರೆಯನ್ನು ಕೊಲ್ಲುವಷ್ಟು ಶಕ್ತಿಯುತವಾಗಿದೆ. ಈ ಮೀನುಗಳು ಇಷ್ಟ ಬಂದಾಗ ವಿದ್ಯುತ್ ಉತ್ಪಾದಿಸಬಹುದು. ಇವುಗಳನ್ನು ಮುಟ್ಟುವುದು ಪ್ರವಾಹಯುತ ವಿದ್ಯುತ್ ತಂತಿಯನ್ನು ಮುಟ್ಟಿದಂತೆ," ಎಂದಿದ್ದಾನೆ.

೧೯೩೭ ರಲ್ಲಿ ಕೋಟ್ಸ್‌ನು ಮೀನುಗಳಲ್ಲಿನ ವಿದ್ಯುತ್ತು ಸೆಕೆಂದಿಗೆ ೪೦೦ ದಿಂದ ೫೦೦೦ ಅಡಿಗಳ ವರೆಗೆ ಪ್ರವಹಿಸುವುದೆಂದು ತೋರಿಸಿಕೊಟ್ಟನು.

ಈ ವಿದ್ಯುತ್ ಅಂಶಗಳ ಕಾರ್ಯವು ಬೇರೆ ಬೇರೆ ಮೀನುಗಳಲ್ಲಿ ಬೇರೆ ಬೇರೆಯಾಗಿದೆ. ಟಾರ್ಪೆಡೊ ಮತ್ತು ಈಲ್ ಮೀನುಗಳು ಆಹಾರಕ್ಕಾಗಿ ಪ್ರಾಣಿಗಳನ್ನು ವಿದ್ಯುತ್ತಿನಿಂದ ಕೊಲ್ಲುವ ಮೊದಲು ಅವುಗಳನ್ನು ನಿಶ್ಚಲವನ್ನಾಗಿ ಮಾಡುತ್ತವೆ. ಕೆಲ ಮೀನುಗಳು ತಮ್ಮ ಸುತ್ತಲೂ ವಿದ್ಯುತ್ ಕ್ಷೇತ್ರವನ್ನು ರಚಿಸಿಕೊಳ್ಳುತ್ತವೆ. ಈ ವಿದ್ಯುತ್ ಕ್ಷೇತ್ರದಲ್ಲಿ ಯಾವ ಚಲಿಸುವ ವಸ್ತು ಬಂದರೂ ಅದು ಆ ಮೀನಿಗೆ ಗೊತ್ತಾಗುತ್ತದೆ. ಆದರೆ ಸಾಮಾನ್ಯವಾಗಿ ಈ ವಿದ್ಯುತ್ ಅಂಗಗಳನ್ನು ರಕ್ಷಣೆಗಾಗಿ ಮತ್ತು ಆಹಾರ ಪಡೆಯಲು ಈ ಮಾತ್ರ ಮೀನುಗಳು ಉಪಯೋಗಿಸುತ್ತವೆಂದು ನಂಬಲಾಗಿದೆ. ✡

ಪ್ರಪಂಚದ ಅತಿ ಪುರಾತನ ಕಂಪೆನಿಯೆಂದರೆ 'ಫಾವೆರ್ ಫಾವರ್ ಆಯಿಸ್ಟರ್ ಫಿಶರಿ ಕಂಪೆನಿ...'

"ಅನಾದಿ ಕಾಲದಿಂದ ಇದು ಅಸ್ತಿತ್ವದಲ್ಲಿದೆ", ಎಂದು ಹೇಳಲಾಗುವ ಈ ಕಂಪೆನಿ ೧೯೫೮ ನೇ ಇಸವಿಗೂ ಮೊದಲಿನಿಂದಲೂ ಅಸ್ತಿತ್ವದಲ್ಲಿದೆಯಂತೆ !

•

ಮೀನು ಹಿಡಿಯುವ ಸೀಸನ್ನಿನಲ್ಲಿ ಹಿಡಿದ ಮೊದಲ ಮೀನುಗಳನ್ನು, ನಾರ್ಮಂಡಿಯ ಸೇಯಿಂಟ್ ಮಾಲೋದ ಮೀನುಗಾರರು ಮಧ್ಯದಲ್ಲಿ ಮುಳುಗಿಸಿ ಕೂಡಲೇ ಅವನ್ನು ಸಮುದ್ರಕ್ಕೆ ಎಸೆಯುತ್ತಾರೆ.

ಕುಡಿದು ಮತ್ತೇರಿ ತೂರಾಡುತ್ತಿರುವ ಈ ಮೀನುಗಳಿಂದ ಆಕರ್ಷಣೆಗೊಂಡು, ಉಳಿದ ಮೀನುಗಳು, ಒಡ್ಡಿದ ಬಲೆಯೊಳಕ್ಕೆ ಬೀಳುವಂತಾಗಲಿ ಎಂಬ ಅವರ ನಂಬಿಕೆಯೇ ಇದಕ್ಕೆ ಮೂಲ ಕಾರಣ !

ಸಂಗ್ರಹ : ಎಸ್. ವಿಶ್ವನಾಥ

ಸುಭಾಷಿತಗಳು

ದೇಶಭಂಗೇ ಪ್ರವಾಸೇ ವಾ ವ್ಯಾಧಿಷು ವ್ಯಸನೇಷ್ವಪಿ ।
ರಕ್ಷೇದೇವ ಸ್ವದೇಹಾದಿ ಪಶ್ಚಾದ್ಧರ್ಮಂ ಸಮಾಚರೇತ್ ॥

—ಪರಾಶರಸ್ಮೃತಿ

ದೇಶದಲ್ಲಿ ಯುದ್ಧ ಮೊದಲಾದ ಉಪದ್ರವಗಳಿದ್ದಾಗ, ಪ್ರಯಾಣ ಸಮಯದಲ್ಲಿ, ರೋಗಗಳಲ್ಲಿ, ಸಂಕಟವೊದಗಿದಾಗ ಮೊದಲು ತನ್ನ ಶರೀರವನ್ನು ಕಾಪಾಡಿಕೊಳ್ಳಬೇಕು. ಆಮೇಲೆ ಧರ್ಮದ ಕಡೆ ಗಮನ ಕೊಡಬಹುದು.

* * *

ದ್ವೇಷ್ಯೋಽಪಿ ಸಂಮತಃ ಶಿಷ್ಟಃ ತಸ್ಯಾರ್ತಸ್ಯ ಯಥೌಷಧಂ ।
ತ್ಯಾಜ್ಯೋ ದುಷ್ಟಃ ಪ್ರಿಯೋಽಪ್ಯಾಸೀತ್ ಅಂಗುಲೀವೋರಗಕ್ಷತಾ ॥

—ರಘುವಂಶ

ರೋಗಿಯಾಗಿದ್ದವನಿಗೆ ಕಹಿಯಾಗಿದ್ದರೂ ಔಷಧ ಬೇಕು. ಹಾಗೆ ಶತ್ರುವಾಗಿದ್ದರೂ ಒಳ್ಳೆಯವರು ರಾಜ್ಯದ ಕೆಲಸಕ್ಕೆ ಬೇಕು, ಎಷ್ಟೇ ಪ್ರೀತಿ ಪಾತ್ರನಾಗಿದ್ದರೂ ದುಷ್ಟನನ್ನು ದೂರ ಇಡಬೇಕು. ಬೇಕಾದ ನಮ್ಮದೇ ಆಗಿದ್ದರೂ, ಹಾವು ಕಚ್ಚಿದಾಗ, ಆ ಬೆರಳಿನಿಂದ ಶರೀರದ ಬೇರೆ ಭಾಗಗಳಿಗೆ ಅಪಾಯವಾಗದಂತೆ ಅದನ್ನು ಕತ್ತರಿಸಬೇಕಲ್ಲವೇ!

* * *

ದಾನಂ ಪ್ರಿಯವಾಕ್ಸಹಿತಂ ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಂ ।
ತ್ಯಾಗ ಸಹಿತಂ ಚ ವಿತ್ತಂ ದುರ್ಲಭಮೇತಚ್ಚತುಷ್ಟಯಂ ಲೋಕೇ ॥

—ಹಿತೋಪದೇಶ

ಲೋಕದಲ್ಲಿ ಇವು ನಾಲ್ಕು ಬಹಳ ದುರ್ಲಭ. ಅವು ಯಾವೆಂದರೆ, ಪ್ರಿಯವಾದ ಮಾತಿನೊಡನೆ ಮಾಡುವ ದಾನ, ಅಹಂಕಾರವಿಲ್ಲದ ಜ್ಞಾನ, ಕ್ಷಮೆಯಿಂದ ಕೂಡಿದ ಶೌರ್ಯ ಮತ್ತು ತ್ಯಾಗದೊಡನೆ ಕೂಡಿರುವ ಐಶ್ವರ್ಯ.

ಜಗತ್ತಿನ ಏಕೈಕ ಸಂಸ್ಕೃತ ದಿನಪತ್ರಿಕೆ

ಸುಧರ್ಮಾ

ಕೆ. ವಿ. ಶ್ರೀನಿವಾಸ ಪ್ರಸಾದ

ಸಂಸ್ಕೃತ ಭಾಷೆಯನ್ನು ಮತ್ತೆ ಜನಪ್ರಿಯಗೊಳಿಸಬೇಕು. ಅದಕ್ಕೆ ಮತ್ತೆ ಉತ್ತಮ ಸ್ಥಾನ ಸಿಕ್ಕಬೇಕು ಎಂದು ಇಂದಿಗೂ ನಿಷ್ಠೆಯ ಹೋರಾಟ ನಡೆಸುತ್ತಿರುವವರು ಮೈಸೂರಿನ ಶ್ರೀ ಕೆ. ಎನ್. ವರದರಾಜಯ್ಯಂಗಾರ್ಯರು. ನಮ್ಮ ಯುವಜನಾಂಗಕ್ಕೆ ಸಂಸ್ಕೃತದ ಮಹತ್ತ್ವ ತಿಳಿಸಬೇಕು. ಸಂಸ್ಕೃತದಲ್ಲಿ ಒಲವು ಮೂಡಿಸಬೇಕು. ಈ ಭಾಷೆಯ ಬಗ್ಗೆ ಇರುವ ಅನಾದಾರವನ್ನು ನಿರ್ಮೂಲಗೊಳಿಸಬೇಕೆಂದು ಅವರು ತಮ್ಮ 'ಸುಧರ್ಮಾ' ಎಂಬ ಸಂಸ್ಕೃತ ದಿನಪತ್ರಿಕೆಯ ಮೂಲಕ ಹೋರಾಟ ನಡೆಸುತ್ತಿದ್ದಾರೆ. ಇದು ಪ್ರಪಂಚದ ಏಕೈಕ ಸಂಸ್ಕೃತ ದಿನಪತ್ರಿಕೆ. ಆದರೆ ಸಂಸ್ಕೃತ ಹೇಗೆ ಬಹುಪಾಲು ಭಾರತೀಯರಿಗೆ ಅಪರಿಚಿತವೋ ಹಾಗೆಯೇ 'ಸುಧರ್ಮಾ' ಕೂಡ.

'ಸುಧರ್ಮಾ' ಮೈಸೂರಿನಿಂದ ಪ್ರಕಟವಾಗುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಆದರೆ ನಮ್ಮಲ್ಲನೇಕರಿಗೆ ಈ ಹೆಮ್ಮೆ ಬೇಕಾಗಿಲ್ಲ. ಹೆಮ್ಮೆಪಡುವಂಥ ಸಾವಿರಾರು ವಿಷಯಗಳಿರುವಾಗ ಇದು ಹೇಗೆ ಅರಿವಿಗೆ ಬರಬೇಕು? 'ಸುಧರ್ಮಾ' ಕೇವಲ ಎರಡು ಪುಟಗಳ ಸಣ್ಣ ಪತ್ರಿಕೆ. ಮೊದಲನೆಯ ಪುಟದಲ್ಲಿ ನಾಡಿನ ಹಾಗೂ ಜಗತ್ತಿನ ಸುದ್ದಿಗಳು. ಆಶ್ಚರ್ಯವಾಗಬಹುದಲ್ಲವೇ? "ಪ್ರಪಂಚದಾದ್ಯಂತ ನನ್ನ ವಾಚಕರಿದ್ದಾರೆ. ಆದ್ದರಿಂದ ಅವರಿಗೆ ಸಂಬಂಧಿಸಿದ ಸುದ್ದಿ ಹಾಕಿದರೆ ಅವರಿಗೆ ಸಂತೋಷವಾಗುತ್ತದೆ" ಎನ್ನುತ್ತಾರೆ ಸಂಪಾದಕರು. ನಿಜ. ಅವರ ಪತ್ರಿಕೆಗೆ ವಾಚಕರು ಜರ್ಮನಿ, ಅಮೇರಿಕ, ಜಪಾನ್, ಇಂಗ್ಲೆಂಡ್, ಮಾರಿಷಸ್ ಮತ್ತು ರಶಿಯಾದಲ್ಲಿ ಇದ್ದಾರೆ. ಭಾರತದ ಪ್ರತಿ ಮೂಲೆಗೂ ಈ ಪತ್ರಿಕೆ ಹೋಗುತ್ತದೆ. ಅವರ ವಾಚಕರ ಪಟ್ಟಿ ನೋಡಿದರೆ ಆಶ್ಚರ್ಯವಾಗುತ್ತದೆ. ಅಸ್ಸಾಂ, ಮಿಜೋರಾಂಗಳಿಗೆ ಪತ್ರಿಕೆ ರವಾನೆಯಾಗುತ್ತದೆ. ನೇಪಾಳ, ಕಾಶ್ಮೀರಗಳಿಗೂ ತಲುಪುತ್ತದೆ. ಕನ್ಯಾಕುಮಾರಿ, ವಿಶಾಖಪಟ್ಟಣಂ, ಗೋವಾ, ದೀವು-ದಮನ್, ಗುಜರಾತಗಳಿಗೂ ಕಳಿಸಲ್ಪಡುತ್ತದೆ. ಆದರೆ. ಕರ್ನಾಟಕದ ಅನೇಕ ಮಂದಿಗೆ 'ಸುಧರ್ಮಾ. ಎಂದೊಂದು ಪತ್ರಿಕೆ ಇರುವುದೂ ಗೊತ್ತಿಲ್ಲ!

ಪತ್ರಿಕೆಯ ಎರಡನೆಯ ಪುಟವು ವಾಚಕರಿಂದ ಬರುವ 'ವಾಚಕ ಪತ್ರಗಳಿಗೆ' ಹಾಗೂ ಕಥೆ, ಕಾದಂಬರಿ, ಲೇಖನ, ಪುಸ್ತಕ ಪರಿಚಯ, ಮಕ್ಕಳ ಬಳಗ, ನಾರೀ ಪುಟ, ಗೆಳೆಯರ ಬಳಗ' ಮುಂತಾದ ಆಕರ್ಷಕ ಲೇಖನಗಳಿಗೆ ಮೀಸಲಾಗಿದೆ. ಕನ್ಯಾಕುಮಾರಿಯಿಂದ ಒಬ್ಬ ವಾಚಕರು ಬರೆದ ಅಭಿಪ್ರಾಯಕ್ಕೆ ಅಸ್ಸಾಮಿನಲ್ಲಿರುವ ಮತ್ತೊಬ್ಬ ವಾಚಕರು ಪ್ರತಿಕ್ರಿಯಿಸುತ್ತಾರೆ! ಇಂದಿಗೂ ಭಾರತದಂತಹ ವಿಭಿನ್ನ ಅಭಿರುಚಿಗಳಿಂದ ಕೂಡಿರುವ ರಾಷ್ಟ್ರವನ್ನು ಒಂದಾಗಿಸಿರುವ ಕೀರ್ತಿ ಸಂಸ್ಕೃತ ಭಾಷೆಯದು ಎಂದರೆ ದುರಭಿಮಾನವಾಗಲಾರದು. "ರಾಷ್ಟ್ರಧ್ವಜದಂತೆ ಪವಿತ್ರವಾಗಿ ರಾಷ್ಟ್ರಭಾಷೆಯಾಗಿ ಮೆರೆಯಬಲ್ಲ ಏಕೈಕ ಭವ್ಯ ಭಾಷೆ ಸಂಸ್ಕೃತ" ಎಂದು ಹೆಮ್ಮೆ

ಯಿಂದ ನುಡಿಯುತ್ತಾರೆ 'ಸುಧರ್ಮಾ' ಸಂಪಾದಕರು. ಅವರ ಪತ್ರಿಕೆ, ಪತ್ರಿಕೆಯಲ್ಲಿ ಬರುವ ಅಭಿಪ್ರಾಯಗಳು ಆ ಅಭಿಪ್ರಾಯಗಳಿಗೆ ಬರುವ ಪ್ರತಿಕ್ರಿಯೆಗಳು, ಆ ಪ್ರತಿಕ್ರಿಯೆಗೆ ದೊರಕುವ ಮತ್ತೊಂದು ಪ್ರತಿಕ್ರಿಯೆ, ಇವೆಲ್ಲವನ್ನು ನೋಡಿದಾಗ ಸಂಪಾದಕರ ಆ ನುಡಿ ಒಂದು ನಗ್ನಸತ್ಯ ಎಂದೆನಿಸುತ್ತದೆ.

'ಸುಧರ್ಮಾ' ಪ್ರಸಾರ ಕೇವಲ ಅಂಚೆಯ ಮೂಲಕ. ಪತ್ರಿಕೆಯ ಮಾಸಿಕ ಚಂದಾ ಅಂಚೆ ವೆಚ್ಚಸೇರಿ ನಾಲ್ಕು ರೂಪಾಯಿಗಳು. ವಾರ್ಷಿಕ ಚಂದಾ ೪೮ ರೂಪಾಯಿಗಳು. 'ಸುಧರ್ಮಾ' ದೂರದ ನಗರಗಳನ್ನು ತಲುಪಲು ತಡವಾಗುವುದಿಲ್ಲವೆ?" ಎಂದರೆ ಅಯ್ಯಂಗಾರ್ಯರು, "ನನ್ನ ಪತ್ರಿಕೆಯನ್ನು ಸುದ್ದಿಗಾಗಿ ಯಾರೂ ಕೊಳ್ಳುವುದಿಲ್ಲ. ಅವರಿಗೆ ಬಿಸಿ ಸುದ್ದಿ ತಲುಪಿಸಲು ಪ್ರಾದೇಶಿಕ ಪತ್ರಿಕೆಗಳಿರುತ್ತವೆ. ಆ ಸುದ್ದಿಯನ್ನು ಸಂಸ್ಕೃತದಲ್ಲಿ ಹೇಗೆ ಸುಲಭವಾಗಿ, ರಮಣೀಯವಾಗಿ ಪ್ರಯೋಗಿಸಬಹುದು ಎಂಬುದನ್ನು ಕಲಿಯಲು, ಅರಿಯಲು ನನ್ನ ಪತ್ರಿಕೆ ನೆರವಾಗುತ್ತದೆ. ಆದ್ದರಿಂದ ಇಲ್ಲಿ ನನ್ನ ವಾಚಕರಿಗೆ ವಿಳಂಬ ಅಮುಖ್ಯ" ಎನ್ನುತ್ತಾರೆ.

"ಪತ್ರಿಕೆಯ ವೆಚ್ಚವನ್ನು ಬರಿಯ ಚಂದಾದಿಂದ ಕೂಡಿಸಲಾಗುತ್ತಿಲ್ಲ. ನನ್ನ ಪತ್ರಿಕೆಗೆ ಜಾಹೀರಾತುಗಳು ಬರುವುದಿಲ್ಲ. ಸರಕಾರಕ್ಕೆ ನನ್ನ ಪತ್ರಿಕೆಯಲ್ಲಿ ಆಸಕ್ತಿಯಿಲ್ಲ. ಹೀಗಾಗಿ ನಾನು ಸಂಸ್ಕೃತ ಸೇವೆಗೆಂದು ಹಲವಾರು ಸಾವಿರಗಟ್ಟಲೆ ಹಣ ಕಳೆದುಕೊಳ್ಳುತ್ತಿದ್ದೇನೆ. ನನಗಾಗುತ್ತಿರುವ ನಷ್ಟಕ್ಕೆ ಚಿಂತಿಸುತ್ತಿಲ್ಲ. ಸಂಸ್ಕೃತವನ್ನು ಜನಪ್ರಿಯಗೊಳಿಸುವ ನನ್ನ ಪ್ರಯತ್ನ ಯಶಸ್ವಿಯಾದರೆ ನನಗೆ ಅಷ್ಟೇ ಸಂತೋಷ" ಎನ್ನುತ್ತಾರೆ. ✡



ಬ್ರಿಟನ್ನಿನಲ್ಲಿ ಮದುವೆಯ ನಂತರದ ಆರು ತಿಂಗಳಲ್ಲಿ ಹುಟ್ಟುವ ಮಕ್ಕಳ ಸಂಖ್ಯೆಯೇ ಹೆಚ್ಚು.

—ಸಂಗ್ರಹ: ಎಸ್. ವಿಶ್ವನಾಥ

* * *

ಚರ್ಚಿನೊಳಗೆ ಆತುರವಾಗಿ ಓಡಿಬಂದಳು ಒಬ್ಬ ತರುಣಿ. ಅಲ್ಲಿ ಸಾವಧಾನವಾಗಿ ಬೈಬಲ್ ಓದುತ್ತಿದ್ದರು ಪಾದ್ರಿ. ಅವರ ಪಾದಗಳ ಮೇಲೆ ಬಂದು ಬಿದ್ದಳು ಆಕೆ.

"ತಂದೆಯೇ, ನನ್ನನ್ನು ಕ್ಷಮಿಸಬೇಕು. ನನ್ನ ಪಾಪಗಳಿಗೆ ಕ್ಷಮೆ ಬೇಕು!" ಎಂಬುದಾಗಿ ಬೇಡಿದಳು.


"ನೀನೇನು ಪಾಪ ಮಾಡಿದೆ?" ಕೇಳಿದರು ಪಾದ್ರಿ.

"ತಂದೆಯೇ, ನಾನು ಇದುವರೆಗೆ ವ್ಯಭಿಚಾರದಲ್ಲಿ ತೊಡಗಿದ್ದೆ!" ಎಂದಳು ಆಕೆ.

"ಮಗಳೇ ನೀನು ವ್ಯಭಿಚಾರದಲ್ಲಿ ತೊಡಗಿದ್ದು ತಪ್ಪಲ್ಲ;" ಅಂದರು ಪಾದ್ರಿ. ನಂತರ, "ಆದರೆ ಆ ವೃತ್ತಿಯಲ್ಲಿ ತೊಡಗಿಯೂ ನಿನಗೆ ಬೇಕಾದ ಸೌಲಭ್ಯಗಳನ್ನು ನೀನು ಶೇಖರಿಸಿಕೊಂಡಿರದಿದ್ದರೆ ಮಾತ್ರ ಪಾಪವಾಗುತ್ತದೆ," ಎನ್ನುತ್ತ ಆಕೆಯನ್ನು ಎತ್ತಿ ಹಿಡಿದರು.

—ಸಂಗ್ರಹ: ಬಿ. ಜಿ. ರಾಮಚಂದ್ರ

ನಿಮ್ಮ ಮಗು ಹುಟ್ಟಿದಾಗಲೇ 3 ತಿಂಗಳ ಕಬ್ಬಿಣ ಸತ್ವದ ಕೊಡುಗೆ ಪಡೆದಿರುತ್ತಾನೆ



3 ತಿಂಗಳ ನಂತರ, ಅವನಿಗೆ ಬೇಕಾಗುವಷ್ಟು ಕಬ್ಬಿಣ ಸತ್ವವನ್ನು ಹಾಲು ಮಾತ್ರ ಕೊಡಲು ಶಕ್ತವಾಗಿಲ್ಲ

ಕಬ್ಬಿಣ ಸತ್ವದಿಂದ ಸಮೃದ್ಧವಾದ

ಫೆರೆಕ್ಸ್

ಅವನಿಗೆ ಕೊಡಿರಿ

"ಮಗು ಜನಿಸಿದಾಗ ತಾಯಿಯಿಂದ ಬಹಳಷ್ಟು ಕಬ್ಬಿಣ ಸತ್ವದ ಸಂಗ್ರಹ ಪಡೆದಿರುತ್ತದೆ. ಆದರೆ ಈ ಸಂಗ್ರಹವು ಜನನದ ನಂತರ ಕಡಿಮೆಯಾಗುತ್ತ ಹೋಗುತ್ತದೆ. ಹಾಲು ಮಗುವಿಗೆ ಒಳ್ಳೆಯ ಆಹಾರವಾದರೂ, ಇದು ಸಂಪೂರ್ಣ ಆಹಾರವಾಗಿಲ್ಲ. ಯಾಕೆಂದರೆ ಇದರಲ್ಲಿ ಕಬ್ಬಿಣ ಸತ್ವ ಅಲ್ಪವಿದೆ. ಈ ಕಾರಣದಿಂದ ಮಗುವಿಗೆ ಕಬ್ಬಿಣ ಸತ್ವವುಳ್ಳ ಘನ ಆಹಾರದ ಅವಶ್ಯಕತೆ ಇದೆ."

ಡಾ. ಸುಭಾಷ್ ಸಿ. ಆರ್ಯ "ಇನ್‌ಫಂಟ್ ಅಂಡ್ ಚೈಲ್ಡ್ ಕೇರ್ ಫಾರ್ ದ ಇಂಡಿಯನ್ ಮದರ್."

ಡಾಕ್ಟರರು ಫೆರೆಕ್ಸ್ ಶಿಫಾರಸು ಮಾಡುತ್ತಾರೆ, ಏಕೆ?



ಫೆರೆಕ್ಸ್ ಕಬ್ಬಿಣ ಸತ್ವದಿಂದ ಸಮೃದ್ಧವಾಗಿದೆ. ಅದು ನಿಮ್ಮ ಮಗುವಿನ ರಕ್ತಕ್ಕಾಗಿ, ಅವನ ಸಾಮಾನ್ಯ ಆರೋಗ್ಯಕ್ಕಾಗಿ, ಅವನ ಬೆಳವಣಿಗೆ ಹಾಗೂ ವಿಕಾಸಕ್ಕಾಗಿ ಮಹತ್ವದ್ದಾಗಿದೆ.




ಡಾಕ್ಟರರು ಶಿಫಾರಸು ಮಾಡುತ್ತಾರೆ–ಫೆರೆಕ್ಸ್
ಮಗುವಿನ ಆದರ್ಶ ಘನ ಆಹಾರ– ಶೀಘ್ರ ಸರ್ವಾಂಗೀಣ ಬೆಳವಣಿಗೆಗಾಗಿ

CASGLF-30-173 Kan

సాజ్బెమ్మ

శ్రీహరివంశ



ಸುಳಿಗಾರ ಕತ್ರಿಯಲ್ಲಿ ಬಸ್ಸು ನಿಂತಾಗ ಯಾರು ಹತ್ತಬಹುದೆಂದು ಕುತೂಹಲದಿಂದ ನಿರೀಕ್ಷಿಸುತ್ತಿದ್ದೆ. ಬೆನ್ನಮೇಲೊಂದು ಮೆತ್ತಗೆ ಏಟು ಕೊಟ್ಟು, "ಹಾಯ್ ಮೂರ್ತಿ!" ಎಂದಾಗ ತಟ್ಟನೆ ತಿರುಗಿದೆ. ರಮೇಶ! ನನ್ನ ಬಾಲ್ಯದ ಗೆಳೆಯ. ಬ್ಯಾಗು ಪಕ್ಕಕ್ಕಿಟ್ಟು ಸೀಟು ಕೊಟ್ಟೆ. "ಏನು ಮಾರಾಯಾ ನಿನ್ನ ಸಮಾಚಾರ? ಎಲ್ಲಿದ್ದೀ ಈಗ ಅನ್ನೋದೇ ಗೊತ್ತಿಲ್ವಲ್ಲೋ," ಎಂದ. ಅವರಿವರ ಚಾಡಿ ಮಾತು ಕೇಳಿ ಮಂಜಯ್ಯ ಹೆಗಡೇರು ಜಮೀನು ಕಸಿದುಕೊಂಡು ಊರು ಬಿಡಿಸಿದ ಮೇಲೆ ಅಪ್ಪಯ್ಯ ಸಂಸಾರ ಕಟ್ಟಿಕೊಂಡು ಅಲ್ಲಿ ಇಲ್ಲಿ ಅಲೆದು ಆ ಮೇಲೆ ದಾಂಡೇಲಿಗೆ ಹೋಗಿದ್ದು, ಅಲ್ಲಿ ದೇವಸ್ಥಾನದ ಪೂಜೆ ಮಾಡಿಕೊಂಡಿದ್ದದ್ದು, ಉಳಿದ ಹೈಸ್ಕೂಲ್ ಓದನ್ನು ಅಲ್ಲೇ ಮುಗಿಸಿ ಶಿವಮೊಗ್ಗದಲ್ಲಿ ಅಡಿಕೆಮಂಡಿ ಸೇರಿದ್ದು, ರಾತ್ರಿ ಕಾಲೇಜಿನಲ್ಲಿ ಡಿಗ್ರಿ ಮುಗಿಸಿ ಈಗ ಬ್ಯಾಂಕಿನಲ್ಲಿ ಗುಮಾಸ್ತೆಯಾಗಿದ್ದು ಎಲ್ಲಾ ಹೇಳಿ ಅವನ ಕುತೂಹಲ ತಣಿಸಿದೆ. "ತುಂಬಾ ಸಂತೋಷ ವಾಯ್ತು ಕಣಯ್ಯಾ. ಆ ರಾಕ್ಷಸ ಬೆನ್ನು ಹತ್ತಿದ್ದಕ್ಕೆ ನೀನೇನೂ ಹಾಳಾಗಲಿಲ್ಲವಲ್ಲ ಸದ್ಯ! ಆದರೆ ತುಂಬಾ ಕಷ್ಟಪಟ್ಟೆ ಪಾಪ. ಈಗ-ಲಾದ್ರೂ ದೇವರು ಒಳ್ಳೆಯದು ಮಾಡಿದನಲ್ಲಾ, ಅಷ್ಟೇ ಸಾಕು" ಎಂದು ತಾನು ಉಡುಪಿ ಪೂರ್ಣಪ್ರಜ್ಞದಲ್ಲಿ ಡಿಗ್ರಿ ಮುಗಿಸಿ ಎರಡು ವರ್ಷ ಕಳೆದರೂ ಎಲ್ಲೂ ಕೆಲಸ ಸಿಗದೇ ಈಗ ಮದುವೆಯಾಗಿ ಹಾಯಾಗಿ ಮನೆಯಲ್ಲಿರುವದಾಗಿಯೂ ಹೆಂಡತಿಯನ್ನು ಹೆರಿಗೆಗಾಗಿ ಸಿರ್ಸಿ ಆಸ್ಪತ್ರೆಗೆ ಸೇರಿಸಿದ್ದರಿಂದ ಈಗ ಅಲ್ಲಿಗೇ ಹೋಗುತ್ತಿರುವದಾಗಿಯೂ ಹೇಳಿ, "ಈಕಡೆಗೆಲ್ಲಿ ಪ್ರಯಾಣ?" ಎಂದು ಕೇಳಿದ.

"ಇಲ್ಲೇ ಹುಳಿಯೂರಿಗೆ ಹೋಗಿ ಬರೋಣ ಎನಿಸಿತು. ನಾವೆಲ್ಲಾ ಒಟ್ಟಿಗೇ ಕೂಡಿ ಆಡಿ ಓದಿ ಬೆಳೆದ ಜಾಗ. ಒಂದು ಸಾರೆ ಎಲ್ಲಾ ಕಣ್ಣಲ್ಲಿ ಹಾಕಿಕೊಂಡು ಬರೋಣ, ಹಾಗೇ ಹೆಗಡೇರ ಮನೆಗೂ ಹೋಗಿ–'ಅವರಿವರ ಮಾತು ಕೇಳಿ ನಮಗೆ ಒಳ್ಳೆಯದು ಮಾಡಿದಿರಿ. ತುಂಬಾ ಉಪಕಾರವಾಯಿತು' ಅಂತ ಹೇಳಿ ಬರೋಣ. ಅನಿಸಿತು, ಹೊರಟೆ. ಅಲ್ಲದೇ ಇನ್ನೊಂದು ಮುಖ್ಯವಾದ ಉದ್ದೇಶ..."

"ಏನದು ಮಾರಾಯಾ?"

"ನಿನಗೆ ನೆನಪಿರಬಹುದಲ್ಲ. ಸುಬ್ಬಮ್ಮ ನನಗೆ ಮಾಡಿದ ಉಪಕಾರ? ಯಾರಾದರೂ ಮರೆಯುವಂಥಾದ್ದಾ ಅದು? ಅದಕ್ಕಾಗಿ ಅವರ ಮನೆಗೆ ಹೋಗಿ ಆ ತಾಯಿಯ ಆಶೀರ್ವಾದ ಪಡೆಯಬೇಕೆಂದೆನಿಸಿತು.

ರಮೇಶನ ಮುಖ ಇದ್ದಕ್ಕಿದ್ದಂತೆ ಗಂಭೀರವಾಯಿತು.

"ನನ್ನ ಮದುವೆ ಮಾಡಿಸಿದವನೇ ನಿನ್ನ ಅಪ್ಪ. ಜಮೀನೂ ಮಾಡಿಸಿಕೊಟ್ಟ. ಮನೇನೂ ಕಟ್ಟಿಸಿಕೊಟ್ಟ, ಆದರೆ ನಮ್ಮ ಗ್ರಹಚಾರ ಅಡ್ಡ ಬಂತು. ಎಲ್ಲಾ ಹೋಯಿತು. ನಿನ್ನ ಅಪ್ಪನ ಋಣ ಈ ಜನ್ಮದಲ್ಲಿ ತೀರಿಸೋಕಾಗಲ್ಲ. ನಿನಗೆ ಒಂದು ಹೊತ್ತು ಊಟ ಹಾಕಿದರೆ ನಾವು ದಿವಾಳಿಯಾಗೋದು ಅಷ್ಟರಲ್ಲೇ ಇದೆ. ಅಲ್ಲಿಂದ ನಡೆದು ಬರಬೇಕಲ್ಲ ಪ್ರತಿ ದಿವಸ?" ಸುಬ್ಬಮ್ಮ ನಯವಾಗಿ ಜೋರು ಮಾಡಿದ್ದಳು ನನಗೆ. ಒಂದು ಕಾಲದಲ್ಲಿ, ಅಂದರೆ ಅಪ್ಪ ಹುಳಿಯೂರಿಗೆ ಬರುವ ಮೊದಲು ನಮ್ಮ ಮನೆಯ ಪಕ್ಕದಲ್ಲೇ ಅವಳ ಮನೆ ಇತ್ತಂತೆ. ಮನೆಯಿಂದ ಎರಡು ಮೈಲು ದೂರ ನಡೆದೇ ಬರಬೇಕಾಗಿತ್ತು, ಹೈಸ್ಕೂಲಿಗೆ. ಮಧ್ಯಾಹ್ನದ ಲೆಕ್ಕಕ್ಕೆ ಕೆಲವು ದಿನ ತಿಂಡಿ ಕಟ್ಟಿಕೊಂಡು ಬರುತ್ತಿದ್ದೆ. ಆರಿದ ತಿಂಡಿ ತಿನ್ನಲು ಸೇರದೇ ನಾಯಿಗೆ ಹಾಕಿ, ಆ ಮೇಲೆ ಉಪವಾಸ ಕಾಲಕಳೆಯುತ್ತಿದ್ದೆ. ಒಂದು ದಿನ ಬೆಳಿಗ್ಗೆ ಮಾರ್ನಿಂಗ್ ಡ್ರಿಲ್ಲಿಗೆ ನಿಂತಾಗ ಸನ್‌ಸ್ಟ್ರೋಕ್ ಆಗಿ ತಲೆ ತಿರುಗಿ ಬಿದ್ದೆ. ಹೈಸ್ಕೂಲ್ ಆಫೀಸಿನಲ್ಲಿ ತಂದು ಮಲಗಿಸಿದರು. ಸುದ್ದಿ ಕೇಳಿದ ಸುಬ್ಬಮ್ಮ ಹೈಸ್ಕೂಲಿಗೆ ಧಾವಿಸಿದಳು. ನನ್ನನ್ನು

ಎತ್ತಿಕೊಂಡೇ ಹೋದಳು. ಅವಳ ಮನೆಯಲ್ಲಿ ರಾಜಾರೈಕೆ ನನಗೆ! ಅಪ್ಪಯ್ಯನಿಗೂ ಹೇಳಿಕಳಿಸಿದಳು– 'ನೀನು ಕಾಳಜಿ ಮಾಡಬೇಡ. ಅವನು ನನ್ನ ಮಗ' ಎಂದು. ಎರಡು ದಿನ ಅವಳ ಮನೆಯಲ್ಲೇ ಆರೈಕೆ. ಅಲ್ಲಿಂದ ಪ್ರತಿದಿನದ ಮಧ್ಯಾಹ್ನದ ಊಟ ಸುಬ್ಬಮ್ಮನ ಮನೆಯಲ್ಲಿ. ಅಪ್ಪ ಹೊರಿಸಿ ಕಳಿಸಿದ ಎರಡು ಗಿಪ್ನ ಅಕ್ಕಿಯನ್ನು ಒಂದು ದಿನ ಹಾಗೇ ವಾಪಸು ಕಳಿಸಿದ್ದಳು. "ನಿನ್ನಪ್ಪ ಎಷ್ಟು ಶ್ರೀಮಂತ, ಎಂದು ನನಗೆ ಗೊತ್ತು. ನಮಗಿಂತ ದೊಡ್ಡದು ಅವನ ಗೃಹಚಾರ. ನನಗೆ ಕೊಡುವವ ದೇವರಿದ್ದಾನೆ. ಎರಡು ದಿನ ಮಕ್ಕಳಿಗೆ ಗಂಜಿ ಕಾಸಿ ಹಾಕಲು ಹೇಳು," ಎಂದು.

ನನಗೆ ಹೈಸ್ಕೂಲ್ ಮುಗಿಯುವದರೊಳಗೇ ಜಮೀನಿನ ಋಣ ಮುಗಿದಿತ್ತು. ಅವರಿವರ ಚಾಡಿ ಮಾತು ಕೇಳಿ ಹೆಗಡೇರು 'ತೋಂಡಿ'ಯಿಂದ ಮಾಡಿಕೊಂಡಿದ್ದ ಜಮೀನು ಕಸಿದುಕೊಂಡು ಊರು ಬಿಡಿಸಿದ ಮೇಲೆ ಸುಬ್ಬಮ್ಮನ ಮುಖದರ್ಶನವೇ ಇರಲಿಲ್ಲ.

× × ×

"ಹೇಗೆ ನಡೀತಾ ಇದೆ ಸುಬ್ಬಮ್ಮನ ಕಾರುಭಾರು?" ಎಂದು ಕೇಳಿದೆ.

"ಏನು ಹೇಳೋದು ಮೂರ್ತಿ? ಹೇಗೆ ಹೇಳಬೇಕು, ಏನು ಹೇಳಬೇಕು ಅನ್ನೋದೇ ಅರ್ಥವಾಗ್ತಾ ಇಲ್ಲ... ನೀನು ಈಗ ಸಿಕ್ಕಿದ್ದು ಒಳ್ಳೇದೇ ಆಯ್ತು. ಒಂದು ಕಥೆ ಬರೆದಿದ್ದೇನೆ. ನೋಡು ಸ್ಪರ್ಧೆಗೆ ಕಳಿಸೋಣ ಅಂತ. ವಿಷಯವೂ ತಿಳಿದ ಹಾಗಾಯ್ತು, ಅಭಿಪ್ರಾಯವನ್ನೂ ತಿಳಿಸಿದ ಹಾಗಾಯ್ತು, ಅವಕಾಶವಿದ್ದರೆ ಓದು," ಎಂದು ಬ್ಯಾಗಿನಿಂದ ಹಸ್ತಪ್ರತಿಯ ಕಟ್ಟೊಂದನ್ನು ತೆಗೆದುಕೊಟ್ಟ.

× × ×

ಜೀಪು ಬಂದು ಗಕ್ಕನೆ ನಿಂತಿತು. ಗಣೇಶನ ಚಾ ದುಕಾನಿನ ಎದುರು. ಬೆಳಿಗ್ಗೆಯಿಂದ ನಯಾಪೈಸೆ ವ್ಯಾಪಾರವಿಲ್ಲದೇ ಆಕಳಿಸಿ ಚಿಟಕಿ ಹೊಡೆಯುತ್ತ ಕುಳಿತ ಗೂಡಂಗಡಿ ಮೈದಿನ ಸಾಬಿ ಚೇಳು ಕುಟುಕಿಸಿಕೊಂಡವರಂತೆ ಗಡಬಡಿಸಿ ಎದ್ದ. ಬೆಳಗಿನಿಂದ ಬರೆದಿಟ್ಟ ಹತ್ತೆಂಟು ಓ. ಸಿ. ನಂಬರು ಚಾರ್ಟು ಎಲ್ಲವನ್ನೂ ಲಗುಬಗೆಯಿಂದ ಸುರುಳಿ ಸುತ್ತಿ ಹಾಸಿಗೆಯಲ್ಲಿ ಸೇರಿಸಿದ. ಜೀಪಿನಿಂದ ಇಳಿದವರಲ್ಲಿ ಇಬ್ಬರು ನೇರವಾಗಿ ಚಾ ದುಕಾನಿಗೆ ಬಂದರು. "ಸುಬ್ಬಮ್ಮ ಯಾರು ಇಲ್ಲಿ?" ಎಂದು ವಿಚಾರಿಸುತ್ತಿದ್ದಂತೆ ಹೊಲಸು ಮುಂಡು ಸುತ್ತಿದ ಕೊರಡಿನಂತಹ ಮನುಷ್ಯಾಕೃತಿಯೊಂದು ಅಳಿದುಳಿದ ನಾಲ್ಕಾರು ಹುಳುಕು ಹಲ್ಲುಗಳನ್ನು ಪ್ರದರ್ಶಿಸುತ್ತ ಎದುರಿಗೆ ಬಂದಿತು.

"ನಮಸ್ಕಾರ ಸಾಯೇಬ್ರಿಗೆ."

"ಯಾರದ್ದು ಈ ಚಾ ದುಕಾನ್"?

"ನಂದೇ ಸಾಯೆಬ್ರೇ..."

"ನೀವು ಅಂದ್ರೆ? ನಿಮ್ಮ ಹೆಸರು?"

"ಗಣೇಶ."

"ಸುಬ್ಬಮ್ಮ ಅಂದ್ರೆ ಯಾರು ಇಲ್ಲಿ?" ಪುನಃ ಅದೇ ಪ್ರಶ್ನೆ ಕೇಳಿದರು.

"ಇಲ್ಲೇ ಇದ್ದಾಳೆ ಸಾಯೇಬ್ರೆ, ಇದೇ ಊರಾಗೆ?"

"ಸ್ವಲ್ಪ ಮನೆ ತೋರಿಸ್ತಿ ಅವಳದ್ದು."

ಅಷ್ಟೊತ್ತಿಗೆ ಧಡೂತಿ ಹೆಂಗಸೊಬ್ಬಳು ಎರಡು ಸಿಂಗಲ್ ಚಾ ತಂದಿಟ್ಟಾಗಿತ್ತು. ತಿಂಡಿ ಬೀರುವಿನಿಂದ ಎರಡು ಪ್ಲೇಟ್ ಬೀಜ ತಂದಿಟ್ಟ ಗಣೇಶ. ಜೀಪಿನಿಂದ ಇಳಿದ ಉಳಿದವರೂ ಬಂದು ಸೇರಿದರು.

"ನಿಮ್ಮ ಊರು ಇದೇಯೋ?" ಪ್ಲೇಟು ಹತ್ತಿರ ಎಳೆದುಕೊಂಡು ಕೇಳಿದರು ಸಾಹೇಬರು.

"ಅಲ್ಲಾ ಸ್ವಾಮೀ; ನಾನು ಬಂದು ಮೂರು ವರ್ಷವಾಯ್ತು ಅಷ್ಟೇ. ಜಮೀನು ಮನೆ ಏನೂ ಇಲ್ಲ.. ಇದೇ ನನ್ನ ಜೀವಾಳ..."

ಸಾಹೇಬರು ಒಂದೊಂದೇ ಬೀಜ ಬಾಯಿಗೆ ಎಸೆಯುತ್ತಿದ್ದರು ಬಾಗಿಲ ಬಳಿ ನಿಂತ ಧಡೂತಿ ಹೆಂಗಸನ್ನೊಮ್ಮೆ ಆಪಾದಮಸ್ತಕ ನೋಡಿ ಗಣೇಶನನ್ನು ಕೇಳಿದರು,

"ಲೈಸನ್ಸ್ ಉಂಟಾ?"

"ಇಲ್ಲ ಸ್ವಾಮಿ..." ಈ ಪ್ರಶ್ನೆಯನ್ನು ಮೊದಲೇ ಊಹಿಸಿದ್ದ ಗಣೇಶ ಬಾಣಲೆಯಲ್ಲಿ ಹಾಕಿದ್ದ ಡಾಲ್ಡಾದಂತೆ ಕರಗಿಹೋದ.

ಧಡೂತಿ ಹೆಂಗಸಿನ ಸತ್ಯ ಸಂಶೋಧನೆ ಪ್ರಾರಂಭಿಸಿತ್ತು ಅವರ ಕಣ್ಣು. ಯೌವನ ತುಳುಕುತ್ತಿದ್ದ ಸುಮಾರು ಮೂವತ್ತೈದರ ಹೆಣ್ಣೆ. ಗಪ್ಪು ದೇಹ. ಕೊರಳಲ್ಲಿ ಮಾಂಗಲ್ಯ ಇಲ್ಲ, ಕುಂಕುಮ ಇಲ್ಲ. ಒಟ್ಟಿನಲ್ಲಿ ಇವಳು...

"ಇವಳು ನನ್ನ ತಂಗಿ ಗೌರಿ..." ಸಾಹೇಬರಿಗೆ ವಿಚಾರಕ್ಕೇ ಹೆಚ್ಚು ಹೊತ್ತು ಅವಕಾಶ ಕೊಡದೇ ಹೇಳಿದ ಗಣೇಶ. "ಮದುವೆಯಾಗಿ ಎರಡು ವರ್ಷಕ್ಕೇ ಗಂಡ ತೀರಿಕೊಂಡ..."

ತಮ್ಮ ಊಹೆ ನಿಜವಾದ್ದಕ್ಕೆ ತುಂಬಾ ಖುಷಿಯಾಯಿತು ಸಾಹೇಬರಿಗೆ.

ಹೋದ ವರ್ಷ ಕನ್ನಪ್ಪ ನಾಯ್ಕನ ಮೋಟರ್ ಸೈಕಲ್ ಅಪಘಾತದ ಪ್ರಕರಣಕ್ಕೆ ತೆರೆಬಿದ್ದ ಮೇಲೆ ಹುಳಿಯೂರಿಗೆ ಪೋಲೀಸ್ ಜೀಪೊಂದು ಬಂದಿದ್ದು ಇದೇ ಮೊದಲ ಬಾರಿ. ಆಗಾಗ, ಪೋಲೀಸ್ ಪೇದೆಯೋ ಹೆಚ್ಚೆಂದರೆ ಹವಲ್ದಾರನೋ ಬಂದು ಓಸಿ ಪಟ್ಟಿ, ಚಾದಂಗಡಿಯವರಿಗೆ ಅಷ್ಟಿಷ್ಟು ಕಾಟ ಕೊಟ್ಟು, ಬಾವಿಕಟ್ಟೆ ಬಳಿ ಸೇರುವ ಹೆಂಗಸರನ್ನೇ ನೋಡುತ್ತ ಬಸ್ ಕಾದು ಪೇಟೆ ಸೇರುತ್ತಿದ್ದ ಚಿಲ್ಲರೆ ಪಲ್ಲರೆ ಪ್ರಕರಣಗಳೆಲ್ಲ ಮಾಮೂಲಾಗಿತ್ತು ಹುಳಿಯೂರಿಗೆ.

ಕೆಟ್ಟ ಗಾಳಿ ಹಬ್ಬಿದಂತೆ ಮಿಂಚಿನ ವೇಗದಲ್ಲಿ ಹರಡಿತು ಜೀಪು ಬಂದ ಸುದ್ದಿ. ಎಳೆ ಬಿಸಿಲಲ್ಲಿ ನೆಲ್ಲು ಆರಿಸುತ್ತ ಕುಳಿತ ಹೆಂಗಳೆಯರು ಜೀಪು ಕಾಣುತ್ತಲೇ ಮೆಲ್ಲನೆ ಒಳ ಸೇರಿದರು. ಒಳಗಿದ್ದ ಹೆಂಗಸರು ಕುತೂಹಲದಿಂದ ತಲೆಯ ಮೇಲೆ ಸೆರಗು ಹೊದ್ದು ಬಾಗಿಲ ಮರೆಯಲ್ಲಿ ಹಣಿಕಿಕ್ಕಿದರು. ಮೈತುಂಬ ಎಣ್ಣೆ ತೀಡಿಕೊಂಡು ಲಂಗೋಟಿ ಹಚ್ಚಿಕೊಂಡು ಬಿಸಿಲಿಗೆ ಮೈ ಕಾಯಿಸುತ್ತ ಕುಳಿತ ಮುದುಕರು ಹಣೆಯ ಮೇಲೆ ಕೈ ಹಚ್ಚಿ ಕುತೂಹಲದಿಂದ ನೋಡಿದರು. ಎಲ್ಲೆಲ್ಲೋ ಕುಣಿಯುತ್ತಿದ್ದ ಮಕ್ಕಳು ಕೇಕೆ ಹಾಕುತ್ತ ಓಡಿ ಬಂದು ಗಕ್ಕನೆ ನಿಂತರು. ಎಲ್ಲರಿಗೂ ಕಂಡಿದ್ದು ನೀಲಿ ಬಣ್ಣದ ಜೀಪು ಹಿಂದೆ ಅಟ್ಟಿಸಿಕೊಂಡು ಹೋದ ಧೂಳು.

ಜೀಪು ಸುಬ್ಬಮ್ಮನ ಮನೆಯ ಮುಂದೆ ನಿಂತಾಗ ಎಲ್ಲರ ಕುತೂಹಲ ಇಮ್ಮಡಿಸಿತು. ಬಿಡಿಯಾಗಿದ್ದವರೆಲ್ಲ ಇಡಿಯಾಗಿ ತಮ್ಮ ತಮ್ಮ ಮನೆಯ ಮುಂದಿನ ಅಂಗಳದ ತುದಿಯಲ್ಲಿ ನಿಂತು ಕಣ್ಣು ಕಿಸಿದು ನೋಡತೊಡಗಿದರು.

'ಮನೆ' ಎಂದರೆ ಹುಳಿಯೂರಿನಲ್ಲಿ ತುಂಬಿದ 'ಓಡು ಹಂಚಿನ' ಮನೆಗಳಲ್ಲೊಂದಲ್ಲ ಅದು. ಕೆಂಪು ಹಂಚಿನ ಮಹಡಿ ಮನೆಯೂ ಅಲ್ಲ. ಶ್ರೀಮಂತ ಸೌಧವಂತೂ ಆ ಊರಲ್ಲೇ ಇಲ್ಲ. ಅರ್ಧಗೋಡೆ, ಅರ್ಧ ತಟ್ಟಿಯಿಂದ ರಕ್ಷಿಸಲ್ಪಟ್ಟ ಸೋಗೆ ಹೊದಿಸಿದ ಜೋಪಡಿ ಅದು. ಅದೇ, ಸ್ವಲ್ಪ ಎತ್ತರದಲ್ಲಿತ್ತಷ್ಟೇ.

ದಪ ದಪ ಇಳಿದ ಪೋಲೀಸರು ಸುಬ್ಬಮ್ಮನ ಮನೆಯೊಳಗೆ ನಡೆದರು.

× × ×

ಎಂಟು ವರ್ಷದ ಹಿಂದೆ ಸುಬ್ಬಮ್ಮ ಎಂದರೆ ಯಾರೆಂದು ತಟ್ಟನೆ ಯಾರಿಗೂ ಹೊಳೆಯುತ್ತಿರಲಿಲ್ಲ, ಹುಳಿಯೂರಿನಲ್ಲಿ. ಆಗೆಲ್ಲ ವೆಂಕಟಪ್ಪನ ಹೊಸ ಬಿಡಾರ ಎಂದೇ ಪರಿಚಿತ ಆ ಮನೆ. ಐದಾರು ನೆಲೆಗಳಲ್ಲಿ ಇದ್ದು ಎದ್ದು ಕೊನೆಗೆ ಇಲ್ಲಿ ಬಂದಿದ್ದ ವೆಂಕಟಪ್ಪನ ಮೂಲ ಈಗಲೂ ಗೊತ್ತಿಲ್ಲ ಹಲವರಿಗೆ. ನಿಂತಲ್ಲಿ ನಿಲ್ಲದ ಉರಿಗಾಲು ವೆಂಕಟಪ್ಪ ಎಂದು ಹಿಂದುಗಡೆಯಿಂದ ಜನ ಆಡಿಕೊಳ್ಳುತ್ತಿದ್ದರು. ಮೂರು ದಿನ ಕಾಲ ಹಾಕೋದಿಲ್ಲ ಈ ಊರಾಗೆ ಎಂದು ಭವಿಷ್ಯವನ್ನೂ ನುಡಿದವು ಕೆಲವು ಹಳೆ ತಲೆಗಳು.

ಹುಳಿಯೂರಿನಲ್ಲಿ ವೆಂಕಟಪ್ಪನ ಜೀವನ ಪ್ರಾರಂಭವಾದದ್ದು ಎರಡು ಹಳೆಯ ಬೆಂಚು, ಹತ್ತೆಂಟು ಅಲ್ಯುಮಿನಿಯಂ ಪ್ಲೇಟು, ಐದಾರು ಗ್ಲಾಸುಗಳನ್ನೊಳಗೊಂಡ ಚಾ ದುಕಾನಿನೊಂದಿಗೆ. ಮೊದಮೊದಲು ಒಂದರಿಂದ ಒಂದೂವರೆ ರೂಪಾಯಿವರೆಗೆ ವ್ಯಾಪಾರ ಮಾಡಿದ ದಿನಗಳೂ ಇವೆ. ಅಷ್ಟಿಷ್ಟಾಗಿ ಹೊಸ ಚಾದಂಗಡಿ ನೋಡೋಣ ಎಂದು ಗಿರಾಕಿಗಳು ಬರತೊಡಗಿದರು. ಬಂದ ಗಿರಾಕಿಗಳು ಬೇರೆ ಕಡೆ ಹೋಗದ ಹಾಗೆ ಮೋಡಿ ಮಾಡಿದಳು ವ್ಯವಹಾರ ಚತುರೆ ಸುಬ್ಬಮ್ಮ. ಆದರೆ ವೆಂಕಟಪ್ಪ? ಆತ ಜೀವನದಲ್ಲಿ ಮಾಡಿದ್ದೆಂದರೆ ಆರು ಜನ ಹೆಣ್ಣು ಮಕ್ಕಳನ್ನು ಮಾತ್ರ! ಪೂರ್ವ ಪುಣ್ಯದಿಂದ ಹೇಗೆ ಹೇಗೋ ನಾಲ್ಕು ಜನ ಗಂಡನ ಮನೆ ಸೇರಿದ್ದವು.

ಸುಬ್ಬಮ್ಮ ವ್ಯಾಪಾರಕ್ಕೆಂದು ಮಾಡಿಡುತ್ತಿದ್ದ ತಿಂಡಿ ತಿನಸುಗಳನ್ನೆಲ್ಲ ಸಾಧ್ಯವಾದಷ್ಟು ತಾನೇ ತಿಂದು ಖಾಲಿ ಮಾಡತೊಡಗಿದ ವೆಂಕಟಪ್ಪ. ವಯಸ್ಸಾಯಿತು, ಬಾಯಿ ಚಪಲ, ಹೋಗಲಿ ಎಂದು ಕೆಲವು ದಿನ ಸುಮ್ಮನಾದಳು ಸುಬ್ಬಮ್ಮ. ಆದರೆ ಎಷ್ಟು ದಿನ ಅಂತ ಸುಮ್ಮನಿರುವದು? ಒಬ್ಬನ ಜೀವನ ನಡೆದರೆ ಸಾಕೆ? ವ್ಯಾಪಾರ ಚೆನ್ನಾಗಿದ್ದರೆ ಅದೆಲ್ಲ ಅಷ್ಟು ದೊಡ್ಡದಾಗಿ ಕಾಣುತ್ತಿರಲಿಲ್ಲ ಅವಳಿಗೆ. ಆದರೆ ಈ ಮೂರು ಕಾಸಿನ ವ್ಯಾಪಾರದಲ್ಲಿ ಆರು ಕಾಸು ತಿಂದು ಹಾಳಾದರೆ ಹೇಗೆ? ಸಂಸಾರ ನಿಭಾಯಿಸಬೇಡವೆ? ಬೇರೇನು ಬರುತ್ತದೆ ಜೀವನಕ್ಕೆ? ದಿನವೂ ಹೇಳಿ ಹೇಳಿ ಸಾಕಾದ ಮೇಲೆ ಒಂದು ದಿನ ಗಂಡನನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಂಡಳು ಸುಬ್ಬಮ್ಮ. ಸರಿ, ಪ್ರಾಣಿಗೆ ಅಷ್ಟೇ ಸಾಕಾಯಿತು. ಮನೆ ಬಿಟ್ಟು ಹೋದ. ತನ್ನ ಬಾಲಲೀಲೆಯಿಂದ ವೃದ್ಧಾಪ್ಯದವರೆಗೆ ಕಾಲ ಕಳೆದ ಜಾಗದಲ್ಲೆಲ್ಲ ಮತ್ತೊಮ್ಮೆ ಭೇಟಿ ನೀಡತೊಡಗಿದ. ವಾರ, ಎರಡು ವಾರ ಕಳೆಯಿತು. ಇತ್ತ ಸುಬ್ಬಮ್ಮನಿಗೆ ಒಂದು ಪೀಡೆ ತೊಲಗಿದ ಹಾಗಾಗಿತ್ತು. ಲಕ್ಷಣವಾಗಿ ಇದ್ದುದರಲ್ಲೇ ಅಚ್ಚುಕಟ್ಟಾಗಿ ತಿಂಡಿ–ತಿನಿಸು ಮಾಡಿಟ್ಟಳು. ವ್ಯವಹಾರ ಚತುರೆ ಮಾತಿನಮಲ್ಲಿ ಸುಬ್ಬಮ್ಮ. ಮೇಲಾಗಿ ಗಂಡ ಮನೆಯಲ್ಲಿಲ್ಲ. ಯಾಕೆ ಬರಲಾರವು ಗಿರಾಕಿಗಳು?

ತಿಂಗಳೊಪ್ಪೊತ್ತು ಕಳೆದ ಮೇಲೆ ತನ್ನನ್ನು ಹುಡುಕಲು ಬರಬಹುದು. ದಮ್ಮಯ್ಯಾ ದಾತಾರ ಎಂದು ಕಾಲಿಗೆ ಬಿದ್ದು ಕರೆದುಕೊಂಡು ಹೋಗಬಹುದು ಎಂದುಕೊಂಡಿದ್ದ ವೆಂಕಟಪ್ಪನಿಗೆ ನಿರಾಶೆಯಾಯಿತು. ಯಾರೂ ಬರಲಿಲ್ಲ ಅವನನ್ನರಸಿಕೊಂಡು. ಯಾವ ಪೇಪರಿನಲ್ಲೂ 'ಕಳೆದು ಹೋಗಿದ್ದಾನೆ' ಬರಲಿಲ್ಲ ಅವನ ಬಗ್ಗೆ. ಹತಾಶನಾಗಿ ಹಿಂತಿರುಗಿದ ಒಂದು ದಿನ. ಮನೆಗೆ ಬಂದು ನೋಡಿದ. ಬಹಳಷ್ಟು ಬದಲಾವಣೆಯಾಗಿದೆ ಎಂದು ತಿಳಿಯಲು ಹೆಚ್ಚು ಹೊತ್ತು ಬೇಕಾಗಲಿಲ್ಲ. ಗಿರಾಕಿಗಳು ಬರುತ್ತಿದ್ದರು, ಹೋಗುತ್ತಿದ್ದರು. ಆರೇಟು ನಮೂನೆಯ ತಿಂಡಿತಿನಿಸುಗಳು, ಹಳೆಯದಾದರೂ ಸ್ವಚ್ಛವಾಗಿದ್ದ ಮತ್ತಷ್ಟು ಟೇಬಲ್, ಖುರ್ಚಿಗಳು, ಗಾಜಿನ ಲೋಟಗಳು, ಬಟ್ಟಲುಗಳು. ಹರಟೆ ಹೊಡೆಯುತ್ತ ತಿನ್ನುತ್ತ ಕುಳಿತು ತಿಂದು ಬಿಲ್ಲು ಕೊಟ್ಟು ಹೋಗುತ್ತಿದ್ದ ಗಿರಾಕಿಗಳು, ಉತ್ಸಾಹದಿಂದ ಓಡಾಡುತ್ತಿದ್ದ ಹೆಂಡತಿ, ಮಕ್ಕಳು…ಎಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸಿದ ವೆಂಕಟಪ್ಪ ಪರೀಕ್ಷಕನ ದೃಷ್ಟಿಯಲ್ಲಿ. ಗಂಡ–ಹೆಂಡತಿ, ತಂದೆ ಮಕ್ಕಳ ದೃಷ್ಟಿ ಒಮ್ಮೆ ಕೂಡಿತು. ಮಾತಿಲ್ಲ, ಕತೆಯಿಲ್ಲ. ಒಂದು ಪ್ಲೇಟು ದೋಸೆ, ಎರಡು ರವೆ ಲಾಡು, ಒಂದಿಷ್ಟು ಚಹಾ ಬಂತು ಅವನೆದುರಿಗೆ. ತಿನ್ನಲೋ ಬೇಡವೋ ಎಂದು ತುಸು ಹೊತ್ತು ಅನುಮಾನಿಸಿದ. ಆದರೆ… ಬಾಯಿ ಚಪಲ! ತಲೆ ವಿಚಾರ ಮಾಡಿ ಮುಗಿಸುವದರೊಳಗೆ ಕೈಬಾಯಿ ಒಂದಾಗಿದ್ದವು. ಹೀಗೆ ಆದರ ಅನಾದರ ಎರಡೂ ಇಲ್ಲದೇ ವೆಂಕಟಪ್ಪನ ಪುನಸ್ಥಾಪನೆಯಾಯಿತು ಮನೆಯಲ್ಲಿ.

ಆದರೆ... ನೂರೆಂಟು ಜಾಗ ತಿರುಗಿದ ಕಾಲು, ಇಳಿ ವಯಸ್ಸಿನ ಬಾಯಿ ಚಪಲ ಬೇರೆ. ಮತ್ತೆ ಶುರುವಾಯಿತು ತಿಂಡಿ ಖಾಲಿಮಾಡಲು. ಈ ಬಾರಿ ಹಣಾಹಣಿ ಜಗಳ ವೆಂಕಟಪ್ಪನಿಗೆ ಸುಬ್ಬಮ್ಮನಿಗೆ. ಸಹಜವಾಗಿ ಬಂದ ಗಿರಾಕಿಗಳೆಲ್ಲ ಸುಬ್ಬಮ್ಮನ ಪರ. ವೆಂಕಟಪ್ಪ ಕಾಲ್ಕಿತ್ತ! ಒಂದೆರಡು ತಿಂಗಳಲ್ಲೇ ವೆಂಕಟಪ್ಪ ದೀವರ ಮುದುಕಿಯೊಂದನ್ನಿಟ್ಟುಕೊಂಡು ಅರಲಗುತ್ತಿಯಲ್ಲಿದ್ದಾನೆಂದು ಸುದ್ದಿ ಜನಜನಿತವಾಯಿತು. ಅರಲಗುತ್ತಿ ಹುಳಿಯೂರಿಂದ ಆರು ಮೈಲು ದೂರ.

ಗಂಡನಿಲ್ಲದೇ ಜೀವನ ಸಾಗಿಸುತ್ತಿದ್ದ ಸುಬ್ಬಮ್ಮನನ್ನು ಸುಮ್ಮನೇ ಬಿಟ್ಟಾರೆಯೇ ನಮ್ಮ ಜನ! ಊರಿನ ಅವರಿವರ ಹೆಸರ ನಡುವೆ ತೂರಿದರು ಸುಬ್ಬಮ್ಮನನ್ನು. ಗೂಡಂಗಡಿ ಮೈದಿನ್ ಸಾಬಿ, ಜವಳಿ ಅಂಗಡಿ ಲಿಂಗರಾಜ, ಪೋಸ್ಟ್‌ಮಾಸ್ತರ್, ಗುಂಡಪ್ಪ, ಮೆಂಬರ್ ಗಣೇಶ ಹೆಗಡೇರು, ಚೇರಮನ್ ಮಂಜಯ್ಯ ಹೆಗಡೇರು ಇತ್ಯಾದಿ ಇತ್ಯಾದಿಯವರೊಂದಿಗೆ ಕೆಲವು ಕೆಂಪು ಬಸ್ಸಿನ ಡ್ರೈವರುಗಳೂ ಹಾದೆಂದರು. ಹಾಗಿಲ್ಲದಿದ್ದರೆ ಸುಬ್ಬಮ್ಮ ಜೀವನ ಸಾಗಿಸುತ್ತಿದ್ದಳೇ? ಅದೂ ಇಷ್ಟು ಲಗ್ಜುರಿಯಾಗಿ? ಅದಕ್ಕೆ ಪುಟಕೊಟ್ಟಂತೆ ಸುಬ್ಬಮ್ಮನ ಕೊರಳಲ್ಲಿ ಮಾಂಗಲ್ಯದ ಜೊತೆ ನಾಲ್ಕಾರು ಪವನಗಳೂ ಹೊಳೆಯತೊಡಗಿದ್ದವು. ಜೊತೆಗೆ ಗಂಡ ಬಿಟ್ಟು ವರ್ಷದೊಳಗೆ ಮಗಳೊಬ್ಬಳ ಮದುವೆಯನ್ನೂ ಮಾಡಿ ಗಂಡನ ಮನೆಗೆ ಕಳಿಸಿಬಿಟ್ಟಳು!!

ಸುಬ್ಬಮ್ಮ ಯಾವ ಉದ್ಯೋಗ ಮಾಡಿದರೇನಂತೆ? ಜೀವನಕ್ಕೆ ಕೊರತೆಯಿಲ್ಲದಷ್ಟು ದುಡ್ಡು ಅವಳ ಕೈಯಲ್ಲಿ ಓಡಾಡುತ್ತಿತ್ತು. ಊರಿನ ಗಣ್ಯರಿಗೆಲ್ಲ ಮೋಡಿ ಮಾಡಿಬಿಟ್ಟಿದ್ದಳು. ಯಾವುದಾದರೊಂದು ವಶೀಲಿಗೆ 'ಸುಬ್ಬಮ್ಮನಿಗೆ ಹೇಳಿ ನೋಡುವ, ಅವಳೇನಾದರೂ ಚೇರಮನ್ನರಿಗೆ ಹೇಳಿ ಮಾಡಿಸಿದರೆ ಮಾಡಿಸಬಹುದು' ಎನ್ನುವಷ್ಟರ ಮಟ್ಟಿಗೆ!

ಮಂಜಯ್ಯ ಹೆಗಡೇರ ಕೃಪಾಕಟಾಕ್ಷ ಸಂಪೂರ್ಣವಾಗಿ ಬಿದ್ದಿತ್ತು ಸುಬ್ಬಮ್ಮನ ಮೇಲೆ. ಚೇರಮನ್ನರು ಸುಬ್ಬಮ್ಮನಿಗೆ ಮನೆ ಕಟ್ಟಿಸಿಕೊಡ್ತಾರಂತೆ. ಸುದ್ದಿ ಹರಡಿತು ಊರಲ್ಲಿ. ಬಡವರ ನಿವೇಶನಕ್ಕೆ ಸರಕಾರದಿಂದ ಧನ ಸಹಾಯ ಸಿಗುತ್ತದೆ. ಅದರಲ್ಲಿ ಕೆಂಪು ಕಲ್ಲು, ಮಂಗಳೂರು ಹಂಚು ತರಿಸಿ ಅವಳಿಗೆ ನಿಲ್ಲಲು ಒಂದು ನೆಲೆ ಮಾಡಿಕೊಟ್ಟರೆ ಪಾಪ ಬರುವದಿಲ್ಲ. ಗಂಡ ಇದ್ದರೆ ಹಾಗೆ. ಗಂಡು ಮಕ್ಕಳಿಲ್ಲ, ಅನಾಥರಿಗೆ ಸಹಾಯ ಮಾಡದೇ ಹೋದ ಜನ್ಮ ಇದ್ದರೇನು ಫಲ? ಎಂದು ಹೆಗಡೇರು ಸಮರ್ಥಿಸಿಕೊಂಡರು. ಚೇರಮನ್ನರ ಔದಾರ್ಯಕ್ಕೆ ತಲೆದೂಗಿದರು ಕೆಲವರು. ಬಂತಲ್ಲ ಟಿ.ಡಿ.ಬಿ. ಇಲೆಕ್ಷನ್, ಅದಕ್ಕೆ ಪೂರ್ವ ತಯಾರಿ ಎಂದರು ಕೆಲವು ರಾಜಕಾರಣ ಪಟುಗಳು. ಮನೆ ತಯಾರಿ ನಡೆಯಲಿ ಮೊದಲು, ಸಹಾಯಧನ ನಿಧಾನವಾಗಿ ಸಿಗಲಿ. ಬರುವದು ಮಳೆಗಾಲವಲ್ಲವೇ? ನಾಳೆ ಆಗುವದು ಇಂದೇ ಆದರೆ ತಪ್ಪೇನು? ಹೆಗಡೆಯವರ ಆತುರ. ಚೇರಮನ್ ಮಂಜಯ್ಯ ಹೆಗಡೇರು ಮನಸ್ಸು ಮಾಡಿದ ಮೇಲೆ ಕೇಳಬೇಕೇ? ಕೆಲವೇ ದಿನಗಳಲ್ಲಿ ಶುರುವಾಯಿತು ಮನೆ ಮುರಿಯುವ ಕೆಲಸ. ಮುಚ್ಚಿದ ಸೋಗೆ ಕಿತ್ತೊಗೆದರು. ಅರ್ಧಂಬರ್ಧ ಇದ್ದ ಗೋಡೆ ನೆಲಸಮವಾಯಿತು. ಬಾಗಿಲು ಕಿತ್ತು ಒಗೆದರು. ಮನೆ ಇದ್ದ ಜಾಗ ಬಟ್ಟಾನ ಬಯಲಾಯಿತು. ಹೇಗೂ ಇನ್ನೆರಡು ತಿಂಗಳೊಳಗೆ ಮನೆ ತಯಾರಾಗುವದಲ್ಲ? ಅಲ್ಲಿಯವರೆಗೆ ಉಳಿದುಕೊಳ್ಳಲು ಒಂದು ಚಪ್ಪರ ಹಾಕಿದ ಬಿಡಾರ ಸುಬ್ಬಮ್ಮನಿಗೆ.

ಇನ್ನೇನು ಸುಬ್ಬಮ್ಮನ ಮನೆ ಕೆಲಸ ಶುರುವಾದ ಹಾಗೇ. ಇನ್ನೆರಡು ತಿಂಗಳಲ್ಲಿ ಹುಳಿಯೂರಿನಲ್ಲೊಂದು ಹೊಸ ಮನೆ ಎಂದುಕೊಂಡರು ಜನ. ಚೇರಮನ್ನರ ಬ್ರಾಂಚ್ ಆಫೀಸು ಎಂದು ಗೇಲಿ ಮಾಡಿದರು ಅವರಿಗಾಗದ ಕೆಲವರು. ಸುಬ್ಬಮ್ಮನಿಗಂತೂ ಸಂತೋಷವೇ ಸಂತೋಷ. ಗಂಡು ಮಕ್ಕಳಿಲ್ಲ. ಗಂಡ ಇದ್ದರೂ ಇಲ್ಲದಂತೆ. ನೆಂಟರಿಷ್ಟರು ದೂರ. ಅಂಥಾದ್ದರಲ್ಲಿ ತನಗೆ ಹೊಸ ಮನೆಯಲ್ಲಿ ಉಳಿಯುವ ಯೋಗ. ಅದೆಷ್ಟೋ ಹೆಂಗಸರು ಅದೆಷ್ಟೋ ಗಂಡಸರನ್ನು ತೃಪ್ತಿಪಡಿಸಿರಬಹುದು.

ಜಗತ್ತಿನಲ್ಲಿ. ಆದರೆ ಅದಕ್ಕೆ ಪ್ರತ್ಯುಪಕಾರ ಈ ರೀತಿ ತೀರಿಸಿದ ಜನರೆಷ್ಟು? ಆ ದಿನಗಳಲ್ಲಿ ಮಂಜಯ್ಯ ಹೆಗಡೇರು ಸುಬ್ಬಮ್ಮನಿಗೆ ದೇವಾಂಶಸಂಭೂತರಾಗಿ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ.

ಆದರೆ...

ಎಲ್ಲರ ಊಹೆಯೂ ತಲೆಕೆಳಗಾಯಿತು. ಒಂದಲ್ಲ ಎರಡು ತಿಂಗಳು ಕಳೆದರೂ ಮನೆ ಯಾಗುವದಿರಲಿ, ಮನೆ ಮಾಡುವ ಲಕ್ಷಣಗಳೂ ಕಂಡುಬರದಿದ್ದಾಗ ಎಲ್ಲರಿಗೂ ಆಶ್ಚರ್ಯವಾಯಿತು. ಜನ ಮನಬಂದಂತೆ ಮಾತಾಡತೊಡಗಿದರು. ಇದಕ್ಕೆ ಪೂರಕವಾಗಿ ಸುಬ್ಬಮ್ಮನ ಮನೆಗೆ ಹೆಗಡೇರ ಓಡಾಟವೂ ತಕ್ಷಣ ಬಂದಾಯಿತು, ಕರೆಂಟು ಹೋದ ಹಾಗೆ. ಜೊತೆಗೇ ಒಂದು ರಹಸ್ಯವೂ ಹೊರಬಿತ್ತು. ಚಹಾ ಕುಡಿಯಲು ಹೋದವರ ಹತ್ತಿರವೆಲ್ಲ ಸುಬ್ಬಮ್ಮ ಹೇಳಿಯೇ ಬಿಟ್ಟಳು, "ಮನುಷ್ಯನಲ್ಲ, ಅದು ಮೃಗ!"

ನಡೆದಿದ್ದಿಷ್ಟೇ—ಮಂಜಯ್ಯ ಹೆಗಡೇರು ಮನೆ ಕಟ್ಟಲು ಶೀಘ್ರವಾಗಿ ಹಣ ಮಂಜೂರು ಮಾಡಿಸಿಕೊಂಡು ಬರಲು ಬೆಂಗಳೂರಿಗೆ ಹೋಗುವವರಿದ್ದರಂತೆ. ಅದಕ್ಕೆ ತಮ್ಮ ಪಿ.ಎ. ಆಗಿ ಸಬ್ಬಮ್ಮನ ಕೊನೆಯ ಮಗಳು ಸಾವಿತ್ರಿಯನ್ನು ಕಳಿಸಿಕೊಡಲು ಹೇಳಿದ್ದರು. ಹೇಗೂ ಆವರ ಕೆಲಸಕ್ಕಾಗಿಯೇ ಬೆಂಗಳೂರಿಗೆ ಹೊರಟಾಗಿದೆ. ಬಡಹುಡುಗಿ ಬೆಂಗಳೂರು ನೋಡುವದು ಯಾವಾಗ? ಮದುವೆಗೆ ಬೆಳೆದು ನಿಂತ ಕೆಂಬಣ್ಣದ ಚೆಲುವೆಯ ಮೇಲೆ ಮಂಜಯ್ಯ ಹೆಗಡೇರು ಉದಾರ ಬುದ್ಧಿ ತೋರಿಸಿದಾಗ ಸ್ವಾಭಿಮಾನ ಭುಗಿಲ್ಲೆದ್ದಿತ್ತು ಸುಬ್ಬಮ್ಮನಲ್ಲಿ. ಹೆಗಡೇರಿಗೆ ಮೊದಲು ಸಾಧ್ಯವಾದಷ್ಟು ಬುದ್ಧಿ ಹೇಳಿದಳು. ಅವರ ಈ ನಿಲುವು ಅವರ ಯೋಗ್ಯತೆಗೆ ತಕ್ಕುದಲ್ಲ ಎಂದಳು. ದೇವರು ಮೆಚ್ಚುವದಿಲ್ಲ, ಇಂತಹ ದುರಾಲೋಚನೆ ಬೇಡ ಎಂದು ಕಳಕಳಿಯಿಂದ ಕೇಳಿಕೊಂಡಳು. ಆದರೆ ಈ ಹೆಂಗಸಿನ ಬುದ್ಧಿವಾದ ಕೇಳಲು ಹೆಗಡೇರಿಗೆ ಅದರ ಕೊರತೆ ಇದ್ದರೆ ತಾನೇ? ತನ್ನ ಸಹಾಯ ಸಹಕಾರ ಇನ್ನು ಮುಂದೆ ಅವಳಿಗೆ ಬೇಕಿದ್ದರೆ ತನ್ನ ಇಚ್ಛೆ ಪೂರೈಸಲೇಬೇಕೆಂಬ ಒಂದೇ ಹಟ ಅವರದು. ಈಗ ಹೆಗಡೇರನ್ನು ತರಾಟೆಗೆ ತೆಗೆದುಕೊಂಡಳು ಸುಬ್ಬಮ್ಮ. ಚೆನ್ನಾಗಿ ಛೀಮಾರಿ ಹಾಕಿ ಖಡಾಖಂಡಿತವಾಗಿ ಹೇಳಿಯೇ ಬಿಟ್ಟಳು, "ನನ್ನ ಮಗಳ ಆಸೆಗಾಗಿ ನನಗೆ ಸಹಾಯಮಾಡಲು ಹೊರಟಿರುವುದಾದರೆ ಇನ್ನು ಮುಂದೆ ಈ ಗುಡಿಸಲಿಗೆ ಬರುವ ಅಗತ್ಯವಿಲ್ಲ." ಎಂದು.

ಪರಿಸ್ಥಿತಿಯ ಒತ್ತಡದಿಂದ ತಾನಂತೂ ವ್ಯಭಿಚಾರಿಯೆಂದು ಕರೆಸಿಕೊಂಡೆ. ಆದರೆ ಮಗಳಿಗೂ ಏಕೆ ಈ ದುರವಸ್ಥೆ? ಅವಳಾದರೂ ಈ ಹೆಸರಿನಿಂದ ಮುಕ್ತಳಾಗಿ ಗೃಹಿಣಿಯಾಗಿ ಬಾಳಲಿ ಎಂದು ಇಷ್ಟಪಡುವದು ತಪ್ಪೇ? ಇದು ಸುಬ್ಬಮ್ಮನ ಪ್ರಶ್ನೆ.

ರಾಜಕೀಯವಾಗಿ ಹಿಂದಿನಿಂದಲೂ ಮಂಜಯ್ಯ ಹೆಗಡೇರನ್ನು ವಿರೋಧಿಸುತ್ತಿದ್ದ ರಾಂಭಟ್ಟರು ಈ ಸುಸಂಧಿಯನ್ನು ಬಿಟ್ಟಾರೆಯೇ? ಮೇಲಾಗಿ ಬಂದಿರುವದು ಟಿ.ಡಿ.ಬಿ ಇಲೆಕ್ಷನ್. ಮಂಜಯ್ಯ ಹೆಗಡೆ ಸುಬ್ಬಮ್ಮನನ್ನು ಹಾಳು ಮಾಡಿದ! ನಂಬಿಸಿ ಮೋಸ ಮಾಡಿದ! ಮನೆ ಹಾಳು ಮಾಡಿದ! ಮಗಳನ್ನು ದಾನ ಕೊಡಲು ಕೇಳಿದ! ಕಾಮಪಿಪಾಸು ಮಂಜಯ್ಯ ಹೆಗಡೆಗೆ ಧಿಕ್ಕಾರ! ಇದು ರಾಮಭಟ್ಟರ ಚುನಾವಣಾ ಪ್ರಣಾಳಿಕೆಯಾಯಿತು! ಇಷ್ಟಕ್ಕೇ ನಿಲ್ಲಲಿಲ್ಲ. ಸುಬ್ಬಮ್ಮನನ್ನು ಮುಂದೆ ಮಾಡಿಕೊಂಡು ಧನಸಂಗ್ರಹ ಪ್ರಾರಂಭಿಸಿದರು, 'ಅನಾಥೆ ಸುಬ್ಬಮ್ಮನಿಗೆ ಮನೆಕಟ್ಟಿಸಿ ಕೊಡಬೇಕು, ಧನಸಹಾಯ ಮಾಡಿ ಅನಾಥರ ಸೇವೆಯೇ ಈಶ್ವರ ಸೇವೆ, ಇತ್ಯಾದಿ ಘೋಷಣೆಗಳೊಂದಿಗೆ. ಮಂಜಯ್ಯ ಹೆಗಡೇರ ಮುಖಕ್ಕೆ ಮಸಿ ಬಳಿಯಲು ಇದಕ್ಕಿಂತ ಒಳ್ಳೆಯ ಸುಸಂಧಿ ಇನ್ನೆಲ್ಲಿ?

ಕೆಲವಷ್ಟು ಹೇಗೋ ಸಂಗ್ರಹವಾಯಿತು. ನೂರಿನ್ನೂರು ಕೈಯಿಂದಲೂ ಹೋಯಿತು. ಒಟ್ಟಿನಲ್ಲಿ ನಾಲ್ಕು ಗೋಡೆ ಎದ್ದು ಸುಬ್ಬಮ್ಮನಿಗೆ ಒಂದು ಗುಡಿಸಲು ತಯಾರಾಯಿತು.

ಮಂಜಯ್ಯ ಹೆಗಡೇರಿಗೆ ಹಲವು ರೀತಿಯ ಅವಮಾನ ಈಗ. ರಾಜಕೀಯವಾಗಿ, ಸಾಮಾಜಿಕ

ವಾಗಿ ಇತ್ಯಾದಿ ಇತ್ಯಾದಿ. ಈ ಮಧ್ಯ ಮದುವೆಯಾಗಿ ವಿಧವೆಯಾಗಿ ಅಣ್ಣನ ಆಶ್ರಯ ಬೇಡಿ ಬಂದ ಗಣೇಶನ ತಂಗಿಯ ಮೇಲೆ ಮಂಜಯ್ಯ ಹೆಗಡೇರ ದಯಾದೃಷ್ಟಿ ಬಿದ್ದಿತ್ತು. ತನ್ನ ಮಗಳನ್ನು ಪಿ. ಎ. ಆಗಿ ಬೆಂಗಳೂರಿಗೆ ಕಳಿಸಲು ಸುಬ್ಬಮ್ಮ ನಿರಾಕರಿಸಿದಾಗ ತನ್ನ ತಂಗಿಯನ್ನೇ ಕಳಿಸುವ ದೊಡ್ಡ ಮನಸ್ಸು ಮಾಡಿದ ಗಣೇಶ. ತನಗೆ ಗಿರಾಕಿಯೇ ಇಲ್ಲದಂತೆ ಮಾಡಿದ ಸುಬ್ಬಮ್ಮನ ಪೊಗರು ಇಳಿಸಬೇಕು; ಮಂಜಯ್ಯ ಹೆಗಡೇರಿಂದ ಒಂದಿಷ್ಟು ಎಳೆಯಬೇಕು ಒಂದು ಕಲ್ಲಿನಲ್ಲಿ, ಎರಡು ಹಕ್ಕಿ! ಗಣೇಶನೇನೂ ಧಡ್ಡನಾಗಿರಲಿಲ್ಲ!

× × ×

ಹ್ಯಾಟು ಪ್ಯಾಂಟುಧಾರಿಗಳು ಬೂಟು ಕೂಡಾ ಬಿಚ್ಚದೇ ದಡ ದಡನೆ ಒಳಗೆ ಬಂದಿದ್ದು ನೋಡಿ ಸುಬ್ಬಮ್ಮನಿಗೆ ಗಾಬರಿ

"ಸುಬ್ಬಮ್ಮ ಅಂದ್ರೆ ಯಾರು?"

"ನಾನು," ಮೆತ್ತಗೆ ಉತ್ತರಿಸಿದಳು. ಹಲವು ವರ್ಷಗಳ ಜನಸಂಪರ್ಕದಿಂದ ಅಷ್ಟಿಷ್ಟು ಧೈರ್ಯ ಸಂಪಾದಿಸಿದ್ದಳು ಸುಬ್ಬಮ್ಮ.

"ಇವಳು ಯಾರು?"

"ಸಾವಿತ್ರಿ, ನನ್ನ ಮಗಳು."

ಸಾವಿತ್ರಿಯನ್ನು ಆಪಾದಮಸ್ತಕ ನೋಡಿ ಕಣ್ಣಲ್ಲಿ ತುಂಬಿಕೊಂಡರು ಸಾಹೇಬರು. ಗಣೇಶನ ತಂಗಿಯ ದೇಹದೊಡನೆ ಸಾವಿತ್ರಿಯ ವೈಯಾಟವನ್ನೂ ಹೋಲಿಸಿ ಹೋಲಿಸಿ ನೋಡುತ್ತಿತ್ತು ಅವರ ಮನಸ್ಸು. ಅದಕ್ಕಿಂತ ಒಂದು ತೂಕ ಇದೇ ಬಲ ಎಂಬ ತೀರ್ಮಾನಕ್ಕೆ ಬಂದರು.

"ನಿನ್ನ ಮೇಲೊಂದು ಬಲವಾದ ಕಂಪ್ಲೇಂಟಿದೆ."

ಬಾಯಿ ತೆರೆದು ಕಣ್ಣು ಬಿಟ್ಟು ಪಿಳಿ ಪಿಳಿ ನೋಡಿದಳು ಸುಬ್ಬಮ್ಮ ದಿಗ್ಭ್ರಾಂತಳಾಗಿ.

"ನಿನ್ನ ಮೇಲೊಂದು ಬಲವಾದ ಕಂಪ್ಲೇಂಟಿದೆ ಅಂದೆ," ಸಾಹೇಬರ ಧ್ವನಿ ಗಡುಸಾಗಿತ್ತು.

"ಎಂತದು ಗೊತ್ತಾಗ್ಲಿಲ್ಲ...". ಸುಬ್ಬಮ್ಮ ತೊದಲಿದಳು.

"ಎಲ್ಲಾ ಗೊತ್ತಾಗ್ತದೆ ಈಗ. ಎಷ್ಟು ವರ್ಷಾತು ನೀ ಬಂದು?"

"ಎಂಟು ವರ್ಷ."

"ನಿನ್ನ ಗಂಡ ಎಲ್ಲಿ?"

"ಅವರು..."

"ಹೂಂ. ಅವರು?"

"ಅರಲಗುತ್ತಿಯಲ್ಲಿದ್ದಾರೆ..."

"ಅವರಲ್ಲಿ, ನೀನಿಲ್ಲಿ! ಹೀಗೇಕೆ?"

"ಇಲ್ಲೇ ಇದ್ದಿದ್ರು ಅವರು ಮೊದಲು. ಇಲ್ಲಿ ದುಡೀಲಿಕ್ಕಾಗದೇ..."

"ಅವರಿಗೆ ದುಡೀಲಿಕ್ಕಾಗೋದಿಲ್ಲ ಅಂತ ಗೊತ್ತಾಗಿ ಎಷ್ಟು ವರ್ಷವಾಯ್ತು?"

"........."

"ಎಲ್ಲಾ ಗೊತ್ತಾಗಿದೆ ನಮಗೆ. ಕೈಲಾದಷ್ಟು ಮಾಡಿಕೊಂಡು, ಹಾಕಿದಷ್ಟು ತಿಂದುಕೊಂಡು ಇರುವ ಸಭ್ಯ ಮನುಷ್ಯ ಅವ. ಅಂಥವನನ್ನು ಇಟ್ಟುಕೊಳ್ಳಲಿಕ್ಕಾಗಲಿಲ್ಲ ನಿಮಗೆ. ಏಕೆ? ನಿಮ್ಮ ವ್ಯವಹಾರಕ್ಕೆ ಅಡ್ಡಿ ಬರುತ್ತಿದ್ದ ಅಲ್ಲ? ಖರೇ ಹೇಳು?"

"ಹಾಗಲ್ಲ..."



"ಯಾರೋ ಕಿಲಾಡಿಗಳ ಕೆಲ್ಸ ಇರ್ಬೇಕು ಸಾರ್..."

"ಹಾಗಲ್ಲ ಹೀಗೆ… ಆತ ಕಂಪ್ಲೇಂಟು ಕೊಟ್ಟಿದ್ದಾನೆ. ಈಗ ನೀವು ತಾಯಿ–ಮಕ್ಕಳು ಸೇರಿ ಹೊರಗೆ ಹಾಕಿದ್ದೀರಿ. ಹಾಗೂ ಇನ್ನು ತನ್ನನ್ನು 'ಇಲ್ಲ' ಮಾಡುವ ಪ್ರಯತ್ನದಲ್ಲೂ ಇದ್ದೀರಿ ಅಂತ. ಏನು ಹೇಳ್ತೀರಿ ಇದಕ್ಕೆ?"

"ಖಂಡಿತಾ ಸುಳ್ಳು ಇದು. ಅವರು ಬಂದು ಇರುವದಾದರೆ ನಾವು ಈಗಲೂ ಬೇಡವೆನ್ನುವದಿಲ್ಲ."

"ಹೋಟೆಲ್ ನಡೆಸಲಿಕ್ಕೆ ಲೈಸೆನ್ಸ್ ಉಂಟಾ ನಿಮಗೆ?"

"………"

"ಇಲ್ಲ, ಇದೂ ಒಂದು ದೊಡ್ಡ ಅಪರಾಧ. ನೀವು ಇರೋ ಜಾಗ ಯಾರದ್ದು?"

"ಗೊತ್ತಿಲ್ಲ…"

"ಸರ್ಕಾರೀ ಜಂಗಲ್! ಯಾರು ಪರ್ಮಿಶನ್ ಕೊಟ್ಟರು ನಿಮಗೆ ಇಲ್ಲಿ ಉಳಿಯಲಿಕ್ಕೆ? ಮನೆ ಕಟ್ಟಲಿಕ್ಕೆ? ಫಾರೆಸ್ಟರ್ ಗಾರ್ಡ್‌ಗಳೆಲ್ಲ ಬಂದು ಮನೆ ಖಾಲಿ ಮಾಡ್ಲಿಕ್ಕೆ ಹೇಳಿದಾಗ, ಬಾಯಿಗೆ ಬಂದ ಹಾಗೆ ಬೊಗಳಿ ದಬಾಯಿಸಿ ಕಳಿಸಿದ್ರಿ ಅಲ್ಲ?"

"ಸುಳ್ಳೇ ಸುಳ್ಳು. ಯಾರೂ ಬರಲಿಲ್ಲ ಇಲ್ಲಿಗೆ. ಇದೆಲ್ಲ ಯಾರೋ ನಮಗೆ ಆಗದೇ/ಹೋದವರು…"

"ಇಲ್ಲಿ ಆಗದೇ ಹೋದವರು ಅಂತ ಇದಾರಾ ನಿಮಗೆ? ನೀವು ಎಲ್ಲರಿಗೂ ಬೇಕಾದವರು ಇಲ್ಲಿ!" ಅರ್ಥಪೂರ್ಣವಾಗಿ ನಕ್ಕರು ಸಾಹೇಬರು. "ಈಗ ನಿಮ್ಮ ಮೇಲಿನ ಕಂಪ್ಲೇಂಟಿನ ಆಧಾರದ ಮೇಲೆ ನಿಮ್ಮಿಬ್ಬರನ್ನೂ ಅರೆಸ್ಟ್ ಮಾಡುತ್ತೇವೆ. ಬೇಡಿ ಹಾಕುವ ಮೊದಲು ಜೀಪು ಹತ್ತಿ." ಜೊತೆಗಿದ್ದ ಫಾರೆಸ್ಟರ್ ಕಡೆ ತಿರುಗಿ ಮತ್ತೆ ಹೇಳಿದರು. "ಮಿ. ಶೇಖ್, ನೀವು ಈ ಮನೆ ಕೆಡವಬಹುದು. ಜಂಗಲ್ಲಿನಲ್ಲಿ ಪರವಾನಿಗೆ ಇಲ್ಲದೇ ಮನೆ ಕಟ್ಟಿದ್ದಕ್ಕೆ ಬೇರೆ ಏನು ತಾನೆ ಮಾಡಲು ಸಾಧ್ಯ ಹೇಳಿ ನಮ್ಮಿಂದ?"

"ಸರಿ," ತಲೆದೂಗಿದರು ಶೇಖ್.

ಮರುಮಾತಾಡದೇ ಅಳುತ್ತ ಜೀಪು ಹತ್ತಿದರು ಸುಬ್ಬಮ್ಮ ಹಾಗೂ ಮಗಳು ಸಾವಿತ್ರಿ.

ಎರಡು ದಿನ ಲಾಕಪ್ಪಿನಲ್ಲಿ ಕಳೆದ ಮೇಲ
ಸುಬ್ಬಮ್ಮನ ಜವಾಬು ಪಡೆದರು ಸಾಹೇಬರು.

"ನಿನ್ನ ಮಗಳ ಜವಾಬು ಇನ್ನೂ ಆಗಿಲ್ಲ.
ಅದು ಬಹಳ ಕಾಂಪ್ಲಿಕೇಟೆಡ್ ಕೇಸು. ನಾಳೆ
ಕಳಿಸಿಕೊಡುತ್ತೇವೆ ಅವಳನ್ನು."

"ಸ್ವಾಮೀ, ಕಾಲಿಗೆ ಬೀಳ್ತೀನಿ, ಮಗಳನ್ನೂ
ನನ್ನ ಜೊತೆ ಕಳಿಸಿಕೊಡಿ; ಇಲ್ಲ ನನ್ನನ್ನೂ ನಾಳೆ
ಕಳಿಸಿ," ಗೋಗರೆದಳು ಸುಬ್ಬಮ್ಮ.

"ಏನು ಸುಬ್ಬಮ್ಮ ನೀ ಹೇಳೋದು?
ನಾವೇನು ತಿಂದು ಬಿಡ್ತೀವಾ ಅವಳನ್ನ? ನಾವೂ
ಮನುಷ್ಯರೇ. ನಾಳೆ ಬರ್ತಾಳೆ ಅವಳು. ಜವಾಬು
ಬೇಕು ಅವಳದ್ದು. ನಿನ್ನ ಅವಶ್ಯಕತೆಯಿಲ್ಲ. ಇಲ್ಲಿ
ಕೇಸು ಕಾಂಪ್ಲಿಕೇಟೆಡ್ದು." ಕಾಂಪ್ಲಿಕೇಟೆಡ್ದು
ಅಂದರೆ ಏನು ಎಂದು ಅರ್ಥವಾಗಲಿಲ್ಲ ಸುಬ್ಬ
ಮ್ಮನಿಗೆ. ಕಣ್ಣೀರು ಸುರಿಸುತ್ತ ಸ್ಟೇಶನ್ನಿನಿಂದ
ಹೊರಬಿದ್ದಳು.

ಸುಬ್ಬಮ್ಮ ಮನೆಗೆ ಹೋಗಲಿಲ್ಲ. ಒಂದು
ಕಾಲದಲ್ಲಿ ಚೆನ್ನಾಗಿ ಮೆರೆದು ದಿವಾಳಿಯಾಗಿ
ಈಗ ಮೂಲೆ ಗುಂಪಾಗಿರುವ ಹಳೆಯ ಗುರು
ತಿನ ಲಕ್ಷ್ಮಮ್ಮನ ಖಾನಾವಳಿಯಲ್ಲಿ ತಂಗಿ
ದಳು. ಹೇಗೂ ನಾಳೆ ತಾನೇ ಮಗಳು ಬರು
ವದು? ಹೋದ ಮೇಲೆ ಇಬ್ಬರೂ ಒಟ್ಟಿಗೆ
ಹೋಗಬೇಕು. ತಾನೊಬ್ಬಳೇ ಹೋಗಿ ಮಾಡುವ
ದೇನಿದೆ ಅಲ್ಲಿ?

ಮರುದಿನ ಬೆಳಿಗ್ಗೆಯೇ ಓಡಿದಳು ಪೋಲೀಸ್
ಸ್ಟೇಶನ್ನಿಗೆ. "ಸಾಹೇಬರು ಇಲ್ಲ, ಜೋಗಕ್ಕೆ
ಹೋಗಿದ್ದಾರೆ. ಇವತ್ತು ಸಾಯಂಕಾಲ ಬರು
ತ್ತಾರೆ. ನಾಳೆ ಬೆಳಿಗ್ಗೆ ಬಾ" ಎಂದು ಉತ್ತರ
ಪಡೆದು ತಲೆಯ ಮೇಲೆ ಕೈ ಹೊತ್ತು ಹಿಂತಿರು
ಗಿದಳು.

ಅವಳು ಹೇಳಿದ 'ನಾಳೆ'ಯೂ ಬಂತು
ಎರಡು ದಿನದಿಂದ ಊಟ ನಿದ್ರೆ ಎರಡೂ ಇಲ್ಲದ
ಸುಬ್ಬಮ್ಮ ನಸುಕಿನಲ್ಲೇ ಬಂದಳು ಸ್ಟೇಶನ್ನಿಗೆ

"ನಿನಗೇ ಸುಹುಚ್ಚುಗಿಚ್ಚಾ? ನಿನ್ನೇನೇ ಹೋಗಿ
ದಾಳೆ ನಿನ್ನ ಮಗಳು. ರಾತ್ರಿ ಮನೆಗೆ ಹೋಗಿಲ್ಲ
ಅಂತ ಕಾಣುತ್ತೆ ನೀನು ಅಲ್ಲ?" ಮುಸಿ ಮುಸಿ
ನಕ್ಕರು ಪೇದೆಗಳು. ಇವರೇನು ನಾಟ

ಆಡುತ್ತಿದ್ದಾರೆ ಅನ್ನುವದೇ ಅರ್ಥವಾಗಲಿಲ್ಲ ಸುಬ್ಬಮ್ಮನಿಗೆ. ಪಿಳಿ ಪಿಳಿ ನೋಡುತ್ತ ನಿಂತಳು. ಅವರು ಹೇಳಿದ್ದು ಒಂದೊಮ್ಮೆ ನಿಜವಿದ್ದರೂ ಇರಬಹುದೇ? ನಿನ್ನೆ ಸಾಯಂಕಾಲದ ಬಸ್ಸಿಗೇ ಏಕೆ ಹೋಗಿರಬಾರದು ಅವಳು? ತಾನು ಲಕ್ಷ್ಮಮ್ಮನ ಖಾನಾವಳಿಯಲ್ಲಿ ತಂಗಿರುವದು ಅವಳಿಗೇನು ಗೊತ್ತು? ಅಲ್ಲಿಂದ ತಕ್ಷಣ ಜಾಗ ಖಾಲಿಮಾಡಲು ಪೇದೆಗಳಿಂದ ಆಣತಿ ಸಿಕ್ಕಾಗ ತಾನು ರಾತ್ರಿ ಇಲ್ಲಿ ಉಳಿದದ್ದೇ ತಪ್ಪಾಯಿತು ಎಂದು ಹಳಹಳಿಸುತ್ತ ಈಗ ಹೇಗಾದರೂ ಮಾಡಿ ಆದಷ್ಟು ಬೇಗ ಊರು ಸೇರಲೇ ಬೇಕು ಎಂದುಕೊಂಡು ಬಸ್ಸ್ಟ್ಯಾಂಡಿನ ಕಡೆ ಓಡಿದಳು.

× × ×

"ಹಾಳಿಯೂರಿನಲ್ಲಿ ಬಸ್ ನಿಂತಿದೆ. ಇಲ್ಲೇ ಇಳೀಬೇಕಾ?" ರಮೇಶ ಎಚ್ಚರಿಸಿದಾಗ ತಟ್ಟನೆ ಇಹಲೋಕಕ್ಕೆ ಬಂದೆ. ಹಸ್ತಪ್ರತಿಯ ಒಂದು ಪುಟ ಉಳಿದಿತ್ತು. ಬಸ್ಸು ಹೊರಡುವ ತಯಾರಿಯಲ್ಲಿತ್ತು. ಓದಲು ಅವಕಾಶವಿರಲಿಲ್ಲ. "ರಮೇಶ, ಬೇಗ ಹೇಳು, ಆಮೇಲೇನಾಯ್ತು?"

"ಆ ಮೇಲೆ? ನಿನಗೇ ಕಾಣುತ್ತದೆ."

ಬಸ್ಸು ಹೊರಟೇಬಿಟ್ಟಿತು.

ಬಸ್ಸಿಳಿದವನೇ ಸುತ್ತಲೂ ನೋಡಿದೆ. ದೊಡ್ಡ ದೊಡ್ಡ ಗುಂಡು ಕಲ್ಲು ಹಾಕಿ ಮಾಡಿದ ಅದೇ ರಸ್ತೆ. ಹಳೆಯ ಓಡು ಹಂಚಿನ ಅದೇ ಮನೆಗಳು ಕಟ್ಟೆಯ ಕಲ್ಲುಗಳೆಲ್ಲ ಅಸ್ತವ್ಯಸ್ತವಾಗಿ ಕಳಚಿದ ಅದೇ ಭಾವಿ, ಹೊಸ ಬಿಳಲುಗಳನ್ನು ಇಳಿಸಲು ಇಷ್ಟಪಡದೇ ಹಳೆಯ ಕಾಲುಗಳ ಮೇಲೆಯೇ ನಿಂತ ಅದೇ ಆಲದ ಮರ... ಬಾಲ್ಯದ ನೆನಪು ಸಿನೇಮಾ ರೀಲಿನಂತೆ ಬಿಚ್ಚಿಕೊಂಡಿತು. ಕಾಲುಗಳು ಅಪ್ರಯತ್ನವಾಗಿ ಹೊರಟಿದ್ದವು ಸುಬ್ಬಮ್ಮನ ಗುಡಿಸಲ ಕಡೆ.

ಆದರೆ...

ಸುಬ್ಬಮ್ಮನ ಗುಡಿಸಲು ನೆಲಸಮವಾಗಿತ್ತು. ಕೈಕಾಲು ಮುರಿದ ಹಳೆಯ ಬೆಂಚುಗಳು. ಟೇಬಲ್ಲುಗಳು ಅಲ್ಲಲ್ಲಿ ಅಡ್ಡಾತಿಡ್ಡಿಯಾಗಿ ಬಿದ್ದಿದ್ದವು. ಮನೆಗೆ ಹಾಕಿದ ಗಳು, ದಬ್ಬೆಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಹರಡಿದ್ದವು. ಅರ್ಧಂಬರ್ಧ ಉಳಿದ ಗೋಡೆಯ ತುಂಡೊಂದರ ಮೇಲೆ ಒಣ ಕಾಷ್ಟದಂತಿದ್ದ ಇಳಿ ವಯಸ್ಸಿನ ಹೆಂಗಸೊಂದು ಕುಳಿತಿತ್ತು. ಸುತ್ತಿದ್ದ ಹರಕು ಸೀರೆಯಲ್ಲಿ ಅಡಗಿರಲಾರದ ಗುಪ್ತ ಅಂಗಾಂಗಗಳೂ ಹೊರಗಿಣುಕುತ್ತಿದ್ದವು. ಎಣ್ಣೆ–ನೀರು ಕಾಣದೇ ಸುಂಟಿಹೋಗಿದ್ದ ಒಂದೊಂದೇ ತಲೆ ಕೂದಲನ್ನು ಕಿತ್ತು ಕಿತ್ತು ಬೆರಳಲ್ಲಿ ಸುತ್ತಿ ಸುತ್ತಿ ದೂರ ಬಿಸಾಡಲು ಪ್ರಯತ್ನಿಸುತ್ತಿತ್ತು. ಬಾಯಲ್ಲಿ ಏನೋ ವಟಗುಟ್ಟುತ್ತಿತ್ತು...

ತಟ್ಟನೆ ತಲೆಯೆತ್ತಿತು... ರಸ್ತೆಯಲ್ಲಿ ನಿಂತ ನನ್ನನ್ನು ನೋಡಿದ್ದೇ ಕಿರ್ರನೆ ಕಿರುಚಿಕೊಂಡು ಎದ್ದೋಡಿತು...

"ಇದೊಂದು ಕರ್ಮ. ಪ್ಯಾಂಟು ಹಾಕಿದವರನ್ನು ಕಂಡರೂ, ಹೀಗೇ, ಬರುತ್ತೆ ಇದಕ್ಕೆ ರೋಗ ಬೇವಾರ್ಸಿ ಮುಂಡೇದು..." ನನಗೆ ಕೇಳಿಸುವಂತೆ ಒಬ್ಬಿಬ್ಬರು ಮಾತಾಡಿಕೊಂಡು ಹೋದರು.

"ಛತ್ರಪತಿ ಶಿವಾಜಿಯ ಖಡ್ಗ ಎಷ್ಟು ತೀಕ್ಷ್ಣವಾಗಿದೆ!" ಎಂದು ತನ್ನ ಮಂತ್ರಿಯನ್ನು ನೋಡಿ ಹೇಳಿದ ಔರಂಗಜೇಬ್.

"ಉಕ್ಕಿನಂಥಾ ನಿಮ್ಮ ಎದೆಯನ್ನು ಸೀಳಲು ಅಷ್ಟು ತೀಕ್ಷ್ಣತೆ ಅಗತ್ಯವಾಗುತ್ತದೆ" ಎಂದ ಮಂತ್ರಿ.

—ಬಿ. ಜಿ. ರಾಮಚಂದ್ರ

ಎಸ್ಪರಾಂಟೋ
ಪ್ರಪಂಚಕ್ಕೊಂದು ಭಾಷೆ!

ವಿಜ

ಇಂದು ಆಫ್ರಿಕಾಖಂಡ ಒಂದರಲ್ಲಿಯೆ ಅಲ್ಲಿಯ ಮೂಲ ನಿವಾಸಿಗಳು ಸಾವಿರಕ್ಕೂ ಮೇಲ್ಪಟ್ಟು ಭಾಷೆ, ಉಪಭಾಷೆಗಳನ್ನು ಬಳಸುತ್ತಿದ್ದಾರೆ. ಏಶಿಯದಲ್ಲಿ ೬೦ಕ್ಕೂ ಹೆಚ್ಚು ಭಾಷೆಗಳು ಪ್ರಚಲಿತವಿವೆ ಎಂದು ಅಂದಾಜು. ಜಗತ್ತಿನಲ್ಲಿ ಸುಮಾರು ೪೦೦೦ ಭಾಷೆ ಹಾಗೂ ಉಪಭಾಷೆಗಳು ಬಳಕೆಯಲ್ಲಿವೆ ಅಂದರೆ ನಿಜಕ್ಕೂ ಅಚ್ಚರಿ ಅನಿಸುತ್ತದೆ. ಕಾಲಕ್ರಮದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳ ವಿಕಾಸದೊಡನೆ ಬಹು ಭಾಷೆಗಳು ಕಾಲುತೊಡಕೆಂದು ಬಗೆಯಲಾಯಿತು. ಭಾಷೆ ಪ್ರಾಮುಖ್ಯವಾಗಿ ಸಂಪರ್ಕ ಸಾಧನವಷ್ಟೆ. ಬಹಳಷ್ಟು ಭಾಷೆಗಳ ಬಳಕೆ ಸಮಗ್ರ ಸಂಪರ್ಕಕ್ಕೆ ಅಡ್ಡಿ ಎಂದು ಕೆಲವರಿಗೆ ತೋರಿತು. ಇದರಿಂದ ಅಂತಾರಾಷ್ಟ್ರೀಯ ಭಾಷಾಶೋಧದ ಯತ್ನಕ್ಕೆ ಮೊದಲಾಯಿತು. ಪ್ರಪಂಚಕ್ಕೆಲ್ಲ ಒಂದೇ ಸಾಮಾನ್ಯ ಭಾಷೆ ಇರುವುದಾದರೆ ಸಾಂಸ್ಕೃತಿಕ ಹಾಗೂ ಆರ್ಥಿಕ ಸಂಬಂಧಗಳನ್ನು ತೀವ್ರಗೊಳಿಸಬಹುದೆಂದೂ ಜನತೆಯಲ್ಲಿ ಸದ್ಭಾವನೆಯನ್ನು ಹುಟ್ಟಿಸಬಹುದೆಂದೂ ಅವರು ಪ್ರತಿಪಾದಿಸತೊಡಗಿದರು. ಪ್ರಾರಂಭದ ವರ್ಷಗಳಲ್ಲಿ ಏಕಭಾಷಾ ಪ್ರತಿಪ್ರತಿಪಾದಕರನ್ನು ಅವಾಸ್ತವವಾದಿಗಳೆಂದೂ ಕೆಲವೆಡೆ ಹೀಗಳೆಯಲಾಯಿತು.

ಬೊಹೆಮಿಯನ್ ಬಿಶಪ್ ಹಾಗೂ ಶಿಕ್ಷಣ ತಜ್ಞ ಜಾನ್ ಕೊಮೆನಿಸ್ ಕ್ರಿ. ಶ. ೧೬೦೦ರಷ್ಟು ಹಿಂದೆಯೆ ಪ್ರಪಂಚಕ್ಕೊಂದೇ ಭಾಷೆಯ ವಿಚಾರವನ್ನು ಜನತೆಯ ಮುಂದಿಟ್ಟ. ಫ್ರಾನ್ಸಿಸ್ ಬೇಕನ್ ಮತ್ತು ರೇನ್ ಡಿಕಾರ್ಟ್ಸ್ ಇದನ್ನು ಅನು ಮೋದಿಸಿದರು. ಅಲ್ಲಿಂದೀಚೆ ಸುಮಾರು ೨೦೦ ಭಾಷೆಗಳು 'ಏಕಭಾಷೆ'ಗಳೆಂದು ರೂಪಿಸಲ್ಪ ಟ್ಟಿವೆ. 'ವೋಲ ಫ್ಯೂಕ್' ಎಂಬ ಭಾಷೆ ಈ ದಿಶೆ ಯಲ್ಲಿ ಬಹಳಷ್ಟು ಯಶಸ್ಸು ಗಳಿಸಿದೆ. ಜರ್ಮನ್ ಪಾದ್ರಿ ಜೋಹನ್ ಮಾರ್ಟಿನ್ ಸ್ಕ್ಲೇಯರ್ ಕಲ್ಪಿಸಿದ ಕೃತಕ ಭಾಷೆಯಿದು (೧೮೭೯). ವೋಲ ಫ್ಯೂಕ್ ಇದು 'ಜಗತ್ತು' ಹಾಗೂ 'ಮಾತನಾಡು' ಎಂಬ ಎರಡು ಪದಗಳ ಸಂಯುಕ್ತ ರೂಪ. ಇನ್ನುಳಿದ ಮುಖ್ಯ ಅಂತಾರಾಷ್ಟ್ರೀಯ ಭಾಷೆ ಗಳಲ್ಲಿ ಸ್ಪೆಲಿನ್, ನೋವಿಯಲ್, ಇಂಟರ್‌ಲಿಂಗ್ವಾ, ಎಸ್ಪೆರಾಂಟೊ, ಇಡೊ–ಇವುಗಳನ್ನು ಹೆಸರಿಸ ಬೇಕು.

ಎಸ್ಪರಾಂಟೊ ಜನಸಾಮಾನ್ಯರ ಬಳಕೆಗಾಗಿ ರೂಪಿಸಲ್ಪಟ್ಟ ಕಲ್ಪಿತ ಭಾಷೆ. ವ್ಯಾಕರಣ ಸರಳ ವಾಗಿರಬೇಕು, ಶಬ್ದ ಸಂಪತ್ತು ವಿಶಾಲವಾಗಿರ ಬೇಕು, ಕಲಿಯುವಿಕೆ ಸುಲಭಸಾಧ್ಯವೆನಿಸಬೇಕು– ಇಂಥ ಉದಾರ ಧ್ಯೇಯಗಳನ್ನಿಟ್ಟುಕೊಂಡು ಈ ಭಾಷೆ ತಲೆ ಎತ್ತಿತು. ಪೋಲೆಂಡ್ ದೇಶದ ವೈದ್ಯ ಡಾ. ಲಾಜರಸ್ ಲುಡ್ವಿಗ್ ಜಮೆನ್– ಹಾಫ್(೧೮೫೯–೧೯೧೭) ಈ ಭಾಷೆಯನ್ನು ರೂಢಿಗೆ ತಂದ. ಈ ಭಾಷೆಯು ಅವನ ಮೊದಲ ಗ್ರಂಥ 'ಅಂತಾರಾಷ್ಟ್ರೀಯ ಭಾಷೆ' ಕ್ರಿ. ಶ. ೧೮೮೭ರಲ್ಲಿ ಬೆಳಕು ಕಂಡಿತು. ಇದನ್ನು ಅತ

ಡಾ. ಎಸ್ಪರಾಂಟೊ ಎಂಬ ಗುಪ್ತನಾಮದಲ್ಲಿ ಬರೆದ. 'ಎಸ್ಪೆರಾಂಟೊ' ಇದು 'ಎಸ್ಪರಾಂಜಾ' ಎಂಬ ಸ್ಪ್ಯಾನಿಶ್ ಪದದಿಂದ ಹುಟ್ಟಿದ್ದು. ಅದು 'ಆಶೆ', 'ಭರವಸೆ' ಎಂಬರ್ಥ ಕೊಡುತ್ತದೆ. ಈ ಭಾಷೆ ಬರಲಿರುವ ದಿನಗಳಲ್ಲಿ 'ಪ್ರಪಂಚ ಭಾಷೆ' ಯಾಗಿ ಬೆಳೆಯಬೇಕೆಂಬ ಹಂಬಲ ಇಲ್ಲಿದೆ.

ಎಸ್ಪರಾಂಟೊ ರೋಮನ್ ವರ್ಣಮಾಲೆಯ **Q, W, X, Y** ಈ ಅಕ್ಷರಗಳನ್ನು ಬಿಟ್ಟು, ಉಳಿದೆಲ್ಲ ವರ್ಣಗಳನ್ನು ಉಳಿಸಿಕೊಂಡಿದೆ. ಈ ಭಾಷೆಯು ವ್ಯಾಕರಣದಲ್ಲಿ ಅಪವಾದಗಳಿಲ್ಲದ ಹದಿನಾರು ನಿಯಮಗಳಿವೆ. ಇಲ್ಲಿ ಸ್ಪೆಲ್ಲಿಂಗ್ ಶಬ್ದಗಳ ಉಚ್ಚಾರಕ್ಕೆ ಅನುಗುಣವಾಗಿರುತ್ತದೆ. ಈ ಭಾಷೆಯ ಸಾಮಾನ್ಯ ತತ್ವವೆಂದರೆ, ಯುರೋಪಿನ ಪ್ರಮುಖ ಭಾಷೆಗಳ ಮೂಲ ಪದಗಳನ್ನು ಬಳಸುವುದಾಗಿದೆ. ಇಲ್ಲಿ ಶಬ್ದದ ಕೊನೆಯ ಅಕ್ಷರದ ಹಿಂದಿನ ವರ್ಣದ ಮೇಲೆ ಉಚ್ಚಾರದ ಒತ್ತು ಬೀಳುವುದು. ಎಲ್ಲ ನಾಮ ಪದಗಳು: O ದಲ್ಲಿ ಅಂತ್ಯಗೊಳ್ಳುವವು. ಇದರಂತೆ ಇಲ್ಲಿ ವಿಶೇಷಣ ಪದಗಳು 'ಎ' ದಲ್ಲಿ ಹಾಗೂ ಕ್ರಿಯಾ ವಿಶೇಷಣಗಳು 'E'ಯಲ್ಲಿ ಮುಕ್ತಾಯಗೊಳ್ಳುವವು. ಅಕ್ಷರಗಳ ಮೇಲಿನ ಸಂಕೇತಗಳು ಧ್ವನಿಯ ಪರಿಮಿತ ಸೂಚಿಸುವವು. ಇಲ್ಲಿ ಅಕ್ಷರ ಸಂಯೋಜನೆ ಉಚ್ಚಾರಕ್ಕೆ ಅನುಗುಣವಾಗಿ ಇರುವುದು. ಮೂಲ* ಪದಗಳು ಹೆಚ್ಚಿಲ್ಲದಿದ್ದರೂ ಪ್ರತ್ಯಯಗಳ ನೆರವಿನಿಂದ ಇಲ್ಲಿ ಹೊಸ ಶಬ್ದ ಸೃಷ್ಟಿಸಿಕೊಳ್ಳಬಹುದು. ರೋಮನ್ ಲಿಪಿಯನ್ನು ಆಧರಿಸಿ ಕೂಡ ಹೆಚ್ಚು ಧ್ವನ್ಯಾತ್ಮಕವಾಗಿರುವುದು ಈ ಭಾಷೆಯ ವಿಶೇಷ.

ಡಾ. ಲಾಜರಸ್ ಜಮೇನ್‌ಹಾಫ್ ಎಸ್ಪರಾಂಟೊ ಭಾಷೆಯನ್ನು ಕಂಡುಹಿಡಿಯಲು ಮುಂದಾದ ಹಿನ್ನೆಲೆ ಸ್ವಾರಸ್ಯಕರ. ತನ್ನ ಸುತ್ತಲಿನ ಪ್ರದೇಶದ ಜನಾಂಗಗಳಲ್ಲಿ ಭಾಷಾ ದ್ವೇಷ ತೀವ್ರವಾಗಿರುವುದನ್ನು ಕಂಡು ಆತ ಬಾಲ್ಯದಲ್ಲೆ ಕಳವಳಪಟ್ಟ. ಸರ್ವಮಾನ್ಯ ಭಾಷೆಯೊಂದು ಪರಿಸರದಲ್ಲಿ ಮಧುರ ವಾತಾವರಣ ನಿರ್ಮಿಸಬಲ್ಲದೆಂಬ ಕನಸನ್ನು ಆತ ಕಂಡ. ಶಾಲಾಂತ್ಯ ಪರೀಕ್ಷೆಗೆ ಓದುತ್ತಿದ್ದಾಗ ಲಾಜರಸ್ ತನ್ನ ಕಲ್ಪನೆಯ ಭಾಷೆಯ ಮೂಲಭೂತ ತತ್ವಗಳ ಶೋಧಕ್ಕೆ ತೊಡಗಿದ. ಮುಂದೆ ಆತ ಮಾಸ್ಕೊ ವಿಯೆನ್ನಾ, ವಾರ್ಸಾ ನಗರಗಳಲ್ಲಿ ವೈದ್ಯಕೀಯ ಅಭ್ಯಾಸ ನಡೆಸಿದಾಗಲೂ ಈ ಶೋಧ ಮುನ್ನಡೆಯಿತು. ಅವನ ಅವಿರತ ಯತ್ನಗಳು ಎಸ್ಪರಾಂಟೊಕ್ಕೆ ಒಂದು ರೂಪ, ಒಪ್ಪ ಕೊಟ್ಟವು.

ಎಸ್ಪರಾಂಟೊ ಭಾಷೆಯ ಮೊದಲ ಪತ್ರಿಕೆ 'ಲಾ ಎಸ್ಪೆರಾಂಟಿಸ್ತೊ' ಜರ್ಮನಿಯಲ್ಲಿ ೧೮೮೯ ರಲ್ಲಿ ಪ್ರಕಟವಾಯಿತು ಅದೇ ವರ್ಷ ಫಿಲಡೆಲ್ಫಿಯಾದ ಅಮೇರಿಕನ್ ಸೊಸೈಟಿ ಈ ಭಾಷೆಯಲ್ಲಿ ಆಸಕ್ತಿ ತೋರಿತು. ಅದು ಡಾ. ಲಾಜರಸನ ಕೃತಿಗಳನ್ನು ಎಸ್ಪರಾಂಟೊದಲ್ಲಿ ಅನುವಾದಿಸಿ ಪ್ರಕಟಿಸಲು ಮುಂದಾಯಿತು. ಆರಂಭದಲ್ಲಿ ಈ ಭಾಷೆ ರಶಿಯ, ಜರ್ಮನಿ, ಅಮೇರಿಕದಲ್ಲಿ ಪ್ರಚಾರ ಪಡೆಯಿತು. ಫ್ರಾನ್ಸ್ ಹಾಗೂ ಬೆಲ್ಜಿಯಂ ದೇಶಗಳಲ್ಲಿ ಕೂಡ ಜನ ಇದನ್ನು ಸ್ವಾಗತಿಸಿದರು. ಫ್ರೆಂಚ್ ಭಾಷೆಯಲ್ಲಿ ಎಸ್ಪರಾಂಟೊ ಕಲಿಸುವ ಪತ್ರ ಪುಸ್ತಕವೊಂದು ಪ್ರಕಟವಾಯಿತು. ೧೯೦೨ ರಲ್ಲಿ ಇಂಗ್ಲಂಡಿನಲ್ಲಿ ಈ ಭಾಷಾ ಪ್ರಚಾರಕ್ಕೆ ಒಂದು ಕ್ಲಬ್ ತಲೆ ಎತ್ತಿತು. ಅನಂತರ ಈ ಚಳವಳಿ ನೈಜೀರಿಯಾ, ಚೀನ, ಬ್ರೆಜಿಲ್ಲುಗಳಿಗೂ ವಿಸ್ತರಿಸಿತು. ಫ್ರಾನ್ಸಿನಲ್ಲಿ ೧೯೦೫ರಲ್ಲಿ ಸೇರಿದ ಎಸ್ಪೆರಾಂಟೊ ಸಮ್ಮೇಳನ ಜಗತ್ತಿನ ಗಮನ ಸೆಳೆಯಿತು. ಇಲ್ಲಿ ಜಗತ್ತಿನ ನಾನಾ ಭಾಗಗಳಿಂದ ೭೦೦ಕ್ಕೂ ಹೆಚ್ಚು ಎಸ್ಪರಾಂಟಿಸ್ಟರು ಸೇರಿದರು. ಮುಂದಿನ ಎರಡು ವರ್ಷಗಳಲ್ಲಿ ಜಿನೆವಾ, ಸ್ವಿಜರ



“ದಿನಾ ಉದ್ಯೋಗಕ್ಕಾಗಿ ಅರ್ಜಿ ಹಾಕಿ ಇಂಟರ್‌ವ್ಯೂಗೆ ಹೋಗ್ತಾ ಇದ್ದಾನೆ—ಐದು ವರ್ಷದಿಂದ ನಿರುದ್ಯೋಗಿ ಅಂತ ಹ್ಯಾಗೆ ಹೇಳ್ಲಿ ?”

ಲೆಂಡ್, ಇಂಗ್ಲಂಡ್‌ಗಳಲ್ಲಿ ಇಂಥ ಸಮ್ಮೇಳನಗಳು ನೆರವೇರಿದವು. ಡಾ. ಲಾಜರಸ್ ಕೊನೆಯುಸಿರು ಎಳೆದ ಕಾಲಕ್ಕೆ (೧೯೧೭) ಅವನ ಕನಸಿನ ಕೂಸು ಎಸ್ಪೆರಾಂಟೊ ವಿಶ್ವಮಾನ್ಯತೆ ಪಡೆದಿತ್ತು. ಆದರೆ ಇದರ ಶಬ್ದ ಸಂಪತ್ತು ಲ್ಯಾಟಿನ್ ಮತ್ತು ಜರ್ಮನ್ ಭಾಷೆಗಳಿಂದ ಬಂದುದಾದ್ದರಿಂದ ಏಶ್ಯ ಹಾಗೂ ಆಫ್ರಿಕದ ಜನತೆಗೆ ಇದು ಅಷ್ಟೊಂದು ಹಿಡಿಸಲಿಲ್ಲ.

ಅಂತರಾಷ್ಟ್ರೀಯ ತಂತಿ ಸಂಘ ಎಸ್ಪೆರಾಂಟೊವನ್ನು ಸಂಪರ್ಕ ಭಾಷೆ ಎಂದು ಮನ್ನಿಸಿ ಇದರ ವಿಕಾಸಕ್ಕೆ ಹೊಸ ದಿಶೆ ತೋರಿತು (೧೯೨೫). ಇಂದು ಜಗತ್ತಿನ ಹಲವಾರು ದೇಶಗಳ ಅಂಚೆ ತಂತಿ ಶಾಖೆಗಳು ಇದರ ಮೂಲಕ ವ್ಯವಹರಿಸುತ್ತಿವೆ. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಇದನ್ನು ತೀವ್ರ ಪ್ರಚಾರ ಮಾಧ್ಯಮವಾಗಿ ಬಳಸಲಾಗಿತ್ತು. ಕೆನಡಾ ಹಾಗೂ ಅಮೇರಿಕದ ಅನೇಕ ವಿಶ್ವವಿದ್ಯಾಲಯಗಳು ಈ ಭಾಷೆಯ ಶಿಕ್ಷಣಕ್ಕೆ ಸೌಕರ್ಯ ಒದಗಿಸಿವೆ. ಅಮೇರಿಕ ಅಲ್ಲದೆ ಯುರೋಪಿನ ಹಾಗೂ ಆಸ್ಟ್ರೇಲಿಯಗಳ ಕೆಲವು ಆಕಾಶವಾಣಿ ಕೇಂದ್ರಗಳು ಎಸ್ಪೆರಾಂಟೊದಲ್ಲಿ ಕಾರ್ಯಕ್ರಮ ಬಿತ್ತರಿಸುತ್ತಿವೆ. 'ವಿಶ್ವ ಎಸ್ಪೆರಾಂಟೊ ಸಂಘ' ಈ ಭಾಷೆಯ ಬೆಳವಣಿಗೆ ಹಾಗೂ ಬಳಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಅಂತಾರಾಷ್ಟ್ರೀಯ ಮೇಳಗಳಲ್ಲಿ ಇದರ ಉಪಯೋಗ ಹೆಚ್ಚಿದೆ. ಜಗತ್ತಿನ ೬೫ ಭಾಷೆಗಳಿಂದ ೭೫೦೦ಕ್ಕೂ ಹೆಚ್ಚು ಗ್ರಂಥಗಳು ಎಸ್ಪೆರಾಂಟೊದಲ್ಲಿ ಅನುವಾದಗೊಂಡಿವೆ. ಬೈಬಲ್, ಭಗವದ್ಗೀತಾ ಅಲ್ಲದೆ ಶೇಕ್ಸ್‌ಪಿಯರ್, ಹೋಮರ್, ಕನ್‌ಫ್ಯೂಶಿಯಸ್ ಕೃತಿಗಳು ಇದರಲ್ಲಿ ಸಮಾವೇಶವಾಗಿವೆ. ಇಂದು ಈ ಭಾಷೆಯಲ್ಲಿ ಸುಮಾರು ೧೦೦ ಪತ್ರಿಕೆಗಳು ಹೊರಡುತ್ತಿವೆ. ೧.೬ ಕೋಟಿ ಜನ ಇದನ್ನು ಮಾತನಾಡುತ್ತಾರೆಂದು ಅಂದಾಜು. ಸರಳತೆ, ಸಂಕ್ಷಿಪ್ತತೆ ಸೌಲಭ್ಯ ಹಾಗೂ ಕ್ರಮಬದ್ಧತೆ ಇದರ ಮುಖ್ಯ ಸೂತ್ರಗಳು. ಎಸ್ಪೆರಾಂಟೊ ನಾಳಿನ ವಿಶ್ವಕ್ಕೆ ಒಂದು ಸಾಮಾನ್ಯ ಭಾಷೆಯಾಗಿ ಭರದಿಂದ ಬೆಳೆಯುತ್ತಿದೆ. ✡

('ಕಸ್ತೂರಿ'ಯ ಜನವರಿ ೧೯೮೮ರ ಸಂಚಿಕೆಯ ೧೧೩ನೆಯ ಪುಟದಲ್ಲಿ ಬಂದಿರುವ ಲೇಖನ 'ವಿಶ್ವಭಾಷೆ ಎಸ್ಪರಾಂಟೊ'ವನ್ನೂ ನೋಡಿ.)



ಖೊಟ್ಟಿ ನಾಣ್ಯ

ಸೂಫಿ ಸಂತ ಖೈರಾಬಾದಿ ಉಪಜೀವನಕ್ಕಾಗಿ ತರಕಾರಿ ಮಾರುತ್ತಿದ್ದರು. ಸಾಧು ಪ್ರಾಣಿ ಖೈರಾಬಾದಿ ಗಿರಾಕಿಗಳು ಖೊಟ್ಟಿ ನಾಣ್ಯ ಕೊಟ್ಟರೂ ಸುಮ್ಮನೆ ಇಟ್ಟುಕೊಂಡು ಬಿಡುತ್ತಿದ್ದರು.' ಹೀಗಾಗಿ ಕೆಲವರು 'ಇದು ನೀನೇ ಕೊಟ್ಟದ್ದು' ಎಂದು ತಮ್ಮಲ್ಲಿದ್ದ ಖೊಟ್ಟಿ ನಾಣ್ಯವನ್ನು ಕೊಟ್ಟು ನಿಜ ನಾಣ್ಯ ಪಡೆದು ಹೋಗುತ್ತಿದ್ದರು. ಇಷ್ಟಾದರೂ ಖೈರಾಬಾದಿ ಚಕಾರವೆತ್ತುತ್ತಿರಲಿಲ್ಲ.


ಅಂತ್ಯಕಾಲ ಸನ್ನಿಹಿತವಾದಾಗ ಖೈರಾಬಾದಿ ಅವೆಲ್ಲ ಖೊಟ್ಟಿ ನಾಣ್ಯಗಳನ್ನು ಒಂದೆಡೆ ಕೂಡಿಟ್ಟು ಪ್ರಾರ್ಥಿಸತೊಡಗಿದರು : "ಪರವರ್ದಿಗಾರ್ ! ನಾನಂತೂ ಜೀವಮಾನವಿಡೀ ಖೊಟ್ಟಿನಾಣ್ಯ ಪಡೆಯುತ್ತಲೇ ಬಂದೆ. ಎಂದೂ ಯಾರಿಗೂ ನಾಣ್ಯವನ್ನು ಮರಳಿಸಿಲ್ಲ. ನಾನೂ ಒಂದು ಖೊಟ್ಟಿ ನಾಣ್ಯವೇ. ನಿನ್ನ ಬಳಿ ಬರುತ್ತಿದ್ದೇನೆ, ದಯವಿಟ್ಟು ಮರಳಿಸಬೇಡ."

ಅಪ್ಪಟವಾದ ಒಂದೇ ಒಂದು

ಗ್ಲುಕೋನ್-ಡಿ ⓣ

ಇದು ಗ್ಲಾಕ್ಸೋ ಅವರ ತಯಾರಿಕೆ

ಪರಿಚಿತ ಹಸುರು ಪ್ಯಾಕ್‌ನ
ಮೇಲೆ ಬಿಳಿ ಅಕ್ಷರದಲ್ಲಿ
ಗ್ಲುಕೋನ್-ಡಿⓣ
ನೋಡಿಕೊಳ್ಳಿರಿ.



ಕೀಳು ದರ್ಜೆಯ ಅನೇಕ ನಕಲಿ ತಯಾರಿಕೆಗಳು ಇರುವಾಗ ಗ್ಲಾಕ್ಸೋದವರ ಅಪ್ಪಟ ತಯಾರಿಕೆಯಾದ ಗ್ಲುಕೋನ್-ಡಿಯನ್ನು ನೀವು ಕೊಳ್ಳುವುದು ಬಹಳ ಅವಶ್ಯವಾಗಿದೆ. ಇಲ್ಲವಾದರೆ, ನಕಲಿ ತಯಾರಿಕೆಯಿಂದ ನಿಮ್ಮ ಕುಟುಂಬದವರ ಆರೋಗ್ಯಕ್ಕೆ ಅಪಾಯವುಂಟಾಗಬಹುದು.

ಗ್ಲುಕೋನ್-ಡಿ ಗ್ಲಾಕ್ಸೋದವರ ಅತ್ಯಂತ ವಿಶ್ವಸನೀಯವಾದ ತಯಾರಿಕೆಯಾಗಿದೆ– ಅದು ವಿಟಮಿನ್ ಡಿ2, ಫಾಸ್ಫರಸ್ ಮತ್ತು ಕ್ಯಾಲ್ಸಿಯಂಗಳಿಂದ ಸಮೃದ್ಧವಾದ ಶುದ್ಧ ಗ್ಲುಕೋಸ್ ಪೌಡರನ್ನು ಒಳಗೊಂಡಿದೆ. <u>ಬೇಕಾದಾಗ</u> ಶಕ್ತಿಯನ್ನು ಪಡೆಯಲು ಲಕ್ಷೋಪಲಕ್ಷ ಜನರು ಅದನ್ನು ಸೇವಿಸುತ್ತಾರೆ.

ಆಹಾರ-ವಸ್ತುಗಳ, ಪ್ರಾಣರಕ್ಷಕ ಔಷಧ-ವಸ್ತುಗಳ ಮತ್ತು ಔಷಧಗಳ ತಯಾರಕರಾದ ಸುಪ್ರಸಿದ್ಧ ಗ್ಲಾಕ್ಸೋ ಕಂಪೆನಿಯಿಂದ ಗ್ಲುಕೋನ್-ಡಿ ಉತ್ಪಾದಿಸಲ್ಪಡುತ್ತದೆ.

ನೀವು ಕೊಳ್ಳುವ ಗ್ಲುಕೋನ್-ಡಿ ಪ್ಯಾಕ್ ಅಪ್ಪಟವಾದದ್ದು ಎಂದು ಖಾತ್ರಿಮಾಡಿಕೊಳ್ಳಿರಿ.

ಗ್ಲುಕೋನ್-ಡಿⓣ ಶಕ್ತಿಯನ್ನು ತುಂಬಿಕೊಡಲು ವಿಶ್ವಸನೀಯ **ಗ್ಲಾಕ್ಸೋ** ಕಂಪೆನಿಯ ಕೊಡುಗೆ. ⓣ ಟ್ರೇಡ್ ಮಾರ್ಕ್

HTB-GLL-7027-KN

ಮನೆಯು ದಿವ್ಯ ಅಳಿಯಿಂತು
ಜನಮನದಲಿ ಅರಳಿತು
ಸಾವಿಲ್ಲದ ಚೈತನ್ಯದ
ಸವಕಳಿ ಮೈಗರೆಯಿತು.

ಆಗಿದ್ದರು ಈಗಿಲ್ಲ
ಎನ್ನಿಸುವದೇ ಇಲ್ಲ
ಆ ಆಸ್ಥಾನದಲ್ಲಿ
ನೆಲೆಸಲು ಬೇರಿಲ್ಲ.
ಚ್ಯುತಿಯು ಕಥೆಯು ಇಲ್ಲಿಲ್ಲ
ಅಕಸ್ಮಾತ್ ಏನೂ ಇಲ್ಲ.

ಕಂಡುದು ನಾಲ್ಕಾರು ಸಲ
ಅಲ್ಲು ಇಲ್ಲೂ ಎಲ್ಲೆಲ್ಲೂ
ಉಂಡುದು ಏಳು, ಹತ್ತು ವರ್ಷ
ಸೌದಾಮಿನಿ ರಸವರ್ಷ.

ಜೀವದ ನರನಾಡಿಗಳಲಿ
ನಾಡು ನುಡಿಯ ಇಂಗಿತ
ಇಂದಿನ ವಿದ್ಯುತ್ ಪಯಣಕೆ
ದಿನ ದಿನವೂ ಸಂಚಿತ.

ತನ್ನ ಪಾಡು ತನಗೆ ಆದರ ಹಾಡು ಅಷ್ಟೆ ಕವನ
ಸಮರಸವೇ ಜೀವನ ಗುರಿ ಕಟು ಮಧುರದ ವ್ಯಾಖ್ಯಾನ.
ಆಕಾಶ ಅನಿಸಿ ಗುಡಿ ಹಾಂಗ ಅಲ್ಲಿ ಜಗದ್ಗುರು ಮಹಾಲಿಂಗ
ನೆಲ ಅಗಲ ಪೀಠ ಶ್ರಾವಣದ ಕಣಸ ಕುಣಿಯೋಣ ಬಾರ ರಂಗ.

ಕರುಳಿನ ತೊಡಕಿನ ಕುಸಿರಾಟ ಉಸಿರಾಟ
ಕರಗಿ ಮೂಡದ ಭಾವ ಬಾಳಲಿಲ್ಲ.
ಅಂಬಿಕಾತನಯಕೆ ಅಂತೂ ಕೊನೆ ಬಂತಂತೆ
ಕೇಳಿದೆದೆಯು ಎಂಟೆದೆಯು ಚೋದ್ಯವೆಲ್ಲ.

ಬಾಳುವ ಉಸಿರಿಗೆ ಹೆಸರೊಂದೇ.
ಇದು ದತ್ತ ಆತ್ರೇಯ ಕಾಣಿಕೆ
ಬೇಕಿಲ್ಲ ಬೇರೆ ಆನಿಕೆ.

ಬೇದರಕಾರ ಬಂತು ಬೇಂದ್ರೇನ ಹಡಗ
ಸರಕಾರದ ಬಂದರಕ.
ಮಾಡಬೇಕಿದ್ದ ಕಾರ್ಯ ತಾ ಮಾಡಿ
ಅವರವರ ಕಾರ್ಯ ತೂಗಿ.

ಹುಬ್ಬಿನ ಇಬ್ಬದಿ ಚಾಚಿದ ಗರುಡನ
ಎಂಥಾ ಸವಾರಿ ಮಾಡಿದರು
ನಾದಾನ ನಾದುತ್ತ ಪ್ರತಿವಾದ ಹೆಣೆಯುತ್ತ
'ನಾ'ಕು ತಂತಿಯ ಲಯದಿ ಮಲಗಿದರು.

ಜಂಭದ ಪಾಡಲ್ಲ ನಂಬಿಕೀ ಹಾಡಿದು
ಅ-ಪಾರ್ಥರಿಗೆ ಇಲ್ಲಿ ಹುರುಳುಸಲ್ಲ.
ಭೃಂಗದ ಬೆನ್ನೇರಿ ಒಳಹೊರಟ ವಹಿವಾಟ
ತಂತ್ರೀಸಹಸ್ರಕ್ಕೆ ಮಿಂಗಿಲು ನಲ್ಲ.


ಅಳೆದು ತೂಗಿದ ಬೇವು ಬೆಂದು ಬೆಂದೂ ಬೇಂದ್ರೆ
ಕೃಷ್ಣ ನುಡಿಸಿದ ಕೊಳಲು ಕಟು ಮಧುರ ಸಾಂದ್ರೆ

ಆಗೊ ನೆಲದಲಿ ಕಾವಿನ ಉರಿಬುಗ್ಗೆ
ಅಂತರಿಕ್ಷದಲಿ ನೇಯ್ಗೆಯು ಹಿಗ್ಗ

ಪಂಚ ಪ್ರೇತಾಂಕಿತ ತಪ ತಪನ
ಶಿವಮಂಗಲ ಉದ್ಗಮನದ ಜವನ.

ಆಶ್ರು ಅಲ್ಲ ಮಹಾತ್ಮ
ಹರ್ಷ ಚಿಲುಮೆ ಇದು
ದತ್ತ ಕೊನೆಯದು ನಮನ
ಮಾತು ಹಲಿವುಳಿದು.

ವಿ. ಎಸ್. ಝುಂಜರವಾಡ



ಕರ್ನಾಟಕದ
ವಿಶಿಷ್ಟ ವಾದ್ಯ

ಕರಡಿ ಮಜಲು

ಮಹಾಲಿಂಗ ಮಂ

ಕರ್ನಾಟಕದ ಚರ್ಮವಾದ್ಯಗಳಲ್ಲಿ ಡೊಳ್ಳು-ದೋಲುಗಳು ಪ್ರಾಚೀನವಾದವುಗಳು. ಈ ಕಾಲದಲ್ಲೇ ಪರಿಷ್ಕರಣಗೊಂಡು ಶಾಸ್ತ್ರೀಯ ವಾದ್ಯವಾಗಿ ಬೆಳೆದು ಬಂದ ಕರಡಿ ಮಜಲಿಗೆ ತನ್ನದೇ ಆದ ಪರಂಪರೆಯಿದೆ. 'ರುದ್ರವಾದ್ಯ'ವೆಂದು ಖ್ಯಾತವಾದ 'ಕರಡಿ' ಆಧುನಿಕ ಕಾಲದಲ್ಲೂ ತನ್ನ ಸ್ವರೂಪವನ್ನುಳಿಸಿಕೊಂಡು ವೈಶಿಷ್ಟ್ಯಪೂರ್ಣವಾಗಿ ಬೆಳೆದು ಬರುವಲ್ಲಿ ಸಫಲವಾಗಿದೆ. ಶೈವ ಸಂಪ್ರದಾಯಕ್ಕೆ ಸೇರಿದ ವಾದ್ಯವಿದು. 'ವೀರಭದ್ರ' ದೇವರ ಕಲ್ಪನೆಯಿರುವೆಡೆಯಲ್ಲೆಲ್ಲ ಇವರ ಅಸ್ತಿತ್ವವಿದೆ. ಇತ್ತೀ ಹಳ್ಳಿಗಳಲ್ಲಿ ಹಲವು ಉತ್ಸಾಹಿಗಳು ಕರಡಿ ಮಜಲು ಮೇಳ ಕಟ್ಟಿಕೊಂಡಿರುತ್ತಾರೆ. ಕರ್ನಾಟಕಕ್ಕೆ ಹೊಂದಿಕೊಂಡ ಆಂಧ್ರ, ಮಹಾರಾಷ್ಟ್ರ ಗಡಿಗಳಲ್ಲೂ ಮದಾಲಸಿಗಳುಂಟಾದರೂ ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ವಿಜಾಪುರ ಜಿಲ್ಲೆಗಳಲ್ಲಿ ಈ ವಾದ್ಯ ಬಹು ಬಳಕೆಯಲ್ಲಿದ್ದು ಜನಪ್ರಿಯವಾಗಿದೆ. ಇದು ಮಂಗಲವಾ
ಜಾತ್ರೆ, ಉತ್ಸವ, ಆರಾಧನೆಗಳಂಥ ಪ್ರಸ
ಗಳಲ್ಲಿ ನುಡಿಸಲಾಗುತ್ತದೆ. ವೀರಭದ್ರದೇ
ಗುಗ್ಗುಳೋತ್ಸವದಂಥ ದೇವಕಾರ್ಯಗಳಲ್ಲಿ 'ಕರ
ಸಂಬಾಳ' ವಾದ್ಯಗಳು ಅವಶ್ಯವಾಗಿ ಬೇಕಾ
ತ್ತವೆ.

'ಕರಡಿ' ಈ ಶಬ್ದ 'ಪರಡಿ' ಪದದ ರೂಪಾಂ
ವಾಗಿರಬಹುದಾಗಿದೆ. ಡೊಳ್ಳು- ಡೋಲಕವ
ಹೋಲುವ ಕರಡಿ ವಾದ್ಯದ ಪರಡಿಗೆಯು ಎರ
ಬದಿಗೆ ಚರ್ಮಗಳ ತೊಗಲಿನ್ನು ಅದನ್ನು ಹ
ಯಿಂದ ಬಿಗಿದು ಕಟ್ಟಿರುತ್ತದೆ. ವಾದನಕಾ
ವಾದ್ಯವನ್ನು ಕೊರಳಲ್ಲಿ ತೂಗುಹಾಕಿಕೊಂ
ಕೈಗಳಲ್ಲಿ ಅರೆಂಟು ಇಂಚು ಉದ್ದವಾದ ಬೆ
ಗೋಲುಗಳನ್ನು ಹಿಡಿದು ನುಡಿಸುತ್ತಾನೆ. ಕರ
ಸಂಬಾಳಗಳ ಹಿನ್ನೆಲೆಯಲ್ಲಿ ಇದಕ್ಕೊಂದು ಪೌರಾ
ದೃಷ್ಟಾಂತವಿದೆ. ವೀರಭದ್ರ ದೇವರ ಅವತ
ಕಾಲಕ್ಕೆ ದಕ್ಷನ ಸಂಹಾರ ಮಾಡುವಾಗ, ದಕ್ಷ

ಎಲುಬು ತೆಗೆದು ಪರಡಿಯನ್ನಾಗಿಯೂ ಮೈ ಚರ್ಮ ಸುಲಿದು ಪರಡಿಗೆಯ ಎರಡೂ ಕಡೆ ಮುಚ್ಚಳಿಕೆಗಳಾಗಿಯೂ, ಕರುಳು ತೆಗೆದುಕೊಂಡು ಹುರಿ ಹಗ್ಗಗಳನ್ನಾಗಿಯೂ ಮಾಡಿ ಆತನ ಬೆರಳುಗಳನ್ನು ಬಾರಿಸುವ ಗುಣಿಗಳನ್ನಾಗಿ ತಯಾರಿಸಿಕೊಂಡರಂತೆ. ಹೀಗೆ ಧಾರ್ಮಿಕವಾದ ಹಿನ್ನೆಲೆಯಲ್ಲಿ ಬೆಳೆದುಕೊಂಡು ಬಂದ ಅಪೂರ್ವ ಜನಪದ ಕಲೆಯು ದೇವತಾರಾಧನೆಯಂಥ ಸತ್ಕಾರ್ಯಗಳಲ್ಲಿ ಮಾತ್ರ ನುಡಿಸುವ ಪವಿತ್ರ ಸೇವೆ ಎನಿಸುವದರಿಂದ ಮುದಾಲಸಿಗಳು ಭಾರೀ ಉರಿಬಿಸಿಲಿನಲ್ಲೂ ತಾಸುಗಟ್ಟಲೆ ಬರಿಗಾಲಲ್ಲಿ ನಿಂತು ಬಾರಿಸುತ್ತಾರೆ. ಕರಡಿ ವಾದನಕಾರರ ಗುಂಪಿಗೆ 'ಮುದಾಲಸಿ'ಗಳೆನ್ನುವರು. 'ಮದ್ದಳಿಗ' ಎಂದರೆ ಬಾರಿಸುವವ ಅಂದಾಗುತ್ತದೆಯಾದ್ದರಿಂದ 'ಮುದಾಲಸಿ'ಗಳೆನ್ನುವರು. ಈ ಮುದಾಲಸಿಗಳ ಕಲೆ ಪ್ರದರ್ಶನಕ್ಕೆ 'ಕರಡಿ ಮಜಲು' ಅನ್ನುವದೂ ರೂಢಿ! ಅದೇ ರೀತಿ ಡೊಳ್ಳಿನ ಮಜಲೂ ಅನ್ನುವದುಂಟು. ಮಜಲು ಅಂದರೆ ಮೇಳ ಈ ಅರ್ಥದಲ್ಲಿ ಗುರುತಿಸಲಾಗುವದಾದರೂ ಇಲ್ಲಿಯ ವಾದ್ಯವಾದನ-ತಾಡನ ಸ್ವರವು ಕ್ರಮವಾಗಿ ಹಂತ ಹಂತವಾಗಿ ಮಜಲು ಮಜಲಾಗಿ ಏರುತ್ತಲೇ ತೀವ್ರಗೊಳ್ಳುತ್ತಲೇ ಸಾಗುತ್ತದೆ. ತಾರಕ ಸ್ವರದಲ್ಲಿ ಅಂತಿಮ ಘಟ್ಟದವರೆಗೂ ಮುಟ್ಟುತ್ತದೆ... ಈ ಕರಡಿ ನಾದ ಕನ್ನಡ ಜಿಲ್ಲೆಗಳ ಚಂಡಿ ಮದ್ದಳೆಯನ್ನು ನೆನಪಿಗೆ ತರುವಂತಿರುತ್ತದೆ.

ಕರಡಿ ಮಜಲು ಏಳೆಂಟು ಮುದಾಲಸಿಗಳ ಮೇಳ ಇಲ್ಲಿ ಪ್ರಧಾನ ವಾದ್ಯ ಕರಡಿಯೊಂದಿಗೆ ಅದನ್ನೇ ಹೋಲುವ ಇನ್ನೆರಡು 'ದಿಮ್ಮು'ಗಳಿರುತ್ತವೆ. ಹಾಗೂ ತುಂಬ ಹರವಾದ ದೊಡ್ಡ ಗಾತ್ರದ ಎರಡು ಜತೆ ಕಂಚಿನ ತಾಳಗಳಿರುತ್ತವೆ. ಸುತಿ ಸನಾದಿಗಳೂ ಮಜಲಿನ ಜೊತೆಗಿದ್ದು ಕಲೆಗೆ ಇನ್ನೂ ಹೆಚ್ಚಿನ ಕಳೆ ಕಟ್ಟುತ್ತದೆ. ಮುದಾಲಸಿಗಳ ವೇಷ-ಭೂಷಣಗಳೂ ತುಂಬ ಸರಳ—ಬಿಳೀ ಅಂಗಿ. ಧೋತರ. ತಲೆಗೊಂದು ರುಮಾಲು ಅಥವಾ ಟೋಪಿ, ಹೆಗಲ ಮೇಲೆ ಪಾವುಡ ಅಥವಾ ದೊಡ್ಡ ಜರಿ ಧೋತ್ರ. ಇಷ್ಟೇ. ತಾವು ಸಂಪಾದಿಸಿದ ಬೆಳ್ಳಿಯ ಕಡೆ ತೋಡೆ ಇದ್ದರೆ ಮುಂಗೈಯಲ್ಲಿ, ಪದಕಗಳಿದ್ದರೆ ಎದೆಯ ಮೇಲೆ ಧರಿಸುವುದುಂಟು!

ಮುದಾಲಸಿಗಳು ಹೆಜ್ಜೆಯ ಮೇಲೆ ಹೆಜ್ಜೆ ಇಕ್ಕುತ್ತ ಕುಣಿ ಕುಣಿದು ಬಾರಿಸುವ ಗತ್ತು ಬಲು ಆಕರ್ಷಣೀಯ! ನಿಧಾನ ಗತಿಯಿಂದ ಆರಂಭಿಸಿ ವಿವಿಧ ಗತಿಯಲ್ಲಿ ಸ್ವರತಾಡನ ಹಂತಹಂತವಾಗಿ ಏರುತ್ತ ಬದಲಾಗುತ್ತ ಸಾಗುತ್ತದೆ. ತೀವ್ರ ಗತಿಯಲ್ಲಿ ಚಣಿ ಕೋಲು ಹಿಡಿದ ಮುದಾಲಸಿಗಳ ಕೈಬೆರಳುಗಳು ಕರಡಿಯ ಮೇಲಾಡುವುದನ್ನು ನೋಡಬೇಕು. ಆವರು ಮೈಮೇಲೆ ಪರಿವೆಯಿಲ್ಲದಷ್ಟು ತಲ್ಲೀನರಾಗಿರುತ್ತಾರೆ. ಇವರ ಜೊತೆ ತಾಳ ಮೇಳದ ಧ್ವನಿ ಸುತಿ ಸನಾದಿಗಳ ಸ್ವರ ಸಾಂಗತ್ಯ ಬಾರಿಸುವ ಗತ್ತು ಪ್ರೇಕ್ಷಕನಲ್ಲಿ ಭಾವ-ಲಯವನ್ನು ಉದ್ದೀಪನಗೊಳಿಸುತ್ತವೆ. ಪ್ರಚಂಡ ಲಯದ 'ವೀರ ವಾದ್ಯವಾದನ' ನೋಡುಗರ ಮೈ ನವಿರೇಳುವಂತೆ ಮಾಡಿ ಕೆರಳಿಸುತ್ತವೆ. ಪ್ರದರ್ಶನಗಳು ರಂಗೇರಿದ, ಕಾವೇರಿದ ಪ್ರಸಂಗಗಳಲ್ಲಿ ಶ್ರೋತೃಗಳು ಹರ್ಷೋನ್ಮಾದದಲ್ಲಿ ತಮ್ಮ ತಲೆ ಮೇಲಿನ ಪಟಗಾ ಹಾರಿಸಿ ಹುಚ್ಚೆದ್ದು ಕುಣಿಯುವದೂ ಉಂಟು! ಸಂತೋಷದಿಂದ ಗುಲಾಲಿನ ಹುಡಿ ಹಾರಿಸುತ್ತ, ಚುರಮುರಿ(ಮಂಡಕ್ಕಿ)ಯನ್ನು ವಾದನಕಾರರ ಮೇಲೆ ಸುರಿದು ಸೂರೆ ಮಾಡಿ, ಸಿಳ್ಳುಹೊಡೆದು, ಕೇಕೆ ಹಾಕಿ 'ಭಲೇ' ಎಂದು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸುತ್ತ ಹುರಿದುಂಬಿಸುವದುಂಟು. ಹಾಗೆಂದು ಈ ವಾದ್ಯದ ಯಾವೊಂದು ಕ್ಷಣದ ಧ್ವನಿ ಆಲಿಸಿದಾಗ. ಕಲೆಯ ಅಭಿವ್ಯಕ್ತಿ ಅರ್ಥವಾಗದೆ ಆಕರ್ಷಣೆ ಎನಿಸಲಿಕ್ಕಿಲ್ಲ! 'ಮೂಡ್' ಎನ್ನುತ್ತಾರಲ್ಲ, ಹಾಗೆ ಭಾವವಲಯ ತುಂಬಿ ಉತ್ಸಾಹ ಒಡಮೂಡಿದ ಸಂದರ್ಭಗಳಲ್ಲಿ ಶಹಭಾಷ್-ಭಲೇ ಎಂದು ಪ್ರಚೋದಿಸುವ ಅಭಿಮಾನಿ ವೃಂದವಿದ್ದಾಗ ಕಲೆಯ ಸೊಗಸು ಅರಳುತ್ತದೆ... ಆಗ ಕಲೆಯ ಪೂರ್ಣತೆಯನ್ನು ಕಂಡು ಕೇಳಿ ಸವಿಯಬಹುದು.


ಗುಗ್ಗುಳೋತ್ಸವಗಳು ಬೇಸಿಗೆಯ ಕಡು ಬಿಸಿಲಿನಲ್ಲಿಯೇ ಜರುಗುತ್ತವೆ. ಈ ಮೆರವಣಿಗೆಗಳಲ್ಲಿ ಕಾಯ್ದು ಹೆಂಚಾದ ನೆಲದ ಮೇಲೆ ನಿಂತು ತನ್ಮಯರಾಗಿ ಮಜಲನ್ನು ನುಡಿಸುವದು ನೋಡುವಂತಿರುತ್ತದೆ. ಜೊತೆಯಲ್ಲಿ ಸಂಬಾಳ ವಾದ್ಯ ಒಡಪು ಹೇಳುವ ಪುರುತ (ಒಗ್ಗಯ್ಯ) ಇವರೂ ಇದ್ದು ಬೀದಿಯಲ್ಲಿ ಕೂಟ ಕೂಟಕ್ಕೆ ತಡೆದು ಸರದಿ

ಯಂತೆ ಕಾರ್ಯಕ್ರಮ ನಡೆಸುವರು. ಪರುತ ಒಡಪುಗಳನ್ನು ಹೇಳುವಾಗ ಆ ವಾಕ್ಯಗಳ ಅಂತ್ಯಕ್ಕೆ ಉದ್ದಕ್ಕೆ ಉದ್ಗಾರವಾಚಕ ಶಬ್ದವನ್ನು ಕರಡಿಯಲ್ಲಿ ನುಡಿಸುತ್ತಾರೆ.

ನಾನು ನಿರೀಕ್ಷಿಸಿದ ನಿರೂಪಿಸಿದ ಶ್ರೀ ಪರಯ್ಯ ಪೂಜೇರಿ ಅವರ 'ಅಲ್ಲಮಪ್ರಭು ಕರಡಿ ಮಜಲು ಪಡಕರಟ್ಟಿ' ಮುದ್ದಾಲಸಿ ಮೇಳದ ಕುರಿತು ಪ್ರೇಕ್ಷಕರ ಪ್ರತಿಕ್ರಿಯೆಯನ್ನು ಕಂಡು ಬೆರಗಾದೆ... ಆಧುನಿಕ ಬ್ಯಾಂಡ್ ಸೆಟ್ಟುಗಳನ್ನು ಬಂದು ಮಾಡಿಸಿ ಕರಡಿ ಕೇಳಲು ಅತ್ಯುತ್ಸಾಹ ತೋರಿದರು. ಸಮಯಾಭಾವದ ಮೂಲಕ ಮಜಲನ್ನು ಬೇಗ ಮುಗಿಸುವ ಉದ್ದೇಶವಿಟ್ಟುಕೊಂಡಾಗ ಬೀದಿಯಲ್ಲಿ ನೆರೆದ ಅಭಿಮಾನಿ ವೃಂದ ಬಿಡದೆ, ಮತ್ತೆರಡು ಮಾತ್ರಾಗಳನ್ನು ಬಾರಿಸಲೇಬೇಕೆಂದು ಹಟ ಮಾಡಿ ಕೂಗಾಡಿದರು... ಈ ಮೇಳದವರು 'ಆದಿ ಆಟ ಮಾತ್ರಾ

ದಿಂದ—...೩೨ ಮಾತ್ರಾಗಳ ವರೆಗೆ ತಾಳಗಳನ್ನ
ಸೊಗಸಾಗಿ ಕೇಳಿಸುವರು. ತಾಳ ಮೇಳದ ಧ್ವನಿ
ಸುತಿ, ಸನಾದಿಯ ಸಾಥಿ ಸಾಂಗತ್ಯ ಅದ್ಭುತ
ಇತ್ತಲಾಗಿ ಜನಪದ ಸಾಹಿತ್ಯ 'ಸಂಗ್ಯಾ ಬಾಳ್ಯಾ
'ರಾಧಾ ನಾಟಕ'ಗಳ ಹಾಡುಗಳನ್ನು ಸುಶ್ರಾವ
ವಾಗಿ ಸನಾದಿಯಲ್ಲಿ ನುಡಿಸುತ್ತ ಅದಕ್ಕೊಪ್ಪು
ವಂತೆ ಮಟ್ಟುಗಳಲ್ಲಿ ಸರಿಯಾಗಿ ಮುಕ್ತಾಯ
ಕೊಟ್ಟು ಸಾಗುವ ಈ ವಾದ್ಯವೈಭವ ಶ್ರೋತೃಗಳ
ಲಕ್ಷ್ಯವನ್ನು ಕೇಂದ್ರೀಕರಿಸುವುದಲ್ಲದೆ, ಎಲ್ಲ ವಿಧದ
ರಸಿಕರನ್ನು ತೃಪ್ತಿಪಡಿಸಬಲ್ಲುದಾಗಿದೆ. ಈ
ಮೇಳದ ಧ್ವನಿಮುದ್ರಣ ಮಾಡಿಕೊಂಡು ಆಕಾಶ
ವಾಣಿ ಧಾರವಾಡ ನಿಲಯದವರು ತಮ್ಮ ಜಾನ
ಪದ ವೈವಿಧ್ಯದಲ್ಲಿ ಹಲವು ಸಲ ಪ್ರಚಾರ ಪಡಿಸಿ
ದ್ದಾರೆ.

ಪರಂಪರೆಯಿಂದ ಬೆಳೆದು ಬಂದ ಈ ವಾದ್ಯದ



ಕಲೆಗೆ ಕಲಿಕೆ ಮತ್ತು ಸತತ ಅಭ್ಯಾಸಗಳು ಅಗತ್ಯ! ಹಳ್ಳಿಗಳಲ್ಲಿ ಕಲಿಯಲಿಚ್ಛಿಸುವವರು ಇದರಲ್ಲಿ ನಿಷ್ಣಾತ ಪರಿಣತರನ್ನು ಕರೆಸಿಕೊಂಡು ಅವರ ಸಾನ್ನಿಧ್ಯದಲ್ಲಿ ಅಭ್ಯಾಸ ನಡೆಸುವರು. ಕಲಿಸ ಬಂದ ಉಸ್ತಾದ(ಮಾಸ್ತರ)ನಿಗೆ ಖರ್ಚು ನೋಡಿಕೊಂಡು ಪ್ರತಿಯಾಗಿ ಕಾಣಿಕೆ ನೀಡಿ ಮರ್ಯಾದೆ ಮಾಡುವರು... ತಮ್ಮೂರಿನಲ್ಲೇ ಬಾರಿಸಬಲ್ಲವರಿದ್ದರೂ, ದೂರ ದೂರದ ಊರುಗಳಿಂದ ಖ್ಯಾತ ಮದಾಲಸಿಗಳನ್ನು ತಮ್ಮಲ್ಲಿಗೆ ಕರೆಸಿಕೊಂಡು ಕೇಳಿ ನೋಡಿ ಖುಷಿ ಪಡುವ ಕಲಾಭಿಮಾನಿ ರಸಿಕರಿಗೆ ಕೊರತೆಯಿಲ್ಲ. ಒಂದಕ್ಕಿಂತ ಹೆಚ್ಚು ಮೇಳಗಳು ಏಕಕಾಲಕ್ಕೆ ಕಲೆತು ಸ್ಪರ್ಧೆಯ ಮೇಲೆ ತಮ್ಮ ವಾದ್ಯ ಕಲಾ ಪ್ರಯೋಗ ಪ್ರದರ್ಶಿಸುವುದೂ ಉಂಟು! ಕೊಡುಗೈ ದೊರೆಗಳು ತಾವು ಮೆಚ್ಚುವ ಕಲಾವಿದನಿಗೆ ಬಹುಮಾನ ನೀಡಿ, ನೋಟಿನ ಸರಮಾಲೆ ಮಾಡಿ ಕೊರಳಿಗೆ ಹಾಕಿ, ಕೈಗೆ ಬೆಳ್ಳಿಯ 'ಕಡಗ' ತೊಡಿಸಿ ಎದೆಗೆ ಪದಕಗಳನ್ನು ಕೊಟ್ಟು ಸನ್ಮಾನಿಸುವ ಸತ್ಸಂಪ್ರದಾಯ ಕನ್ನಡಿಗರಲ್ಲುಂಟು!

ಕರಡಿ ವಾದನದಲ್ಲಿ ಅಸಾಧಾರಣ ಸಾಧನೆಗೈದ, ಹೆಸರು ಮಾಡಿದ ಕಲಿಗಳಿಗೆ ಕೊರತೆಯಿಲ್ಲ. ಸುಸ್ಪಷ್ಟವಾಗಿ ಶಬ್ದಗಳನ್ನೇ ನುಡಿಸುವಷ್ಟು ಸೂಕ್ಷ್ಮತೆಯನ್ನು ಸಾಧಿಸಿದ ಕೀರ್ತಿಯಿದೆ. ಖ್ಯಾತ ಮದಾಲಸಿಯೊಬ್ಬ ನೀವು ಸೂಚಿಸುವ ಪದವನ್ನು ಗುಣಿಯಿಂದ ಕರಡೆಯ ಮೇಲೆ ಬಾರಿಸುತ್ತಾನೆ. ಮಾತು ಕೇಳದಷ್ಟು ದೂರ ನಿಂತ ಅವನ ಸಹಪಾಠಿ ಒಂದು ಸಲ ಬಾರಿಸಿ, ಆ ಶಬ್ದವನ್ನು ಒಡೆದು ಹೇಳುತ್ತಾನೆ. ಸಮರ್ಪಕವಾಗಿ ತಿಳಿಯದಿದ್ದಲ್ಲಿ 'ದಿವ್ ದಿವ್' ಅಂತ ಎರಡು ಸಲ ಬಾರಿಸಿ ಮತ್ತೆ ಬಾರಿಸಲು ಕೋರುತ್ತಾನೆ. ಪುನಃ ಸರಿಯಾಗಿ ಆರಿಸಿ ನಿಮ್ಮ ವಾಕ್ಯವನ್ನು ತಿಳಿಸುತ್ತಾನೆ. ಕಬ್ಬೂರಲ್ಲಿ ಮಲ್ಲಯ್ಯಸ್ವಾಮಿ ಖ್ಯಾತ ಮದಾಲಸಿ ಕಾರ್ಯಕ್ರಮದಲ್ಲಿದ್ದ ಆತ ಮಳೆ ಬರುವ ಸೂಚನೆ ಕಂಡು, "ಮನೆ ಮಾಳಿಗೆ ಮೇಲೆ ಹೆಸರು ಒಣಗಲು ಹಾಕಿದೆ. ಮಳೆ ಬರುತ್ತಿದೆ ತೆಗೆದಿಟ್ಟುಕೋ" ಎಂದು ತನ್ನ ಕರಡೆಯಲ್ಲಿ ನುಡಿಸುವ ಮೂಲಕ ಮನೆಯಾಕೆಗೆ ಸೂಚನೆಯಿತ್ತಾಗ; ಈ ಸಂಜ್ಞೆಯನ್ನು ಅರ್ಥಮಾಡಿಕೊಂಡ ಆ ಜಾಣ ಹೆಂಡತಿ ಅದರಂತೆ ಅನುಸರಿಸಿದಳಂತೆ.

ಕರಡಿ ಸಂಬಾಳದಂಥ ಮದಾಲಸಿ ಪ್ರಯೋಗಗಳು ನಮ್ಮ ಗ್ರಾಮೀಣ ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಮಂಗಳ ವಾದ್ಯವೆನಿಸಿ ಧಾರ್ಮಿಕ ಭಾವನೆಯಿರುವ ಪ್ರಯುಕ್ತ 'ಕರಡಿ'ಗೆ ಬದುಕಲು ಅವಕಾಶವಾಗಿದೆ. ಆದರೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪುರಸ್ಕಾರಗಳು ದೊರೆಯದ್ದರಿಂದ ನಮ್ಮ ಮಹಾಜನಕ್ಕೆ, ನಶಿಸುತ್ತ ಸಾಗಿರುವ ಈ ಸಾಹಿತ್ಯದ ಹಿರಿಮೆ ಹಿರಿದಾಗಿ ಕಾಣದೆ ಹಾಗುಳಿದಿದೆ. ಒಟ್ಟಿನಲ್ಲಿ ಚರ್ಮವಾದ್ಯಗಳಲ್ಲಿ 'ಕರಡಿ'ಗೆ ತನ್ನದೆ ಆದ ವೈಶಿಷ್ಟ್ಯವಿದೆ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು. ✿

ಆಕೆ ತನ್ನ ನಿಶ್ಚಿತಾರ್ಥ ಉಂಗುರವನ್ನು ಹಿರಿಯ ಸಹೋದ್ಯೋಗಿಗೆ ತೋರಿಸಿದಳು. "ವಾಹ್! ಚೆನ್ನಾಗಿದೆ. ನಿನ್ನ ಆತ ಸುಖದ ಸುಪ್ಪತ್ತಿಗೇಲಿ ಇದ್ದಾನೆ. ಆದರೆ ಒಂದು ಮಾತು ಜ್ಞಾಪಕದಲ್ಲಿಟ್ಕೋ — ಮದುವೆಯಾದ್ಮೇಲೆ ನೀನೇ ಬಾಸು. ಆತ ಸಿಗರೇಟು ಸೇದದ ಹಾಗೇ - ಬೇರೆಡೆ ದೃಷ್ಟಿ ಹಾಯಿಸದ ಹಾಗೆ ಹದ್ದುಬಸ್ತಿನಲ್ಲಿಟ್ಕೊ. ನಾನು ಮದುವೆಯಾದ ಮೊದಲ ದಿನದಿಂದ್ಲೇ ಹೀಗೆ ಮಾಡೋದಕ್ಕೆ ಶುರುಮಾಡ್ದೆ..."

"ಹೌದಾ! ಅವರು ಒಪ್ಪಿದರಾ?" ಕುತೂಹಲದಿಂದ ಕೇಳಿದಳು ತರುಣಿ.

"ಇಪ್ಪತ್ತು ವರ್ಷವಾಯ್ತು ನಾಪತ್ತೆಯಾಗಿ," ಎಂದಳು ಹಿರಿಯ ಸಹೋದ್ಯೋಗಿ.

ಆರ್. ಎಲ್. ಎನ್. ವಿಜಯನಗರ

ಜಿ. ವಿ. ಕುಲಕರ್ಣಿ

"ನಾವು ಈ ಭೂಮಿಯ ಮೇಲೆ ವಾಸಿಸುವುದಕ್ಕಾಗಿ ತೆರುವ ಬಾಡಿಗೆ ಎಂದರೆ ಒಳ್ಳೆಯತನ" ಎಂಬ ಮಾತೊಂದಿದೆ. ಈ 'ಬಾಡಿಗೆ'ಯನ್ನು ವಿಜಯನಗರ ಅವರು ಚೆನ್ನಾಗಿ ತೆತ್ತಿದ್ದಾರೆ. ವಿವಿಧ ಋಣಗಳನ್ನು ತಮ್ಮ ಮುಕ್ತ ಕೈಗಳಿಂದ ತೀರಿಸಿದ್ದಾರೆ. ಮಧ್ಯಮ ಎತ್ತರದ, ಹರವಾದ ಹಣೆಯ ಈ ಸ್ಫುರದ್ರೂಪಿ ವ್ಯಕ್ತಿ ಮುಂಬೈ ಕನ್ನಡಿಗರಿಗೆ ಸುಪರಿಚಿತ. ಮಿಲ್ ಓನರ್ಸ್ ಅಸೋಸಿಯೇಶನ್ನಿನ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯನಿರ್ವಾಹಕ ಉನ್ನತ ಅಧಿಕಾರಿ.

ಒಂದು ಘಟನೆ ನೆನಪಾಗುತ್ತದೆ. ಕೆಲ ವರ್ಷಗಳ ಹಿಂದಿನ ಮಾತು. ನನ್ನ ಭಾವ ವೈದುನ ವೆಂಕಟರಾಯರು ಗದುಗಿನಿಂದ ತಮ್ಮ ಒಬ್ಬ ಮಿತ್ರರನ್ನು ಕರೆದುಕೊಂಡು ಮುಂಬೈಗೆ ಬಂದಿದ್ದರು. ಅವರ ಮಿತ್ರರು ಗುಲ್ಬರ್ಗಾ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಯಾಗಿದ್ದರು. ಅವರಿಗೆ ಅನ್ನ ನಳಿಕೆಯಲ್ಲಿ ಗಂಟಾಗಿತ್ತು. ದ್ರವರೂಪಿ ಆಹಾರ ಸೇವಿಸುವುದೂ ಕಷ್ಟವಾದಾಗ ಬಾಂಬೇ ಆಸ್ಪತ್ರೆಯಲ್ಲಿ ದಾಖಲಾಗಲು ಬಂದಿದ್ದರು. ಪ್ರಸಿದ್ಧ ಸರ್ಜನ್ ಡಾ. ಟಿ. ಜಿ. ಕುಲಕರ್ಣಿಯವರು ಶಸ್ತ್ರಚಿಕಿತ್ಸೆ ಮಾಡುವವರಿದ್ದರು. ಆದರೆ 'ಬೆಡ್' ಖಾಲಿ ಇರಲಿಲ್ಲ. ರೋಗಿಯ ಅಣ್ಣ ಎಂ.ಎಲ್.ಎ. ಆಗಿದ್ದರು. ರಾಜಕೀಯ, ಸಾಮಾಜಿಕ ಒತ್ತಡಗಳೆಲ್ಲ ವಿಫಲಗೊಂಡವು. ಅವರ ಒದ್ದಾಟ ನೋಡಿ ತಡೆಯುವುದಾಗದೆ ನಾನು ಅವರನ್ನೆಲ್ಲ ಕರೆದುಕೊಂಡು ವಿಜಯನಗರ ಅವರ ಬಳಿಗೆ ಹೋದೆ. ಅವರಿಗೆ ಭೇಟಿ ಚೀಟಿ ಕಳಿಸಿದೆ. ಕೂಡಲೇ ಬರ ಹೇಳಿದರು. ಹತ್ತಾರು ಪುಸ್ತಕ ತೆರೆದು 'ಡಿಕ್ಟೇಶನ್' ಕೊಡುತ್ತಿದ್ದರು. ಎದುರಿಗೆ ನಾಲ್ಕಾರು ಪ್ರತಿಷ್ಠಿತರೂ ಕುಳಿತಿದ್ದರು. ಮಧ್ಯೆ ಟೆಲಿಫೋನು ಮಾತುಕತೆ–ಎಲ್ಲರೊಡನೆ ಅವರ ಮಾತುಕತೆ ನಡೆದಿತ್ತು. ನನಗೆ ಅವರು ಅಷ್ಟಾವಧಾನಿಗಳಂತೆ ಕಂಡರು. ವಿಷಯ ಕೇಳಿದರು. "ಇವರು ಬಂದು ಎಷ್ಟು ದಿನ ಆಯಿತು?" ಎಂದು ಕೇಳಿದರು. ಎಂಟು ದಿನ ಎಂದೆ. "You have wasted eight days!" ಎಂಬ ಉದ್ಗಾರ ಬಂತು. ಕೂಡಲೇ ತಮ್ಮ ಲೆಟರ್‌ಹೆಡ್ ತೆಗೆದು ಒಂದು ಪತ್ರ ಸ್ವಹಸ್ತಾಕ್ಷರದಲ್ಲಿ ಆಸ್ಪತ್ರೆಯ ಒಬ್ಬ ಟ್ರಸ್ಟಿಗೆ ಬರೆದರು. "ಈ

ಪತ್ರಕೊಡಿರಿ. ನಾಳೆ ಮುಂಜಾನೆಯ ಒಳಗೇ ಆಸ್ಪತ್ರೆಯಲ್ಲಿ ಪ್ರವೇಶ ದೊರೆಯದಿದ್ದರೆ ಚೇರ್‌ಮನ್ನರಿಗೆ ಟೆಲಿಫೋನ್ ಮಾಡುವೆ-ನಾಳೆ ತಿಳಿಸಿರಿ," ಎಂದರು. ನಾವು ಅಲ್ಲಿಂದ ಹೊರಟೆವು. ಮರುದಿನ ಮುಂಜಾನೆ ನಮಗೆ 'ಎಮರ್ಜನ್ಸೀ ವಾರ್ಡ್'ನಲ್ಲಿ ಜಾಗ ದೊರೆಯಿತು. ವಿಜಯನಗರರ ಪ್ರಭಾವ ಅಂತಹುದು.

ಇನ್ನೊಂದು ಘಟನೆ ನೆನಪಾಗುತ್ತದೆ. ನಮ್ಮ ಕಾಲೇಜಿನ ವಾರ್ಷಿಕ ಸಭೆಗೆ ವಿಜಯನಗರ ಅವರು ಅತಿಥಿಯಾಗಿದ್ದರು. ಆ ದಿನಗಳಲ್ಲಿ ನಮ್ಮ ಕಾಲೇಜಿನಲ್ಲಿ ಕನ್ನಡ ವಿಷಯ ತೆಗೆದು ಹಾಕುವ ಒಂದು ಪ್ರಯತ್ನ ನಡೆದಿದ್ದವು. ನಮ್ಮ ಕಾಲೇಜಿನ ಅಧ್ಯಕ್ಷರಿಗೆ ಆಮಂತ್ರಣ ಪತ್ರದ ಒಂದು ಪ್ರತಿ ಕಳಿಸಿದ್ದೆ. ಅವರೊಬ್ಬ ಮಿಲ್ ಮಾಲೀಕರು. ವಿಜಯನಗರರ ಹೆಸರು ನೋಡಿದೊಡನೆ ತಮ್ಮ ಆಪ್ತಕಾರ್ಯದರ್ಶಿಯನ್ನು ಕಳಿಸಿದರು. "ಸೇಠರು ತಮ್ಮ ಕಾರ್ಯಕ್ರಮಕ್ಕೆ ಯಶ ಕೋರಿದ್ದಾರೆ... ಮತ್ತೆ...... ವಿಜಯನಗರ ಅವರನ್ನು ಚಹಕ್ಕೆ ಬಂಗ್ಲೆಗೆ ಕರೆದುಕೊಂಡು ಬಂದರೆ ಅವರಿಗೆ ಸಂತೋಷವಾಗುತ್ತದೆ..." ಸಭೆ ಮುಗಿದ ಮೇಲೆ ನಮ್ಮ ಕಾಲೇಜ ಅಧ್ಯಕ್ಷರ ಆಮಂತ್ರಣದ ಬಗ್ಗೆ ಹೇಳಿದೆ. "ಅವರನ್ನು ಚೆನ್ನಾಗಿ ಬಲ್ಲೆ. ಅನೇಕ ಸಲ ಕರೆದಿದ್ದಾರೆ ಒಮ್ಮೆಯೂ ಅವರ ಮನೆಗೆ ಹೋಗಿಲ್ಲ. ಇನ್ನು ನಿಮಗೆ ಅದರಿಂದ ಪ್ರಯೋಜನವಿದ್ದರೆ ನಾನು ಬರುವೆ," ಎಂದರು. "ಮುಂಬೈ ನಗರದ ಕೆಲವೇ ಕಾಲೇಜುಗಳಲ್ಲಿ ಕನ್ನಡ ಅಧ್ಯಯನದ ಅನುಕೂಲತೆ ಇದೆ. ತಮ್ಮ ಭೆಟ್ಟಿಯಿಂದ ಕನ್ನಡ ಭಾಷೆಯ ಬಗ್ಗೆ ಕೂಡ ಅವರಿಗೆ ಗೌರವ ಉಂಟಾಗುತ್ತದೆ," ಎಂದೆ. ನಮಗೆಲ್ಲ ಬಂಗ್ಲೆಯಲ್ಲಿ ರಾಜಮರ್ಯಾದೆ. ವಿಜಯನಗರ ಅವರ ಪ್ರಭಾವದ ಬಗ್ಗೆ ನಮಗೆಲ್ಲ ಆಗ ಅನುಭವ ಬಂತು.

ಇಂಥ ಹಲವಾರು ಪ್ರಸಂಗಗಳು ನೆನಪಾಗುತ್ತವೆ. ವಿಜಯನಗರ ರಾಮರಾಯರು ಹೆಸರಿಗೆ ತಕ್ಕ ಮನುಷ್ಯ. ಅವರ ಕಾರ್ಯ ರಾಮಬಾಣದಂತೆ. ಅವರು ಮಾತು ಕೊಟ್ಟರೆ ಅದು ರಾಮನಾ ವಚನ. ಇಂದು ಬಾಂಬೇ ಮಿಲ್ಲುಗಳ ಮಾಲೀಕರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿರುವ ಅವರು ನಡೆದು ಬಂದ ಯಶಸ್ಸಿನ ದಾರಿ ನೋಡಿದರೆ ಯಾರಿಗಾದರೂ ಅಭಿಮಾನ ಎನಿಸಬೇಕು. ಬಡ ಮನೆತನದಲ್ಲಿ ಕಷ್ಟ ನಷ್ಟಗಳ ಮಧ್ಯದಲ್ಲಿಯೇ ಬೆಳೆದರು. ಕೆಲವರು ಘನತೆಯನ್ನು ಹುಟ್ಟಿನಿಂದ ಪಡೆದಿರುತ್ತಾರೆ. ಕೆಲವರು ಘನತೆಯನ್ನು ಗಳಿಸುತ್ತಾರೆ. ಇನ್ನು ಕೆಲವರ ಮೇಲೆ ಘನತೆಯನ್ನು ಹೇರಲಾಗಿರುತ್ತದೆ ಎಂದು ಶೇಕ್ಸ್-ಪಿಯರ್ ಮಹಾಕವಿ ಹೇಳಿದ್ದಾನೆ. ಇದರಲ್ಲಿ ಎರಡನೆಯ ತರಗತಿಗೆ ಸೇರಿದವರು ವಿಜಯನಗರ. ಇತಿಹಾಸಜ್ಞರೂ ವಿಜಯನಗರ ಅವರ ಆಪ್ತ ಸ್ನೇಹಿತರೂ ಆದ ವಿ. ಬಿ. ಕುಲಕರ್ಣಿಯವರ ಮಾತಿನಲ್ಲಿ ಹೇಳುವುದಾದರೆ ವಿಜಯನಗರ ಅವರ ಘನತೆಗೆ ಮೂರು ಕಾರಣಗಳಿವೆ. ೧) ಅಪ್ರತಿಮ ಕುಶಾಗ್ರಮತಿ ಅಥವಾ ಧೀಶಕ್ತಿ, ೨) ಬಿಡುವಿಲ್ಲದ ದುಡಿತ ಇಲ್ಲವೆ ಕರ್ತೃತ್ವ ಪರಾಯಣತೆ, ೩) ಒಳ್ಳೆಯತನದಿಂದ ಕೂಡಿದ ಸೇವಾಭಾವ.

ವಿಜಯನಗರ ಅವರ ತಂದೆ ಲಕ್ಷ್ಮೀನಾರಾಯಣರಾಯರು ಅನಂತಪುರ ಜಿಲ್ಲೆಯ ಗುತ್ತಿಯವರು. ಇವರ ತಾಯಿಯ ತಂದೆ ವರಗ ಸುಬ್ಬರಾಯರು ಖ್ಯಾತ ವಕೀಲರು. ಇವರ ತಂದೆ ತಮ್ಮ ಬಾಲ್ಯವನ್ನು ಅಜ್ಜನ ಮನೆಯಲ್ಲೇ ಕಳೆದರು. ಅವರ ಶಿಕ್ಷಣ ಗುತ್ತಿ, ರಾಜಮಹೇಂದ್ರಿಯಲ್ಲಾಯಿತು. ಅದೋನಿಯ ದೇಶಪಾಂಡೆ ಮನೆತನದ ಸುಂದರಾಬಾಯಿಯನ್ನು ಮದುವೆಯಾದರು. ಹೊಸಪೇಟೆಯಲ್ಲಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು.

ಆರ್. ಎಲ್. ಎನ್. ೧೯೨೨ರಲ್ಲಿ ಅದೋನಿಯಲ್ಲಿ ಅಜ್ಜನ ಮನೆಯಲ್ಲಿ ಜನಿಸಿದರು. ಹೊಸಪೇಟೆಯಲ್ಲಿ ಮೆಟ್ರಿಕ್‌ವರೆಗೆ ಶಿಕ್ಷಣ. ನಂತರ ಅನಂತಪುರದಲ್ಲಿ ಬಿ. ಎಸ್. ಬಿ. ಕಾಮರ್ಸ ಬಿ.ಎ. ವರೆಗೆ ಕಲಿತರು. ನಂತರ ಎಂ. ಎ. ಕಲಿಯಲು ಮುಂಬೈಗೆ ಬಂದರು. ಒಬ್ಬ ಸೋದರ ಮಾವ ಮುಂಬೈಯಲ್ಲಿದ್ದುದರಿಂದ ಮುಂಬೈ ಕಡೆ ಒಲವು. ಇನ್ನೊಂದು ಕಾರಣವೆಂದರೆ ಮುಂಬೈಯಲ್ಲಿ ಎಂ. ಎ., ಎಲ್. ಎಲ್. ಬಿ. ಎರಡೂ ಪರೀಕ್ಷೆಗಳಿಗೆ ಒಂದೇ ಸಲ ವಿದ್ಯಾರ್ಥಿಯಾಗಬಹುದಾಗಿತ್ತು. ಎರಡೂವರೆ ವರ್ಷಗಳಲ್ಲಿ ...

ದೊರೆಯುತ್ತಿದ್ದವು. ವಿಜಯನಗರ ಅವರು ೧೯೪೧ರಲ್ಲಿ ಎಂ.ಎ. ಅಭ್ಯಾಸ ಪ್ರಾರಂಭಿಸಿದರು. ೧೯೪೨ರಲ್ಲಿ ಅವರಿಗೆ ಅಸಿಸ್ಟೆಂಟ್ ಡೈರೆಕ್ಟರ್ ಜನರಲ್ ಕಾಟನ್ ಟೆಕ್ಸ್‌ಟೈಲ್ಸ್ ಇವರ ಆಫೀಸಿನಲ್ಲಿ ಕೆಲಸ ದೊರೆಯಿತು. ಸಂಬಳ ೫೨ ರೂಪಾಯಿಗಳು. ಆಗ ಪರೀಕ್ಷೆಯ ಫೀ ೩೦ ರೂಪಾಯಿ ತುಂಬುವುದೂ ಕಷ್ಟವಾಗಿತ್ತು. ೧೯೪೩ರಲ್ಲಿ ಅರ್ಥಶಾಸ್ತ್ರ ವಿಷಯ ತೆಗೆದುಕೊಂಡು ಎಂ. ಎ. ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮಸ್ಥಾನ ಪಡೆದರು. ಕೆಲ ತಿಂಗಳ ಮೇಲೆ 'ಲಾ' ಪರೀಕ್ಷೆಯಲ್ಲೂ ಉತ್ತೀರ್ಣರಾದರು, ಪ್ರಥಮ ತರಗತಿ ಐದು ಗುಣಗಳಿಂದ ತಪ್ಪಿತ್ತು. ತಂದೆಯವರ ಇಚ್ಛೆ ಪೂರೈಸಲು ಐ. ಸಿ. ಎಸ್. ಪರೀಕ್ಷೆಯ ತಯಾರಿ ನಡೆಸಿದರು. ಆದರೆ ಆ ವರುಷ ದ್ವಿತೀಯ ಮಹಾಯುದ್ಧದಿಂದ ಮರಳಿದವರಿಗಾಗಿ ಈ ಪರೀಕ್ಷೆ ಮೀಸಲಾಗಿತ್ತು. ಅವಕಾಶ ತಪ್ಪಿತು. ಒಂದೇ ವರ್ಷದಲ್ಲಿ ಆಫೀಸಿನಲ್ಲಿ ಸುಪರಿಂಟೆಂಡೆಂಟ್ ಜಾಗೆ ದೊರೆಯಿತು. ಸಂಬಳ ೩೫೦ ಆಯಿತು. ಆಗ ಅವರ ಆಫೀಸಿನ ಹೆಸರು ಟೆಕ್ಸ್‌ಟೈಲ್ ಕಮೀಶನರ್ಸ್ ಆಫೀಸು ಎಂದು ಬದಲಾಯಿತು. ಇಷ್ಟರಲ್ಲಿ ಪಿಎಚ್.ಡಿ.ಗೆ. ರಜಿಸ್ಟರ್ ಮಾಡಿಸಿದ್ದರು. ೭೫ ರೂಪಾಯಿ ವಿದ್ಯಾರ್ಥಿವೇತನ ದೊರೆತಿತ್ತು. ಅನೇಕ ಜವಾಬ್ದಾರಿಗಳು ಇದ್ದುದರಿಂದ ಅಭ್ಯಾಸ ಮುಂದುವರಿಸಲು ಸಾಧ್ಯವಾಗಲಿಲ್ಲ.

ಈ ವೇಳೆಗೆ ಇವರ ಮನೆಯಲ್ಲಿ ಒಂದು ಸನ್ನಿವೇಶ ನಡೆಯಿತು. ಇವರ ತಂದೆ ಲಕ್ಷ್ಮೀನಾರಾಯಣರಾವ ಶಿಕ್ಷಕ ವೃತ್ತಿ ಬಿಟ್ಟು ಹೊಸಪೇಟೆಯಲ್ಲಿ ಮುನ್‌ಸಿಪಲ್ ಕಮೀಶನರ್ ಆಗಿದ್ದರು. ಇವರು ಲೋಕಲ್ ಸೆಲ್ಫ್ ಡಿಪ್ಲೋಮಾ ಮಾಡಿದ್ದರಿಂದ, ರೆಡ್ಡಿ ಎಂಬ ಐ.ಸಿ.ಎಸ್. ಅಧಿಕಾರಿ ಇವರಿಗೆ ಮುನಿಸಿಪಲ್ ಕಮೀಶನರ್ ಆಗಲು ಶಿಫಾರಸು ಮಾಡಿದ್ದರು. ಒಂದು ವರ್ಷದಲ್ಲಿ ಆ ಕೆಲಸ ಬಿಡುವ ಪ್ರಸಂಗ ಬಂತು. ಲಂಚಗುಳಿತನ ಅವ್ಯವಹಾರಗಳ ವಿರುದ್ಧ ಇವರು ಕೈಯೆತ್ತಿದ್ದರಿಂದ ಇವರಿಗೆ ಬಹಳ ತೊಂದರೆಯಾಯಿತು.



ರಾಗಲು ಮನಸ್ಸಾಗಲಿಲ್ಲ. ಆಗ ಶ್ರೀ ರಾಘವೇಂದ್ರ ಸ್ವಾಮಿಗಳ ಸೇವೆಯಿಂದ ಮನಸ್ಸಿನ ಸ್ಥೈರ್ಯ ಉಳಿಸಿಕೊಂಡರು. ಇತ್ತ ಆರ್.ಎಲ್.ಎನ್. ... ತಂದೆಗೆ ಕಾಯಿದೆ ಪರೀಕ್ಷೆ ಪಾಸಾಗಿ ವಕೀಲ ... ಪ್ರಾರಂಭಿಸಲು ಸ್ಫೂರ್ತಿ ಇತ್ತರು. ಹಿರಿಯ ಮಗ ಮನೆಯ ಇಡೀ ಜವಾಬ್ದಾರಿ ಹೊತ್ತು ತಂದೆಗೆ ಕಲಿಯಲು ಹೇಳಿದ ಉದಾಹರಣೆ ನಾನೆಲ್ಲಿಯೂ ಕೇಳಿಲ್ಲ. ತಂದೆ ಪರೀಕ್ಷೆಯಲ್ಲಿ ಪಾಸಾದರು. ಅಷ್ಟೇ ಅಲ್ಲ ಒಂದೆರಡು ವರ್ಷದಲ್ಲಿ ಹೊಸಪೇಟೆಯ ಅಗ್ರಗಣ್ಯ ವಕೀಲರೆಂದು ಹೆಸರು ಗಳಿಸಿದರು. ಇಂದು ಎಂಭತ್ತು ವರ್ಷಗಳಾದರೂ ಅವರು ಮಂತ್ರಾಲಯದ ... ಸಲಹೆಗಾರರಾಗಿ ಸೇವೆಮಾಡುತ್ತಿದ್ದಾರೆ.

೧೯೪೬ರಲ್ಲಿ ವಿಜಯನಗರ ಅವರ ...

ಯಾಯಿತು. ಅವರಿಗೆ ತಕ್ಕ ಸಾಧ್ವಿ ದೊರೆತ್ರಳು. ವಿಜಯನಗರ ಅವರ ಬಳಗ ದೊಡ್ಡದು. ಐದು ಜನ ತಮ್ಮಂದಿರು, ನಾಲ್ವರು ತಂಗಿಯರು. ತಮ್ಮಂದಿರೆಲ್ಲ ಎಸ್. ಎಸ್. ಸಿ. ಆದೊಡನೆ ಮುಂಬೈಗೆ ಅಣ್ಣನಲ್ಲೇ ಬಂದು ಓದಿದರು. ವಿಜಯನಗರ ಅವರ ಮನಸ್ಸು ದೊಡ್ಡದು. ಅದಕ್ಕಿಂತ ದೊಡ್ಡ ಮನಸ್ಸು ಅವರ ಶ್ರೀಮತಿ ಯವರದು. ಅವರ ಎಲ್ಲ ತಮ್ಮಂದಿರು ಇಂದು ಉನ್ನತ ಸ್ಥಾನಗಳಲ್ಲಿ ಇದ್ದಾರೆ. ಕೃಷ್ಣರಾಯರು ಹೊಸಪೇಟೆಯಲ್ಲಿ ಅಡ್ವೋಕೇಟರಾಗಿದ್ದಾರೆ. ಪದ್ಮನಾಭ ಮುಂಬೈಯಲ್ಲಿ ಗ್ಯಾಮನ್ ಇಂಡಿಯಾದಲ್ಲಿ ಎಕ್ಸಿಕ್ಯೂಟಿವ್ ಸೆಕ್ರೆಟರಿ ಆಗಿದ್ದಾರೆ, ಡಾ. ಮದನಮೋಹನ ಕೆನಡಾದಲ್ಲಿ ಎಟೋ-ಮಿಕ್ ಎನರ್ಜಿ ವಿಭಾಗದ ಉಚ್ಚಹುದ್ದೆಯ ವಿಜ್ಞಾನಿ, ಡಾ. ರಾಘವೇಂದ್ರ ಅಮೇರಿಕದ ಫ್ಲೋರಿಡಾ ಸ್ಟೇಟಿನಲ್ಲಿರುವ ತಂಪಾದಲ್ಲಿ ಥೊರೆಸಿಕ್ ಸರ್ಜನ್, ಡಾ. ಸುಶೀಲ ನಾರ್ವೆಯಲ್ಲಿ ಡೆಂಟಲ್ ಸರ್ಜನ ನಾಗಿದ್ದು ಈಗ ಅಮೇರಿಕಕ್ಕೆ ತೆರಳಿದ್ದಾರೆ. ಇನ್ನು ಸೋದರಿಯರಾದ ನರಸಮ್ಮ, ಸರೋಜಾ, ಲಕ್ಷ್ಮೀದೇವಿ, ಪರಿಮಳ ಎಲ್ಲರೂ ಒಳ್ಳೆಯ ಮನೆತನ ಸೇರಿದ್ದಾರೆ.

ಅನೇಕ ಸಲ ಮನುಷ್ಯ ದೊಡ್ಡವನಾದ ಮೇಲೆ ತಮ್ಮ ಮನೆಯನ್ನು ಸಮಾಜವನ್ನು ತನ್ನವರೆಂಬು ವರನ್ನು ಕೂಡ ಮರೆತು ಬಿಡುತ್ತಾನೆ. ವಿಜಯ ನಗರ ಹಾಗಲ್ಲ. ತಮ್ಮೊಂದಿಗೆ ತಮ್ಮ ಪರಿ-ಸರವನ್ನೂ ಮೇಲೆತ್ತುತ್ತಾರೆ. ಹಿರಿಯ ಅಣ್ಣನಾಗಿ ಮಾಡಬೇಕಾದ್ದನ್ನೆಲ್ಲ ತಮ್ಮ ಸೋದರ ಸೋದರಿ ಯರಿಗೆ ಮಾಡಿದ್ದಾರೆ. ಅವರ ಎರಡನೆಯ ತಂಗಿಗೆ ವೈಧವ್ಯ ಪ್ರಾಪ್ತವಾದಾಗ ಅವಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಎರಡು ಗಂಡು ಮಕ್ಕಳಿಗೆ ತಾವೇ ಶಿಕ್ಷಣ ನೀಡಿದರು. ತಮ್ಮ ಹೆಣ್ಣು ಮಕ್ಕಳನ್ನು ಕೊಟ್ಟು ಅವಳ ಮನೆ ತುಂಬಿದರು. ಹಿರಿಯ ಅಳಿಯ ಡಾ. ನಾಗಪುರ ಎಂ. ಡಿ. ಆಗಿದ್ದಾರೆ.

ವಿಜಯನಗರ ಅವರು ತಮ್ಮ ಕಾರ್ಯಕ್ಷೇತ್ರ ದಲ್ಲಿ ಯಶಸ್ಸು ಸಾಧಿಸಿದರು. ೧೯೪೩ರಿಂದ ಆರು

೧೯೪೭ರಲ್ಲಿ ಮಿಲ್ ಓನರ್ಸ್ ಅಸೋಸಿಯೇಶನ್ನಿ ಅಸಿಸ್ಟೆಂಟ್ ಸೆಕ್ರೆಟರಿ ಎಂದು ಸೇರಿದರು. ೧೯೬ ಕ್ಕೆ ಪರ್ಮನಂಟ್ ಸೆಕ್ರೆಟರಿ ಆದರು. ಇಂದ ಸೆಕ್ರೆಟರಿ ಜನರಲ್ ಆಗಿದ್ದಾರೆ.

ಬಾಂಬೇ ಮಿಲ್ ಓನರ್ಸ್ ಅಸೋಸಿಯೇಶನ ೧೮೭೫ರಲ್ಲಿ ಪ್ರಾರಂಭವಾಯಿತು. ಇತ್ತೀ ಅದರ ಶತಮಾನೋತ್ಸವ ನಡೆಯಿತು. ಅದ ನೂರು ವರ್ಷದ ಇತಿಹಾಸವನ್ನು ಶ್ರೀ ವಿ. ಬಿ ಕುಲಕರ್ಣಿಯವರು ಬರೆದಿದ್ದಾರೆ. ಪ್ರಾರಂಭದಲ್ಲಿ ಈ ಸಂಸ್ಥೆ ಕೇವಲ ತಮ್ಮ ಸಮಸ್ಯೆಗಳನ್ನು ಚರ್ಚಿ ಸುವ ಸಂಘವಾಗಿತ್ತು. ನಂತರ ಇದು ಸೇವಾ ಪ್ರವೃತ್ತ ಸಂಸ್ಥೆಯಾಯಿತು. ವಾಣಿಜ್ಯ ಬ್ಯಾಂಕ ಗಳಾದ ಸೆಂಟ್ರಲ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ ಇವುಗಳನ್ನು ಸ್ಥಾಪಿಸಲು ಈ ಸಂಸ್ಥೆಯೇ ಕಾರಣ ಮುಂಬೈಯಲ್ಲಿಯ ಪ್ರಸಿದ್ಧ ಇಂಜಿನಿಯರಿಂಗ್ ಕಾಲೇಜ್ ವಿ. ಜೆ. ಟಿ. ಆಯ್. ಪ್ರಾರಂಭವಾಗಲು ಮೊದಲು ನಿಧಿ ಸಂಗ್ರಹಿಸಿದವರು ಈ ಸಂಸ್ಥೆ ವರು. ಯುನಿವ್ಹರ್ಸಿಟಿಯ ಕೆಮಿಕಲ್ ಟೆಕ್ನಾಲಜಿ ವಿಭಾಗಕ್ಕೆ ಕೂಡ ಸಂಶೋಧನೆಗಾಗಿ ಹಣವನ್ನು ಈ ಸಂಸ್ಥೆ ಒದಗಿಸಿದೆ. ಬಾಂಬೇ ಟೆಕ್ಸ್‌ಟೈಲ್ ರಿಸರ್ಚ್ ಅಸೋಸಿಯೇಶನ್ನನ್ನೂ ಈ ಸಂಸ್ಥೆ ಸ್ಥಾಪಿಸಿತು.

ವಿಜಯನಗರ ಅವರು ಈ ಸಂಸ್ಥೆ ಸೇರಿದ ಮೇಲೆ ಸಂಸ್ಥೆಗೆ ಒಂದು ಹೊಸ ತಿರುವು ಬಂತು ಎಲ್ಲ ಮಿಲ್ ಮಾಲೀಕರು ಇವರ ಸೇವೆ ಪಡೆ ಯಲು ಧಾವಿಸತೊಡಗಿದರು. ಆಗ ಅಬಕಾರಿ ಕರ ವನ್ನು ಸರಕಾರ ವಸೂಲು ಮಾಡಿದಾಗ ಸರಿಯಾದ ವಿಧಾನಗಳು ಇರಲಿಲ್ಲ. ವಿಜಯನಗರ ಅವರು ಸರಕಾರದ ಲೋಪದೋಷಗಳನ್ನು ಅಭ್ಯಸಿಸಿ ಮಿಲ್ ಮಾಲೀಕರಿಗೆ ೨೦ ರಿಂದ ೩೦ ಕೋಟಿ ರೂಪಾಯಿಗಳಷ್ಟು ಅಬಕಾರಿ ಕರವನ್ನು ವಾಪಸ್ ಕೊಡಿಸಿ ಕೊಟ್ಟಾಗಿನಿಂದ ಇವರ ಘನತೆ ಹೆಚ್ಚಾ ಯಿತು. ಇಂದು ಇವರನ್ನು ಮಿಲ್ ಮಾಲೀಕ ಸಂಘದ 'ಮಿತ್ರ-ತತ್ವಜ್ಞಾನಿ-ಮಾರ್ಗದರ್ಶಕ' ಎಂದು ಹೊಗಳುತ್ತಿದ್ದಾರೆ. ೧೯೬೭ರಲ್ಲಿ

ಯವರೆಗೆ ಬೆಳೆದಿದೆ. ಈ ವಿಷಯವನ್ನು ಅಭ್ಯಸಿಸಿ ವಿಜಯನಗರ 'ಸೆಂಟ್ರಲ್ ಎಕ್ಸೈಜ್ ಮ್ಯಾನುಅಲ್' ಎಂಬ ೧೪೦೦ ಪುಟಗಳ ಗ್ರಂಥ ಬರೆದಿದ್ದಾರೆ.

ಭಾರತದ ಟೆಕ್ಸ್‌ಟೈಲ್ ಉದ್ಯಮದ ಬಗ್ಗೆ ವಿಜಯನಗರ 'ಅವರಿಗೆ ಗೊತ್ತಿಲ್ಲದ್ದು ಏನೂ ಇಲ್ಲ. ಅವರನ್ನು ನಡೆದಾಡುವ 'ಟೆಕ್ಸ್‌ಟೈಲ್ ವಿಶ್ವಕೋಶ'ವೆಂದು ಕರೆಯಲಾಗುತ್ತಿದೆ. ಮಿಲ್ ಬಗ್ಗೆ ಯಾವುದೇ ಸಮಸ್ಯೆ ಇರಲಿ, ಕಾರ್ಮಿಕ ಪ್ರತಿನಿಧಿಗಳು – ಮಿಲ್‌ಮಾಲೀಕರು ಸರಕಾರದ ಪ್ರತಿನಿಧಿಗಳು ಯಾರೇ ಮಾತುಕತೆ ನಡೆಸಲಿ ವಿಜಯನಗರರು ಅಲ್ಲಿ ಇರಬೇಕು. ವಿದೇಶಗಳಲ್ಲಿ ಕೂಡ ಭಾರತದ ಪರವಾಗಿ ಮಾತನಾಡಲು ಇವರೇ ಬೇಕು. ಇವರು ನೂರಾರು ಲೇಖನ ಹಾಗೂ ಹಲವಾರು ಮಹತ್ವದ ಗ್ರಂಥಗಳನ್ನೂ ಬರೆದಿದ್ದಾರೆ.

'ಡೈವರ್ಶನ್ ಆಫ್ ಫಂಡ್ ಫ್ರಾಂ ಟೆಕ್ಸ್‌ಟೈಲ್ ಇಂಡಸ್ಟ್ರಿ' ಎಂಬ ಇವರ ಗ್ರಂಥ ಉದ್ಯಮದ ಮೇಲಿರುವ ಮಹತ್ವದ ಆಪಾದನೆಗೆ ಉತ್ತರವಾಗಿ ಬಂದಿದೆ. ಇವರ ಪ್ರಕಾರ ಟೆಕ್ಸ್‌ಟೈಲ್ ಉದ್ಯಮ 'ಸೈಕ್ಲಿಕಲ್' ಆಗಿರುವುದು. ಯಾವಾಗ ಲಾಭವಾಗುತ್ತದೆ ಯಾವಾಗ ಹಾನಿಯಾಗುತ್ತದೆ ಹೇಳಲು ಬರುವಂತಿಲ್ಲ. ಉತ್ಪಾದನೆ ಚೆನ್ನಾಗಿದ್ದು ದೇಶದಲ್ಲಿ ಬರಗಾಲ ದುಷ್ಕಾಲ ಇದ್ದರೆ ಬಟ್ಟೆಕೊಳ್ಳುವವರಾರು ? ವಿದೇಶಗಳಿಗೆ ನಮ್ಮ ಬಟ್ಟೆ ರಫ್ತು ಮಾಡುವುದರಿಂದ ಈ ಉದ್ಯಮ ಹಣ ಗಳಿಸಬಹುದಾಗಿದೆ. ಆದರೆ ವಿದೇಶಗಳು ಯಾವುದೇ ಕಾರಣದಿಂದ ಬಟ್ಟೆ ಆಯಾತ ಮಾಡುವಾಗ ನಿರ್ಬಂಧ ಹಾಕಿದರೆ– ಈ ಉದ್ಯಮಕ್ಕೆ ಹಾನಿಯಾಗುತ್ತದೆ. ಮಫತ ಲಾಲ್‌ರಂಥವರು ಜೊತೆಗೆ ಕೆಮಿಕಲ್ ಉದ್ಯೋಗ ಪ್ರಾರಂಭಿಸಿದ್ದು ಟೆಕ್ಸ್‌ಟೈಲ್ಸ್‌ಗೆ ಇದು ಪೂರಕ ವಾಗಿದೆ ಎಂದು ವಿಜಯನಗರ ವಾದಿಸಿದ್ದಾರೆ.

'ಟ್ಯಾಕ್ಸೇಶನ್ ಆ್ಯಂಡ್ ಟೆಕ್ಸ್‌ಟೈಲ್ಸ್' ಎಂಬ ಗ್ರಂಥದಲ್ಲಿ ನಮ್ಮ ದೇಶದ ತೆರಿಗೆಯ ಪದ್ಧತಿಯನ್ನು ಪರಿಶೀಲಿಸಿ ನಮ್ಮ ದೇಶದ ತೆರಿಗೆ ಪದ್ಧತಿ ಅತ್ಯಧಿಕ ಉದ್ಯೋಗಾವಕಾಶ, ಅಧಿಕ ಉತ್ಪಾದನೆ, ಹಾಗೂ ಪರಮಾವಧಿ ನಿರ್ಯಾತಕ್ಷಮತೆ ಪಡೆಯಲು ನಮ್ಮ ರಾಷ್ಟ್ರೀಯ ತೆರಿಗೆ ಪದ್ಧತಿ ಹೆಚ್ಚು ವಾಸ್ತವಿಕವಾಗಬೇಕು ಎನ್ನುತ್ತಾರೆ. "ಡೈವರ್ಶನ್ ಆಫ್ ಫಂಡ್ಸ್– ಮಿತ್ ಆರ್ ರಿಯಲಿಟಿ" ಎಂಬ ಗ್ರಂಥದಲ್ಲಿ ಪೂರಕ ಉದ್ಯಮಗಳಲ್ಲಿ ಹಣವನ್ನು ತೊಡಗಿಸುವುದು ಟೆಕ್ಸ್‌ಟೈಲ್ ಉದ್ಯಮಕ್ಕೆ ಹಿತಕರ ಎಂದು ವಾದಿಸಿದ್ದಾರೆ.

ಕಳೆದ ವರ್ಷ ಅವರು ಒಂದು ಅಭ್ಯಾಸ ಪೂರ್ಣ ಪುಸ್ತಕ ಬರೆದಿದ್ದಾರೆ. "UNCTADS, UNIDOS, ILOS & GATT– Prospects for Exports of Indian Textile Durings Eighties." ಈ ಪುಸ್ತಕದ ಬಗ್ಗೆ ದೇಶ ವಿದೇಶಗಳಲ್ಲಿ ಒಳ್ಳೆಯ ಅಭಿಪ್ರಾಯ ಭಾರತೀಯ ಟೆಕ್ಸ್‌ಟೈಲ್ ವಿದೇಶಗಳಿಗೆ ನಿರ್ಯಾತ ಮಾಡಲು ಈಗ ವಾತಾವರಣ



ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ಅಂಕಿ ಸಂಖ್ಯೆ, ಕೋಷ್ಟಕಗಳ ಮುಖಾಂತರ ತೋರಿಸಿದ್ದಾರೆ. ನಮ್ಮ ದೇಶದಲ್ಲಿ ಸ್ಪರ್ಧಾತ್ಮಕ ಯೋಗ್ಯತೆ ಹೆಚ್ಚಾಗಬೇಕಾದರೆ ಸರಕಾರ ಈ ದಿಶೆಯಲ್ಲಿ ಸಹಕಾರ ನೀಡುವುದು ಅಗತ್ಯ ಎಂಬ ಅಭಿಪ್ರಾಯ ಇಲ್ಲಿದೆ."

ವಿಜಯನಗರ ಅನೇಕ ಸಲ ವಿದೇಶ ಪ್ರಯಾಣ ಮಾಡಿದ್ದಾರೆ. ೧೯೭೩ರಲ್ಲಿ ಇಂಟರ್‌ನ್ಯಾಶನಲ್ ಲೇಬರ್ ಆರ್ಗನೈಜೇಶನ್ನಿನ ಸದಸ್ಯರೆಂದು ನೇಮಕಗೊಂಡರು. ಜಿನೇವಾದಲ್ಲಿ ನಡೆದ ವಿಶ್ವ ಸಮ್ಮೇಳನದಲ್ಲಿ ಭಾರತದ ಪ್ರಾತಿನಿಧ್ಯ ವಹಿಸಿ ಒಂದು ಪ್ರಬಂಧವನ್ನು ಓದಿದರು.

೧೯೮೦ರಲ್ಲಿ ನಡೆದ ವಿಶ್ವ ಸಮ್ಮೇಳನದಲ್ಲಿ (ILO) ಭಾರತದ ಪ್ರತಿನಿಧಿಯಾಗಿ ಮಹತ್ವದ ಪಾತ್ರವಹಿಸಿದರು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಅಮೇರಿಕ, ಮುಂತಾದ ಅಭಿವೃದ್ಧಿ ಹೊಂದಿದ ದೇಶಗಳು (Restriction of Importing Cotton) ಅನ್ವಯ ತಮ್ಮ ದೇಶಗಳಿಗೆ ಆಮದು ಮಾಡುವಾಗ ಕೆಲವು ನಿಯಂತ್ರಣಗಳನ್ನು ಹಾಕಿದ್ದಾರೆ. ಇದು ಭಾರತಕ್ಕೆ ಮಾರಕವಾಗಿದೆ ಎಂದು ಇವರು ವಾದಿಸಿದರು. ಈ ಸಮಸ್ಯೆಗೆ ಮುಖ್ಯ ಕಾರಣವೆಂದರೆ ಮಲ್ಟಿನ್ಯಾಶನಲ್ ಕಂಪನಿಗಳು ಅವಿಕಸಿತ, ದೇಶಗಳಾದ ಹಾಂಕಾಂಗ್, ಕೋರಿಯಾ, ತೈವಾನ್ ಮುಂತಾದ ಕಡೆಗಳಲ್ಲಿ ಹಣ ತೊಡಗಿಸಿ ಕಡಿಮೆ ಬೆಲೆಯ ಬಟ್ಟೆ ತಯಾರಿಸುತ್ತಿದ್ದಾರೆ. ಅಲ್ಲಿ 'ಲೇಬರ್' ಅಗ್ಗವಾಗಿದೆ. ಇವನು ಅಭಿವೃದ್ಧಿ ಹೊಂದಿದ ದೇಶಗಳ ಮಾರುಕಟ್ಟೆಯಲ್ಲಿ ಸ್ಪರ್ಧೆಗೆ ಇಳಿದಾಗ ವಿಪರೀತ ಪರಿಣಾಮ ಉಂಟಾಗುತ್ತದೆ. ಈ ದೇಶಗಳಿಗೆ ನಿರ್ಯಾತವಾಗುವ ಬಟ್ಟೆ ಮೂರು ರೀತಿಯದು. ೧) ರೆಡಿಮೇಡ್ ಬಟ್ಟೆ (ಗಾರ್ಮೆಂಟ್) ೨) ಥಾನುಗಳಲ್ಲಿರುವ ಬಟ್ಟೆ (piece goods) ೩ ಬೆಡ್ ಶೀಟ್ ಮುಂತಾದವು (madeups). ಭಾರತಕ್ಕೆ ನಿಯಂತ್ರಣ ಸಲ್ಲದು ಎಂದು ವಿಜಯನಗರ ಅವರು ವಾದಿಸಿದರು. ವಾದದ ಮಹತ್ವದ ಅಂಶಗಳು ಹೀಗಿದ್ದವು. ೧) ಭಾರತ

ಮಲ್ಟಿನ್ಯಾಶನಲ್‌ಗಳ ಸಹಾಯ ಪಡೆದಿಲ್ಲ. ೩) ಭಾರತವು ಮಶಿನರಿ ಮುಂತಾದವುಗಳನ್ನು ಅಭಿವೃದ್ಧಿಗೊಂಡ ರಾಷ್ಟ್ರಗಳಿಂದ ಇನ್ನೂ ಆಮದು ಮಾಡುತ್ತದೆ. ಅದಕ್ಕೆ ವಿದೇಶ ವಿನಿಮಯ ಬೇಕು. ವಿದೇಶ ವಿನಿಮಯ ಗಳಿಸಲು ನಮ್ಮ ನಿರ್ಯಾತ ಮಹತ್ವದ್ದು. MFA (ಮಲ್ಟಿ ಫೈಬರ್ ಅಗ್ರಿಮೆಂಟ್) ಪ್ರಕಾರ ಭಾರತಕ್ಕೆ ನಿರ್ಯಾತ ಮಾಡಲು ವಿನಾಯತಿ ದೊರೆಯಿತು. ನಿರ್ಬಂಧಗಳನ್ನು ದೂರಗೊಳಿಸಲಾಯಿತು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಜಯನಗರ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ. ತಮ್ಮ ಮಕ್ಕಳ ನೃತ್ಯ ಕಾರ್ಯಕ್ರಮ ಏರ್ಪಡಿಸಿ, ಸ್ಮರಣ ಸಂಚಿಕೆ ಹೊರಡಿಸಿ ಧನ ಸಂಗ್ರಹ ಮಾಡಿದ್ದಾರೆ. ಅನೇಕ ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಸಂಸ್ಥೆಗಳಿಗೆ ಧನಸಹಾಯ ಮಾಡಿಸಿದ್ದಾರೆ. ಸುಮಾರು ಹನ್ನೆರಡು ಲಕ್ಷ ರೂಪಾಯಿ ಸಂಗ್ರಹಿಸಿ ದಾನ ಮಾಡಿದ್ದಾರೆ. ಅದಮಾರು ಮಠದ ಪೂರ್ಣಪ್ರಜ್ಞ ಕಾಲೇಜು ದಹಿಸರ್ (ಮುಂಬೈ) ಸ್ಥಿರತೆ ಪಡೆಯಲು ಅನೇಕ ಸಲ ನೃತ್ಯ ಕಾರ್ಯಕ್ರಮ ಏರ್ಪಡಿಸಿದ್ದರು. ಸಾಂತಾಕ್ರೂಜಿನಲ್ಲಿರುವ ಮಧ್ವ ನಿಲಯ ಕಟ್ಟಡದ ನಿರ್ಮಾಣಕ್ಕೆ ಸಹಾಯ ಸಲ್ಲಿಸಿದವರಲ್ಲಿ ವಿಜಯನಗರ ಅವರದು ಸಿಂಹಪಾಲು. ಕಟ್ಟಡದ ಕೆಲಸಕ್ಕೆ ವಿಘ್ನ ಬಂದಾಗ ಸ್ವಂತದ ಜಾಮೀನಿನ ಮೇಲೂ ಬ್ಯಾಂಕ್ ಸಾಲ ಪಡೆದಿದ್ದಾರೆ, ಬಡ್ಡಿ ತೆತ್ತಿದ್ದಾರೆ. ಶಂಕರ ಮಠ ರಾತ್ರಿ ಶಾಲೆ, ಕನ್ನಡ ಸಂಘ ಮುಂತಾದ ಹಲವಾರು ಸಂಸ್ಥೆಗಳಿಗೆ ಧನಸಹಾಯ ಮಾಡಿದ್ದಾರೆ. ಇಂಥ ಸೇವೆಯಲ್ಲಿ ಅವರಿಗೆ ಕೆಲ ಕಹಿ ಅನುಭವಗಳೂ ಬಂದಿವೆ. ಗುಲ್ಬರ್ಗಾದಲ್ಲಿ ಇವರ ಮಕ್ಕಳ ನೃತ್ಯ ಏರ್ಪಡಿಸಲಾಗಿತ್ತು. ಯೋಜಕರು ಗಾಡಿ ಖರ್ಚು ಹಾಗೂ ವಾದ್ಯವೃಂದದವರ ಸಂಭಾವನೆ ಕೊಡುವುದಾಗಿ ಹೇಳಿದ್ದರು. ಆದರೆ ಇವರೇ ಎಲ್ಲಾ ಹಣ ತೆರಬೇಕಾಯಿತು. ಇವರು ಇಳಿದುಕೊಂಡ ಹೋಟೆಲ್ ಬಾಡಿಗೆ ಕೂಡ ಕೈಯಿಂದ ತುಂಬುವ ಪ್ರಸಂಗ ಬಂತು. ಇದೊಂದು ವಿದ್ಯಾ ಸಂಸ್ಥೆಗೆ ನಿಧಿ ಸಂಗ್ರಹ ಮಾಡಲು ಹೊರಟಾಗ ಆದ ಪ್ರಸಂಗ.

ಹೆಸರು ಬರಬಾರದು ನೋಡಿ' ಎಂದರು. ಅವರು ಸಂಸ್ಥೆಯ ಹೆಸರು ಹೇಳಲಿಲ್ಲ.

ವಿಜಯನಗರ ಅವರ ಬಗ್ಗೆ ಬರೆಯುವಾಗ ಅವರ ಪ್ರತಿಭಾವಂತ ಕುವರಿಯರಾದ 'ವಿಜಯನಗರ ಸೋದರಿಯರ' ಬಗ್ಗೆ ಬರೆಯದಿದ್ದರೆ ಲೇಖನ ಅಪೂರ್ಣವಾಗುತ್ತದೆ. ಪದ್ಮ, ಜಯಶ್ರೀ, ನಂದಿನಿ ವಿಜಯನಗರ ಸಹೋದರಿಯರೆಂಬ ಹೆಸರಿನಿಂದ ೧೯೬೩ ರಿಂದ ೧೯೬೯ರ ವರೆಗೆ ಮುಂಬೈ ನಗರದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮನೆ ಮಾತಾಗಿದ್ದರು. ಪ್ರಾರಂಭದಲ್ಲಿ ಸುಧಾ ದೊರೆಸ್ವಾಮಿಯವಲ್ಲಿ ಒಂದು ವರ್ಷ, ನಂತರ ರಾಜರಾಜೇಶ್ವರಿ ನೃತ್ಯಕಲಾಶಾಲೆಯಲ್ಲಿ ಗುರು ಮಹಾಲಿಂಗ ಪಿಳ್ಳೈ ಹಾಗೂ ಕುಪ್ಪಯ್ಯ ಸ್ವಾಮಿ ಅವರ ಬಳಿಯಲ್ಲಿ ಭರತ ನಾಟ್ಯದಲ್ಲಿ ಪ್ರಾವೀಣ್ಯ ಪಡೆದರು. ಜೊತೆಗೆ ಕಥಕ್, ಕುಚಪುಡಿ, ಮೋಹಿನಿ ಅಟ್ಟದ ನಾಟ್ಯಗಳಲ್ಲೂ ಪ್ರಾವಿಣ್ಯ ಪಡೆದಿದ್ದರು ಮಕ್ಕಳ ಶಿಕ್ಷಣಕ್ಕಾಗಿ ವಿಜಯನಗರ ದಂಪತಿಗಳು ಸುರಿದ ಹಣ, ಹರಿಸಿ ಬೆವರು ಅಷ್ಟಿಷ್ಟಲ್ಲ. ಮಕ್ಕಳ ನೂರಾರು ಕಾರ್ಯಕ್ರಮಗಳು ರಸಿಕರ ಮನರಂಜಿಸಿದವು. ೧೯೬೯ರಲ್ಲಿ ನಂದಿನಿ ಕರ್ಕ ರೋಗಕ್ಕೆ ಬಲಿಯಾಗಿ ದೇವರಿಗೆ ಪ್ರಿಯಳಾದಳು. ಆಗ ಅವಳಿಗೆ ಕೇವಲ ೧೩ ವರ್ಷ. ನಂತರ ಪದ್ಮ-ಜಯಶ್ರೀ ಇಬ್ಬರೇ ನೃತ್ಯ ಕಲೆಯ ದೀಪ ಬೆಳಗಲು ಮುನ್ನಡೆದರು. ದೇಶ ವಿದೇಶಗಳಲ್ಲಿ ಹೆಸರು ಗಳಿಸಿದರು. ೧೯೭೦ರಲ್ಲಿ ಪ್ಯಾರಿಸ್ಸಿನಲ್ಲಿ ಇವರ ನರ್ತನಕ್ಕೆ ಅಪೂರ್ವ ಸ್ವಾಗತ ದೊರೆಯಿತು. ಜಯಶ್ರೀಯ ನಾಗನೃತ್ಯ ನೋಡಿ ಪ್ರೇಕ್ಷಕರು ಹೂವಿನ ಮಳೆ ಕರೆದರು. ೧೫ ನಿಮಿಷಗಳವರೆಗೆ ಕರತಾಡನ ನಡೆಯಿತು. ಜರ್ಮನಿಯಲ್ಲಿಯೂ ಅದೇ ಅನುಭವ. ನ್ಯೂರೆಂಬರ್ಗಿನಲ್ಲಿ ಪ್ರೇಕ್ಷಕರು ಬಾಲ್ಕನಿಗಳಿಂದ ಹೂವು ಚೆಲ್ಲಿ ತಮ್ಮ ಸಂತೋಷ ವ್ಯಕ್ತಪಡಿಸಿದರು. ಪತ್ರಿಕೆಗಳೆಲ್ಲ ಇವರ ಕಲೆ, ಪ್ರತಿಭೆ ಕೊಂಡಾಡಿದವು.

೧೯೭೨ರಲ್ಲಿ ಪದ್ಮ-ಜಯಶ್ರೀ ಇವರಿಬ್ಬರ ವಿವಾಹವಾಯಿತು. ಒಂದು ವರ್ಷದಲ್ಲಿ ಜಯಶ್ರೀಗೆ ಕಾಯಿಲೆ. ೧೯೭೪ರಲ್ಲಿ ಪ್ಯಾರಿಸ್ಸಿನಲ್ಲಿ ನೃತ್ಯ... ೨ ತಿಂಗಳ ಕಾರ್ಯಕ್ರಮ ಪೂರ್ತಿ ನಿಶ್ಚಿತವಾ... ಬಗ್ಗೆ ಪತ್ರ ಬಂದ ದಿನವೇ ಜಯಶ್ರೀ ಗಂಧರ್ವ... ಲೋಕ ಸೇರಿದ್ದಳು.

ಇಂದು ಪದ್ಮ 'ನೃತ್ಯ ನಂದಿನಿ' ಎಂಬ ನಾಟ್ಯ... ಶಾಲೆ ನಡೆಸುತ್ತಾಳೆ. ವಿಜಯನಗರ ಅವರ... ಪ್ರೋತ್ಸಾಹವಿದೆ. ವಿಜಯನಗರ ಅವರಿಗೆ ಪ್ರಸಾದ... ಎಂಬ ಮಗನಿದ್ದಾನೆ. ಅವನು ಎಂ.ಎಸ್.ಸಿ... ಪದವೀಧರ. ಉದ್ಯಮಶೀಲನಾಗುವ ಹವ್ಯಾಸ... ದಲ್ಲಿದ್ದಾನೆ.

ವಿಜಯನಗರ ಅವರು ಸಮಾಜ ಸೇವೆ ಮಾಡಿ... ದ್ದಾರೆ. ಅವರು ಅನೇಕ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಗಳನ್ನು ಪ್ರಾರಂಭಿಸಿ ನೂರಾರು ಜನರಿಗೆ ಮನೆದೊರೆಯುವಂತೆ ಸಹಾಯ ಸಲ್ಲಿಸಿ... ದ್ದಾರೆ.

ವಿಜಯನಗರ ಅವರ ಕಾಯಿದೆ ಜ್ಞಾನದ ಬಗ್ಗೆ ಒಂದು ಮಾತು ಹೇಳುವುದು ಅವಶ್ಯ. ಅನೇಕ ಕೋರ್ಟ್ ಕೇಸುಗಳನ್ನು ನಡೆಸುವಾಗ ಅವರ... ಅಸೋಸಿಯೇಶನ್ನಿಗೆ ವಿಜಯನಗರ ಅವರದೇ... ಬಲ. ಅವರು ಕೊಟ್ಟ ಕಾಯಿದೆ ಸಲಹೆಗಳು... ಅಭಿಪ್ರಾಯಗಳು ಸುಪ್ರೀಂ ಕೋರ್ಟಿನ ಮೇಧಾವಿ... ವಕೀಲರ ಹೈಕೋರ್ಟು ನ್ಯಾಯಾಧೀಶರ ತಲೆ... ತೂಗಿಸಿವೆ.

ಇತ್ತೀಚೆಗೆ ಬಣ್ಣದ ಜಗತ್ತಿನಲ್ಲಿಯೂ ವಿಜಯ... ನಗರ ಆಸಕ್ತಿ ವಹಿಸಿದ್ದಾರೆ. ಟೆಕ್ಸ್‌ಟೈಲ್ ಉದ್ಯ... ಮದ ನೂರು ವರುಷಗಳ ಬಗ್ಗೆ ಸಾಕ್ಷಿ ಚಿತ್ರ... ಹಾಗೂ ಭಾರತೀಯ ನೃತ್ಯಗಳ ಬಗ್ಗೆ ಒಂದು... ವರ್ಣ ಚಿತ್ರ ತೆಗೆದ ಅನುಭವದಿಂದ ಕನ್ನಡ-ತೆಲು... ಗಿನಲ್ಲಿ ಒಂದು ಚಿತ್ರ ತೆಗೆಯುವ ಸಾಹಸ... ಮಾಡಿದರು. ಅದರ ಫಲವೇ 'ರಾಘವೇಂದ್ರ... ವೈಭವ' ಎಂಬ ಚಿತ್ರ. ಈ ಚಿತ್ರಕ್ಕೆ ೨೫ ಲಕ್ಷ... ರೂಪಾಯಿ ಖರ್ಚಾಗಿದೆ. ಇದರಿಂದ ಬರುವ... ಲಾಭ ಸಮಾಜ ಕಾರ್ಯಕ್ಕೆ ಮೀಸಲು ಎಂದು... ಅವರು ಬಹಿರಂಗಪಡಿಸಿದ್ದಾರೆ. ●

✽✽✽✽✽✽✽✽

ಮಧ್ಯ ಅಮೇರಿಕದ ದಟ್ಟ ಕಾಡುಗಳಲ್ಲಿ ಕಾಣಸಿಗುವ ಒಂದು ಜಾತಿಯ ನೊಣಕ್ಕೆ ಅದರ 'ಮೀಸೆ'ಯ ತುದಿಗೆ ಕಣ್ಣುಗಳಿವೆ.

ನಿಮ್ಮ ಶಬ್ದ ಭಂಡಾರ ಹೆಚ್ಚಿಸಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಅನನ್ಯ**
(ಅ) ಅಡವಿ (ಆ) ಸುಳ್ಳುಗಾರ (ಇ) ಬೇರೊಂದಿಲ್ಲದ (ಈ) ಕುರುಡುಕಾಸು

೨. **ಅನಪತ್ಯ**
(ಅ) ಬೆಂಬಲಿಗ (ಆ) ಮಕ್ಕಳಿಲ್ಲದ (ಇ) ತಿನ್ನಬಾರದನ್ನು ತಿನ್ನುವ (ಈ) ಕಷ್ಟಕಾಲ

೩. **ಸಮನಿಸು**
(ಅ) ದಟ್ಟವಾಗು (ಆ) ಬಾಯಿಮುಚ್ಚು (ಇ) ಶಾಸ್ತ್ರಹೇಳು (ಈ) ಒದಗು

೪. **ಸಮಜಾಯಿಷಿ**
(ಅ) ತಿಳಿಹೇಳುವಿಕೆ (ಆ) ಸೋದರ ಸಂಬಂಧ (ಇ) ನೆನೆದುಕೊಳ್ಳುವಿಕೆ (ಈ) ಪೂರ್ಣವಾಗುವುದು

೫. **ಕೊಳುಗುಳ**
(ಅ) ಯುದ್ಧ (ಆ) ದುಃಖ (ಇ) ಸರೋವರ (ಈ) ಗಿರಾಕಿ

೬. **ದಾದು**
(ಅ) ನೋವು (ಆ) ಮುತುವರ್ಜಿ (ಇ) ಹಾಲು (ಈ) ಜುಗಾರಿ

೭. **ಕುಳವಾರು**
(ಅ) ಹೋರಾಟ (ಆ) ಬೇಡಿ (ಇ) ಗಿರಾಕಿ (ಈ) ಒಬ್ಬೊಬ್ಬರಾಗಿ

೮. **ದಾತಾರ**
(ಅ) ಸಾಮರ್ಥ್ಯ (ಆ) ಅಮಲಿನ ಔಷಧ (ಇ) ಲಕ್ಷ್ಯ (ಈ) ದಾನ ಮಾಡುವವ

೯. **ಹೆಗ್ಗಳ**
(ಅ) ಹೇಡಿತನ (ಆ) ದೊಡ್ಡ ಮರ (ಇ) ಸಿಪ್ಪೆ (ಈ) ಶ್ರೇಷ್ಠತನ

೧೦. **ಹೆಡಮುರಿಗೆ**
(ಅ) ಜಡೆ ಕಟ್ಟುವುದು (ಆ) ಕಡಗ (ಇ) ಕೈಗಳನ್ನು ಕಟ್ಟಿಹಾಕುವುದು (ಈ) ದೊಡ್ಡ ಪಾತ್ರ

೧೧. **ಬಲು**
(ಅ) ಪೂರ್ತಿ ಬೇಯದ್ದು (ಆ) ಶಿಫಾರಸು (ಇ) ಶಕ್ತಿ (ಈ) ಈಟಿ

೧೨. **ಬಲ್ಲೆ**
(ಅ) ಜ್ಞಾನ (ಆ) ಪೊದರು (ಇ) ಹೊದಿಕೆ (ಈ) ಗೋವಳಿತಿ

'ಶಬ್ದ ಭಾಂಡಾರ'ದ ಸರಿಯಾದ ಅರ್ಥಗಳು

೧. **ಅನನ್ಯ** (ಇ) ಬೇರೊಂದಿಲ್ಲದ; ಒಂದನ್ನೇ ಅವಲಂಬಿಸಿದ, ಏಕನಿಷ್ಠ. ಉದಾ:— ಶಿವನನ್ನೇ ಅನನ್ಯವಾಗಿ ಭಜಿಸಿದ; [ಸಂ. ಅನ್ = ಇಲ್ಲ + ಅನ್ಯ = ಬೇರೆ]

೨. **ಅನಪತ್ಯ** (ಅ) ಮಕ್ಕಳಿಲ್ಲದ, ನಿಸ್ಸಂತತಿಯಾದ. ಉದಾ:— ಅನಪತ್ಯನಾಗಿ ಸತ್ತ. [ಸಂ. ಅನ್ = ಇಲ್ಲ + ಅಪತ್ಯ = ಸಂತಾನ]

೩. **ಸಮನಿಸು** (ಈ) ಒದಗು; ದೊರಕು; ಹೊಂದಿಕೆಯಾಗು: ಹೊಂದು; ಅಣಿಯಾಗು. ಉದಾ:— ಬಯಸಿದ್ದು ಸಮನಿಸಿತು. [ದೇಶ್ಯ, ಸಮೆ; = ರೂಪಿಸು — ವಿನಿಂದ]

೪. **ಸಮಜಾಯಿಷಿ** (ಅ) ತಿಳಿಹೇಳುವಿಕೆ, ಒಪ್ಪಿಸುವಿಕೆ; ಸಮಾಧಾನ ಮಾಡುವಿಕೆ; ವಿವರಣೆ. ಉದಾ:— ಆಕ್ಷೇಪಕ್ಕೆ ತಕ್ಕ ಸಮಜಾಯಿಷಿ [ಸಿಗಲಿಲ್ಲ. ಹಿಂದೀ — ಸಮಝ್ = ತಿಳಿ, ಸಮಝಾಯಿಷ್]

೫. **ಕೊಳುಗುಳ** (ಅ) ಯುದ್ಧ, ಕಾಳಗ; ಕಾಳಗದ ಕಣ. ಉದಾ:— ಕೊಳುಗುಳದಲ್ಲಿ ಬಿದ್ದ. [ದೇಶ್ಯ. ಕೊಳ್ = ತಾಗು; ಕೊಳ್ + ಕೊಳ್ = ತಾಕಲಾಡು (?)]

೬. **ದಾದು** (ಅ) ಮುತುವರ್ಜಿ; ಲಕ್ಷ್ಯ; ಕಾಳಜಿ. ಉದಾ:— ಯಾತರ ದಾದೂ ಇಲ್ಲದ ವ್ಯಕ್ತಿ. [ಮರಾಠಿ ಮೂಲಕ ಫಾರಸಿ, ದಾದ್ = ನ್ಯಾಯ-ದಿಂದ]

೭. **ಕುಳವಾರು** (ಇ) ಗಿರಾಕಿ; ಕೊಳ್ಳುವಾತ; ವ್ಯಕ್ತಿ, ಆಸಾಮಿ, ಪ್ರತಿಷ್ಠಿತ ವ್ಯಕ್ತಿ. ಉದಾ:— ಬ್ಯಾಂಕಿನ ಕುಳುವಾರುಗಳು. [ತುಳು = ಕುಳವಾರ್, ಸಂ. ಕುಲವರ = ಕುಲದ ಹಿರಿಯ (?)]

೮. **ದಾತಾರ** (ಈ) ದಾನ ಮಾಡುವವ, ಕೊಡುಗೈಯವ, ದಾನಿ; (ಆದ್ದರಿಂದ) ಒಡೆಯ. ಉದಾ:— ದಾತಾರನಿಲ್ಲದ ಬದುಕು. [ಸಂ. ದಾತೃ, ದಾತಾ]

೯. **ಹೆಗ್ಗಳ** (ಈ) ಶ್ರೇಷ್ಠತನ, ಹಿರಿಮೆ; ದೊಡ್ಡಿಸ್ತಿಕೆ. ಉದಾ:— ತನ್ನ ಹೆಗ್ಗಳ ಕೊಚ್ಚಿಕೊಂಡ. [ದೇಶ್ಯ, ಪೆರ್ = ಹಿರಿಯ + ಗಳ]

೧೦. **ಹೆಡಮುರಿಗೆ** (ಇ) ಕೈಗಳನ್ನು ಬೆನ್ನ ಹಿಂದೆ ಕಟ್ಟಿಹಾಕುವುದು. ಉದಾ:— ಕೈದಿಯನ್ನು ಹೆಡಮುರಿಗೆ ಕಟ್ಟಿ ತಂದು ಹಾಕಿದ. [ದೇಶ್ಯ, ಹೆಡ (ಪೆಡ) = ಹಿಂದಕ್ಕೆ + ಮುರಿಗೆ = ತಿರುಚುವಿಕೆ]

೧೧. **ಬಲು** (ಅ) ಸ್ಫೂರ್ತಿ ಬೇಯದವ, ಗಟ್ಟಿಯಾಗಿರುವ (ಅಗಳು ಇತ್ಯಾದಿ). ಉದಾ: ಅನ್ನ ಬಹಳ ಬಲುವಾಗಿತ್ತು. [ದೇಶ್ಯ — ಬಲ್ = ಗಟ್ಟಿ — ಯಿಂದ]

೧೨. **ಬಲ್ಲೆ** (ಅ) ಪೊದರು; ಒಂದಕ್ಕೊಂದು ತೊಡಕಿಕೊಂಡ ಬಳ್ಳಿ ಇತ್ಯಾದಿ. ಉದಾ:— ಸೀಗೆಯ ಬಲ್ಲೆ. [ತುಳು]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	...	ಸಾಧಾರಣ
೯—೧೦	,,	...	ಉತ್ತಮ
೧೧—೧೨	,,	...	ಅತ್ಯುತ್ತಮ

ಭಾರತದಲ್ಲಿ ಅಡುಗೆ ಎಣ್ಣೆಯ ಕೊರತೆಯೆಷ್ಟು ?

ಡಾ. ವೈ. ಎಸ್. ಲೂಯಿಸ್

ಅಡುಗೆಯಲ್ಲಿ ಉಪಯೋಗಿಸುವ ಎಣ್ಣೆ ಅಥವ ಜಿಡ್ಡು ಆಹಾರದಲ್ಲಿ ಇರಬೇಕಾದ ಅತ್ಯವಶ್ಯಕ ವಸ್ತು. ಇದು ದೇಹಕ್ಕೆ ಸಾಂದ್ರೀಕೃತ ಶಕ್ತಿಯನ್ನು ಒದಗಿಸುತ್ತದೆ. ಜಿಡ್ಡಿನಲ್ಲಿ ಮಾತ್ರ ಕರಗುವ ಕೆಲವು ಮುಖ್ಯ ವಿಟಮಿನ್‌ಗಳಿಗೆ ಇದು ವಾಹಕವಾಗುತ್ತದೆ. ಜಿಡ್ಡು ಸೇರಿರುವ ಆಹಾರಗಳು ಹೆಚ್ಚು ರುಚಿಕರವಾಗಿರುತ್ತವೆ. ಈಚಿನ ಕೆಲವು ಸಂಶೋಧನೆಗಳಿಂದ ಎಣ್ಣೆಗಳಲ್ಲಿರುವ ಲಿನೋಲೀಯಿಕ್ ಆಮ್ಲ ಆರೋಗ್ಯಕ್ಕೆ ಬಹು ಮುಖ್ಯ ವಸ್ತು ಎಂದು ತಿಳಿದುಬಂದಿದೆ. ಚರ್ಮದ ಸ್ವಾಸ್ಥ್ಯ ಕಾಪಾಡುವುದು, ಅಯೋರ್ಟ ಮುಖ್ಯ ರಕ್ತನಾಳದಲ್ಲಿ 'ಕೋಲೆಸ್ಟೆರಾಲ್ ಎಸ್ಟರ್' ಪದಾರ್ಥಗಳು ಸೇರಿಕೊಳ್ಳುವುದನ್ನು ತಡೆಯುವುದು, ಪ್ರೋಸ್ಟಾಗ್ಲಾಂಡಿನ್‌ಗಳ ಉತ್ಪತ್ತಿಗಳಲ್ಲಿ ಭಾಗ ವಹಿಸುವುದು ಮುಂತಾದುವು ಇದರ ಕೆಲಸಗಳು. ಈ ಪ್ರೋಸ್ಟಾಗ್ಲಾಂಡಿನ್ ಪದಾರ್ಥಗಳು ಸಂಖ್ಯೆಯಲ್ಲಿ ಇಪ್ಪತ್ತಕ್ಕೂ ಹೆಚ್ಚು. ಇವು ಮಾಂಸಖಂಡಗಳ ಕುಗ್ಗುವಿಕೆ, ನೋವುಗಳ ಶಮನ, ಸಂತಾನ ಶಕ್ತಿ, ರಕ್ತದ ಪ್ಲೇಟ್‌ಲೆಟ್ ಕಣಗಳ ಒಟ್ಟುಗೂಡುವಿಕೆ ಮೊದಲಾದ ದೇಹಕ್ರಿಯೆಗಳಲ್ಲಿ ಬಹು ಮುಖ್ಯ ಪಾತ್ರವಹಿಸುತ್ತವೆ.

ಹೀಗೆ ಹಲವು ರೀತಿಯಲ್ಲಿ ಜಿಡ್ಡು ನಮಗೆ ಅವಶ್ಯಕ ವಸ್ತು. ಆದರೆ ಈಚೆಗೆ ಇದರ ಬೆಲೆ ಗಗನಕ್ಕೇರಿ, ಬಡವನಿರಲಿ, ಸ್ವಲ್ಪ ಅನುಕೂಲ ಸ್ಥಿತಿಯಲ್ಲಿ ಇರುವವರಿಗೂ ಇದು ಎಟುಕದ ಸ್ಥಿತಿಯಲ್ಲಿದೆ. ಇದಕ್ಕೆ ಕಾರಣವೇನು? ಪರಿಹಾರವೇನು?

ಕಳೆದ ಒಂದು ದಶಕದಿಂದ ಭಾರತದ ವಿವಿಧ ಆಹಾರ ಯೋಗ್ಯ ಎಣ್ಣೆಗಳ ಉತ್ಪತ್ತಿ ೨೦–೨೫ ಲಕ್ಷ ಟನ್ನುಗಳಷ್ಟು ಮಾತ್ರ ಇದೆ. ಆದರೆ ಬೇಡಿಕೆ ಇದಕ್ಕೆ ದ್ವಿಗುಣವಾಗಿದೆ. ಜನಸಂಖ್ಯೆ ಏರಿರುವುದು ಮತ್ತು ಮೇಲಿನ ಜೀವನ ಮಟ್ಟದ ಜನರು ಹೆಚ್ಚು ಜಿಡ್ಡು ಬಳಸುತ್ತಿರುವುದು ಇದಕ್ಕೆ ಕಾರಣ. ಈ ಕಾರಣಗಳಿಂದ ದೇಶವು ಹೊರಗಡೆಯಿಂದ ಹೆಚ್ಚು ಹೆಚ್ಚಾಗಿ ಎಣ್ಣೆಗಳನ್ನು ಆಮದು ಮಾಡಿಕೊಳ್ಳುವ ಅವಶ್ಯಕತೆ ಬಂದಿದೆ. ಈಗ ವರ್ಷಕ್ಕೆ ೮೦೦ ಕೋಟಿ ರೂಪಾಯಿಗಳ ಬೆಲೆಯ ಎಣ್ಣೆ ತರಿಸಿಕೊಳ್ಳಲಾಗುತ್ತಿದೆ. ಅಪಾರ ವಿದೇಶ ವಿನಿಮಯ ಖರ್ಚಾಗುತ್ತಿದೆ.

ಕಡಲೆಕಾಯಿ (ಸೇಂಗಾ) ಎಣ್ಣೆಯೇ ನಮ್ಮ ಮುಖ್ಯ ಅಡುಗೆ ಎಣ್ಣೆ. ಒಟ್ಟು ಸಸ್ಯಮೂಲ ಜಿಡ್ಡಿನ ಉತ್ಪತ್ತಿಯಲ್ಲಿ ಇದು ಅರ್ಧಕ್ಕೂ ಹೆಚ್ಚಾಗಿದೆ. ಕಡಲೆಕಾಯಿ ಬೀಜದ ಗಾತ್ರ, ಎಣ್ಣೆ ಪ್ರಮಾಣ ಹೆಚ್ಚಿಸುವ ವ್ಯವಸಾಯ ಸಂಶೋಧನೆಗಳು ಸ್ವಲ್ಪ ಮಟ್ಟಿಗೆ ಫಲಕಾರಿಯಾಗಿವೆ. ಬೆಳೆಯನ್ನೇ ಹೆಚ್ಚಿಸುವ ಸಾಧ್ಯತೆ ಕಡಿಮೆ. ಏಕೆಂದರೆ ಇದಕ್ಕೆ ತಕ್ಕ ಭೂಮಿಯ, ನೀರಿನ ಅಭಾವ ನಮ್ಮ ದೇಶದಲ್ಲಿ ತಿಳಿದದ್ದೇ.

ಕೆಲವು ಹೊಸ ಎಣ್ಣೆ ಬೀಜಗಳ ಬೆಳೆ ತೆಗೆಯುವ ಪ್ರಯತ್ನಗಳು ನಡೆಯುತ್ತಲೇ ಇವೆ. ರಶ್ಯ ಮತ್ತು ಪೂರ್ವ ಯುರೋಪಿನಲ್ಲಿ ಬೆಳೆ

ಯುವ ಸೂರ್ಯಕಾಂತಿ ಬೀಜಗಳನ್ನು ಉತ್ಪಾದಿಸಲು ಭಾರತದ ಹಲವು ಕಡೆ ಯತ್ನಿಸಲಾಗಿದೆ. ಈ ಗಿಡದ ಬೇರು ಆಳವಾಗಿ ಹೋಗುವುದರಿಂದ ಅನಾವೃಷ್ಟಿಯಲ್ಲೂ ಇದನ್ನು ಬೆಳೆಯಬಹುದು. ಆದರೆ ಇದು 'ಅನ್ಯ ಪರಾಗ ಸ್ಪರ್ಶ' ವಾಗಬೇಕಾದ ಬೆಳೆ. ಹಲವು ಕಡೆ ಬೀಜಗಳ ಹೆಚ್ಚು ಭಾಗ ತಿರುಳು ತುಂಬಿಕೊಂಡಿರುವುದಿಲ್ಲ. ಒಟ್ಟಿನಲ್ಲಿ ಎಣ್ಣೆಯ ಉತ್ಪತ್ತಿ ಕಡಿಮೆಯಾಗಿಬಿಡುತ್ತದೆ.

ಮಲೇಶಿಯಾದಲ್ಲಿ ತಾಳೆ ಮರದ ಕಾಯಿಂದ ತೆಗೆಯುವ ಎಣ್ಣೆ ಅಧಿಕವಾಗಿದೆ. ಕಾಯಿಯ ತಿರುಳಿನಿಂದ ಮತ್ತು ಬೀಜದಿಂದ ಎರಡು ವಿಧವಾದ ಎಣ್ಣೆ ಪಡೆಯಬಹುದು. ಎರಡೂ ಆಹಾರ ಯೋಗ್ಯ. ಈಚೆಗೆ ಭಾರತ ಸರಕಾರವೂ ಇದನ್ನು ಆಮದು ಮಾಡಿಕೊಂಡು ಜನರಿಗೆ ಹಂಚುತ್ತಿದೆ. ಇದರ ಬೆಳೆ ಭಾರತದಲ್ಲೂ ತೆಗೆದರೆ ಚೆನ್ನ. ಆದರೆ ಇದನ್ನು ಚೆನ್ನಾಗಿ ಬೆಳೆಯಲು ಬೇಕಾದ ಫಲವತ್ತಾದ ಭೂಮಿ, ನೀರಿನ ಸಮೃದ್ಧಿ ಕೇರಳ, ಮತ್ತು ಅಂಡಮಾನ್ ದ್ವೀಪಗಳಲ್ಲಿ ಮಾತ್ರ ಲಭ್ಯ.

ಸೋಯಾಬಿನ್ ಹೆಚ್ಚು ಪ್ರಚಾರ ಪಡೆದಿದೆ. ಆದರೆ ಇದು ಭಾರತದ ಅಗತ್ಯವನ್ನು ಸಮರ್ಪಕವಾಗಿ ಪೂರೈಸುವಂತಹ ಬೆಳೆಯಲ್ಲ. ಮುಖ್ಯವಾಗಿ ಇದರಲ್ಲಿರುವ ಎಣ್ಣೆ ಶೇಕಡ ೧೬-೧೮ ಭಾಗ ಮಾತ್ರ. ಎಣ್ಣೆ ತೆಗೆದ ಮೇಲೆ ನಿಲ್ಲುವ ಹಿಂಡಿ ಅಪಾರ. ಇದರ ಬೆಲೆ ಹೆಚ್ಚಾದುದರಿಂದ ಪ್ರಾಣಿಗಳಿಗೆ ಕೊಡಲೂ ದುಬಾರಿ. ಹೊರ ದೇಶಗಳಿಗೆ ರಫ್ತು ಮಾಡಬೇಕು ಇಲ್ಲವೇ ವಿಶೇಷ ಪ್ರೋಟೀನ್ ಆಹಾರಗಳನ್ನು ತಯಾರಿಸಬೇಕು. ಆದರೆ ಇಂತಹ ಆಹಾರಗಳನ್ನು ಕೊಳ್ಳಬಲ್ಲವರು ನಮ್ಮ ದೇಶದಲ್ಲಿ ಹೆಚ್ಚಿಲ್ಲ.

ಎಳ್ಳು, ಹುಚ್ಚೆಳ್ಳು, ಸಾಸಿವೆ, ಕುಸುಬೆ ಮುಂತಾದ ಬೀಜಗಳಿಂದ ಎಣ್ಣೆಗಳೂ ಭಾರತದಲ್ಲಿ ಬಳಕೆಯಲ್ಲಿವೆ. ಅವು ಒಟ್ಟಾಗಿ ದೇಶದ ಎಣ್ಣೆ ಉತ್ಪತ್ತಿಯಲ್ಲಿ ಉಳಿದ ಶೇಕಡ ೫೦ ಭಾಗ ಆಗುತ್ತದೆ. ಆದರೆ ಅವು ಕೆಲವು ಪ್ರಾಂತಗಳಲ್ಲಿ ಮಾತ್ರ ಬಳಸಲ್ಪಡುತ್ತದೆ. ಉದಾಹರಣೆಗೆ:- ಕುಸುಬೆ ಎಣ್ಣೆ ಮಹಾರಾಷ್ಟ್ರದಲ್ಲಿ ಮಾತ್ರ ಹೆಚ್ಚು ಉಪಯೋಗವಾಗುತ್ತದೆ.

ಜಿಡ್ಡು ಸಮತೂಕದ ಆಹಾರದಲ್ಲಿ ಅಗತ್ಯ ವಸ್ತು. ಇದು ವಯಸ್ಕರ ದಿನದ ಆಹಾರದಲ್ಲಿ ೪೦-೫೦ ಗ್ರಾಮಿನಷ್ಟಾದರೂ ಇರಬೇಕು. ಆದರೆ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಜನರ ಆಹಾರದ ಜಿಡ್ಡಿನ ಪ್ರಮಾಣ ಕಡಿಮೆಯಿರುತ್ತದೆ. ಏಕೆಂದರೆ ಇದರ ಬೆಲೆ ಬೇರೆಲ್ಲ ಆಹಾರ ಪದಾರ್ಥಗಳಿಗಿಂತ ಹೆಚ್ಚು. ನಮ್ಮ ದೇಶದಲ್ಲಿ ಪ್ರಾಂತದಿಂದ ಪ್ರಾಂತಕ್ಕೆ ಪ್ರಮಾಣ ಬದಲಾಯಿಸುತ್ತದೆ. ಗುಜರಾತ ಮತ್ತು ಕೇರಳದಲ್ಲಿ ಎಣ್ಣೆ ಉಪಯೋಗ ಹೆಚ್ಚು. ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಕಡಿಮೆ. ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ಮಧ್ಯಮ. ಇದು ಆರ್ಥಿಕ ಸ್ಥಿತಿಯನ್ನಲ್ಲದೇ ಆಹಾರ ಪದ್ಧತಿಗಳನ್ನೂ ಅನುಸರಿಸುತ್ತದೆ. ಪಟ್ಟಣ ವಾಸಿಗಳಲ್ಲಿ ಜಿಡ್ಡಿನ ಉಪಯೋಗ ಹಳ್ಳಿಗರಿಗಿಂತ ಹೆಚ್ಚು. ಆದಾಯ ಹೆಚ್ಚಿದಂತೆ ಜಿಡ್ಡಿನ ಉಪಯೋಗವೂ ಹೆಚ್ಚುತ್ತದೆ.

ಹೊರಗಿನಿಂದ ಆಹಾರದಲ್ಲಿ ಎಣ್ಣೆ, ತುಪ್ಪ, ಕೊಬ್ಬು ಮುಂತಾದವುಗಳ ರೂಪದಲ್ಲಿ ಸೇರುವ ಜಿಡ್ಡಲ್ಲದೆ, ಇತರ ಆಹಾರ ಪದಾರ್ಥಗಳಾದ ಧಾನ್ಯ, ಬೇಳೆ, ಗಡ್ಡೆಗಳಲ್ಲಿ ಸಹಜವಾಗಿ ಇರುವ ಜಿಡ್ಡಿನ ಅಂಶವೂ ನಮ್ಮ ದೇಹವನ್ನು ಸೇರುತ್ತದೆ. ಪ್ರಾಣಿಜನ್ಯ ಆಹಾರಗಳಾದ ಹಾಲು, ಮಾಂಸ, ಮೀನು ಮತ್ತು ಮೊಟ್ಟೆಗಳಲ್ಲಿ ಜಿಡ್ಡು ಹೆಚ್ಚಾಗಿಯೇ ಇರುತ್ತದೆ. ಭಾರತದ ವಿವಿಧ ಪ್ರಾಂತಗಳ ಆಹಾರ ಪದ್ಧತಿಗಳನ್ನು ಗಮನಿಸಿ ಲೆಕ್ಕ ಹಾಕಿದಾಗ ಈ ಅದೃಶ್ಯ (invisible) ಜಿಡ್ಡಿನ ಅಂಶ [illegible] ೨೫ ರಿಂದ ೪೫ ಗ್ರಾಮುಗಳಷ್ಟು ಇರುತ್ತದೆಂದು ತಿಳಿದುಬಂದಿದೆ. ಇದೇನೂ ಕಡಿಮೆಯಲ್ಲ. ಹೊರಗಿನಿಂದ ಸ್ವಲ್ಪ ಜಿಡ್ಡು ಸೇರಿದರೆ ಸಮರ್ಪಕವೇ ಎನ್ನಬಹುದು. ಈ ಕಾರಣದಿಂದ ನಮ್ಮ ಜನರಲ್ಲಿ ಜಿಡ್ಡಿನ ಕೊರತೆ ಬಹಳವಾಗಿದೆ ಎಂದು ಹೆದರಬೇಕಿಲ್ಲ.

ಅಗತ್ಯ ಜಿಡ್ಡಿನ ಆಮ್ಲಗಳಾದ ಲಿನೋಲಿಯಿಕ್ ಮತ್ತು ಲಿನೋಲೀನಿಕ್ ಆಮ್ಲಗಳು ಆಹಾರದಲ್ಲಿ ಸಾಕಷ್ಟು ಇರಬೇಕೆಂದು ನಿರ್ಧರಿಸಲಾಗಿದೆ. FAO, WHO ಸಂಸ್ಥೆ



ಗಳು, ಇವು ಮನುಷ್ಯರ ಆಹಾರದ ಉಷ್ಣಶಕ್ತಿ (energy level) ಯ ಶೇಕಡ ಮೂರು ಭಾಗವಾದರೂ ಇರಬೇಕೆಂದು ತೀರ್ಮಾನಿಸಿವೆ. ಪ್ರಪಂಚದ ವಿವಿಧ ಭಾಗಗಳಲ್ಲಿ ಆಹಾರದ ಜಿಡ್ಡಿನ ಪ್ರಮಾಣ ಬಹಳ ವ್ಯತ್ಯಾಸ ಹೊಂದುತ್ತದೆ. ಮುಂದುವರಿದ ರಾಷ್ಟ್ರಗಳಲ್ಲಿ ಇದು ಆಹಾರ ಶಕ್ತಿಯ ಶೇಕಡ ೩೫ ಭಾಗದಷ್ಟಿದ್ದರೆ ಎಸ್ಕಿಮೋಗಳಲ್ಲಿ ಇದು ೫೦ ರಷ್ಟಿರುತ್ತದೆ. ನಮ್ಮಲ್ಲಿ ಇದು ೨೦ ಇರಬಹುದು. ಇದು ಕಡಿಮೆಯಿದ್ದರೂ, ಅಗತ್ಯ ಜಿಡ್ಡಿನ ಆಮ್ಲಗಳ ಪ್ರಮಾಣ ಸಮರ್ಪಕವಾಗಿರುತ್ತದೆ. ಏಕೆಂದರೆ ನಮ್ಮ ಧಾನ್ಯ, ಬೇಳೆ ಮುಂತಾದವುಗಳಲ್ಲಿರುವ ಅತ್ಯಲ್ಪ ಜಿಡ್ಡಿನಲ್ಲಿ ಅಗತ್ಯ ಜಿಡ್ಡಿನ ಆಮ್ಲಗಳ ಪ್ರಮಾಣ ಹೆಚ್ಚಾಗಿರುತ್ತದೆ. ಆಹಾರದ ಪ್ರಮಾಣ ಮತ್ತು ಜಿಡ್ಡಿನ ಪ್ರಮಾಣ ಎರಡೂ ಮಾತ್ರ ಹೆಚ್ಚಿರಕೂಡದು. ಆಗ ರಕ್ತನಾಳಗಳ ಮತ್ತು ಹೃದಯದ ರೋಗಗಳಿಗೆ ಆಸ್ಪದ ಕೊಟ್ಟಂತಾಗುತ್ತದೆ.

ಹುಟ್ಟಿದಾಗಿನಿಂದ ತಾಯಿಯ ಹಾಲನ್ನು ಕುಡಿಯುತ್ತಿರುವ ವರೆಗೆ ಭಾರತೀಯ ಮಕ್ಕಳು ಸಮರ್ಪಕ ಮಟ್ಟದ ಜಿಡ್ಡು ಮತ್ತು ಅಗತ್ಯ ಜಿಡ್ಡಿನ ಆಮ್ಲಗಳನ್ನು ಪಡೆಯುತ್ತಿರುತ್ತಾರೆ. ಹಾಲು ನಿಲ್ಲಿಸಿದ ನಂತರ ಆಹಾರದಲ್ಲಿ ಅವರಿಗೆ ಸ್ವಲ್ಪ ಹೆಚ್ಚಿನ ಎಣ್ಣೆಗಳನ್ನು ಒದಗಿಸುವುದು ಅಗತ್ಯ.

ಈಗ ನಾವು ಉತ್ಪತ್ತಿ ಮಾಡುತ್ತಿರುವ ಎಣ್ಣೆಗಳ ಪ್ರಮಾಣ ಸಾಲದು ಎನ್ನುವದೇನೋ ನಿಜ. ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಲೇ ಇದೆ. ಹೊರಗಿನಿಂದ ಆಮದು ಮಾಡಿಕೊಳ್ಳುವುದು ನಮ್ಮ ಉತ್ಪತ್ತಿ ಹೆಚ್ಚಿಸುವ ವರೆಗೂ ಅಗತ್ಯ. ಹತ್ತಿ ಬೀಜ, ಅಕ್ಕಿಯ ತೌಡು ಇವುಗಳಿಂದ ತೆಗೆದ ಎಣ್ಣೆಗಳನ್ನು ಸಂಸ್ಕರಿಸಿ, ಮನುಷ್ಯರ ಆಹಾರಕ್ಕೆ ಯೋಗ್ಯವನ್ನಾಗಿ ಮಾಡುವುದು ಈಗ ಭಾರತದಲ್ಲೂ ಆಗುತ್ತಿದೆ. ಇದರಿಂದ ದೊರೆಯುವ ಎಣ್ಣೆ ಹೆಚ್ಚಾಗುತ್ತದೆ. ಕ್ರಮೇಣ ನಮ್ಮ ಎಣ್ಣೆಗಳ ಕೊರತೆ ನೀಗಬಹುದೇನೋ. ✡

ಧೂಳಿಗೆ ಬೀಳದೆ ಅರಳಿದ ಮೊಗ್ಗು

ಮೂಲ : 'ಲಕ್ಷ್ಮಿ' ರೂಪಾಂತರ : ಬಿ. ಆರ್. ಶಂಕ

ವೃತ್ತಿ ಶಿಕ್ಷಣವನ್ನು ಪಡೆಯುವ ಸಲುವಾಗಿ ನಾನು ಒಂದು ಹೆರಿಗೆ ಆಸ್ಪತ್ರೆಯಲ್ಲಿ ಸೇರಿದ್ದೆ. ನನ್ನ ಗೆಳತಿಯೂ ನನ್ನ ಜೊತೆ ಇದ್ದಳು. ವಾರದ ಅವಧಿಯಲ್ಲಿ ಒಬ್ಬರಿಗೆ ಎರಡು ಬಾರಿ ಪ್ರಸೂತಿ ಗೃಹದಲ್ಲಿ ಕೆಲಸ ಬೀಳುತ್ತಿತ್ತು. ನಮಗೆ ತುಂಬ ಹಿಡಿಸಿದ್ದ ಕೆಲಸವದು. ಬಗೆಬಗೆಯ ಕೇಸುಗಳ ಪರಿಚಯವಾಗಿ ಅನುಭವ ಬೆಳೆಯುತ್ತದೆಂಬ ಹರ್ಷ. ತುರ್ತು ಚಿಕಿತ್ಸೆಗಳಲ್ಲಿ ನಾವೂ ಭಾಗವಹಿಸಬಹುದು ಎಂಬ ಆಸಕ್ತಿ. ಆಕಾಶವನ್ನು ಬಗ್ಗಿಸಿ ಬಿಲ್ಲನ್ನಾಗಿ ಮಾಡಬಹುದು ಎಂಬ ಹುರುಪು ಮತ್ತು ಉತ್ಸಾಹಗಳು ತುಂಬಿದ್ದ ತಾರುಣ್ಯ. ಜತೆಗೆ ವೃತ್ತಿ ಶಿಕ್ಷಣದಲ್ಲಿ ಚೆನ್ನಾಗಿ ಪರಿಣತಿ ಪಡೆಯಬಹುದು ಎಂಬ ಆಸೆ. ನಮ್ಮ ಸರದಿಯ ದಿನ ಒಂದು ಚೂರೂ ನಿದ್ರೆಯನ್ನು ಮಾಡದೇ ಪ್ರತಿಯೊಂದು ಅಂಶವನ್ನು ಟಿಪ್ಪಣಿ ಮಾಡಿಕೊಳ್ಳುವುದರಲ್ಲಿ ನನ್ನ–ಗೆಳತಿಯ ನಡುವೆ ಪೈಪೋಟಿ.

ಅದೊಂದು ದಿನ ಮಧ್ಯಾಹ್ನ.........

ಹೆರಿಗೆ ನೋವು ತಿನ್ನುವ ಹೆಣ್ಣುಮಕ್ಕಳನ್ನು ಇಟ್ಟುಕೊಳ್ಳುವ ವಾರ್ಡಿನ ಕಡೆಯಿಂದ ನಾನು ಬರುವಾಗ ದಾದಿಯರ ಮುಖಗಳಲ್ಲಿ ಸ್ವಲ್ಪ ಅತಿಯಾದ ಕುತೂಹಲ ಮೂಡಿರುವುದು ಕಂಡು ಬಂತು. ಅವರ ಕುತೂಹಲಕ್ಕೆ ಕಾರಣವೇನೆಂದು ಮುಖ್ಯ ದಾದಿಯನ್ನು ಕೇಳಿದೆ. ಒಂದು ಹೊಸ ಕೇಸು ಆದೇ ತಾನೇ ಬಂದಿರುವ ವಿಚಾರ ತಿಳಿದು ಬಂತು. ಅದಕ್ಕೆ ಇಷ್ಟೊಂದು ಕುತೂಹಲವೇಕೆ?

ಸಾಮಾನ್ಯವಾದ ಹೆರಿಗೆಯ ಕೇಸು. ಮಂಚ
ಮೇಲೆ ಮಲಗಿದ್ದ ಆ ಹೆಣ್ಣಿನ ಬಳಿಗೆ ಹೋದಾ
ವಿಚಾರ ಗೊತ್ತಾಯಿತು.

ಆಕೆ ಇಪ್ಪತ್ತರ ಸುಂದರಿ. ಆದರೆ ಅಪರಾ
ಮನೋಭಾವದಿಂದ ಕುತ್ತಿಗೆಯವರೆಗೆ ಸೆರ
ಹೊದೆಸುಕೊಂಡು ಗೋಡೆಯ ಕಡೆಗೆ ಮು
ಮಾಡಿ ಮಲಗಿದ್ದಳು. ಯಾರೊಡನೆಯೂ ಮಾ
ನಾಡಬಯಸದ. ಯಾರನ್ನೂ ಕಾಣಲಿಚ್ಛಿಸ
ಮನೋಭಾವ.

ಹರಕು ಕುಪ್ಪುಸ, ಕೊಳಕು ಸೀರೆ ಉಟ್ಟು
ಜತೆಗೆ ಬಂದಿದ್ದವಳು ತಾನು ಅವಳ ಸೋದ
ರತ್ತೆಯೆಂದು ಹೇಳಿದಳು. ಕೇಳುವ ಮುಂಚೆಯ
ಕಥೆಯನ್ನು ಹೇಳಿ ಕಣ್ಣೀರುಗರೆಯಲು ಸಿದ್ಧಳಾಗಿ
ಬಂದಿದ್ದಳು. ಸನ್ನೆ ಮಾಡಿದ ಅವಳು ನನ್ನನ
ಬೇರೆ ಕಡೆಗೆ ಕರೆದೊಯ್ದು ಪಿಸ ಗುಟ್ಟಿದಳು.

"ನಾನೂ ಚಿಕ್ಕ ವಯಸ್ಸಿನಲ್ಲೇ ಗಂಡನ
ಕಳಕೊಂಡೆ. ನನಗೀಗ ವಯಸ್ಸು ಐವತ್ತು. ಪತ್ರಿ
ಒಂದನ್ನೂ ಕಳಕೊಂಡು ಒಂಟಿಯಾಗಿದ್ದೀನಿ. ಪಿ
ಕಲೀಲಿಲ್ಲ. ದೇವ ಕೃಪೆಯಿಂದ ದುಡಿ
ತಿನ್ನಬೇಕು. ಒಂದು ಮನೇಲಿ ಅಡಿಗೆ ಕೆಲ
ಮಾಡ್ತಿದ್ದೀನಿ. ಗ್ರಹಚಾರದಿಂದ ನಾನು ಬರೋಕಲ್ಲಿ
ಇವಳು ಎಂಥ ಕೆಲಸ ಮಾಡಿದಳು ಅಂತ ಗೊತ್ತ
ನಮ್ಮ? ನಮ್ಮ ಅಣ್ಣನ ಮಗಳು ಅನಾಥೆ ಅಂ
ಸಾಕಿದೆ. ಹದಿನೆಂಟಕ್ಕೇ ತಾಳಿ ಕಟ್ಟಿದೋನು ಕಾ
ಮುಚ್ಚಿಕೊಂಡುಬಿಟ್ಟ. ದೊಡ್ಡ ಪ ನಾಪ್ಪ
ಮನೆಯಲ್ಲಿ ಅದಿಗೆ ಕೆಲಸಕ್ಕೆ ಸೇರಿಸಿದೆ. ಅಲ್ಲಿ ಅ

ಬಾರದ್ದು ನಡೆದು ಹೋಯಿತು. ಗದರಿಸಿ ಕೇಳಿದರೆ ಮನೆಯ ಯಜಮಾನರೇ ಕಾರಣ ಅಂತಾಳೆ. ಅಷ್ಟು ದೊಡ್ಡ ಮನುಷ್ಯರನ್ನು ನ್ಯಾಯ ಕೇಳಲು ಯಾರಿದ್ದಾರೆ? ಹುಲಿಗೆ ಹಸಿವಾದರೆ ಹುಲ್ಲು ತಿನ್ನುತ್ತೆಯೇ? ಇವಳಿಗಲ್ಲವೇ ಬುದ್ಧಿ ಇರಬೇಕಾಗಿತ್ತು. ಈಗ ಅವಮಾನದ ಚಿಹ್ನೆ ಹೊತ್ತಿರೋಳು ಇವಳೇ ತಾನೇ?"

ನನಗೆ ಅತೀವ ಸಂಕಟವಾಯಿತು. ಆ ಹೆಣ್ಣಿನ ಕಷ್ಟಕ್ಕೆ ಕಾರಣನಾದ ವ್ಯಕ್ತಿಯನ್ನು ನೆನೆದಾಗ ಸಿಟ್ಟು ನೆತ್ತಿಗೇರಿತು...... ಆದರೆ ಆ ವಿಚಾರದಲ್ಲಿ ತರ್ಕ ಮಾಡುವುದಾಗಲೀ, ನ್ಯಾಯವನ್ನು ಕೇಳುವುದಾಗಲೀ ನಮ್ಮ ಕೆಲಸವಲ್ಲ. ತುಂಬು ಗರ್ಭಿಣಿ; ಹೆರಿಗೆಗೆ ಬಂದಿದ್ದಾಳೆ. ಅವಳನ್ನು ನೋಡಿಕೊಂಡು ತಾಯಿ-ಮಗುವನ್ನು ರಕ್ಷಿಸುವುದು ನಮ್ಮ ಹೊಣೆ.

"ಸ್ವಲ್ಪ ಸಮಾಧಾನದಿಂದಿರಿ," ಎಂದು ಹೇಳಿ ಅಲ್ಲಿಂದ ಹೊರಟೆ.

ಆಸ್ಪತ್ರೆಯ ಮುಖ್ಯಸ್ಥ ತುಂಬ ಕಟ್ಟುನಿಟ್ಟಿನ ವ್ಯಕ್ತಿ. ಅನುಭವಿ.

"ಯಜಮಾನ, ಜವಾನ, ಕಾರಿನ ಚಾಲಕ ಯಾರು ಕಾರಣ ಇವರಲ್ಲಿ ಅಂತ ಕಥೆ ಮಾಡ್ತಾ ಕೂಡಬಾರದು; ಪತ್ತೆ ಕಾರ್ಯದಲ್ಲಿ ಇಳಿಯಬಾರದು. ಅವರವರ ಕೆಲಸ ಕಾರ್ಯಗಳನ್ನು ಗಮನಿಸಬೇಕು; ಅಷ್ಟೆ." ಎಂದು ಮೊದಲೇ ಎಚ್ಚರಿಕೆ ನೀಡಿದ್ದರು.

ಆದರೆ ನನ್ನಲ್ಲಿ 'ಯಾರವನು ?' ಎಂಬ ಪ್ರಶ್ನೆ ಎದ್ದೇ ಎದ್ದಿತು. ಆ ಹೆಣ್ಣನ್ನು ಮಾತ್ರ ಅಪಮಾನದಲ್ಲಿ ಪರಿತಪಿಸಲು ಬಿಟ್ಟು ತೆರೆಮರೆಯಲ್ಲಿರುವ ಆ ವ್ಯಕ್ತಿಯನ್ನು ಹಿಡಿದು ಚಾವಟಿಯಿಂದ ಥಳಿಸಬೇಕು ಎನ್ನುವ ತುಡಿತ. ಕಳ್ಳ ಬಸಿರಿಗೆ ಕಾರಣರಾದ ಇಬ್ಬರಲ್ಲಿ ಹೆಣ್ಣಿಗೇ ಯಾಕೆ ಶಿಕ್ಷೆ? ಇದು ಅನ್ಯಾಯವೆಂದು ಮನಸ್ಸು ಭೋರ್ಗರೆಯಿತು.

ಮನುಷ್ಯನ ವಂಚನೆಗೆ ಬಲಿಯಾದ ಹೆಣ್ಣನ್ನು ಕಂಡ ಮೊದಲ ಅನುಭವ ನನಗೆ. ಅದರ ಬಳಿಕ ಅಂಥ ಹಲವಾರು ದೃಶ್ಯಗಳನ್ನೇ ಕಾಣಬೇಕಾಗುತ್ತದೆ, ಕೇಳಬೇಕಾಗುತ್ತದೆ. ಹೆಣ್ಣನ್ನು ವಂಚಿಸುವ ಪುರುಷ ಕಾದಂಬರಿಗಳಲ್ಲಿ ಬರೆಯುತ್ತೇನೆ ಎಂಬ ಕಲ್ಪನೆಯಿಲ್ಲದೆ ಆ ದಿವಸವಿಡೀ ಆ ಅಬಲೆಯ ಬಗ್ಗೆ ಚಿಂತಿಸುತ್ತ ಸಂಕಟಪಟ್ಟೆ.

ಎರಡು ದಿನಗಳಲ್ಲಿ ಅವಳು ಹೆರಿಗೆಯ ಕೋಣೆಗೆ ಬಂದಳು. ನಮಗೆ ಕುತೂಹಲ: ಎಂಥ ಮಗು? ಗಂಡೇ, ಹೆಣ್ಣೇ? ಸುಖ ಪ್ರಸವವೆ?— ಇತ್ಯಾದಿ ಚಿಂತನೆಗಳು. ಅಂದು ನನ್ನ ಪಾಳಿಯಲ್ಲವಾದರೂ ತಾಳಲಾಗದ ಕುತೂಹಲದಿಂದ ನನ್ನ ಕೆಲಸದ ಅವಧಿಯನ್ನು ಹೆಚ್ಚಿಸಿಕೊಂಡೆ. ಕೊನೆಗೆ ಆ ಹೆಣ್ಣು ಒಂದು ಗಂಡು ಮಗುವನ್ನು ಹೆತ್ತಳು. ಕಷ್ಟವಲ್ಲದ ಹೆರಿಗೆ. ಮಗುವನ್ನು ಕಾಣಲು ಎಲ್ಲರಿಗೂ ತವಕ. ತಾಯಿ, ಮಗುವನ್ನು ವಾರ್ಡಿಗೆ ಕರೆತಂದರು.

ಹಲಸಿನ ಹಣ್ಣಿಗೆ ಮುತ್ತುವ ನೊಣಗಳಂತೆ ನಾವು ಮಗುವಿನ ಸುತ್ತಲೂ ಮುತ್ತಿಗೆ ಹಾಕಿದೆವು... ಕೆಲವು ಹೂವುಗಳನ್ನು ಪೂಜೆಗಾಗಿ ಕೀಳುತ್ತಾರೆ. ಅವುಗಳಲ್ಲಿ ಕೆಲವು ಕಾಲಡಿಗೆ ಬಿದ್ದು ನಜ್ಜು ಗುಜ್ಜಾಗುತ್ತವೆ. ಆ ಕೂಸನ್ನು ಕೈಗೆತ್ತಿಕೊಂಡಾಗ ಅದು ಯಾವ ಬಗೆಯ ಹೂವು ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಉದಿಸುವುದು ಸಹಜ.

ಮಗು ಚೆನ್ನಾಗಿ ಮೈ ತುಂಬಿಕೊಂಡು ತಾಯಿ



"ನಿಮ್ಮ ಮಗಳನ್ನು ಈತನಿಗೆ ಕೊಡಬಹುದು ರಾಯರೇ... ನಿಮ್ಮ ಅಂತಸ್ತಿಗೆ ತಕ್ಕ ವರ... ಇವನೂ ಎರಡನೆಯ ಅಂತಸ್ತಿನಲ್ಲೆ ವಾಸವಾ

ಯಂತೆಯೇ ಗುಂಗುರು ಕೂದಲಿನೊಡನೆ ನೇರಳೆ ಹಣ್ಣಿನಂಥ ಕಣ್ಣುಗಳೊಡನೆ ಕೆಂಪಗೆ ಕಂಗೊಳಿಸುತ್ತಿತ್ತು. ಮಿಕ್ಕವರು ಮಗುವನ್ನು ಆಸಕ್ತಿಯಿಂದ ಎತ್ತಿಕೊಂಡು ನೋಡುವಾಗ ತಾಯಿ ನಾಚಿಕೆ–ಸಂಕಟಗಳಿಂದ ಮುದುಡಿಕೊಂಡು ಮಲಗಿ ಕಣ್ಣು ಮುಚ್ಚಿದ್ದಳು ಮಗುವನ್ನು ನೋಡಲೂ ಅಸಹ್ಯವೇನೊ ಅವಳಿಗೆ.

ಪ್ರತಿದಿನವೂ ಕೆಲಸಕ್ಕೆ ಹೋಗುವುದಕ್ಕೆ ಮುಂಚೆ ನಾನು ಮತ್ತು ನನ್ನ ಗೆಳತಿ ಆ ವಾರ್ಡಿಗೆ ಹೋಗಿ ಮಗುವನ್ನು ನೋಡಿ ಬರುವುದು ವಾಡಿಕೆ. ಮಗು ಚೆನ್ನಾಗಿದೆ, ನಮ್ಮ ಜಾತಿಯವಳ ಮಗು ಎಂಬ ವರ್ಗ ಸಂಬಂಧ.

ಮೂರನೇ ದಿನ ಬೆಳಿಗ್ಗೆ, ಆ ವಾರ್ಡಿನಲ್ಲಿ ಮತ್ತೆ ಕುತೂಹಲ. ಏನೆಂದು ವಿಚಾರಿಸಿ ತಿಳಿದಾಗ ಹೌಹಾರಿದೆವು. ಹೆತ್ತವಳು ಮತ್ತು ಅವಳ ಅತ್ತೆ ನಡೆಸಿದ ಫಿತೂರಿ. ಮನೆಯಿಂದ ಬದಲಿ ಸೀರೆ ತರಿಸಿದ ಹುಡುಗಿ ಬಚ್ಚಲು ಮನೆಗೆ ಹೋಗುವ ನೆಪದಲ್ಲಿ ಸೀರೆಯನ್ನು ಬದಲಿಸಿ ಆಸ್ಪತ್ರೆಯ ಬಟ್ಟೆಯನ್ನು ಅಲ್ಲೆ ಎಸೆದು ಆಸ್ಪತ್ರೆಗೆ ಬರುವ ಸಂದರ್ಶಕರ ಗುಂಪಿನಲ್ಲಿ ಸೇರಿಕೊಂಡು ಪಲಾಯನ ಹೇಳಿದ್ದಳು. ಕೊಟ್ಟದ್ದು ಬೋಗಸ್ ವಿಳಾಸ.

ಆದರೆ ಆ ಅನಾಥ ಮಗು ಇದಾವುದರ ಕಲ್ಪನೆಯಿಲ್ಲದೆ ಬೆರಳು ಚೀಪುತ್ತ ಮಲಗಿತ್ತು.

ಪೋಲೀಸರಿಗೆ ದೂರು ಇತ್ಯಾದಿ ಚಟುವಟಿಕೆಗಳು ಪ್ರಾರಂಭವಾದವು. ಮಗುವನ್ನು ಯಾರಾದರೂ ದತ್ತು ತೆಗೆದುಕೊಂಡರೆ ತಮಗೆ ಯಾವ ಆಕ್ಷೇಪವೂ ಇಲ್ಲವೆಂದರು, ಮುಖ್ಯಸ್ಥೆ.

"ನಮ್ಮ ಹುಡುಗ; ಲಕ್ಷಣವಾಗಿದ್ದಾನೆ. ನಾವೇ ಸಾಕಿಕೊಂಡರೆ ಹೇಗೆ?" –ನಾವು ಗೆಳತಿಯರು ಯೋಚಿಸಿದೆವು. ಪರಸ್ಪರರು ಸಹಕರಿಸುವುದೆಂದು ನಿರ್ಧರಿಸಿದೆವು. ನಮ್ಮ ತಾಯಿಗೆ ವಿಷಯವನ್ನು ತಿಳಿಸಿದಾಗ ಅವರು ಎಗರಿಬಿದ್ದರು.

"ನಿಮಗೆ ತಿಳುವಳಿಕೆ ಇದೆಯೆ? ಆ ಮಗುವನ್ನು ಸಾಕಿದರೆ ನಿಜ ತಿಳಿಯದ ಜನ ಏನಂತಾರೆ? ಅದು ನಮ್ಮ ಹೆತ್ತ ಮಗ ಅಂದರೂ ಯಾ ನಂಬ್ತಾರೆ? ಈಚಲು ಮರದ ಕೆಳಗೆ ಮ ಕುಡಿದ ಕಥೆಯಾಗುತ್ತೆ." ಎಂದು ನಮ್ಮ ಅ ಒಂದೇ ಬಾರಿಗೆ ಆಗದೆಂದುಬಿಟ್ಟರು.

"ಅವಿವಾಹಿತ ಹೆಣ್ಣು ಕಂಡೋರ ಮಗ ಸಾಕೋಣ ಅಂದ್ರೇನು?" ಎಂದು ನನ್ನ ಗೆಳತಿ ಮನೆಯಲ್ಲಿ ಬೈಗುಳ; ಕೂಗಾಟ.

ಒಂದು ಸುಂದರವಾದ ಹೂವು, ನಮ್ಮ ಜಾರಿ ಹೋಗುತ್ತಿದೆಯಲ್ಲ ಎಂಬ ತಾಪ ನಮ ನಮ್ಮ ಹಾಗೇ ಇನ್ನಿತರ ವೈದ್ಯೆಯರಿಗೂ ಅನ ರಕ್ಷಣೆಯ ಇಷ್ಟವಿತ್ತು. ಆದರೆ ಪರಿಸರ ಕಾಶ ಕೊಡಲಿಲ್ಲ. ಪರಿತಪಿಸಿದೆವು.

ಅಂಥ ವೇಳೆಯಲ್ಲಿ ಆಸ್ಪತ್ರೆಯ ಮು ಸ್ಥೆಯ ಪರಿಚಿತರು–ಬೇರೆ ಮತದವರು–ತಮ ಮಕ್ಕಳಿಲ್ಲದುದರಿಂದ ಆ ಮಗುವನ್ನು ದ ತೆಗೆದುಕೊಂಡರು. ಆಕೆ ತಮ್ಮ ಕೈಗೆ ಮಗುವ ಎತ್ತಿಕೊಂಡಾಗ ನಮಗೆಲ್ಲ ಆಘಾತ. ನ ಮತದವನ್ನು ಬೇರೆ ಮತದವರ ಮನೆಯಲ್ಲಿ ಬೆಳೆ ಬೇಕಲ್ಲ ಎಂಬ ಆತಂಕ. ಕೆಲವು ದಿನಗಳ ಅದೇ ಚಿಂತೆಯಲ್ಲಿ ನನ್ನ ಹೃದಯ ಭಾರವಾಗಿತ್ತು

ಎರಡು ವರ್ಷಗಳ ಬಳಿಕ ಆಕೆ ಬಂದಿದ್ದ ಚೆನ್ನಾಗಿ ಆರೋಗ್ಯವಂತನಾಗಿ ಬೆಳೆದಿದ್ದ ಎ ವರ್ಷದ ಮಗು ಅವರ ಕೈ ಹಿಡಿದು ನಡೆ ಬಂದುದನ್ನು ಕಂಡು ಬೆರಗಾದೆವು.

ನಮ್ಮ ಮತದ ಹುಡುಗನಿಗೆ ನಮ್ಮ ಮನೆಯ ಜಾಗವಿಲ್ಲ. ನೆಲದ ಮೇಲೆ ಬಿದ್ದು ಹಾಳಾಗಲ ಹೂವನ್ನು ತಮ್ಮ ಕೈಗೆತ್ತಿಕೊಂಡ ಆ ತಾ ತೋರಿಸಿದುದು ಪ್ರೀತಿಯ ಮತ. ಅದಕ್ಕಿಂತ ಹಿರಿದಾದುದು ಇನ್ನೊಂದಿರಲು ಸಾಧ್ಯವೆ?–ಎಂ ಚಿಂತಿಸಿದಾಗ ಹೃದಯ ಕರಗಿತು. ಆಕೆಯ ಮನಸಾರೆ ವಂದಿಸಿದೆ.

ಈಗ ಆ ಹುಡುಗ ಬೆಳೆದು ಓದಿ, ಹೃದಯ ಸುಖ ಕೊಡುವಂತೆ ಉನ್ನತ ಪದವಿಯಲ್ಲಿದ್ದಾ ನೋಡಿದಾಗಲೆಲ್ಲ ತುಂಬ ಆನಂದವಾಗುತ್ತದೆ.

(ತಮಿಳಿನ 'ವೈದ್ಯರ ಕೈಗೆ ಬಂದ ಹೂಗಳು' ದಿಂದ)

ಪದಾರ್ಥ ಚಿಂತಾಮಣಿ

–೩೮–

ನಾನು ಉತ್ತರ ಕರ್ನಾಟಕಕ್ಕೆ ಆದೇ ಬಂದ ಸಮಯದಲ್ಲಿ ನನ್ನ ಮಿತ್ರನೊಬ್ಬನಿಗೆ ಬಂದ ಪತ್ರದಲ್ಲಿ ಕೊನೆಗೆ "ಲೋಭವಿರಲಿ" ಎಂಬೊಂದು ಒಕ್ಕಣೆಯನ್ನು ಕಂಡು ಚಕಿತನಾದೆ. ಮನುಷ್ಯನ ಷಡ್ವೈರಿಗಳೆಂದು ತತ್ವಜ್ಞಾನಿಗಳು ಹೇಳುವ ಭಾವನೆಗಳಲ್ಲಿ ಒಂದಾದ ಲೋಭ ಇರಬೇಕೆಂದು ಈ ಮಹನೀಯರು ಅಪೇಕ್ಷಿಸುತ್ತಾರಲ್ಲ! ನನ್ನ ಸ್ನೇಹಿತನನ್ನು ಕೇಳಿದಾಗ ಆತ, ಅದನ್ನು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಪ್ರೀತಿ ಇರಲಿ ಎಂಬರ್ಥದಲ್ಲಿ ಹಳೇ ಮಂದಿ ಪ್ರಯೋಗಿಸುತ್ತಾರೆಂದು ತಿಳಿಸಿದ. ಉದಾತ್ತ ಭಾವನೆಯಾದ ಪ್ರೀತಿಗೂ ದುರಾಶೆ, ಜಿಪುಣತನಗಳಂಥ ಕೀಳು ಅಭಿಪ್ರಾಯವನ್ನು ಸೂಚಿಸುವ ಲೋಭಕ್ಕೂ ಎಲ್ಲಿಯ ಸಾಮ್ಯ ಎಂಬ ಆಲೋಚನೆ ನನ್ನನ್ನು ಬಿಡಲಿಲ್ಲ ಆದರೆ ಮೊನ್ನೆ ಏತಕ್ಕೋ ಇಂಗ್ಲಿಷ್ ನಿಘಂಟನ್ನು ತಿರುವಿ ಹಾಕುವಾಗ ನನಗೆ ಇನ್ನೊಂದು ಸೋಜಿಗದ ಮೂಲಕ ಸಂಶಯ ಪರಿಹಾರವಾಯಿತು.

ಇಂದಿನ ವ್ಯಕ್ತಿಸ್ವಾತಂತ್ರ್ಯದ ದಿನಗಳಲ್ಲಿ ಹುಡುಗ ಹುಡುಗಿಯರು ತಮಗಿಷ್ಟ ಬಂದವರನ್ನು –ಹಿರಿಯರನ್ನು ಲೆಕ್ಕಿಸದೆ–ಮದುವೆಯಾಗುವ ಪ್ರಕರಣಗಳಿಂದಾಗಿ ಇಂಗ್ಲೀಷಿನ love (ಲವ್ಹ) ಶಬ್ದ ಅಜ್ಜಮ್ಮಗಳಿಗೂ ಚೆನ್ನಾಗಿ ಪರಿಚಯವಾಗಿದೆ. ಈ **ಲವ್ಹ** ಮತ್ತು ಸಂಸ್ಕೃತದ **ಲುಭ್** ಧಾತುಗಳೆರಡೂ ಹತ್ತಿರದ ಸಂಬಂಧಿಕರೆಂದು ಆಕ್ಸ್‌ಫರ್ಡ್ ಶಬ್ದಕೋಶ ಹೇಳುತ್ತದೆ. ಲ್ಯಾಟಿನ್ನಿನಿಂದ ಹಿಡಿದು ಹಳೇ ಇಂಗ್ಲೀಷು, ಹಳೇ ಸ್ಲಾವಿಕ್ ವರೆಗೆ ಅನೇಕ ಭಾರೋಪ್ಯ ಭಾಷೆಗಳಲ್ಲಿ ಸಂಸ್ಕೃತದ ಈ **ಲುಭ್** ಧಾತುವಿಗೆ ಅತಿ ಸಮೀಪ ಧ್ವನಿ ಸಾಮ್ಯವುಳ್ಳ ಪದಗಳಿವೆ. ಅವೆಲ್ಲವುಗಳ ಅರ್ಥವೂ ಮೆಚ್ಚು, ಇಷ್ಟಪಡು, ದಾಕ್ಷಿಣ್ಯ ತೋರಿಸು, ಮೆಚ್ಚಿಕೆಯಾಗು ಇತ್ಯಾದಿಯಾಗಿದೆ. ಸಂಸ್ಕೃತದಲ್ಲಿ ಈ **ಮೆಚ್ಚುವಿಕೆ** ಹೆಚ್ಚಿ **ಇಚ್ಛೆ**ಗೆ ತಿರುಗಿ, ಕೊನೆಗೆ **ಅತ್ಯಾಶೆ**ಯಲ್ಲಿ ಪರ್ಯವಸಾನ ಹೊಂದಿದರೂ ಭಾರತದ ಕೆಲ ಪ್ರದೇಶಗಳಲ್ಲಾದರೂ ಮೂಲ ಸೌಮ್ಯಾರ್ಥ ಇಂದಿಗೂ ಜೀವಂತವಾಗಿರುವುದನ್ನು ನೋಡಿದರೆ ಪದಾರ್ಥಗಳ ದೀರ್ಘಾಯುಷ್ಯ ನಮ್ಮನ್ನು ಆಶ್ಚರ್ಯಪಡಿಸುತ್ತದೆ. ಹೆಚ್ಚು ಕೇಳಿದರೆ ಗಂಡು–ಹೆಣ್ಣಿನ ಮಟ್ಟಿಗಾದರೂ **ಲವ್ಹ** ಎಂದರೆ ಪರಸ್ಪರರನ್ನು ಸ್ವಾಧೀನ ಮಾಡಿಕೊಳ್ಳುವ ಆಸೆ ಅಲ್ಲವೆ? **ಲೋಭ**ವೆಂದರೆ ಮತ್ತೆ ಏನು? ಯೌರೋಪ್ಯಾರ್ಯ ಭಾಷೆಗಳಲ್ಲಿ ಇದೇ ಮೂಲ ಪ್ರಾಚೀನಾರ್ಯ ಧಾತುವಿನಿಂದ ಉದ್ಭವಿಸಿದ libido (ಲಿಬಿಡೋ) ಪದ ತೀವ್ರವಾದ **ಕಾಮ** ಭಾವನೆಯೆಂಬ ಅರ್ಥ ಕೊಡುವಂತೆ ಆಧುನಿಕ ಲೈಂಗಿಕ ಮನೋವಿಜ್ಞಾನದಲ್ಲಿ ಬಳಸಲ್ಪಡುತ್ತದೆ. **ಕಾಮ** ಎಂಬ ಸಂಸ್ಕೃತ ಪದ ಕೂಡ ಸಾಮಾನ್ಯ ಪರಿಭಾಷೆಯಲ್ಲಿ **ಲೈಂಗಿಕ ಅಭಿಲಾಷೆ** ಎಂದು ಅರ್ಥ ಕೊಡುತ್ತಿದ್ದರೂ ಮೂಲದಲ್ಲಿ **ಕಮ್** ಧಾತುವಿಗೆ ಮೆಚ್ಚು, ಇಷ್ಟಪಡು ಎಂದೇ ಅರ್ಥ. ವೇದದಲ್ಲಿ "ಯಂ ಕಾಮಯೇ ತಂತಮುಗ್ರಂ ಕೃಣೋಮಿ"–ನಾನು ಮೆಚ್ಚಿದವನನ್ನು ಬಲಿಷ್ಠನನ್ನಾಗಿ ಮಾಡುತ್ತೇನೆ–ಎಂದು ಅಂಭೃಣಿ ಹೇಳುತ್ತಾಳೆ. **ಕಮನೀಯ** ಅಂದರೆ ಸುಂದರ ಎಂದು ಅರ್ಥವಾಗುತ್ತದೆ.

ಮತ್ತೆ ಪ್ರೀತಿಯೋ? ಪ್ರೀ ಧಾತುವಿನ ಅರ್ಥ ಮೆಚ್ಚಿಸು, ಉತ್ಸಾಹಗೊಳಿಸು, ಸಮಾಧಾನಪಡಿಸು ಇತ್ಯಾದಿ. ಋಗ್ವೇದದಲ್ಲೇ ಈ ಅರ್ಥ ಕಾಣಿಸುತ್ತದೆ. ಇದೂ ಭಾರೋಪ್ಯ ಭಾಷೆಗಳಲ್ಲಿ ವ್ಯಾಪಕವಾಗಿರುವ ಧಾತು. ಗಾಥಿಕ್, ಜರ್ಮನ್, ಸ್ಲಾವ್ ಮೊದಲಾದ ಭಾಷೆಗಳ frijon, friunt, prijati ಮೊದಲಾದ ಪದಗಳು ಇದೇ ಅರ್ಥ ಕೊಡುತ್ತವೆ. ಇಂಗ್ಲೀಷಿನ ಫ್ರೆಂಡ್ (= ಮಿತ್ರ) ಕೂಡ ಹಳೇ ಇಂಗ್ಲೀಷಿನ freon (= ಪ್ರೀತಿಸು) ಪದದಿಂದ ಬಂದದ್ದು. ಆದ್ದರಿಂದ ಫ್ರೆಂಡ್ = ಪ್ರಿಯ.

— ಪಾವೆಂ

ಕಣಜ ಮತ್ತು ಜೇಡ

ಜೆ. ವೆಂಕಟರಾಮಯ್ಯ

ಜೀವ ಜಗತ್ತಿನ ಎಲ್ಲ ಜೀವಿಗಳ ನಡುವೆ ವೈವಿಧ್ಯವೂ ಪರಸ್ಪರ ಅವಲಂಬನೆ, ಪರಸ್ಪರ ಅನುಬಂಧ, ಪರಸ್ಪರ ಸಂಬಂಧ ಇವು ಇದ್ದೇ ಇವೆ. ಅದು ಪ್ರಕೃತಿ ನಿರ್ಮಿಸಿರುವ ಒಂದು ಅದ್ಭುತ ಸಮತೋಲನ ವ್ಯವಸ್ಥೆ.

ಪ್ರತಿ ಜೀವಿಯೂ ಆಹಾರಕ್ಕೆ, ರಕ್ಷಣೆಗೆ ಅಥವಾ ವಂಶಾಭಿವೃದ್ಧಿಗೆ ಇತರ ಜೀವಿಗಳನ್ನು ಆಶ್ರಯಿಸಲೇಬೇಕು.

ಜೀವಿಯೊಂದು ಅಳಿಯದೆ ಉಳಿಯಲು, ಉಳಿದು ಬೆಳೆಯಲು, ಅದಕ್ಕೆ ನಿರಂತರವಾಗಿ ಒದಗುವ ಆಹಾರದ ಮೂಲವೊಂದಿರಬೇಕು. ಮಿಶ್ರಾಹಾರಿಗಳ, ಸಸ್ಯಾಹಾರಿಗಳ ಜೀವನ ಬಹಳ ಜಟಿಲವಲ್ಲ. ಆದರೆ ಕಟ್ಟಾ ಮಾಂಸಾಹಾರಿಗಳ ಬದುಕು ಸುಲಭವಲ್ಲ. "ಬೇಟೆ"ಯೇ ದೊರಕದಿದ್ದರೆ "ಬೇಟೆಗಾರ"ನ ಗತಿಯೇನು? ಅದಿರಲಿ, "ಬಲಿ"ಯೇ "ಬೇಟೆಗಾರ"ನನ್ನು ಬೇಟೆಯಾಡಹೊರಟರೆ? ಆಗ ಇಂತಹ ಜೀವಿಗಳ ಉಳಿವು ಬಹಳ ಕಷ್ಟಕರ.

ಪರಸ್ಪರಾನುಬಂಧಗಳು ಇನ್ನೆಲ್ಲಿಗಿಂತಲೂ ಹೆಚ್ಚಾಗಿ ಕೀಟಗಳ ಲೋಕದಲ್ಲಿವೆ. ಅಲ್ಲಿನ ಈ ಸಂಬಂಧಗಳು ಅತ್ಯಂತ ಸಂಕೀರ್ಣ ಆಯಾಮಗಳನ್ನು ಹೊಂದಿವೆ. ಒಂದು ಕೀಟ ಯಾವುದೇ ಕಾರಣಕ್ಕೆ ಅಳಿದುಹೋದರೆ ಅದಕ್ಕೆ ಸಂಬಂಧಿಸಿದ ಕೀಟಗಳ ಸರಣಿಯೇ ನಾಶವಾಗಿಬಿಡುತ್ತದೆ.

ಜೀವಿಗಳ ನಡುವಣ ಪರಸ್ಪರ ಸಂಬಂಧಗಳು ಹಲವು ಬಾರಿ ಊಹೆಗೂ ನಿಲುಕದಷ್ಟು ವಿಸ್ಮಯಕರವಾಗಿ ಇರುವುದೂ ಉಂಟು.

"ಲಾರ್ವಾ" ಹಂತದಲ್ಲಿ ಕೆಲವು ಕೀಟಗಳು ನೂರಕ್ಕೆ ನೂರು ಮಾಂಸಾಹಾರಿಗಳು. ಆದರೆ ಅದೇ ಕೀಟಗಳು "ಪ್ರೌಢ" ಹಂತದಲ್ಲಿ ಅಷ್ಟೇ ಸಂಪೂರ್ಣ ಸಸ್ಯಾಹಾರಿಗಳು. ಸಸ್ಯಾಹಾರಿ ತಾಯಿ ತನ್ನ ಸಂತತಿ ಉಳಿಯಲು ನಿರ್ದಿಷ್ಟವಾದ ಜೀವಿಯ, ಸರಿಹೊಂದುವ, ಆದರೆ ತಾನೇ ರುಚಿ ನೋಡದ ಮಾಂಸಾಹಾರವನ್ನು ತನ್ನ ಮರಿಗೆ ಒದಗಿಸಬೇಕು. ತಾಯಿಯ ಹುಟ್ಟರಿವನ್ನವಲಂಬಿಸಿದ ಈ ಆಯ್ಕೆಯ ಮೇಲೆ ಅದರ ಸಂತತಿಯ ಉಳಿವು ಅವಲಂಬಿಸಿದೆ.

ತಮ್ಮ ಸಂತತಿಯನ್ನು ಬೆಳೆಸುವಲ್ಲಿ ಕೀಟಗಳಾದ ಕಣಜಗಳು ಮತ್ತು ಜೇಡಗಳು (ಇವು ಕೀಟಗಳಲ್ಲ) ವಿಚಾರಕ್ಕೆ ನಿಲುಕದ, ಊಹೆಗೆ ಎಟುಕದ ಆಶ್ಚರ್ಯಕರ ಕ್ರಿಯಾ ನಿದರ್ಶನಗಳನ್ನು ತೋರುತ್ತವೆ. ನಾನು ಇಲ್ಲಿ ವಿವರಿಸಹೊರಟಿರುವ ವಿಸ್ಮಯಕರ ಸಂಬಂಧ ದೈತ್ಯಾಕಾರದ "ಟರಾಂಟ್ಯುಲಾ" ಜೇಡಗಳು ಹಾಗೂ ಅವುಗಳ ಹುಟ್ಟು ಶತ್ರು "ಪೆಪ್ಸಿಸ್" ವಂಶದ "ತೋಡು ಕಣಜ"ಗಳ ನಡುವಣದು. ಇದೊಂದು ಆದರ್ಶ ಸಂದರ್ಭ. ದೇಹ ಶಕ್ತಿ ಮತ್ತು ಬುದ್ಧಿಮಂತಿಕೆಗಳು ಹುಟ್ಟರಿವಿನ ಮುಂದೆ ಹೆಚ್ಚಾಗಿ, ಮಂಕಾಗಿ ಶರಣಾಗುವ ಸಂದರ್ಭ.

(ಕೃಪೆ: 'ವಿಜ್ಞಾನ ಸೌರಭ')



ಟರಾಂಟ್ಯುಲಾ ಜೇಡ

"ಟರಾಂಟ್ಯುಲಾ" ಜೇಡಗಳು ದೊಡ್ಡ ದೇಹದವು. ರೋಮಭರಿತ ದೇಹ, ಭಯಂಕರ ರೂಪ ಮತ್ತು ಉತ್ತಮ ದೇಹಶಕ್ತಿಯಷ್ಟೇ ಅಲ್ಲದೆ ಬಲವಾದ ಒಂದು ಜೊತೆ ವಿಷ ಕೊಂಡಿಗಳೂ ಇವಕ್ಕುಂಟು. ಈ ಜೇಡಗಳ ದಾಳಿಗೆ ಇಲಿಗಳಂತಹ ಸಸ್ತನಿಗಳೂ ಸಾಯುತ್ತವೆ.

"ಟರಾಟ್ಯುಲಾ"ಗಳು ಸಾಂಪ್ರದಾಯಿಕವಾಗಿ ಆಳವಾದ ಬಿಲಗಳಲ್ಲಿ ವಾಸಿಸುತ್ತವೆ. ಬಲೆ ನೇಯದ ಜೇಡಗಳು ಇವು. ಹೊಂಚು ಕಾದು ಬಲಿಯ ಮೇಲೆ ಎರಗಿ ಬಿದ್ದು, ಹಿಡಿದುಕೊಂಡು "ಕಾಡಿಯುತ್ತವೆ."_ಇವುಗಳ ತಿರುಗಾಟ ರಾತ್ರಿಯಲ್ಲಿ ಮಾತ್ರ. ಹೆಣ್ಣನ್ನು ಕೂಡಿದ ಕೆಲವೇ ವಾರಗಳಲ್ಲಿ ಗಂಡು ಸಾಯುತ್ತದೆ. ಆದರೆ ಹೆಣ್ಣು ಟರಾಂಟ್ಯುಲಾಗಳು ದೀರ್ಘಾಯುಷಿಗಳು. ಇವು ೨೦–೨೫ ವರ್ಷಗಳವರೆಗೂ ಬದುಕಿರುವ ದಾಖಲೆಯಿದೆ.

ಹೆಣ್ಣು ಟರಾಂಟ್ಯುಲಾ ಒಮ್ಮೆಗೆ ೨೦೦ರಿಂದ ೪೦೦ ಮೊಟ್ಟೆಗಳನ್ನಿಡುತ್ತದೆ. ಆದ್ದರಿಂದಲೇ ಪ್ರತಿ ಹೆಣ್ಣು ಜೇಡ ತನ್ನ ಜೀವಿತ ಕಾಲದಲ್ಲಿ ಹಲವಾರು ಸಾವಿರ ಮರಿಗಳನ್ನು ಈಯಬಲ್ಲದು. ಕೀಟಗಳು ಮತ್ತು ಸಹಸ್ರಪದಿಗಳು ಇವುಗಳಿಗೆ ಮುಖ್ಯ ಆಹಾರ. ಇವುಗಳಿಗೆ ದೃಷ್ಟಿ ಶಕ್ತಿ ಬಹಳ ಮಂದ. ಶ್ರವಣ ಶಕ್ತಿ ಸ್ವಲ್ಪವೂ ಇಲ್ಲ. ಆದರೆ ಸ್ಪರ್ಶಕ್ಕೆ ಇವು ಬಹು ಸೂಕ್ಷ್ಮ ಸಂವೇದಿಗಳು. ಯಾವುದೇ ಕೀಟ ರೋಮ ತುಂಬಿದ ಇವರ ಶರೀರವನ್ನು ಮುಟ್ಟಿದರೆ, ಹಸಿವಾಗಿದ್ದರೆ ಟರಾಂಟ್ಯುಲಾ ಅದನ್ನು ಕ್ಷಣಾರ್ಧದಲ್ಲಿ ಕೊಲ್ಲುತ್ತದೆ. ಹಸಿವಿಲ್ಲದಾಗ ಕಾಲನ್ನೊದರಿ ಸುಮ್ಮನಾಗುತ್ತದೆ. ತಾನೇ ದೂರ ಸರಿಯುತ್ತದೆ. ಟರಾಂಟ್ಯುಲಾದ ಸ್ಪರ್ಶೇಂದ್ರಿಯಗಳು ಎಷ್ಟು ಸೂಕ್ಷ್ಮವೆಂದರೆ ಇವು ಈ ಜೇಡನಿಗೆ ಒದಗುವ ಯಾವುದೇ ತೊಂದರೆ, ಅಪಾಯಗಳಿಂದ ಕ್ಷಿಪ್ರ ರಕ್ಷಣೆ ಒದಗಿಸುತ್ತವೆ. ಇತರ ಜೀವಿಗಳಿಂದ ಟರಾಂಟ್ಯುಲಾಗಳು ತೊಂದರೆಗೆ ಒಳಗಾಗುವುದು ಬಹಳ ಕಡಿಮೆ. ಆದರೆ ಈ ಸರ್ವವ್ಯಾಪ್ತ ಸೂಕ್ಷ್ಮ ಜ್ಞಾನೇಂದ್ರಿಯ ವ್ಯವಸ್ಥೆ ಟರಾಂಟ್ಯುಲಾದ ಶತ್ರು "ಪೆಪ್ಸಿಸ್" ಕಣಜ ಬಂದಾಗ ಮಾತ್ರ ಅದೇಕೋ ಸಂಪೂರ್ಣವಾಗಿ ಸೋಲುತ್ತದೆ.



ಪೆಪ್ಸಿಸ್ ಕಣಜ

ತೋಡು ಕಣಜ "ಪೆಪ್ಸಿಸ್"ಗಳು ಸುಂದರ ಕೀಟಗಳು. ಹೊಳಪಿನ ನೀಲಿ ಮೈಯ ಇವು ಅತಿ ದೊಡ್ಡವೆಂದರೆ ೧೦ ಸೆಂಟಿಮೀಟರ್ ರೆಕ್ಕೆ ವಿಸ್ತಾರ ಹೊಂದಿರುತ್ತವೆ. ಏಕಾಂತಪ್ರಿಯವಾದ ಈ ಕಣಜಗಳ ಆಹಾರ ಹೂಗಳಲ್ಲಿನ ಮಕರಂದ. ಕೆಣಕಿದಾಗ ಘಾಟುವಾಸನೆ ಹೊಮ್ಮಿಸಿ ದಾಳಿಗೆ ಸಿದ್ಧವಾಗುತ್ತವೆ. ಪ್ರೌಢ ಹಂತದಲ್ಲಿ ಈ ಕಣಜಗಳ ಜೀವನಾವಧಿ ಕೆಲವೇ ತಿಂಗಳುಗಳು. ಹೆಣ್ಣು ಕೆಲವೇ ಮೊಟ್ಟೆಗಳನ್ನಿಡುತ್ತದೆ. ಒಮ್ಮೆಗೆ ಒಂದು ಮಾತ್ರ. ಅದೂ ಎರಡು ಮೂರು ದಿನಗಳಿಗೆ ಒಮ್ಮೆ.

ತನ್ನ ಪ್ರತಿ ಮೊಟ್ಟೆಗೂ ತಾಯಿ ಕಣಜ ಒಂದು ಟರಾಂಟ್ಯುಲಾ ಜೇಡನನ್ನು ಒದಗಿಸಬೇಕು. ಮೊಟ್ಟೆ ಒಡೆದು ಹೊರಬಂದಾಗಿನಿಂದ ಲಾರ್ವಾ ಹಂತ ಮುಗಿದು ಪ್ರೌಢಾವಸ್ಥೆ ತಲುಪುವವರೆಗೆ "ಪೆಪ್ಸಿಸ್" ಕಣಜನ ಮರಿಗೆ ಆಹಾರ, ನೀರು ಎಲ್ಲವೂ ಈ ಜೇಡನೇ. ಕೊನೆಗೆ ಉಳಿಯುವುದು ಟರಾಂಟ್ಯುಲಾದ ಅಸ್ಥಿಪಂಜರ ಮಾತ್ರ.

ಮೊಟ್ಟೆಯಿಡುವಾಗ ಹೆಣ್ಣು ಪೆಪ್ಸಿಸ್ ಕಣಜ ಟರಾಂಟ್ಯುಲಾದ ಬೇಟೆಗೆ ಹೊರಡುತ್ತದೆ. ಜೇಡನ ಬಿಲ ಗೂಡುಗಳ ಬಳಿ ಹುಡುಕಿ ಹುಡುಕಿ ಹಾರುತ್ತದೆ. ಜೇಡನ ಲಿಂಗ ಯಾವುದೇ ಆಗಿರಬಹುದು. ಆದರೆ ಅದರ ವಂಶದ ಬಗೆಗೆ ಕಣಜಕ್ಕೆ ಬಹಳ ಆಸಕ್ತಿ. ಪ್ರತಿ ವಂಶದ ಪೆಪ್ಸಿಸ್ ಕಣಜಕ್ಕೂ ಒಂದು ನಿರ್ದಿಷ್ಟ ವಂಶದ ಟರಾಂಟ್ಯುಲಾ ಜೇಡವೇ ದೊರಕಬೇಕು. ತನಗೆ ಸರಿ ಹೊಂದದ ವಂಶದ ಜೇಡನ ಮೇಲೆ ತಾಯಿ ಕಣಜ ತಪ್ಪಿ ದಾಳಿ ನಡೆಸುವುದೇ ಇಲ್ಲ.

ಸಾಮಾನ್ಯವಾಗಿ ಯಾವಾಗಲೂ ಈ ಕಣಜಗಳನ್ನು ಟರಾಂಟ್ಯುಲಾಗಳು ಕ್ಷಣದೊಳಗೆ ಹಿಡಿದು ತಿಂದು ಮುಗಿಸಿಬಿಡುತ್ತವೆ. ಆದರೆ ಕಣಜ ಮೊಟ್ಟೆಯಿಡುವ ಸಂದರ್ಭದಲ್ಲಿ ಮಾತ್ರ ಈ ಕಥೆ ತಿರುವು ಮುರುವಾಗುತ್ತದೆ. ತಾನು ಕಂಡ ಜೇಡನ ಸರಿಹೊಂದುವಿಕೆಯನ್ನು ನಿರ್ಧರಿಸಲು ಕಣಜ ಅದರ ದೇಹಪರೀಕ್ಷೆ ನಡೆಸುತ್ತದೆ. ಬಹಳ ಒರಟಾದ ಈ ಪರೀಕ್ಷೆಯಲ್ಲಿ ಕಣಜ ಜೇಡನ ಮೇಲೆಲ್ಲಾ ಓಡಾಡಿ, ತಳ್ಳಿ, ಉರುಳಿಸಿ, ಏನೇನೋ ತಪಾಸಣೆ ನಡೆಸುತ್ತದೆ. ಸಾಧಾರಣ ಸಂದರ್ಭಗಳಲ್ಲಿ ಕಣ್ಣಿಮೆಯಿಕ್ಕುವಷ್ಟರಲ್ಲಿ ಕಣಜವನ್ನು ಸದೆ ಬಡಿಯುವ ಬಲಶಾಲಿ ಟರಾಂಟ್ಯುಲಾ ಈಗ ಮಾತ್ರ ಏಕೋ ಈ ಎಲ್ಲಾ ಸಂಕಷ್ಟ

ಗಳನ್ನೂ ಸಹಿಸಿಕೊಂಡೂ ಸುಮ್ಮನಿರುತ್ತದೆ. ಇದೇಕೆ ಹೀಗೆ? ಅದು ಅರ್ಥವಾಗದು.

ಸರಿ ವಂಶದ ಜೇಡನೇ ಇದು ಎಂಬುದನ್ನು ಖಾತ್ರಿಪಡಿಸಿಕೊಂಡು ಕೂಡಲೇ ಕಣಜ ಅಲ್ಲಿಂದ ಸ್ವಲ್ಪ ದೂರದಲ್ಲಿ ತನ್ನ ಕಾಲುಗಳಿಂದ ೨೦–೨೫ ಸೆಂಟಿ ಮೀಟರ್ ಆಳದ ಹಳ್ಳ ತೋಡುತ್ತದೆ. ಈ ಹಳ್ಳ ಜೇಡನನ್ನು ಹಿಡಿಸುವಷ್ಟು ವಿಶಾಲವೂ ಆಗಿರುತ್ತದೆ. ಕಣಜ ತನ್ನ ಗೋರಿಯನ್ನು ತೋಡುತ್ತಿರುವಾಗಲೂ ಜೇಡ ಮಾತ್ರ ಚಲಿಸದೇ ನಿಂತಿರುತ್ತದೆ. ಗೋರಿ ತೋಡುವಾಗ ಕಣಜ ಮಧ್ಯೆ ಮಧ್ಯೆ ಹೊರಬಂದು ತನ್ನ ಬಲಿ ಅಲ್ಲಿಯೇ ಉಳಿದಿದೆಯೇ ಎಂದು ನೋಡುತ್ತದೆ.

ಹಳ್ಳ ಸಿದ್ಧವಾದ ಕೂಡಲೇ ಕಣಜ ತನ್ನ ಮುಂದಿನ ರಾಕ್ಷಸೀ ಕೃತ್ಯಕ್ಕೆ ಅಣಿಯಾಗುತ್ತದೆ. ಅತ್ಯುಗ್ರವಾಗಿ ಜೇಡನ ಮೇಲೆ ಎರಗುತ್ತದೆ. ತನ್ನ ವಿಷಕೊಂಡಿಯನ್ನು ಹೊರಚಾಚಿ ಜೇಡನ ಸೊಂಟದ ಮೃದು ಭಾಗವನ್ನು ಹುಡುಕುತ್ತದೆ. ಕಲ್ಲೊಂದಕ್ಕೆ ಜೇಡನನ್ನು ಒರಗಿಸಿ ಅದರ ಒಂದು ಕಾಲನ್ನು ಕಚ್ಚಿ ಹಿಡಿದು ಉರುಳಿಸುತ್ತದೆ. ಈಗ ಮಾತ್ರ ಜೇಡ ಪ್ರತಿರೋಧ ತೋರುತ್ತದೆ. ಒಂದು ಉಗ್ರ ಕದನವೇ ನಡೆಯುತ್ತದೆ. ಆದರೆ ಫಲಿತ ಯಾವಾಗಲೂ ಒಂದೇ. ಕಣಜ ತನ್ನ ವಿಷವನ್ನು ಜೇಡನಿಗೆ ಚುಚ್ಚುತ್ತದೆ. ಕೂಡಲೇ 'ಜೇಡ' ನಿಶ್ಚೇಷ್ಟಿತವಾಗಿ ನೆಲಕ್ಕೆ ಒರಗುತ್ತದೆ. ಅದರ ಕಾಲುಗಳು ನಿಷ್ಕ್ರಿಯವಾಗುತ್ತವೆ. ಹೃದಯ ಬಡಿತ ನಿಲ್ಲುತ್ತದೆ. ಆದರೂ ಜೇಡ ಸತ್ತಿರುವುದಿಲ್ಲ.

ಈಗ ಕಣಜ ತನ್ನನ್ನೇ ತಾನು ಸ್ವಚ್ಛಮಾಡಿಕೊಳ್ಳುತ್ತದೆ. ನಂತರ ಜೇಡನನ್ನು ತಾನೇ ತೋಡಿದ ಹಳ್ಳದೊಳಕ್ಕೆ ಉರುಳಿಸುತ್ತದೆ. ಜೇಡನ ಸೊಂಟದಲ್ಲಿನ ಗಾಯದ ಒಂದು ತೊಟ್ಟು ರಕ್ತ ಹೀರಿ ಅಲ್ಲಿ ಒಂದು ಮೊಟ್ಟೆಯನ್ನಿಡುತ್ತದೆ. ಅಂಟುರುವ ಜಿಟ್ಟು ಮೊಟ್ಟೆಯನ್ನಲ್ಲಿಗೆ ಬಂಧಿಸುತ್ತದೆ. ಹೊರಬಂದು ಹಳ್ಳವನ್ನು ಮಣ್ಣಿನಿಂದ ಮುಚ್ಚಿ ಯಾವುದೇ ಗುರುತು ಸಿಗದಂತೆ ಮಾಡಿ ಹಾರಿ ಸಾರಿಬಿಡುತ್ತದೆ.

ಈ ಇಡೀ ಕ್ರಿಯಾಸರಣಿಯಲ್ಲಿ ಕಣಜದ ನಡವಳಿಕೆಗಳ ಗುಣಾಂಕಗಳು ಜೇಡನದಕ್ಕಿಂತ ಬಹಳ ಹೆಚ್ಚು. ಕಣಜದ ಕ್ರಿಯೆಗಳೂ ಸಂದರ್ಭಕ್ಕೆ ಅನುಗುಣವಾಗಿ ಬದಲಾಗುವ ಚತುರತೆಯನ್ನು ಪಡೆದಿವೆ. ನಿರಾಯಾಸವಾಗಿ ತಂತಾನೇ ನಡೆಯುತ್ತವೆ.. ಸರಿವಂಶದ ಜೇಡನನ್ನೇ ಅರಿಯುವ ಸೂಕ್ಷ್ಮಮತಿ ಕಣಜನಿಗೆ ಹೇಗೆ? ಇದು ಇನ್ನೊಂದು ಅರ್ಥವಾಗದ ವಿಚಾರ.

ಇದಕ್ಕೆ ವಿರುದ್ಧವಾಗಿ ಜೇಡನ ನಡವಳಿಕೆಗಳೆಲ್ಲವೂ ಗೊಂದಲಮಯ. ಬಲಶಾಲಿಯೂ, ಬೇಟೆಗಾರನೂ ಆದ ಜೇಡನದೇಕೆ ಬೆಪ್ಪನಂತೆ ಬಲಿಯಾಗುವುದೋ ಏನೋ.

ಈ ಪ್ರಶ್ನೆಗಳಿಗೆ ಸರಳ ಉತ್ತರಗಳಿಲ್ಲ. ಟರಾಂಟ್ಯುಲಾಗಳ ಸ್ವಭಾವದಲ್ಲಿ ದಾಳಿಯನ್ನು ಆರಂಭಿಸುವ ಗುಣ ಇಲ್ಲ. ಅವು ಆದಷ್ಟು ಸಮಸ್ಯೆಗಳನ್ನು ಎದುರಿಸುವ ಬದಲು ಜಾರಿಕೊಳ್ಳಲೇ ನೋಡುತ್ತವೆ. ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲದಾಗ ಮಾತ್ರ ವಿಧಿಯಿಲ್ಲದೆ ಸೆಣಸುತ್ತವೆ. ಆದರೆ ಈ ಗುಣವೂ ಮೊಟ್ಟೆಯಿಡುವ ಕಣಜ ಬಂದಾಗ ತಣ್ಣಗಾಗುತ್ತದೆ. ಕಣಜದ ಅಂತಿಮ ದಾಳಿಯ ಕಾಲದಲ್ಲೂ ಜೇಡ ಅದನ್ನು ಹಿಡಿದು ಕೊಲ್ಲುವ ಬದಲು ತಪ್ಪಿಸಿಕೊಳ್ಳಲೇ ಬಯಸುತ್ತದೆ. ಬಹುಶಃ ಜೇಡನಿಗೆ ಕಣಜದ ದಾಳಿಯ ಗುರಿಯು ಅರಿವಿಲ್ಲದೆ ಹೋಗುವುದೋ ಏನೋ. ಹೇಗೆ ಆಗಲಿ ಟರಾಂಟ್ಯುಲಾ ಜೇಡಗಳ ಮತ್ತು ಪೆಪ್ಸಿಸ್ ಕಣಜಗಳ ಹುಟ್ಟು ಸಂಖ್ಯೆಗಳ ನಡುವಣ ಭಾರೀ ಅಂತರದಿಂದಾಗಿ ಟರಾಂಟ್ಯುಲಾಗಳು ಇನ್ನೂ ಉಳಿದಿವೆ. ✡

ಆಸ್ಟ್ರೇಲಿಯದ ನೆಲಗಪ್ಪೆಗೆ ಹಾವು ಸಮೀಪಿಸಿ ತಿನ್ನಲು ಬಾಯಿ ತೆರೆಯುತ್ತಿರುವಂತೆಯೇ ಬಲೂನಿನಂತೆ ಊದಿಕೊಂಡು ಗಾಳಿಯಲ್ಲಿ ದೂರ ಹಾರಿಹೋಗಿ ಬಿಡಬಲ್ಲ ವಿಶಿಷ್ಟ ಶಕ್ತಿಯಿದೆ.

ಡಾ. ಕೆರ್ಸ್ಟನ್

ಕ್ರೂರಿಯನ್ನು ಸಾಧುಗೊಳಿಸಿದ ವೈದ್ಯ

ಮೂಲ:
ಎಸ್. ರಾಘವೇಂದ್ರರಾವ್

ಅನುವಾದ:
'ನಾಚಾರ್'

ಅಮೇರಿಕದ ಖ್ಯಾತ ಸಮಾಜಶಾಸ್ತ್ರಜ್ಞ, ಪ್ರಕಾಂಡ ಪಂಡಿತ ಡಾ. ಆಷ್ಲೆ ಮಾಂಟೆಗ್ಯೂ ಅವರನ್ನು ಪ್ರಪಂಚದ ಕುಖ್ಯಾತ ಹಾಗೂ ಕ್ರೂರಿಗಳಾದ ಹತ್ತು ಮಂದಿಯ ಪಟ್ಟಿಯೊಂದನ್ನು ತಯಾರಿಸುವಂತೆ ಕೇಳಿದಾಗ ಆ ತಜ್ಞ ಈ ಪಟ್ಟಿಯಲ್ಲಿ ಹಿಟ್ಲರನ ಬಲಗೈ ಬಂಟ, ನಾಜಿ ಜರ್ಮನಿಯ ಹೈನ್ರಿಕ್ ಹಿಮ್ಲರನಿಗೆ ಆರನೇ ಸ್ಥಾನ ಕೊಟ್ಟರು. ಅವರ ಅಭಿಪ್ರಾಯದ ಪ್ರಕಾರ ಕ್ರೌರ್ಯದಲ್ಲಿ ಹಿಮ್ಲರನನ್ನು ಮೀರಿಸಿದ ಉಳಿದ ಐವರೆಂದರೆ ಅತ್ತಿಲ (ಹೂಣ), ಅಡಾಲ್ಫ್ ಹಿಟ್ಲರ್, ಕೈಸರ್ ವಿಲ್‌ಹೆಲ್ಮ್ – ೨, ಭಯಂಕರನಾದ ಇವಾನ್, ಹಾಗೂ ಉಗಾಂಡದ ಈದಿ ಅಮೀನ್.

ಬರ್ಲಿನ್ ನಗರದ ನಂ. ೮, ಪ್ರಿನ್ಸ್ ರಸ್ತೆಯ ದೊಡ್ಡ ಕಟ್ಟಡವೊಂದರಲ್ಲಿ ಗೆಸ್ಟಪೊ (ಜರ್ಮನಿಯ ಕುಖ್ಯಾತ ರಹಸ್ಯಗಳ) ಮತ್ತು ಬಿರುಗಾಳಿಯ ಪಡೆ ಎಂದು ಹೆಸರು ಪಡೆದ ಎಸ್. ಎಸ್. (sch-vz staffel) ಪಡೆಗಳ ಮುಖ್ಯ ಕಚೇರಿ ಇತ್ತು. ಜರ್ಮನಿಯ ಸಶಸ್ತ್ರ ದಳವನ್ನು ಬಿಟ್ಟರೆ ಈ ದಳ ಅತ್ಯಂತ ಶಕ್ತಿಶಾಲಿಯಾಗಿತ್ತು. ಗೆಸ್ಟಪೊ ಮತ್ತು ಎಸ್. ಎಸ್. ದಳಗಳ ಮುಖ್ಯಸ್ಥನೇ ಹೈನ್ರಿಕ್ ಹಿಮ್ಲರ್. ಹಿಟ್ಲರನನ್ನು ಬಿಟ್ಟರೆ ಆ ಕಾಲದ ನಾಜಿ ಜರ್ಮನಿಯ ಶಕ್ತಿಶಾಲಿ ಮುಖಂಡ. ಅವನ ಹೆಸರು ಕೇಳಿದ ಸಾಕು, ನಾಜಿಗಳಲ್ಲದ ಜರ್ಮನ್ ನಾಗರಿಕರ ನರಗಳಲ್ಲಿ ಹರಿಯುವ ರಕ್ತ ತಣ್ಣಗಾಗುತ್ತಿತ್ತು.

ಏನನ್ನಾದರೂ ಸಾಧಿಸಬಲ್ಲಷ್ಟು ಶಕ್ತಿಶಾಲಿಯಾಗಿದ್ದ ಹಿಮ್ಲರನು ಒಂದೇ ಒಂದು ವಿಷಯದಲ್ಲಂತೂ ನಿಸ್ಸಹಾಯಕನಾಗಿದ್ದನು. ಅವನಿಗೆ ಅಸಹನೀಯವಾದ ಹೊಟ್ಟೆನೋವಿತ್ತು. ಇಡೀ ಯುರೋಪಿನ ಯಾವ ಘನ ವೈದ್ಯನೂ ಅವನ ನೋವನ್ನು ಹೋಗಲಾಡಿಸಲು ಶಕ್ತನಾಗಿರಲಿಲ್ಲ. ಆ ನೋವಿನಿಂದ ಬಿಡುಗಡೆ ಹೊಂದಬಲ್ಲೆನೆಂಬ ಆಸೆಯನ್ನೇ ತೊರೆಯಲಿದ್ದ ಹಿಮ್ಲರನ ಕಿವಿಗೆ ಡಾ. ಫೆಲಿಕ್ಸ್ ಕೆರ್ಸ್ಟನ್ನನ ಹೆಸರು ಬಿದ್ದಿತು. ಈ ವೈದ್ಯನ ಕೈ ಬೆರಳುಗಳು ಪವಾಡವನ್ನೇ ನಡೆಸುವವೆಂಬ ಖ್ಯಾತಿಯೂ ಇತ್ತು.

ಡಾ. ಫೆಲಿಕ್ಸ್ ಕೆರ್ಸ್ಟನ್ ಔಷಧಶಾಸ್ತ್ರದ ವೈದ್ಯನಲ್ಲ. ಕನಿಷ್ಠ ಎಂ. ಡಿ. ಪದವಿಯನ್ನೂ

('ಮಿರರ್'ನಿಂದ)

ಪಡೆದವನಲ್ಲ. ಆದರೆ ಫಿನ್ನಿಶ್ ಮಾಲೀಶು ಕಲೆಯ ತಜ್ಞನಾಗಿದ್ದನು. ಮೊದಲ ಮಹಾಯುದ್ಧದ ಸಂದರ್ಭದಲ್ಲಿ ಫಿನ್ಲೆಂಡಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದ ನಂತರ ಆತನು ಈ ಕಲೆಯನ್ನು ಫಿನ್ಲೆಂಡ್ ಮತ್ತು ಜರ್ಮನಿಗಳಲ್ಲಿ ಅಭ್ಯಸಿಸಿದ್ದನು. ಅದೇ ವೇಳೆಗೆ ಸರಿಯಾಗಿ ಟಿಬೇಟಿನ ಮಾಲೀಶು ತಜ್ಞ ಡಾ. ಕೋ ಅವರ ಗೆಳೆತನವೂ ಕೆರ್ಸ್ಟನ್ನನಿಗೆ ಲಭ್ಯವಾಯಿತು. ಕೆರ್ಸ್ಟನ್ನನ ವಿಚಾರದಲ್ಲಿ ಸದ್ಭಾವನೆ ಹೊಂದಿದ್ದ ಡಾ. ಕೋ, ತಾನು ಪರಂಪರಾಗತವಾಗಿ ಕಲಿತಿದ್ದ ಈ ಮಾಲೀಶು ವಿದ್ಯೆಯ ರಹಸ್ಯವನ್ನೆಲ್ಲಾ ಕೆರ್ಸ್ಟನ್ನನಿಗೆ ತಿಳಿಸಿಕೊಟ್ಟನು.

೧೯೨೫ ರಲ್ಲಿ ಡಾ. ಕೋ ಬರ್ಲಿನ್ ನಗರವನ್ನು ಬಿಟ್ಟು ಟಿಬೇಟಿಗೆ ಹೊರಟಾಗ ಕೆರ್ಸ್ಟನ್ನನಿಗೆ ೨೭ ವರ್ಷ ವಯಸ್ಸಾಗಿತ್ತು. ಅವನ ಸ್ಪರ್ಶಜ್ಞಾನ ಎಷ್ಟು ತೀವ್ರವಾಗಿತ್ತೆಂದರೆ ಎಂತಹ ನೋವಿದ್ದರೂ ಅದರ ನಿದಾನವನ್ನು ತನ್ನ ಬೆರಳುಗಳ ತುದಿಯಿಂದಲೇ ಮಾಡಿಬಿಡುತ್ತಿದ್ದನು. ಈ ತಜ್ಞತೆಯು ಆತನಿಗೆ ಸಾಕಷ್ಟು ಕೀರ್ತಿಯನ್ನೂ ಹಣವನ್ನೂ ತಂದಿತು. ಕೆರ್ಸ್ಟನ್ ತನ್ನಿಂದ ವಾಸಿ ಮಾಡಲಾಗದ ರೋಗಿಗಳಿಂದ ಶುಲ್ಕವನ್ನೇ ಪಡೆಯುತ್ತಿರಲಿಲ್ಲ. ಇದರಿಂದ ತೃಪ್ತರಾಗುತ್ತಿದ್ದ, ಒಮ್ಮೆ ಅವನಲ್ಲಿಗೆ ಬಂದು ಹೋದ ರೋಗಿಗಳೇ ಅವನ ಕೀರ್ತಿಯನ್ನು ಹಬ್ಬಿಸುತ್ತಿದ್ದರು.

೧೯೨೮ರಲ್ಲಿ ನೆದರ್ಲೆಂಡಿನ ಯುವರಾಜ ಹೆಂಡ್ರಿಕ್ಕನ ಚಿಕಿತ್ಸೆಗಾಗಿ ಡಾ. ಕೆರ್ಸ್ಟನ್ ದಿ ಹೇಗ್ ನಗರಕ್ಕೆ ಆಹ್ವಾನಿಸಲ್ಪಟ್ಟ. ರಾಜಕುಮಾರನ ಆರೋಗ್ಯ ಸುಧಾರಣೆಯ ಆಸೆಯನ್ನೇ ಕಳೆದು ಕೊಂಡಿದ್ದ ಡಚ್ ವೈದ್ಯರು ಕೈ ಚೆಲ್ಲಿದ್ದರಲ್ಲದೆ ಆತನ ಇಹಲೋಕದ ವ್ಯಾಪಾರಕ್ಕೆ ಆರು ತಿಂಗಳ ಗಡುವನ್ನೂ ನೀಡಿದ್ದರು. ಡಚ್ ತಜ್ಞರು, ವೈದ್ಯರೆಲ್ಲರೂ ಆಶ್ಚರ್ಯಪಡುವಂತೆ, ಡಾ. ಕೆರ್ಸ್ಟನ್ ತನ್ನ ಮಾಂತ್ರಿಕ ಬೆರಳುಗಳಿಂದ ಹೆಂಡ್ರಿಕ್ಕನ ಆರೋಗ್ಯ ಸುಧಾರಿಸುವಂತೆ ಮಾಡಿದ. ಈ ಸಂದರ್ಭದಲ್ಲಿಯೆ ಡಾ. ಕೆರ್ಸ್ಟನ್ ತನ್ನ ಪೂರ್ವಿಕರ ನೆಲೆಯಾಗಿದ್ದ ಹೇಗ್ ನಗರದ ಬಗ್ಗೆ ಮೆಚ್ಚುಗೆ ಪ್ರೀತಿಗಳನ್ನು ಬೆಳೆಸಿಕೊಂಡನಲ್ಲದೆ, ಅಲ್ಲಿ ಒಂದು ಮನೆಯನ್ನೂ ಕೊಂಡ. ಅದನ್ನು ತನ್ನ ಕಾನೂನುಬದ್ಧ ನಿವಾಸವನ್ನಾಗಿ ಮಾಡಿಕೊಂಡ ತನ್ನ ರೋಗಿಗಳ ಅನುಕೂಲಕ್ಕಾಗಿ ಬರ್ಲಿನ್ನಲ್ಲಿಯೇ ವಾಸಿಸತೊಡಗಿದನು. ಹೇಗಿನಿಂದ ಹಿಂದಿರುಗಿದ ನಂತರ ಜರ್ಮನಿಯ ಖ್ಯಾತ ಕೈಗಾರಿಕೋದ್ಯಮಿ, ಶ್ರೀಮಂತ ಆಗಸ್ಟ್ ರೋಸ್ಟರ್ಗ್‌ನಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿದನು. ಇದರಿಂದ ಸಂತಸಗೊಂಡ ರೋಸ್ಟರ್ಗ್‌ನು ಡಾ. ಕೆರ್ಸ್ಟನ್ನನ ಶುಲ್ಕ ಒಂದು ಸಾವಿರ ಮಾರ್ಕ್‌ಗಳಿಗೆ ಬದಲಾಗಿ ಒಂದು ಲಕ್ಷ ಮಾರ್ಕ್‌ಗಳನ್ನು ನೀಡಿದನು. ಈ ಅಗಾಧ ಮೊತ್ತದಿಂದ ಕೆರ್ಸ್ಟನ್ ಬರ್ಲಿನ್ ನಗರದ ಪೂರ್ವದಿಕ್ಕಿನಲ್ಲಿ ಸುಮಾರು ೬೦ ಕಿಲೋಮೀಟರ್ ದೂರದ ಹಾರ್ಟ್ಸ್‌ವಾಲ್ಡ್ ಎಂಬಲ್ಲಿ ೭೫೦ ಎಕರೆ ಭೂಮಿ ಕೊಂಡನು.

೧೯೩೮ರ ಎರಡನೇ ಮಹಾಯುದ್ಧದ ಭೇರಿಗಳ ಮೊರೆತ ದೂರದಲ್ಲಿ ಕೇಳಿ ಬರುತ್ತಿತ್ತು. ಅಡಾಲ್ಫ್ ಹಿಟ್ಲರನು ಮ್ಯೂನಿಚ್ ಒಪ್ಪಂದಕ್ಕೆ ಸಹಿ ಹಾಕಿದ್ದನು. ಬ್ರಿಟಿಶ್ ಪ್ರಧಾನಿ ನೆವಿಲ್ ಚೇಂಬರ್ಲೈನ್ ಈ ಒಪ್ಪಂದದ ಮೂಲಕ ಹಿಟ್ಲರನನ್ನು 'ಹಾದಿ'ಗೆ ತಂದು ತನ್ನ ಕಾಲದಲ್ಲಿ ಶಾಂತಿ ಸ್ಥಾಪನೆ ಮಾಡಿದ್ದೇನೆಂದು ಬೀಗುತ್ತಿದ್ದನು. ಹಿಟ್ಲರನು ಯುದ್ಧಕ್ಕಿಳಿಸಬಹುದೆಂದು ಯಾರೂ ಭಾವಿಸಿರಲಿಲ್ಲ.

ಯುದ್ಧ ಪ್ರಾರಂಭವಾಗುವುದಕ್ಕೆ ಕೆಲವೇ ತಿಂಗಳು ಮೊದಲು ಕೆರ್ಸ್ಟನ್ನನ ಮಿತ್ರನೊಬ್ಬನು ಹಿಮ್ಲರನ ವಾಯುಗದ ಹೊಟ್ಟೆನೋವಿನ ವಿಷಯವನ್ನು ತಿಳಿಸಿದನು. ಅಲ್ಲದೆ ಅವನಿಗೆ ಚಿಕಿತ್ಸೆ ನೀಡಬೇಕೆಂದೂ ಹೇಳಿದನು. ನಾಜಿಗಳನ್ನು ಅಪರಾಧಿಗಳೆಂದೇ ಭಾವಿಸಿದ್ದ ಕೆರ್ಸ್ಟನ್ನನು 'ತನಗೆ ಮಾಡಲು ಉತ್ತಮ ಕೆಲಸಗಳಿವೆ' ಎಂದು ಹೇಳಿ ಹಿಮ್ಲರನಿಗೆ ಚಿಕಿತ್ಸೆ ನೀಡುವುದನ್ನು ನಿಸ್ಸಂದಿಗ್ಧವಾಗಿ ನಿರಾಕರಿಸಿದನು. ಆದರೂ ಆ ಗೆಳೆಯ ಯಾವುದೋ ಒತ್ತಡಕ್ಕೆ ಒಳಗಾದವನಂತೆ ಪದೇ ಪದೇ ಒತ್ತಾಯಿಸಿದಾಗ ಮಾರುದಿನ ಹಿಮ್ಲರನನ್ನು ನೋಡುವುದಾಗಿ ಅಸಮಾಧಾನ-ದಿಂದಲೇ ಒಪ್ಪಿಕೊಂಡನು.

ಮಾರುದಿನ ಡಾ. ಫೆಲಿಕ್ಸ್ ಕೆರ್ಸ್ಟನ್ನನು, ನಂ. ೮, ಪ್ರಿನ್ಜ್ ಆಲ್ಬ್ರೆಕ್ಟ್ ...

ಕಟ್ಟಡವನ್ನು ಪ್ರವೇಶಿಸಿ, ಅಲ್ಲಿದ್ದ ಭದ್ರತಾ ಪಡೆಯ ಸೈನಿಕನೊಬ್ಬನನ್ನು ಹಿಮ್ಲರನಿಗಾಗಿ ಕೇಳಿದನು. ಬೀಡಾ ಅಂಗಡಿಯಲ್ಲಿ ಹೊಕ್ಕು ಸಿಗರೇಟ್ ಪ್ಯಾಕ್ ಒಂದನ್ನು ಕೇಳುವಷ್ಟೇ ಸಲೀಸಾಗಿ ಹಿಮ್ಲರನನ್ನು ಕೇಳುವ ಈ ಮನುಷ್ಯನನ್ನು ಕಂಡು ಸೈನಿಕ ಚಕಿತನಾದನು. ಪ್ರಿನ್ಸ್ ಆಲ್ಬರ್ಟ್ ರಸ್ತೆಯ ಗೆಸ್ಟಪೊ ಕಟ್ಟಡದ ಎದುರು ಹಾದು ಹೋಗುವ ನಾಯಿ ಕೂಡ ಬೆದರಿ ಬಿಳುಚಿಕೊಳ್ಳುವುದೆಂದು ಆ ಸೈನಿಕ ನಂಬಿದ್ದನು. ಅಂತಹದರಲ್ಲಿ ಆ ಕಟ್ಟಡದ ಅಧಿಪತಿಯನ್ನು ಇಷ್ಟು ನಿರಾತಂಕವಾಗಿ ಭೇಟಿಯಾಗಬಯಸುವ ಈ ಮನುಷ್ಯನನ್ನು ಕಂಡು, "ಅವರಿಂದ ನಿನಗೇನಾಗಬೇಕಾಗಿದೆ?" ಎಂದು ಸಿಡುಕಿದನು. "ಸರಿ, ನಾನಾಗಿ ಅವರನ್ನು ಕಾಣಲು ಬಯಸಲಿಲ್ಲ. ಅವರ ಕರೆಯಂತೆ ಬಂದಿದ್ದೇನೆ. ನನ್ನ ಹೆಸರು ಡಾ. ಫೆಲಿಕ್ಸ್ ಕೆರ್ಸ್ಟನ್" ಎಂದು ಅಷ್ಟೇ ತಾತ್ಸಾರದಿಂದ ಉತ್ತರಿಸಿದನು. ಆತನ ಉತ್ತರವನ್ನು ಕೇಳಿದ ಸೈನಿಕ ತನ್ನ ಮುಖ್ಯಾಧಿಕಾರಿಯನ್ನು ಕರೆಯಲು ಓಡಿದನು. ಆ ಅಧಿಕಾರಿ ಹಿಮ್ಲರನನ್ನು ಫೋನಿನಲ್ಲಿ ಸಂಪರ್ಕಿಸಿದಾಗ ಎಲ್ಲ ಭದ್ರತಾ ನಿಯಮಗಳನ್ನೂ ಗಾಳಿಗೆ ತೂರಿ ಕೆರ್ಸ್ಟನ್ನನನ್ನು ನೇರವಾಗಿ ತನ್ನ ಬಳಿ ಕಳಿಸುವಂತೆ ಗುಡುಗಿದನು.

ಡಾ. ಕೆರ್ಸ್ಟನ್ ವೃತ್ತ ಪತ್ರಿಕೆಗಳಲ್ಲಷ್ಟೆ ಹಿಮ್ಲರನ ಮುಖ ನೋಡಿದ್ದ. ಒಂದು ವಿಶಾಲ ಕೊಠಡಿಯ ಮಧ್ಯದಲ್ಲಿ ದೊಡ್ಡ ಟೇಬಲೊಂದರ ಹಿಂಭಾಗದಲ್ಲಿ ಫೈಲುಗಳನ್ನು ನೋಡುತ್ತಿದ್ದ ಆ ಬೂದು ಮುಖ ಚಿಕ್ಕ ಕಣ್ಣುಗಳ ಮಂಗೋಲಿಯನ್ನರನ್ನು ಹೋಲುವ ರೂಪದ ವ್ಯಕ್ತಿಯೇ ಹಿಮ್ಲರ್ ಎಂದು ಭಾವಿಸಿ ಕೆರ್ಸ್ಟನ್ ಆತನ ಕಡೆಗೆ ನಡೆದನು. ಆತನನ್ನು ಸ್ವಾಗತಿಸುವವನಂತೆ ಗೆಸ್ಟಪೋ ಮುಖ್ಯಸ್ಥ ಎದುರು ನಿಂತು ಸಪ್ಪೆ ಮುಗುಳ್ನಗು ಬೀರಿ ಆತನ ಕೈ ಕುಲುಕಿದನು.

"ಸಕಾಲಕ್ಕೆ ಬಂದುದಕ್ಕಾಗಿ ವಂದನೆಗಳು. ನಿಮ್ಮನ್ನು ನೋಡಿ ಸಂತಸವಾಯಿತು ಡಾಕ್ಟರ್," ಎಂದನು. ಹಿಮ್ಲರನ ಮುಖಭಾವವೇ ಅವನು ತೀವ್ರ ನೋವನ್ನು ಅನುಭವಿಸುತ್ತಿದ್ದನೆಂಬುದನ್ನು ಸಾರುತ್ತಿತ್ತು. ಡಾ. ಕೆರ್ಸ್ಟನ್, ಪಕ್ಕದಲ್ಲಿದ್ದ ಕೋಚ್ ಮೇಲೆ ಮಲಗಿ ಶರ್ಟನ್ನು ಮೇಲೆತ್ತುವಂತೆ ಹಿಮ್ಲರನಿಗೆ ಹೇಳಿ ಅರ್ಧ ಗಂಟೆಯ ಕಾಲ ತನ್ನ ಬೆರಳುಗಳ ಮೂಲಕ ಮಾಲಿಶು ಮಾಡಿದ. ಪರಿಣಾಮವಾಗಿ ಹಿಮ್ಲರನ ನೋವು ಮಾಯವಾಗಿತ್ತು.

"ಪವಾಡ!" ಹಿಮ್ಲರ್ ಉದ್ಗರಿಸಿದನು. ಈಗ ಅವನ ಮುಖ ಪ್ರಕಾಶಮಾನವಾದ ಮುಗುಳ್ನಗುವಿನಿಂದ ಮಿನುಗುತ್ತಿತ್ತು. "ಡಾ. ಕೆರ್ಸ್ಟನ್, ನಿಮ್ಮ ಬೆರಳುಗಳ ಅದ್ಭುತ ಪವಾಡವನ್ನು ಮೆಚ್ಚಲೇಬೇಕು."

"ಥ್ಯಾಂಕ್ಯೂ, ಹೆರ್ ಹಿಮ್ಲರ್," ಕೆರ್ಸ್ಟನ್ ಹೇಳಿದನು, "ಆದರೆ ನಿಮ್ಮ ಹೊಟ್ಟೆನೋವು ಅನಿರೀಕ್ಷಿತವಾಗಿ ಪುನಃ ಬರಬಹುದು. ಅದನ್ನು ಶಾಶ್ವತವಾಗಿ ಹೋಗಲಾಡಿಸಬೇಕಾದರೆ ಇನ್ನೂ ಕೆಲವು ದಿನ ಬೇಕಾಗಬಹುದು."

"ಹಾಗಾದರೆ ನಿಮಗೆ ಸಾಧ್ಯವಾದಾಗಲೆಲ್ಲ ಇಲ್ಲಿಗೆ ಬಂದು ದಯವಿಟ್ಟು ನನ್ನನ್ನು ನೋಡಿಕೊಂಡು ಹೋಗುತ್ತಿರಿ"– ಹಿಮ್ಲರ್ ವಿನಂತಿಸಿದನು.

"ಆದರೆ, ನಿಮ್ಮ ಭದ್ರತಾ ಪಡೆಯವರು ಇಲ್ಲ ಸಲ್ಲದ ಪ್ರಶ್ನೆಗಳಿಂದ ನನ್ನನ್ನು ಹಿಂಸಿಸುತ್ತಾರೆ," ಕೆರ್ಸ್ಟನ್ ತನ್ನ ಅಸಹಾಯಕತೆಯನ್ನು ತೋಡಿಕೊಂಡ.

"ಇನ್ನು ಮುಂದೆ ಹಾಗಾಗುವುದಿಲ್ಲ. ಇದಕ್ಕೆ ಸಂಬಂಧಿಸಿದ ಆಜ್ಞೆಗಳನ್ನು ಈಗಲೇ ನೀಡುತ್ತೇನೆ. ನೀವು ಯಾವಾಗ ಬಂದರೂ ನಿಮ್ಮನ್ನು ಯಾರೂ ಪ್ರಶ್ನಿಸದೇ ಇರುವಂತೆ ನೋಡಿಕೊಳ್ಳುತ್ತೇನೆ. ನಿಮ್ಮ ಟೆಲಿಫೋನ್ ಕರೆಗಳು ನೇರವಾಗಿ ನನ್ನ ಸಂಪರ್ಕಕ್ಕೆ ಬರುವಂತೆ ನೋಡಿಕೊಳ್ಳುತ್ತೇನೆ. ನಾನು ನಿಮಗೆ ಇನ್ನೇನು ಮಾಡಲಿ?" ಎಂದು ಹಿಮ್ಲರ್ ಪ್ರಶ್ನಿಸಿದ.

ಹಿಮ್ಲರನೊಂದಿಗೆ ಈ ರೀತಿ ಬೆಳೆದ ಸ್ನೇಹ ಎಂತಹ ಉತ್ಕೃಷ್ಟ ಫಲ ನೀಡಬಹುದೆಂಬ ಕಲ್ಪನೆ ಡಾ. ಕೆರ್ಸ್ಟನ್ನನಿಗೆ ಇರಲಿಲ್ಲ. ಮೊದಲೆರಡು ವಾರಗಳ ಕಾಲ ಡಾ. ಕೆರ್ಸ್ಟನ್ ಪ್ರತಿ ದಿನವೂ ಗೆಸ್ಟಪೊ ಕಛೇರಿಗೆ ಹೋಗಿ ಹಿಮ್ಲರ

ನಿಗೆ ಚಿಕಿತ್ಸೆ ನೀಡುತ್ತಿದ್ದನು. ನೋವಿಲ್ಲದಾಗ ಹಿಮ್ಲರನನ್ನು ಧಾರಾಳವಾಗಿ ಮಾತನಾಡುತ್ತಿದ್ದನು. ಹಿಮ್ಲರ್ ನಿಷ್ಠ ಕ್ಯಾಥೋಲಿಕ್ ಶಾಲಾ ಮಾಸ್ತರನೊಬ್ಬನ ಮಗನೆಂದೂ ಮೊದಲ ಮಹಾಯುದ್ಧದ ನಂತರ ಆತನು ಹಿಟ್ಲರನ ನಾಜಿ ಪಕ್ಷವನ್ನು ಸೇರಿದನೆಂದೂ ತಿಳಿದು ಬಂದಿತು. ವೇಗವಾಗಿ ತನ್ನ ಪದವಿಗಳಲ್ಲಿ ಮೇಲೇರಿದ ಹಿಮ್ಲರ್ ಈಗ ಗೆಸ್ಟಪೊ ಮತ್ತು ಎಸ್.ಎಸ್. ದಳದ ಮುಖ್ಯಸ್ಥನಾಗಿ, ಹಿಟ್ಲರನ ನಂತರದ ಎರಡನೇ ಸ್ಥಾನದವರೆಗೂ ಏರಿದ್ದನು. ಒಂದು ಕಾಲದಲ್ಲಿ ಕೋಳಿ ಫಾರಂ ಒಂದರ ಮಾಲಿಕನಾಗಿದ್ದ ಹಿಮ್ಲರನೇ ಸ್ವತಃ ಈ ಕನಸನ್ನು ಕಂಡಿರಲಾರನು. ಹೀಗೆ ಫಿನ್ಲೆಂಡಿನ ಡಾ. ಕೆರ್ಸ್ಟನ್ ಮತ್ತು ಗೆಸ್ಟಪೊ ಮುಖ್ಯಸ್ಥ ಹಿಮ್ಲರರ ನಡುವೆ ಸ್ನೇಹ ಬೆಳೆಯಿತು. ಈ ಸ್ನೇಹ ಬರ್ಲಿನ್ ಪತನದ ವರೆಗೂ ಅಖಂಡವಾಗಿ ಉಳಿಯಿತು.

೧೯೩೯ರ ಸೆಪ್ಟೆಂಬರಿನಲ್ಲಿ ಮುಸುಕನ್ನು ಕಿತ್ತೆಸೆದು ಹಿಟ್ಲರನು ಪೋಲೆಂಡನ್ನು ಆಕ್ರಮಿಸಿಕೊಂಡನು. ತಕ್ಷಣದ ಪ್ರತಿಕ್ರಿಯೆ-ಪ್ರತಿಭಟನೆಯ ರೂಪವಾಗಿ ಕೆರ್ಸ್ಟನ್ ಹಿಮ್ಲರನಿಗೆ ನೀಡುತ್ತಿದ್ದ ಚಿಕಿತ್ಸೆಯನ್ನು ನಿಲ್ಲಿಸಿಬಿಡಲು ಬಯಸಿದನು. ಆದರೆ ಬರ್ಲಿನ್ನಿನ ಫಿನ್ಲೆಂಡ್ ರಾಯಭಾರಿ ಕಛೇರಿಯ ಅವನ ಅಧಿಕಾರಿ ಮಿತ್ರರು, ಫಿನ್ಲೆಂಡಿನ ನಾಗರಿಕನಾದ ಡಾ. ಕೆರ್ಸ್ಟನ್ ಹಿಮ್ಲರನ ಚಿಕಿತ್ಸೆಯನ್ನು ಮುಂದುವರಿಸಿ, ಅವನಿಂದ ತಿಳಿದುಬರಬಹುದಾದ ರಹಸ್ಯಗಳನ್ನು ತನ್ನ ತಾಯ್ನಾಡಿನ ರಾಯಭಾರ ಕಛೇರಿಗೆ ವರದಿ ಮಾಡುವುದು ಆತನ ಕರ್ತವ್ಯವೆಂದು ತಿಳಿಸಿ, ಅವನು ಹಿಮ್ಲರನ ಚಿಕಿತ್ಸೆಯನ್ನು ಮುಂದುವರಿಸುವಂತೆ ಒಪ್ಪಿಸಿದರು.

ಡಾ. ಕೆರ್ಸ್ಟನ್ ಹಿಮ್ಲರನ ಖಾಸಗಿ ವೈದ್ಯನಾಗಿ ತನ್ನ ಅಳವಿನಲ್ಲಿದ್ದಷ್ಟು ಸಾಹಸದ ಕಾರ್ಯಗಳನ್ನೆಸಗಿರುವುದನ್ನು ನಾವು ಕಾಣಬಹುದು. ೧೯೪೦ರಲ್ಲಿ ನಾಜಿ ಜರ್ಮನಿಯ ಸೈನಿಕರ ಬೂಟುಗಳು ಡೆನ್ಮಾರ್ಕ್, ಹಾಲೆಂಡ್, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್‌ಗಳನ್ನು ಮೆಟ್ಟಿ ದಾಟಿ, ಪ್ಯಾರಿಸ್ಸಿನ ಮುಂಬಾಗಿಲವರೆಗೂ ಯಾವ ತಡೆಯೂ ಇಲ್ಲದಂತೆ ಮುಂದುವರಿದು ಬಂದಿದ್ದವು. ಕೊನೆಗೆ ಫ್ರಾನ್ಸ್ ಕೂಡ ಜರ್ಮನ್ ಬಂದೂಕುಗಳ ಆರ್ಭಟದೆದುರು ತಲೆಬಾಗಿತು. ಹಿಟ್ಲರನು ಆನಂದದಿಂದ ಕುಣಿದಾಡಿದನು.

*

ಹಾಲೆಂಡಿನ ಪತನವಾದಾಗ ಕೆರ್ಸ್ಟನ್ನನ ಅನೇಕ ಮಿತ್ರರು ಡಚ್ ಗೆಸ್ಟಪೋದಿಂದ ಬಂಧಿಸಲ್ಪಟ್ಟಿದ್ದರು. ಅವರೆಲ್ಲರನ್ನೂ ಹಿಮ್ಲರ ವೈಯಕ್ತಿಕ ಆದೇಶ ಪಡೆದು ಕೆರ್ಸ್ಟನ್ನನ ಬಂಧಮುಕ್ತರನ್ನಾಗಿ ಮಾಡಿದನು. ಕೆರ್ಸ್ಟನ ಹೆಸರುಗಳ ಪಟ್ಟಿ ಕೊಟ್ಟರೆ ಸಾಕು, ಅವರೆಲ್ಲರು ಹಿಮ್ಲರನ ವೈಯಕ್ತಿಕ ಆದೇಶದ ಮೇರೆಗೆ ಬಿ ಸಲ್ಪಡುತ್ತಿದ್ದರು. ಡಾ. ಕೆರ್ಸ್ಟನ್ ಹಿಮ್ಲರನಿಂ ಮತ್ತೊಂದು ಸೌಲಭ್ಯವನ್ನು ಕೇಳಿಪಡೆದನು. ತನ ದೇಶ ವಿದೇಶಗಳಿಂದ ಬರುವ ಪತ್ರಗಳಿಗಾ ಹಿಮ್ಲರನ ಖಾಸಗಿ ಪೋಸ್ಟ್ ಬಾಕ್ಸನ್ನು ಬಳಸಬ ಹುದಾದ ಸೌಲಭ್ಯಕ್ಕೆ ಹಿಮ್ಲರನ ಒಪ್ಪಿಗೆ ಪಡೆದ ಕೊಂಡನು. ಡಚ್ ಭೂಗತ ಮಿತ್ರರಿಂದ ಸೆನ್ಸಾರ ಕಾಟವಿಲ್ಲದೆ ಪತ್ರಗಳು ಕೆರ್ಸ್ಟನ್ನನಿಗೆ ಬರತೊಡ ಗಿದವು.

೧೯೪೧, ಹಿಟ್ಲರನು ವ್ಯವಸ್ಥಿತವಾದ 'ಮೃತ ಶಿಬಿರ'ಗಳನ್ನು ಏರ್ಪಡಿಸಿದನು. ಈ ಶಿಬಿರಗಳ ಮಾನವ ಇತಿಹಾಸದ ಅತ್ಯಂತ ಭೀಕರವೂ ಬರ್ಬರವೂ ಮಾನವತೆಯೇ ನಾಚಿ ತಲೆತ ಸುವಂತೆ ಮಾಡಿದ ವ್ಯವಸ್ಥೆಯೇ ಆಗಿತ್ತು. ಈ ಶಿಬಿರಗಳಲ್ಲಿ ಲಕ್ಷಾಂತರ ಯಹೂದ್ಯರನ್ನು ಕೊ ಮಾಡಲಾಯಿತು. ಈ ಶಿಬಿರಗಳನ್ನು ನಡೆಸು ಹೊಣೆಯನ್ನು ಹಿಟ್ಲರನು ಹಿಮ್ಲರನಿಗೇ ವಹಿ ದನು. ದನಕರುಗಳನ್ನು ಸಾಗಿಸುವ ರೈಲುಗಳ ಹಿಂಡು-ಹಿಂಡಾಗಿ ಮುಗ್ಧ ಯಹೂದಿ ಗಂಡು ಹೆಣ್ಣು ಮಕ್ಕಳನ್ನು ತುಂಬಿ ಆಷ್‌ವಿಟ್ಸ್, ಬೆಲ್ಸನ್ ಡಾಚೌ, ಟ್ರೆಬ್ಲಿಂಕಾ ಮತ್ತಿತರ ಮೃತ್ಯು ಶಿಬಿ ಗಳ ಕಡೆಗೆ ರವಾನಿಸಲಾಗುತ್ತಿತ್ತು. ಆ ವಿಟ್ಸ್ ಮೃತ್ಯು ಶಿಬಿರವೊಂದರಲ್ಲೇ ಸುಮಾರ ೬೩,೦೦೦ ಮಂದಿ ಯಹೂದ್ಯರನ್ನು ಬಂಧಿ ಲಾಗಿತ್ತು. ಅಲ್ಲಿನ ಗ್ಯಾಸ್ ಚೇಂಬರ್‌ಗಳು ದಿ ವೊಂದಕ್ಕೆ ೨೦,೦೦೦ ಜನರನ್ನು 'ವಿಲೇವಾ

ಮಾಡುವ ಸಾಮರ್ಥ್ಯವನ್ನು ಪಡೆದಿದ್ದವು. ೧೯೪೧-೪೫ರ ಅವಧಿಯಲ್ಲಿ ಈ ಶಿಬಿರಗಳು ಒಟ್ಟು ಕನಿಷ್ಠ ೬೦ ಲಕ್ಷ ಯಹೂದ್ಯರನ್ನು ಯಮಸದನಕ್ಕೆ ಅಟ್ಟಿದವು.

ಈ ಹಿಂಸಾ ಕಾಂಡಗಳು ಹಿಮ್ಲರನ ಮನದ ಮೇಲೆ ಭೀಕರ ಪರಿಣಾಮ ಬೀರಿದವು. ಹಿಮ್ಲರನ ಹೊಟ್ಟೆ ನೋವೂ ಜಾಸ್ತಿಯಾಯಿತು. ಏಕೆಂದರೆ ಅದು ಅವನ ಸುಪ್ತ ಮಾನಸಿಕ ಪ್ರತಿಕ್ರಿಯೆ ಯಾಗಿತ್ತು. ಡಾ. ಕೆರ್ಸ್ಟನ್ನನೊಂದಿಗೆ ಅವನು ಹೇಳಿಕೊಂಡದ್ದು ನಿಜವಿದ್ದರೆ, ಹಿಟ್ಲರನು ಒತ್ತಾಯ ಪೂರ್ವಕವಾಗಿ ಹಿಮ್ಲರನಿಗೆ ಈ ಜನಾಂಗದ ಹತ್ಯಾಕಾಂಡದ ಜವಾಬ್ದಾರಿಯನ್ನು ಹೊರಿಸಿದ್ದನು. ನೋವು ಅಧಿಕಗೊಂಡಂತೆ ಹಿಮ್ಲರನು ಹೆಚ್ಚು ಹೆಚ್ಚಾಗಿ ಡಾ. ಕೆರ್ಸ್ಟನ್ನನ ಮೇಲೆ ಅವಲಂಬಿತನಾದನು.

■

ಹಿಮ್ಲರ್ ಮತ್ತು ಕೆರ್ಸ್ಟನ್ನರ ನಡುವಿನ ಈ ಸ್ನೇಹ, ಹಿಮ್ಲರನ ಕೈಕೆಳಗಿನ ಅನೇಕರಿಗೆ ಕಣ್ಣು ಕಿಸುರಾಯಿತು. ಉನ್ನತ ಪದವಿಗಾಗಿ ಆ ಅಧಿಕಾರಿಗಳಲ್ಲಿ ತಿಕ್ಕಾಟವೂ ಇತ್ತು. ಯಾವುದಾದರೊಂದು ಕಾರಣದ ಮೇಲೆ ಡಾ. ಕೆರ್ಸ್ಟನ್ನನನ್ನು ಹೇಗಾದರೂ ಬಂಧಿಸಬೇಕೆಂದು ಕಾಯುತ್ತಿದ್ದವರಲ್ಲಿ ಗೆಸ್ಟಪೋದ ಅಧಿಕಾರಿಗಳಲ್ಲಿ ರೈನ್ ಹಾರ್ಡ್ ಹೇಡ್ರಿಕ್ಕನೂ ಒಬ್ಬ. ಹೇಡ್ರಿಕ್ಕನ ಕಡೆಯ ಇಬ್ಬರು ಸೈನಿಕರು ಒಂದು ಮಧ್ಯರಾತ್ರಿಯಲ್ಲಿ ಕೆರ್ಸ್ಟನ್ನನ ಮನೆಗೆ ಬಿರುಗಾಳಿಯಂತೆ ನುಗ್ಗಿದರು. "ನೀನು ಯಹೂದ್ಯರಿಗೇಕೆ ಚಿಕಿತ್ಸೆ ನೀಡುತ್ತಿರುವೆ? ಜರ್ಮನ್ ಡಾಕ್ಟರನೊಬ್ಬನು ಯಹೂದ್ಯರಿಗೆ ಚಿಕಿತ್ಸೆ ನೀಡುವುದು ಅಪರಾಧವೆಂದು ಗೊತ್ತಿಲ್ಲವೆ?" ಎಂದು ಪ್ರಶ್ನಿಸತೊಡಗಿದರು. ಇಂತಹದೇನಾದರೂ ನಡೆಯಬಹುದೆಂದು ನಿರೀಕ್ಷಿಸುತ್ತಿದ್ದ ಕೆರ್ಸ್ಟನ್ನನು ತನ್ನಲ್ಲಿದ್ದ

ಫಿನ್ಲೆಂಡಿನ ಪಾಸ್ ಪೋರ್ಟನ್ನು ಅವರ ಮುಂದೆ ದೆದುರು ಚಾಚಿ, "ಇದರ ಆಧಾರದ ಮೇಲೆ ನನ್ನಿಷ್ಟ ಬಂದವರಿಗೆ ಚಿಕಿತ್ಸೆ ನೀಡಲು ನನಗೆ ಅಧಿಕಾರವಿದೆ," ಎಂದು ದೃಢ ಸ್ವರದಲ್ಲಿ ಉತ್ತರಿಸಿದನು. ಆ ಸೈನಿಕರು ಬಂದಷ್ಟೇ ವೇಗವಾಗಿ ಹಿಂದಿರುಗಿ ಹೇಡ್ರಿಕ್ಕನಿಗೆ ನಡೆದ ವಿಷಯದ ವರದಿ ಮಾಡಿದರು.

ಡಾ. ಕೆರ್ಸ್ಟನ್ ಸಹ ತಡ ಮಾಡದೇ ಈ ಘಟನೆಯನ್ನು ಹಿಮ್ಲರನ ಗಮನಕ್ಕೆ ತಂದನು. ಇದನ್ನು ಕೇಳಿದ ಹಿಮ್ಲರನು ಕಿಡಿ ಕಿಡಿಯಾದ ನಲ್ಲದೆ, "ಇನ್ನು ಮುಂದೆ ಯಾವ ಸಂದರ್ಭದಲ್ಲಿಯೇ ಆಗಲಿ, ಯಾರೂ ಡಾ. ಕೆರ್ಸ್ಟನ್ನನನ್ನು ಪ್ರಶ್ನಿಸಕೂಡದು" ಎಂಬ ಆದೇಶವನ್ನು ತಕ್ಷಣವೇ ಹೊರಡಿಸಿದನು. ಆದರೂ ಹೇಡ್ರಿಕ್ಕನು ಕೆರ್ಸ್ಟನ್ನನ ಮೇಲೆ ಒಂದು ಕಣ್ಣನ್ನು ಇಟ್ಟೇ ಇದ್ದನು. ಆತನು ಬರ್ಲಿನ್ನಿನ ಡಚ್ ದೂತಾವಾಸದೊಂದಿಗೆ ಸಂಪರ್ಕವಿಟ್ಟುಕೊಂಡಿರಬೇಕೆಂಬ ಬಲವಾದ ಸಂಶಯ ಹೇಡ್ರಿಕ್ಕನ ಮನದಲ್ಲಿ ಬಲವಾಗಿ ಬೇರೂರಿತ್ತು. ಇದಕ್ಕೆ ಪೂರಕವಾದ ಒಂದೇ ಒಂದು ಸಾಕ್ಷ್ಯ ದೊರೆತರೆ ಕೆರ್ಸ್ಟನ್ನನನ್ನು ಉಳಿಸಲು ಯಾರಿಂದಲೂ – ಹಿಮ್ಲರನಿಂದಲೂ – ಸಾಧ್ಯವಿಲ್ಲವೆಂಬುದು ಅವನಿಗೆ ಗೊತ್ತಿತ್ತು. ಕೆರ್ಸ್ಟನ್ನನ ಸುದೈವದಿಂದ ಅಂತಹ ಯಾವ ಸಾಕ್ಷ್ಯವೂ ಹೇಡ್ರಿಕ್ಕನ ಕೈಗೆ ಸಿಗಲಿಲ್ಲ. ರೈನ್‌ಹಾರ್ಟ್ ಹೇಡ್ರಿಕ್ಕನೇ ಕೆಲವು ತಿಂಗಳುಗಳ ನಂತರ ಜೆಕೋಸ್ಲೋವಾಕಿಯಾದ ರಸ್ತೆಯೊಂದರಲ್ಲಿ ಗುಂಡಿಟ್ಟು ಕೊಲ್ಲಲ್ಪಟ್ಟನು. ಇದರಿಂದ ಡಾ. ಕೆರ್ಸ್ಟನ್ ಸಮಾಧಾನದ ನಿಟ್ಟುಸಿರಿಟ್ಟ.

ಆದರೆ ಕೆರ್ಸ್ಟನ್ನನ ಈ ಸಮಾಧಾನ ಹೆಚ್ಚು ದಿನ ಉಳಿಯಲಿಲ್ಲ. ವ್ಯಕ್ತಿಗಿಂತ ಆತನ ನೆರಳೇ ಹೆಚ್ಚು ಕಪ್ಪು ಎಂಬಂತೆ, ಹೇಡ್ರಿಕ್ಕನ ಉತ್ತರಾಧಿಕಾರಿ ಅರ್ನೆಸ್ಟ್ ಕಾಲ್ಟೆನ್ ಬ್ರುನ್ನರನು ಸ್ವತಃ ಹೇಡ್ರಿಕ್ಕನಿಗಿಂತ ಕ್ರೂರಿಯಾಗಿದ್ದನಲ್ಲದೆ ಕೆರ್ಸ್ಟನ್ನನನ್ನು ತನ್ನ ವಶದಲ್ಲಿ ಹೊಸಕಿ ಹಾಕಲು ಸಮಯ ಕಾಯುತ್ತಿದ್ದನು. ಇದಕ್ಕಾಗಿ ಒಂದು ಸಂಜೆ ಇಬ್ಬರು ಸೈನಿಕರನ್ನು ರೇಲ್ವೆ ಸ್ಟೇಶನ್ ದಾರಿಯಲ್ಲಿ ಕೆರ್ಸ್ಟನ್ನನನ್ನು ಬಂದೂಕಿನಿಂದ ಹೊಡೆದುರುಳಿಸಲು ನೇಮಿಸಿದನು. ಅವನ ಈ ಪ್ರಯತ್ನ ಬಂದೂಕುಧಾರಿಗಳ ಅಸಾಮರ್ಥ್ಯದಿಂದೇನೂ ವಿಫಲವಾಗಲಿಲ್ಲ. ಅದಕ್ಕೆ ಬದಲಾಗಿ ನಾಜಿ ತಂಡದಲ್ಲಿದ್ದ ಕೆರ್ಸ್ಟನ್ನನ ಗೆಳೆಯನೂ ಬ್ರುನ್ನರನ ಪ್ರತಿಸ್ಪರ್ಧಿಯೂ ಆಗಿದ್ದ ಎಸ್. ಎಸ್.ನ ಕಮ್ಯಾಂಡಿಂಗ್ ಜನರಲ್ ಶೋಲನ್‌ಬರ್ಗ್ ಪತ್ರವೊಂದರ ಮೂಲಕ ಸಾಮಯಿಕವಾಗಿ ಆತನನ್ನು ಎಚ್ಚರಿಸಿದ್ದನು. ಆ ದಿನ ಕೆರ್ಸ್ಟನ್ ಸ್ಟೇಶನ್ ಹಾದಿಯಲ್ಲಿ ಹೋಗಲೇ ಇಲ್ಲ.

*

ಮೊದಲು ಹೇಡ್ರಿಕ್, ಈಗ ಬ್ರುನ್ನರ್ ಕೆರ್ಸ್ಟನ್ನನ ದಾರಿಯ ಮುಳ್ಳಾಗಿದ್ದ. ಮರುದಿನ ಹಿಮ್ಲರನನ್ನು ಭೇಟಿಯಾದ ಕೆರ್ಸ್ಟನ್ ಇನ್ನು ಮುಂದೆ ತನ್ನಿಂದ ಹಿಮ್ಲರನಿಗೆ ಚಿಕಿತ್ಸೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದ.

"ಏಕೆ? ಏನು ಸಮಾಚಾರ?" ದಿಗ್ಭ್ರಾಂತನಾಗಿ ಹಿಮ್ಲರ್ ಪ್ರಶ್ನಿಸಿದ.

"ನಿಮ್ಮ ಕಾಲ್ಟೆನ್ ಬ್ರುನ್ನರ್ ನನ್ನನ್ನು ಮುಗಿಸಿಬಿಡಲು ಬೆಂಬತ್ತಿದ್ದಾನೆ," ಎಂದು ಹೇಳಿ ಶೋಲನ್‌ಬರ್ಗ್ ಕಳುಹಿಸಿಕೊಟ್ಟ ಪತ್ರವನ್ನು ಹಿಮ್ಲರನಿಗೆ ತೋರಿಸಿ, "ನಿಮಗೆ ನೀಡಿದ ಚಿಕಿತ್ಸೆಗೆ ನನಗೆ ಬರುವ ಪ್ರತಿಫಲವೆಂದರೆ ಬಹುಶಃ ಮರಣವೇ ಇರಬೇಕು," ಎಂದ.

ದಿಗ್ಭ್ರಾಂತನಾದ ಹಿಮ್ಲರ್ ಅಪನಂಬಿಕೆಯಿಂದೆಂಬಂತೆ ಒಂದು ನಿಮಿಷ ಕೆರ್ಸ್ಟನ್ನನ ಮುಖವನ್ನೇ ದಿಟ್ಟಿಸಿದ. ತಕ್ಷಣವೇ ಫೋನೆತ್ತಿ ಕಾಲ್ಟೆನ್ ಬ್ರುನ್ನರನನ್ನು ಸಂಪರ್ಕಿಸಿ ಗುಡುಗತೊಡಗಿದ. "ಕಾಲ್ಟೆನ್ ಬ್ರುನ್ನರ್, ಡಾ. ಕೆರ್ಸ್ಟನ್ ನನ್ನ ಖಾಸಗಿ ವೈದ್ಯನೆಂಬುದು ನಿನಗೆ ಗೊತ್ತಿರಬೇಕು. ಆದರೆ, ಬ್ರುನ್ನರ್, ನಿನಗೆ ನೆನಪಿರಲಿ, ಅವರಿಗೆ ಏನಾದರೂ ಆದರೆ ನಂತರದ ೨೪ ಗಂಟೆಗಳ ಒಳಗಾಗಿ ನಿನ್ನ ತಲೆಯನ್ನು ಕಳೆದುಕೊಳ್ಳುವೆ." ಬ್ರುನ್ನರನ ಉತ್ತರಕ್ಕಾಗಿಯೂ ಕಾಯದೇ ಹಿಮ್ಲರ್ ಫೋನು ಕುಕ್ಕಿದ. ತನ್ನ ಮಾತು ಅಗತ್ಯ ಪರಿಣಾಮವನ್ನು ಬೀರುವುದೆಂದು ಅವನಿಗೆ ಖಚಿತವಾಗಿ ಗೊತ್ತಿತ್ತು.

ಪಕ್ಷಿಯಂತಾದನು. ಕೆರ್ಸ್ಟನ್ನನ ಜೀವಕ್ಕೇನಾದರೂ ಅಪಾಯವಾದರೆ ತಾನು ಉಳಿಯುವುದಿಲ್ಲವೆಂಬುದು ಹಿಮ್ಲರನಿಗೆ ಖಚಿತವಾಗಿತ್ತು. ಅಪ್ರತ್ಯಕ್ಷವಾಗಿಯಾದರೂ ಆತ ಕೆರ್ಸ್ಟನ್ನನ ಜೀವನದ ಬಗ್ಗೆ ಕಾಳಜಿ ವಹಿಸಬೇಕಾಯಿತು. ಹಿಮ್ಲರನ ಮೇಲೆ ಡಾ. ಕೆರ್ಸ್ಟನ್ನನಿದ್ದ ಅಗಾಧ ಪ್ರಭಾವವನ್ನು ಈಗ ಯಾರೂ ಅಲ್ಲಗಳೆಯುವಂತೆ ಇರಲಿಲ್ಲ. ಕೆರ್ಸ್ಟನ್ ನಿರ್ಭೀತಿಯಿಂದ ಸ್ವೀಡನ್ ಮತ್ತು ಬರ್ಲಿನ್‌ಗಳ ನಡುವೆ ಪ್ರಯಾಣಿಸತೊಡಗಿದ. ಮಹತ್ವದ ಸುದ್ದಿಗಳನ್ನು ಮಿತ್ರರಾಷ್ಟ್ರಗಳಿಗೆ ಪೂರೈಸಿದ. ಸಹಸ್ರಾವಧಿ ಜನರ ಪ್ರಾಣ ಉಳಿಸಲು ಆತ ಕೃತನಿಶ್ಚಯನಾಗಿದ್ದ.


*

ಹಿಮ್ಲರನ ಅತಿ ನಿಕಟ ಗೆಳೆಯನಾದುದರಿಂದ ಡಾ. ಕೆರ್ಸ್ಟನ್ನನಿಗೆ ಹಿಟ್ಲರನ ಅನೇಕ ರಹಸ್ಯ ಯೋಜನೆಗಳ ಅರಿವುಂಟಾಗುತ್ತಿತ್ತು. ಅವುಗಳಲ್ಲಿ ಹೊಸತೊಂದು ನಾಜಿ ಪಂಥವನ್ನು ಸ್ಥಾಪಿಸುವ ಯೋಜನೆಯೂ ಇತ್ತು. ಈ ವೇಳೆಗಾಗಲೇ ಹಿಟ್ಲರನು ಸಮಗ್ರ ಯೂರೋಪನ್ನೂ ಉತ್ತರ ಆಫ್ರಿಕವನ್ನೂ ವಶಪಡಿಸಿಕೊಂಡು, ವಿಶ್ವ ವಿಜಯದ ಕನಸಿನ ಹಾದಿಯಲ್ಲಿದ್ದನು. ವಿಶ್ವ ವಿಜಯದ ನಂತರ ತನ್ನದೇ ಆದ ನಾಜಿ ಮತ ಧರ್ಮವನ್ನು ಸ್ಥಾಪಿಸಿ ಕ್ರಿಶ್ಚಿಯನ್ ಧರ್ಮವನ್ನು ಅಳಿಸಿ ಹಾಕುವ ಯೋಜನೆಯನ್ನು ಹೊಂದಿದ್ದನು. ವೇದಗಳು, ಕುರಾನ್ ಮತ್ತು ಬೈಬಲ್‌ಗಳ ಉತ್ತಮ ತತ್ವಗಳನ್ನು ಒಳಗೊಂಡಂತೆ ಹೊಸ ಧರ್ಮದ ತತ್ವಗಳನ್ನು ರಚಿಸುವ ಹೊಣೆಯೂ ಹಿಮ್ಲರನ ಮೇಲಿತ್ತು. ಈ ಉತ್ತಮ ತತ್ವಗಳ ಮುಖವಾಡ ಧರಿಸಿದ ಹಿಟ್ಲರನು ಏಸು ಕ್ರಿಸ್ತನ ಸ್ಥಾನದಲ್ಲಿ ಮೆರೆಯಬೇಕಾಗಿತ್ತು!

ಹಿಟ್ಲರನ ಈ ಮಹತ್ವಾಕಾಂಕ್ಷೆ ಕಾಗದದ ಮೇಲೆ ಇಳಿಯುವ ಮೊದಲೇ ಯುದ್ಧದಲ್ಲಿ ಜರ್ಮನ್ನರು ಇಳುಕಲಿನ ಸೆಳೆತಕ್ಕೆ ಸಿಲುಕಿದ್ದರು. ಅವರು ಮರಳೇ ಮಹಾಯುದ್ಧದಲ್ಲಿ ಮೊದಲ ಬಾರಿಗೆ ಎಲ್-ಅಮೀನನಲ್ಲಿ (ಅಕ್ಟೋಬರ್ ೧೯೪೨) ಸೋಲಿನ ರುಚಿ ಕಂಡರು. ಈ ಸೋಲು ಹಿಟ

ಲರನ ಶವಪೆಟ್ಟಿಗೆಗೆ ಜಡಿದ ಮೊದಲ ಮೊಳೆಯಾಯಿತು. ಈ ಮಧ್ಯದಲ್ಲಿ ಡಾ. ಕೆರ್ಸ್ಟನ್ ಸುಮಾರು ೩೦೦೦ ಮಂದಿ ಡಚ್, ಫ್ರೆಂಚ್, ಬೆಲ್ಜಿಯನ್ ಮತ್ತು ಪೋಲೀಷ್ ಬಂಧಿತರ ಬಿಡುಗಡೆಗಾಗಿ ಹಿಮ್ಲರನ ಒಪ್ಪಿಗೆ ದೊರಕಿಸಿದ್ದಲ್ಲದೆ, ಅವರನ್ನು ಸುರಕ್ಷಿತವಾಗಿ ಸ್ವೀಡನ್ನಿಗೆ ಸಾಗಿಸಲೂ ಏರ್ಪಾಡು ಮಾಡಿದನು. ಈ ಕಾರ್ಯನಿರ್ವಹಣೆಯಾಗುತ್ತಿದ್ದಾಗಲೇ ಸುಮಾರು ೨೩೦೦ ಮಂದಿ ಯಹೂದ್ಯರನ್ನು ಅಪರ್ ಸೈಲೇಶಿಯಾದಲ್ಲಿದ್ದ ಮೃತ್ಯು ಶಿಬಿರಕ್ಕೆ ಸಾಗಿಸುತ್ತಿದ್ದ ರೈಲೊಂದನ್ನು ಎಲ್ಲರೂ ಆಶ್ಚರ್ಯದಿಂದ ಗಮನಿಸುತ್ತಿದ್ದಂತೆ, ಹಿಮ್ಲರನ ಆದೇಶ ಪಡೆದು ಆ ರೈಲನ್ನು ಸ್ವೀಡನ್ನಿಗೆ ಮಾರ್ಗಾಂತರಿಸಿಬಿಟ್ಟ! ನಂಬಲಸಾಧ್ಯವಾಗುವಂತೆ ಎಸ್. ಎಸ್. ಪಡೆಯ ತುಕಡಿಯೊಂದು ಈ ರೈಲು ಸ್ವೀಡನ್ ತಲಪುವರೆಗೆ ಅದರ ಬೆಂಗಾವಲಿಗಿತ್ತು!

೧೯೪೪ರ ವೇಳೆಗೆ ಹಿಟ್ಲರನ ಮುಖದಲ್ಲಿ ಸೋಲಿನ ಪ್ರೇತ ಕಳೆ ಕಾಣಿಸತೊಡಗಿತು. ಮಿತ್ರರಾಷ್ಟ್ರಗಳ ನೆರವಿನಿಂದ ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್ ಮತ್ತು ಬಲ್ಗೇರಿಯಾಗಳು ಪುನಃ



ಸ್ವತಂತ್ರಗೊಂಡವು. ಅಮೇರಿಕದ ಬಾಂಬರ್ ವಿಮಾನಗಳು ಮಿತ್ರರಾಷ್ಟ್ರಗಳ ಸಹಕಾರದಿಂದ ಜರ್ಮನಿಯ ಮೇಲೆ ಬಾಂಬಿನ ಮಳೆಗರೆಯ-ತೊಡಗಿದವು. ಅಮೇರಿಕದ ನೆಲೆಗಳಿಂದ ಹೊರಟ ವಿಮಾನಗಳು ಬರ್ಲಿನ್ ನಗರವನ್ನು ಮಣ್ಣು ಗೂಡಿಸಹತ್ತಿದವು. ತನ್ನ ಸೋಲಿನ ನಿರಾಶೆಯಲ್ಲಿ ಹತಾಶನಾದ ಹಿಟ್ಲರನು ಹೇಗ್ ನಗರವನ್ನು ರಾಕೆಟ್ ದಾಳಿಯಿಂದ ನಾಶಪಡಿಸಲೂ ಮತ್ತು ಎಲ್ಲಾ ಮೃತ್ಯುಶಿಬಿರಗಳನ್ನು ಅವರಲ್ಲಿರುವ ಬಂಧಿತರೊಂದಿಗೆ ಡೈನಮೈಟ್ ಗಳಿಂದ ಉಡಾಯಿಸಿ ಬಿಡಲೂ ಆದೇಶ ನೀಡಿದನು. ಈ ಭೀಕರ ನರಹತ್ಯೆಗೆ ಮೂಕ ಸಾಕ್ಷಿಯಾಗಲು ಕೆರ್ಸ್ಟನ್ನನ ಅಂತರಾತ್ಮ ಒಪ್ಪಲಿಲ್ಲ. ಬಹು ಪ್ರಯತ್ನದ ನಂತರ ಮಾರ್ಚ್ ೧೨, ೧೯೪೫ ರಂದು ಕೆರ್ಸ್ಟನ್, ಹಿಟ್ಲರನ ಆಜ್ಞೆಯನ್ನು ತಡೆ ಹಿಡಿಯುವ ಲಿಖಿತ ಆಜ್ಞೆಯೊಂದಕ್ಕೆ ಹಿಮ್ಲರನ ಸಹಿ ಪಡೆಯುವಲ್ಲಿ ಯಶಸ್ವಿಯಾದ. ಹಿಮ್ಲರನ ಆಜ್ಞೆಯ ಪ್ರಕಾರ ಮೃತ್ಯುಶಿಬಿರ ಮತ್ತು ಬಂಧಿತ ನಿವಾಸಿಗಳನ್ನು ಮಿತ್ರರಾಷ್ಟ್ರಗಳ ಸೈನ್ಯಕ್ಕೆ ಒಪ್ಪಿಸಲಾಯಿತು.

ಮೃತ್ಯು ಶಿಬಿರದೆಡೆಗೆ ಸಾಗಿದ ರೈಲನ್ನು ಸ್ವೀಡನ್ನಿಗೆ ತಿರುಗಿಸಿದ್ದು ಮತ್ತು ಮೃತ್ಯುಶಿಬಿರಗಳನ್ನು ಬಂಧಿತರ ಸಹಿತ ಮಿತ್ರರಾಷ್ಟ್ರಗಳಿಗೆ ಒಪ್ಪಿಸುವಂತೆ ಮಾಡಿದ್ದು ಎರಡನೇ ಮಹಾಯುದ್ಧದ ನರಹತ್ಯೆ ಕಣ್ಣೀರು ಮತ್ತು ರಕ್ತಪಾತಗಳಿಂದ ಮಾನವತೆಯೇ ನಾಚಿ ತಲೆ ತಗ್ಗಿಸಬೇಕಾದ ಸಂದರ್ಭದ ನಡುವೆಯೂ ಡಾ. ಫೆಲಿಕ್ಸ್ ಕೆರ್ಸ್ಟನ್ನನ ಮಾನವತಾ ಪ್ರೇಮದ ಕಿರೀಟಪ್ರಾಯ ಕೃತ್ಯಗಳಾಗಿದ್ದವು. ಬರ್ಲಿನ್ ಹೊತ್ತಿ ಉರಿಯುತ್ತಿದ್ದಾಗ ಕೆರ್ಸ್ಟನ್ ಬರ್ಲಿನ್ ಬಿಟ್ಟು ಹೊರಟು ಸ್ಟಾಕ್‌ಹೋಮಿನಲ್ಲಿದ್ದ ತನ್ನ ಪತ್ನಿ ಮತ್ತು ಮಕ್ಕಳನ್ನು ಸೇರಿಕೊಂಡನು. ೩೦, ಏಪ್ರಿಲ್ ೧೯೪೫ ರಂದು ಹಿಟ್ಲರನು ತನ್ನ ಪತ್ನಿಯೊಂದಿಗೆ ಆತ್ಮಹತ್ಯೆ ಮಾಡಿಕೊಂಡನು. ಎಂಟು ದಿನಗಳ ನಂತರ ಜರ್ಮನಿ ಮಿತ್ರರಾಷ್ಟ್ರಗಳ ಸೈನ್ಯಕ್ಕೆ ಶರಣಾಯಿತು. ಸಾಮಾನ್ಯ ಸೈನಿಕನಂತೆ ವೇಷ ಮರೆ
ಕೊಂಡ ಹಿಮ್ಲರ್ ಬರ್ಲಿನ್ನಿನಿಂದ ತಲೆ ತಪ್ಪಿ
ಕೊಳ್ಳಲು ಯತ್ನಿಸಿದ. ಅವನ ವೇಷಾಂತ
ಅವನ ವ್ಯಕ್ತಿತ್ವವನ್ನು ಮರೆಮಾಚಲು ಅಸಮರ್ಥ
ವಾಗಿತ್ತು. ಸ್ವಲ್ಪ ಮಟ್ಟಿಗೆ ಮಂಗೋಲಿಯನ
ಬುಡಕಟ್ಟಿಗೆ ಸೇರಿದವರ ಮುಖವನ್ನು ಹೋಲು
ತ್ತಿದ್ದ. ಅಮೇರಿಕನ್ ಸೈನಿಕನೊಬ್ಬನ ಅಂತರಾ
ದಲ್ಲಿ ಗಂಟೆ ಬಾರಿಸಿತು.

"ಅಯ್ಯೋ, ದೇವರೆ! ನೀನು ಹಿಮ್ಲರ
ಲ್ಲವೆ?" ಆ ಸೈನಿಕ ಪ್ರಶ್ನಿಸಿಯೇಬಿಟ್ಟ.

"ಹೌದು," ಶಾಂತ ಸ್ವರದಲ್ಲಿ ಹಿಮ್ಲರ್ ಒ
ಕೊಂಡ. ಇಂತಹ ವಿಷಮ ಸನ್ನಿವೇಶವನ
ನಿರೀಕ್ಷಿಸಿಯೇ ಇದ್ದ ಹಿಮ್ಲರ್ ಇನ್ನು ತ
ಆಟ ಸಾಗುವುದಿಲ್ಲವೆಂಬುದನ್ನರಿತು, ತನ್ನ ಬಾ
ಯಲ್ಲಿಯೇ ಇಟ್ಟುಕೊಂಡಿದ್ದ ವಿಷದ ಕ್ಯಾಪ
ಲನ್ನು ಹಲ್ಲಿನಿಂದ ಜಗಿದ. ಕೆಲವೇ ಸೆಕೆಂ
ಗಳಲ್ಲಿ ಗೆಸ್ಟಪೊ ಮತ್ತು ಎಸ್.ಎಸ್. ದಳ
ಅಧಿಪತಿ ಹೈನ್ರಿಕ್ ಹಿಮ್ಲರ್ ಅಸುನೀಗಿ
೧೫ ವರ್ಷಗಳ ನಂತರ ೧೬ ಏಪ್ರಿಲ್ ೧೯೬
ರಂದು ಡಾ. ಫೆಲಿಕ್ಸ್ ಹೃದಯಾಘಾತದಿಂ
ತೀರಿಕೊಂಡ. ಯುದ್ಧಾನಂತರವೂ ಕೆರ್ಸ್ಟ
ತನ್ನ ಸಾಧನೆಗಳನ್ನು ಪ್ರಚಾರ ಮಾಡಲಿಲ್ಲ. ಅ
ವಿಚಾರ-ಸಾಧನೆಗಳು ಹೊರ ಪ್ರಪಂಚದ ಅ
ವಿಗೆ ಬಂದದ್ದು, ಒಮ್ಮೆ ಕೆರ್ಸ್ಟನ್ನನ ಜೀವ
ಸಿದ ಎಸ್.ಎಸ್.ನ ಕಮ್ಯಾಂಡಿಂಗ್ ಜನರ
ವಾಲ್ಟರ್ ಶೆಟನ್‌ಬರ್ಗ್‌ನಿಂದ.

ನೂರೆಂಬರ್ಗ್ ವಿಚಾರಣೆಯ ಸಂದರ್ಭದ
ಸ್ಕ್ಯಾಂಡಿನೇವಿಯಾ, ಡಚ್ ಮತ್ತು ನಾ
ಸಾಕ್ಷಿಗಳ ಮೂಲಕ ಕೂಡಾ ಈ ಮಹಾ ಮಾನ
ವತಾವಾದಿ, ಫಿನ್ಲೆಂಡಿನ ನಾಗರಿಕ ಡಾ. ಫೆಲಿಕ
ಕೆರ್ಸ್ಟನ್, ಮನುಕುಲದ ಇತಿಹಾಸದ ಅತ್ಯಂ
ಹೀನ ಮನುಷ್ಯನೂ ಅತ್ಯಂತ ಕುಕೀರ್ತಿಂ
ವನೂ ಆದ ಹಿಮ್ಲರನ ಆತ್ಮೀಯತೆಯನ
ಹೊಂದಿದ್ದೂ ಮಾನವತೆಯ ಪ್ರಕಾಶಮಾ
ವಾದ ಬೆಳಕನ್ನು ಜಗತ್ತಿನಲ್ಲಿ ಬೀರಿದನು.

ತಟ್ಟಿದರೆ ಕುರುಳಾದೆ ಒತ್ತಿದರೆ ಬೆಳಕಾದೆ..

ಜಿ. ಆರ್. ರಂಗಸ್ವಾಮಯ್ಯ

ಮಾನವನ ಮಿದುಳಿನ ಮಹಾಯಾತ್ರೆಯಲ್ಲಿ ಯಾವ ವಸ್ತುವಿನ ಉಪಯೋಗ ಹೇಗೆ ಆಗುತ್ತದೋ ಯಾರಿಗೆ ಗೊತ್ತು! ಹಾಗೆ ಗೊತ್ತಿದ್ದರೆ ಸಗಣಿಯ ಮಹಿಮೆಯನ್ನು ಹಾಡಿ ಹೊಗಳಿದ ಕವಿ – ಸುಟ್ಟರೆ ನೊಸಲಿಗೆ ವಿಭೂತಿಯಾದೆ – ಸಾಲುಗಳ ಬಳಿಕ ಒತ್ತಿದರೆ ಬೆಳಕಾದೆ ಎಂದು ಹಾಡುತ್ತಿದ್ದನೇನೋ!

ಕವಿ ಹಾಡಲಿ ಬಿಡಲಿ. ಇಂದು ಸಗಣಿಯ ಉಪಯೋಗ ಯಾರಿಗೆ ತಾನೆ ಗೊತ್ತಿಲ್ಲ! ಕೃತಕ ರಸಾಯನಿಕ ಗೊಬ್ಬರಗಳು ಬಳಕೆಗೆ ಬಂದ ಮೇಲೆ, ವಿಶೇಷವಾಗಿ ನೀರಾವರಿ ಪ್ರದೇಶಗಳಲ್ಲಿ ರೈತರು ಕ್ಷಣಿಕ ಲಾಭಕ್ಕಾಗಿ ಸಗಣಿಗೊಬ್ಬರವನ್ನು ಅಷ್ಟಾಗಿ ಬಳಸುತ್ತಿರಲಿಲ್ಲ. ಆದರೆ ರಸಾಯನಿಕ ಗೊಬ್ಬರಗಳು ಜಮೀನಿನ ಸತ್ತ್ವವನ್ನು ಹಾಳು ಮಾಡಿ, ಮಣ್ಣಿನಲ್ಲಿ ಕ್ಷಾರ ಹಾಗೂ ಆಮ್ಲ ಗುಣಗಳನ್ನು ಹೆಚ್ಚಿಸಿ ಜಮೀನಿನ ಉತ್ಪಾದನ ಸಾಮರ್ಥ್ಯವನ್ನು ದಿನೇ ದಿನೇ ಕಡಿಮೆಮಾಡುತ್ತಿವೆ. ಈ ಗೊಬ್ಬರಗಳ ಅವಲಂಬನೆ ಸರಿಯಲ್ಲ; ಮತ್ತೆ ಸಗಣಿ ಗೊಬ್ಬರದಂಥ ಜೈವಿಕ ಗೊಬ್ಬರಗಳನ್ನು ಹೆಚ್ಚು ಹೆಚ್ಚು ಬಳಸುವುದು ಕ್ಷೇಮ ಎಂದು ಇತ್ತೀಚೆಗೆ ಕೃಷಿವಿಜ್ಞಾನಿಗಳು ಬೊಬ್ಬೆ ಹಾಕುತ್ತಿದ್ದಾರೆ. ಈಗಾಗಲೇ ಗ್ರಾಮೀಣ ಮಹಿಳೆಯರೂ ಗೊಬ್ಬರದ ಅನಿಲದಿಂದ ಅಡಿಗೆ ಮಾಡುತ್ತಿದ್ದಾರೆ. ತೋಟ ತುಡಿಕೆಗಳಿಂದ ಸಾಕಷ್ಟು ಉರುವಲು ಸಿಗುವ ಕೃಷಿಕರಿಗೆ ಗೊಬ್ಬರದ ಅನಿಲ ಆರ್ಥಿಕವಾಗಿ ಅಷ್ಟೇನೂ ಲಾಭದಾಯಕವಾಗಲಾರದು.

ಸಗಣಿಯನ್ನು ಗೊಬ್ಬರವಾಗಿಯಾಗಲಿ, ಅನಿಲ ರೂಪದಲ್ಲಾಗಲಿ ಎಲ್ಲರೂ ಬಳಸಲು ಸಾಧ್ಯವಿಲ್ಲ. ಆದರೆ ಎಲ್ಲರ ಮನೆಯ ನಂದಾದೀಪವಾಗಿಯೂ ಸಗಣಿಯಿಂದ ತಯಾರಿಸಿದ ಸೆಲ್ಲುಗಳು ಇನ್ನು ಬೆಳಗಲಿವೆ. ಭೋಪಾಳದಲ್ಲಿಯ ಕೇಂದ್ರ ಕೃಷಿ ತಂತ್ರಜ್ಞಾನ ಸಂಸ್ಥೆಯ ಅವಿರತ ಸಂಶೋಧನೆಯ ಫಲವಾಗಿ ಸಗಣಿಯ ಬ್ಯಾಟರಿ ಸೆಲ್ಲುಗಳು ಬೆಳಕಿಗೆ ಬರಲಿವೆ. ಈ ೪೦ ಮಿಲೀಮೀಟರ್ ವ್ಯಾಸ ಹಾಗೂ ೫೦ ಮಿಲೀಮೀಟರ್ ಉದ್ದದ ಪ್ಲಾಸ್ಟಿಕ್ ಸೆಲ್ಲಿನಲ್ಲಿ ೬೦ ಗ್ರಾಂ ಸಗಣಿ(ಎಲೆಕ್ಟ್ರೊಲೈಟ್ ರೂಪದಲ್ಲಿ)ಯನ್ನೂ ಇಂಗಾಲ ಮತ್ತು ಸತುವಿನ ಎಲೆಕ್ಟ್ರೋಡುಗಳನ್ನೂ ತುಂಬುವುದು. ಇದರಿಂದ ಸಾಕಷ್ಟು ವಿದ್ಯುತ್ತಿನ ಉತ್ಪಾದನೆಯಾಗುತ್ತದೆ. ಟ್ರಾನ್ಸಿಸ್ಟರ್ ರೇಡಿಯೋಗಳಿಗೆ ಈ ಸೆಲ್ಲುಗಳನ್ನು ಬಳಸಬಹುದು; ಇವುಗಳಿಂದ ಸಾಧಾರಣವಾದ ವಿದ್ಯುತ್ ದೀಪಗಳನ್ನೂ ಉರಿಸಬಹುದು. ಈ ಮಿಶ್ರಣಕ್ಕೆ ಕೊಂಚ ಉಪ್ಪು ಬೆರೆಸಿದರೆ ಇನ್ನೂ ಹೆಚ್ಚಿನ ವಿದ್ಯುತ್ತನ್ನು ಪಡೆಯಬಹುದು. ಉಳಿದ ಸೆಲ್ಲುಗಳಂತೆ ಈ ಸೆಲ್ಲುಗಳನ್ನೂ ಇತರ ಉಪಯೋಗಗಳಿಗೆ ಬಳಸಬಹುದು.

೧೯೭೭ರಲ್ಲಿ ಈ ಸಂಸ್ಥೆಯಲ್ಲಿ ಈ ಬಗ್ಗೆ ಕಾರ್ಯ ಪ್ರಾರಂಭವಾಯಿತು. ಈ ಸೆಲ್ಲುಗಳ ಸುಧಾರಣೆಯ ದಿಶೆಯಲ್ಲಿ ಕಾರ್ಯ ಮುಂದುವರಿದಿದೆ. ಇನ್ನು ಕೆಲವೇ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಸಗಣಿಯ ಸೆಲ್ಲುಗಳು ದೊರೆತರೆ ಅಚ್ಚರಿಯೇನಲ್ಲ. ಇದೇ ಸೆಲ್ಲುಗಳನ್ನು ಬಳಸಿ ಟ್ರಾನ್ಸಿಸ್ಟರ್ ರೇಡಿಯೋದಲ್ಲಿ ಮಧುರ ಗಾಯನವನ್ನೂ ಕೇಳಬಹುದು. ★

ಪ್ರಾಣಿಗಳಲ್ಲಿ ಮಾನವೀಯತೆ

ಎನ್. ಶಿವಮೂರ್ತಿ

ದಯೆ ಎಂಬುದು ಕೇವಲ ಮಾನವ ಜನಾಂಗಕ್ಕೆ ಸೀಮಿತವಾಗಿಲ್ಲ. ಎಷ್ಟೋ ವೇಳೆ ಕಾಡಿನಲ್ಲಿ ಕ್ರೂರ ಮೃಗಗಳೂ ದಯೆಯಿಂದ ವರ್ತಿಸಿವೆ ಎಂಬುದನ್ನು ತಿಳಿಯಬಹುದು.

೧೯೧೯. ರ ಸೆಪ್ಟೆಂಬರ್ ೧೨ನೇ ತಾರೀಖು ಆಫ್ರಿಕ ಖಂಡದ ಉಗಾಂಡಾ ದೇಶದ ಹಳ್ಳಿಯೊಂದರಲ್ಲಿ ಒಂದು ವಿಚಿತ್ರ ಸಂಗತಿ ಜರುಗಿತು. ಹಳ್ಳಿ ಇದ್ದುದು ಗೊಂಡಾರಣ್ಯದ ನಡುವೆ. 'ಮಸಾಯಿ' ಆದಿವಾಸಿಗಳ ಕೇವಲ ಹದಿನೈದು ಗುಡಿಸಲುಗಳು ಆ ಗ್ರಾಮದಲ್ಲಿದ್ದುವು. ಆ ಹಳ್ಳಿಯ ಆದಿವಾಸಿಯೊಬ್ಬ ತನ್ನ ಹೊಲದ ಬಳಿಯೇ ಗುಡಿಸಲು ಕಟ್ಟಿಕೊಂಡಿದ್ದ. ಅವನ ಹೆಂಡತಿ ಹತ್ತು ತಿಂಗಳ ಮಗುವೊಂದನ್ನು ಅವನ ಸಂರಕ್ಷಣೆಯಲ್ಲೇ ಬಿಟ್ಟು ಮಡಿದಿದ್ದಳು. ಸುತ್ತಲಿನ ತೋಟದಲ್ಲೆಲ್ಲ ಗೋರಿಲ್ಲಾಗಳ ಹಾವಳಿ ಜಾಸ್ತಿಯಾಗಿದ್ದಿತು. ಹಗಲಿರುಳೂ ಅವನು ಹೊಲದ ಕಾವಲಿಗೆ ನಿಲ್ಲಬೇಕಾಗಿದ್ದುದರಿಂದ ಮಗುವೂ ಅವನೊಡನೇ ಇರುತ್ತಿತ್ತು. ಅದು ನಿದ್ರಿಸುವಾಗ ಗುಡಿಸಲಿನ ಬೆತ್ತದ ತೊಟ್ಟಿಲಿನಲ್ಲಿ ಮಲಗಿಸಿ ಮತ್ತೆ ಹೊಲ-ತೋಟಗಳ ಕಾವಲಿಗೆ ಬರುತ್ತಿದ್ದ.



ಒಂದು ಸಂಜೆ ಅವನು ಏರಿಯ ಮೇಲೆ ಅಡ್ಡಾಡುತ್ತಿದ್ದ. ಸ್ವಲ್ಪ ದೂರದಲ್ಲಿ ಗೋರಿಲ್ಲಾಗಳ ಗುಂಪೊಂದು ತೋಟವನ್ನು ಹಾಳು ಮಾಡುತ್ತಿದ್ದುದು ಕಾಣಿಸಿತು. ಎಲ್ಲಿಂದಲೋ ಮಗುವಿನ ಚೀರಾಟ ಕೇಳಿಸಿತು. ಕೂಡಲೇ ಗುಡಿಸಲಿನ ಕಡೆ ಧಾವಿಸಿದ.

ಗೋರಿಲ್ಲಾ ಹಾಲೂಡಿಸಿತು

ಸ್ವಲ್ಪ ದೂರದಿಂದಲೇ ಹೆಣ್ಣು ಗೋರಿಲ್ಲಾ ಒಂದು ತನ್ನ ಮರಿಯೊಡನೆ ಗುಡಿಸಲ ಒಳ ಹೊಕ್ಕಿದ್ದು ಕಾಣಿಸಿತು. ಅವನು ಕಾತರದಿಂದ ಕಂಪಿಸಿದ. ಇನ್ನು ತನ್ನ ಮಗುವಿನ ಕತೆ ಮುಗಿ



ಯಿತೆಂದೇ ಭಾವಿಸಿದ. ಥಟ್ಟನೆ ಮಗುವಿನ ಅಳು ನಿಂತಿತು. ಬಿಲ್ಲು ಬಾಣವನ್ನು ಸಿದ್ಧಗೊಳಿಸಿ ಬಾಗಿಲ ಬಳಿ ಬಂದ; ಒಳಗಿನ ದೃಶ್ಯ, ಅವನನ್ನು ಬೆರಗುಗೊಳಿಸಿತು:

ತಾಯಿ ಗೊರಿಲ್ಲಾ ಇವನ ಮಗುವನ್ನೆತ್ತಿ ಹಾಲನ್ನುಣಿಸುತ್ತಿತ್ತು. ಅದರ ಮರಿಗಳು ತೊಟ್ಟಿಲಿನ ಸುತ್ತಲೂ ತಿರುಗುತ್ತಾ ಆಟವಾಡುತ್ತಿದ್ದವು. ಅವನನ್ನು ನೋಡಿದ ಕೂಡಲೇ ಅದು ಶಂಕೆಯಿಂದ ಮಗುವನ್ನು ಅಲ್ಲೇ ಬಿಟ್ಟು ತೋಟದ ಉತ್ತರ ಭಾಗದಲ್ಲಿರುವ ಗಣಿವೆಯೊಳಗೆ ತನ್ನ ಮರಿಗಳೊಡನೆ ಪಲಾಯನ ಹೇಳಿತು. ಮಗುವಿನ ತುಟಿಯ ಕೆಳಗೆ ಹಾಲಿನ ಎರಡು ಹನಿಗಳು ಮುತ್ತಿನಂತೆ ಕಾಣುತ್ತಿದ್ದವು.

ಅವನು ಗುಡಿಸಲಿನಲ್ಲಿರದ ಸಮಯದಲ್ಲೇ ಆ ತಾಯಿ ಗೊರಿಲ್ಲಾ ದಿನಕ್ಕೊಮ್ಮೆಯಾದರೂ ಬಂದು ಮಗುವಿಗೆ ಹಾಲುಣಿಸಿ ಹೋಗುತ್ತಿತ್ತು. ಕೆಲವೊಮ್ಮೆ ಅದು ಮರಿಗಳನ್ನು ಹತ್ತಿರದ ಪೊದೆಯಲ್ಲಿ ಬಚ್ಚಿಡುತ್ತಿತ್ತು. ಸುಮಾರು ಎಳೆಂಟು ತಿಂಗಳುಗಳವರೆಗೆ ತಾಯಿ ಗೋರಿಲ್ಲಾ ಬಂದು ಮಗುವಿಗೆ ಹಾಲುಣಿಸುತ್ತಿತ್ತು. ಯಾವ ಅಪಾಯವೂ ಇಲ್ಲ ಎಂದರಿತ ಅವನು ಗೋರಿಲ್ಲಾಕ್ಕೆ ಅಡ್ಡಿಪಡಿಸಲಿಲ್ಲ. ಅನಂತರ ಅದು ಬರುವುದು ಕಡಿಮೆಯಾಗಿ ಕ್ರಮೇಣ ನಿಂತುಬಿಟ್ಟಿತು.

ಮಗುವಿನ ಸತ್ತ ತಾಯಿಯೇ ಗೋರಿಲ್ಲಾದ ರೂಪದಲ್ಲಿ ಬಂದು ಹಾಲುಣಿಸುತ್ತಿದ್ದಳು ಎಂದು ಅಲ್ಲಿನ ಜನರು ನಂಬಿದ್ದರು. ಸತ್ತವರ ಆತ್ಮ-

ಗಳು ಯಾವ ರೂಪವನ್ನಾದರೂ ಧರಿಸಿ ಬ[illegible] ಬಲ್ಲವೆಂಬುದು 'ಮಸಾಯಿ' ಆದಿವಾಸಿಗಳ [illegible] ನಂಬಿಕೆ. ಆದರೆ ಮಗುವಿನ ಅಳು ಅಸಹಾಯಕ[illegible] ತಾಯಿ ಗೋರಿಲ್ಲಾದ ಮನಸ್ಸಿನಲ್ಲಿ ಕರುಣೆಯ[illegible] ನ್ನುಂಟುಮಾಡಿರಬೇಕು. ಅಂತೆಯೇ ಅದು ಧೈರ್ಯ[illegible] ಮಾಡಿ ಹಾಲುಣಿಸಿದೆ.

ಗೋರಿಲ್ಲ ಸಾಕಿದ ಮಗು

ಪೂರ್ವ ಆಫ್ರಿಕದ ಕೀನ್ಯಾದ ಶಿಂಬಾ ಬೆಟ್ಟ ಗುಡ್ಡಗಳ ಪ್ರದೇಶದ ಗೋರಿಲ್ಲಾಗಳಿಗೆ ಸಂಬಂಧಿಸಿದಂತೆ ಮತ್ತೊಂದು ಘಟನೆ ನಡೆಯಿತು. ಶಿಂಬಾ ಬೆಟ್ಟ ಗುಡ್ಡಗಳ ಪ್ರದೇಶ ಮೊಂಬಾಸದಿಂದ ೨೦ ಮೈಲು ದೂರದಲ್ಲಿದೆ. ಅಚೋಲಿ ಆದಿವಾಸಿಗಳ ಮಗುವೊಂದು ನಾಪತ್ತೆಯಾಯಿತು. ಮಗು ಕಾಯಿಲೆಯಿಂದ ಬಡಕಲಾಗಿತ್ತು. ಅದು ಮಾಯವಾದ ಹಿಂದಿನ ರಾತ್ರಿ ಶಿಂಬಾ ಪ್ರದೇಶದ ಸುತ್ತಲಿನ ತೋಟಗಳಲ್ಲಿ ಗೋರಿಲ್ಲಾಗಳ ಗುಂಪೊಂದು ಹಾವಳಿ ಎಬ್ಬಿಸಿತ್ತು. ಆ ಆದಿವಾಸಿ ಈ ಬಗ್ಗೆ ಅಲ್ಲಿನ ಅರಣ್ಯಾಧಿಕಾರಿ ಚಾರ್ಲ್ಸ್ ಆಲ್ಬರ್ಟ್‌ರನ್ನು ಕಂಡು ದೂರಿತ್ತ. ಮಗುವಿನ ಅನ್ವೇಷಣೆ ಶುರುವಾಯಿತು. ಆದರೆ ಎಷ್ಟು ಹುಡುಕಿದರೂ ಮಗುವಿನ ಸುಳಿವೇ ಸಿಗಲಿಲ್ಲ. ಎಂಟು ದಿನಗಳ ನಂತರ ಮಾಜಿಯಾಂಬುವಿಯ ಅರಣ್ಯ ಪ್ರದೇಶದಲ್ಲಿ ಒಂದು ಗೋರಿಲ್ಲಾ ದಂಪತಿಯ ಬಳಿಯಲ್ಲಿ ಮಗು ಇರುವುದು ಕಂಡುಬಂದಿತು.

ಗೋರಿಲ್ಲಾಗಳ ಕೈಯಿಂದ ಮಗುವನ್ನು ಪಡೆಯುವುದು ಅತ್ಯಂತ ಪ್ರಯಾಸದ ಕೆಲಸವಾಯಿತು. ಆದರೂ ಮಗುವನ್ನು ವಾಪಸ್ ಪಡೆದದ್ದಾಯಿತು. ಮಗುವಿನಲ್ಲಿ ಹಿಂದಿನ ಯಾವ ಕಾಯಿಲೆಯ ಗುರುತೂ ಉಳಿದಿರಲಿಲ್ಲ. ಅದು ಗೋರಿಲ್ಲಾದ ಆರೈಕೆಯಲ್ಲಿ ಧಷ್ಟ ಪುಷ್ಟವಾಗಿ ಬೆಳೆದು ಆರೋಗ್ಯವಂತನಾಗಿತ್ತು.

ಭಾರತದ ಅರಣ್ಯ ಪ್ರದೇಶಗಳಲ್ಲಿ [illegible] ಗಳು ಸಣ್ಣ ಮಕ್ಕಳನ್ನು ಕದ್ದುಕೊಂಡು ಹೋ[illegible] ರುವ ಹಲವು ನಿದರ್ಶನಗಳಿವೆ. ಪಠಾಣಕೋಟದ ಹಳ್ಳಿಯ ಬಳಿ ಸಂತಾಲ [illegible]

ಎಂಬ ಮಗುವನ್ನು ಐದು ವರ್ಷಗಳವರೆಗೆ ಒಂದು ಹೆಣ್ಣು ಕರಡಿ ತನ್ನ ರಕ್ಷಣೆಯಲ್ಲಿಟ್ಟುಕೊಂಡು ಪೋಷಿಸುತ್ತಿತ್ತು. ಹುಡುಗನನ್ನು ಮರಳಿ ಪಡೆದಾಗ ಅವನಲ್ಲಿ ಜಾಂಬವಂತನ ಲಕ್ಷಣಗಳೇ ಕಂಡುಬರುತ್ತಿದ್ದವು. ಅವನು ಆಜೀವ ಪರ್ಯಂತ ಮೂಕನಾಗಿಯೇ ಉಳಿದ.

ಕರಡಿ ಮತ್ತು ಗೋರಿಲ್ಲಾಗಳು ಮಾನವ ವರ್ಗಕ್ಕೆ ಸಮೀಪವಾದವುಗಳೆಂದೂ ಆದುದರಿಂದ ಮಾನವನ ಅಲ್ಪವಾದರೂ ಗುಣಗಳು ಅವುಗಳಲ್ಲಿವೆಯೆಂದು ಕೆಲವರು ಹೇಳುತ್ತಾರೆ. ಆದರೆ ಹುಲಿ, ಸಿಂಹಗಳಂಥ ರಕ್ತದಾಹಿಗಳೂ ಹಲವು ವೇಳೆ ಬಹಳ ಮಮತೆಯಿಂದ ವರ್ತಿಸಿವೆ.

ಒಮ್ಮೆ ಮಲಯಾದ ಪೋಲೀಸ್ ಸಾರ್ಜೆಂಟ್ ನದಿತೀರದಲ್ಲಿ ಕುಳಿತಿದ್ದ. ನದಿಯ ಎರಡೂ ದಡದಲ್ಲಿ ದಟ್ಟವಾದ ಅಡವಿಯಿತ್ತು. ಅಂದು ರಾತ್ರಿ ಬೆಳದಿಂಗಳು ಪಸರಿಸಿತ್ತು. ಇದ್ದಕ್ಕಿದ್ದಂತೆ ಅವನಿಗೆ ಕೆನ್ನೆಯ ಮೇಲೆ ಯಾರೋ ಒರಟು ಬಿರುದೂಗಲುಗಳ ಬ್ರಶ್ಯನ್ನು ಹಲವಾರು ಬಾರಿ ತೀಡಿದಂತೆ ಭಾಸವಾಯಿತು. ಆತ ಥಟ್ಟನೆ ಹೊರಳಿ ನೋಡಿದ. ಮೈ ತುಂಬಿ ಎತ್ತರವಾಗಿ ಬೆಳೆದ ಹೆಬ್ಬುಲಿಯೊಂದು ಆತನ ಕೆನ್ನೆಗೆ ತನ್ನ ಗಲ್ಲದಿಂದ ಒತ್ತಿ ಉಜ್ಜುತ್ತಿತ್ತು. ಅವನು ಚಿಂತಿಸುತ್ತಿದ್ದಂತೆ ಅದು ಕೊಂಚ ಹಿಂದಕ್ಕೆ ಸರಿಯಿತು. ನಂತರ ಮೆಲ್ಲನೆ ಅಡಿಯಿಟ್ಟು ಕಾಡಿನಲ್ಲಿ ಮರೆಯಾಯಿತು. ಈ ಘಟನೆ ನಡೆದಾಗ ಮಲಯಾದಲ್ಲಿ ಬ್ರಿಟಿಶ್ ಅಧಿಕಾರಿಯಾಗಿದ್ದ ಕರ್ನಲ್ ಲಾಕ್ ಅವರು ಅದೇ ಸನಿಹದಲ್ಲಿದ್ದರು. ಅವರಿಗೆ ಅತ್ಯಾಶ್ಚರ್ಯವಾಯಿತು. ಆ ಪೋಲೀಸ್ ಸಾರ್ಜೆಂಟನು ಈ ಘಟನೆಯನ್ನು 'ವ್ಯಾಘ್ರ ಚುಂಬನ' ಎಂದು ಕರೆದು ತನ್ನ ಆಜೀವ ಪರ್ಯಂತ ನೆನಪಿಟ್ಟುಕೊಳ್ಳುತ್ತಿದ್ದ. ಇದಾದ ನಂತರ ಅವನು ಹುಲಿಗಳ ಬೇಟೆಯಾಡುವುದನ್ನೂ ಶಿಕಾರಿಗೆ ನೆರವಾಗುವುದನ್ನೂ ಸಂಪೂರ್ಣ ನಿಲ್ಲಿಸಿಬಿಟ್ಟ.

ಅಪ್ರತಿಮ ಬೇಟೆಗಾರರಾದ ಜಿಮ್ ಕಾರ್ಬೆಟ್ಟರಿಗೆ ಉತ್ತರ ಭಾರತದ ಅರಣ್ಯವೊಂದರಲ್ಲಿ ವಿಚಿತ್ರ ಅನುಭವವಾಯಿತು. ಕಣಿವೆಯೊಂದರಲ್ಲಿ ಮೇಯುತ್ತಿದ್ದ ಒಂದು ತಿಂಗಳಿನ ಪುಟ್ಟ ಆಡಿನ ಮರಿಯೊಂದನ್ನು ಹಿಡಿಯಲು ಹೆಣ್ಣು ಹುಲಿಯೊಂದು ಹೊಂಚು ಹಾಕುತ್ತಿತ್ತು. ನಂತರ ಅದಕ್ಕೇನೆನ್ನಿಸಿತೊ ಏನೊ? ಹಿಡಿಯುವುದನ್ನು ಬಿಟ್ಟು ಅದು ನೇರವಾಗಿ ನಡೆದು ಮರಿಯ ಬಳಿಗೆ ಬಂದಿತು. ಮರಿ ಆಡಿಗೆ, ಹುಲಿ ದುಷ್ಟ ಪ್ರಾಣಿ ಎಂಬ ಅರಿವೂ ಇರಲಿಲ್ಲ. ಅದು ಬಣ್ಣ ಬಣ್ಣದ ಪಟ್ಟೆಗಳಿರುವ ಪ್ರಾಣಿಗೆ ಆಕರ್ಷಿತವಾಗಿ ಅದರ ಬಳಿಗೇ ಓಡಿತು. ಹುಲಿಯನ್ನು ಸಮೀಪಿಸಿದ ಮರಿ ತನ್ನ ತಲೆಯನ್ನು ಎತ್ತಿ ಕತ್ತನ್ನು ಚಾಚಿ ಅದನ್ನು ಮೂಸಿ ನೋಡತೊಡಗಿತು. ಒಂದೆರಡು ಕ್ಷಣಗಳ ವರೆಗೆ ಎರಡು ಪ್ರಾಣಿಗಳೂ ಮುಖಕ್ಕೆ ಮುಖ ಹಚ್ಚಿ ನಿಂತಿದ್ದವು.



ಅನ್ಯ ಜಾತಿಯ ಅಬೋಧ ಹಸುಳೆಯನ್ನು ವನರಾಣಿ ಮುತ್ತಿಮುತ್ತಿಟ್ಟಂತೆ ಜಿಮ್ ಕಾರ್ಬೆಟ್ ಅವರಿಗೆ ಭಾಸವಾಯಿತು. ಹಲವು ನಿಮಿಷಗಳ ನಂತರ ಆ ಹೆಣ್ಣು ಹುಲಿ ಹಿಂದಕ್ಕೆ ತಿರುಗಿ ಬಂದ ದಾರಿಯಲ್ಲೇ ನಡೆದು ಅರಣ್ಯವನ್ನು ಸೇರಿ ಮರೆಯಾಯಿತು. ಸಣ್ಣ ಮರಿ ಎಂದು ವನರಾಣಿ ಅನಾಥ ಮರಿಗೆ ಕರುಣೆ ತೋರಿದಳೆಂದೇ ಜಿಮ್ ಕಾರ್ಬೆಟ್ ಅವರ ಅಭಿಪ್ರಾಯ.

ಮತ್ತೊಬ್ಬ ಪ್ರಸಿದ್ಧ ಬೇಟೆಗಾರ ಜೆ. ಡಬ್ಲ್ಯು. ಶ್ರೆಫರವರಿಗೆ ಅಮೇಜಾನ್ ನದೀ ದಡದ ದಟ್ಟವಾದ ಅರಣ್ಯದಲ್ಲಿ ಸಿಂಹಿಣಿಯೊಂದರ ಅಪೂರ್ವವಾದ ದೃಶ್ಯ ನೋಡುವ ಅವಕಾಶ ಸಿಕ್ಕಿತು.

ಹೆಣ್ಣು ಜಿಂಕೆಯೊಂದು ವಿಷದ ಹಾವಿನ ಕಡಿತದಿಂದ ಸತ್ತಿತ್ತು. ಜಿಂಕೆಯ ಪುಟ್ಟ ಮರಿ ಸತ್ತ ತಾಯಿಯ ಹಾಲನ್ನು ಕುಡಿಯಲೆತ್ನಿಸುತ್ತಿತ್ತು. ಹಾಲು ಬಾರದ್ದರಿಂದ ಅದರ ಗೋಳು ಹೇಳತೀರದಾಗಿತ್ತು. ಹಾಲು ಸಿಗದೆಂದು ಅರಿವಾದ ಮೇಲೆ ಆ ಮರಿ ಕತ್ತೆತ್ತಿ ಸುತ್ತಲೂ ನೋಡಿತು. ಸ್ವಲ್ಪ ದೂರದಲ್ಲಿ ಸಿಂಹಿಣಿಯೊಂದು ತನ್ನ ಮರಿಯೊಂದಕ್ಕೆ ಹಾಲು ಕುಡಿಸುತ್ತಾ ಓಕ್ ಮರದ ನೆರಳಿನಲ್ಲಿ ಮಲಗಿತ್ತು. ಜಿಂಕೆಯ ಮರಿಗೆ ಹಸಿವು ಜಾಸ್ತಿಯಾಗಿತ್ತು. ಅದು ಕತ್ತೆತ್ತಿ ಸಿಂಹಿಣಿಯನ್ನು ದಿಟ್ಟಿಸಿತು. ನಂತರ ಬಹು ದೂರದಿಂದ ಒಂದೆರಡು ಬಾರಿ ಸಿಂಹಿಣಿಯನ್ನು ಪ್ರದಕ್ಷಿಣೆ ಮಾಡಿತು. ಹಸಿವು ತಾಳಲಾರದಾಗಲು ನೇರವಾಗಿ ಸಿಂಹಿಣಿಯ ಮಗ್ಗಲಿಗೆ ಬಂದು ಸಿಂಹದ ಮರಿಯ ಪಕ್ಕದಲ್ಲೇ ಬಗ್ಗಿ ಹಾಲು ಕುಡಿಯಲಾರಂಭಿಸಿತು. ಆದರೆ ಸಿಂಹಿಣಿ ಸ್ವಲ್ಪವೂ ಪ್ರತಿಭಟಿಸಲಿಲ್ಲ. ಬದಲಾಗಿ ಸ್ವಲ್ಪ ಹೊತ್ತಿನ ಬಳಿಕ ಎರಡೂ ಮರಿಗಳನ್ನು ಪ್ರೀತಿಯಿಂದ ನೆಕ್ಕತೊಡಗಿತು. ✡

(ವಿವಿಧ ಮೂಲಗಳಿಂದ)

ಪಾದ್ರಿಗಳೊಬ್ಬರು ಹಳ್ಳಿಯ ಹುಡುಗರಿಗೆ ಪಾಠ ಹೇಳಿಕೊಡುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳನ್ನು ಕುರಿತು ಅವರು ಒಂದು ಪ್ರಶ್ನೆ ಕೇಳಿದರು:

"ಇಲ್ಲಿ ಇದುವರೆಗೂ ಒಂದೇ ಒಂದು ಸುಳ್ಳು ಕೂಡಾ ಹೇಳದ.ವಿದ್ಯಾರ್ಥಿ ಇರುವನೆ?"

ಎಲ್ಲಾ ವಿದ್ಯಾರ್ಥಿಗಳೂ ಮೂಕರಾಗಿ ನಿಂತರು. ಪಾದ್ರಿಗಳು ಸಮಾಧಾನವಾಗಿ ನಿಟ್ಟುಸಿರುಬಿಟ್ಟರು. ನಂತರ ಹೇಳಿದರು: "ಕರ್ತರೆ! ನಿಮಗೆ ವಂದನೆ, ನಮ್ಮ ಮಕ್ಕಳು ಮೊದಲ ಬಾರಿಗೆ ಮೌನದಮೂಲಕ ಸತ್ಯವನ್ನು ಹೇಳಿದ್ದಾರೆ.

*

ಸಾಯುತ್ತಾ ಮಲಗಿದ್ದ ಒಬ್ಬ. ಅವನ ಸಂತತಿಯೆಲ್ಲ ಬಂದು ಅವನನ್ನು ಸುತ್ತುವರಿದು ನಿಂತುಕೊಂಡಿತು.

ಅವನು ಮರಣ ಶಾಸನ ಕೊಡತೊಡಗಿದ:

"ನಾನು ಎಷ್ಟೋ ಪಾಪಗಳನ್ನು ಮಾಡಿಬಿಟ್ಟೆ. ಪರರ ಸ್ವತ್ತುಗಳನ್ನು ಅಪಹರಿಸಿದೆ; ಪಾಲುದಾರನಿಗೆ ಮೋಸಮಾಡಿದೆ, ನಿಮಗೆ ಕೂಡ ತಿಳಿಯದಂತೆ ಸ್ವಿಡ್ಜರ್‌ಲ್ಯಾಂಡ್ ಬ್ಯಾಂಕಿನಲ್ಲಿ ಹಣ ಹಾಕಿಟ್ಟಿದ್ದೇನೆ. ಐದು ವರ್ಷಗಳ ಹಿಂದೆ ಐವತ್ತು ಲಕ್ಷ ರೂಪಾಯಿ ಬೆಲೆಯುಳ್ಳ ಚಿನ್ನದ...ಗಳನ್ನು ಭೂಮಿಯ ಅಡಿಯಲ್ಲಿ ಹೂತಿಟ್ಟಿದ್ದೇನೆ. ಈಶನೇ ನನ್ನನ್ನು ಮನ್ನಿಸಬೇಕು."

ಕೂಡಲೇ ಮಕ್ಕಳಲ್ಲೊಬ್ಬ ಕೇಳಿದ: "ಅದು ಸರಿ ಅಪ್ಪಾ, ಇದನ್ನೆಲ್ಲಾ ಐದು ವರ್ಷಗಳಿಗೆ ಮುಂಚೆಯೇ ನನಗೇಕೆ ಹೇಳಲಿಲ್ಲ?"

ಅಪ್ಪ ಹೇಳಿದ: "ಐದು ವರ್ಷಗಳು ನಾನು ಬದುಕಬೇಕಾಗಿತ್ತಲ್ಲಾ!"

–ಸಂಗ್ರಹ: ಬಿ. ಜಿ. ರಾಮಚಂದ್ರ



ಆಯ್ದ ನಗರಗಳಲ್ಲಿ ಮಾತ್ರ ಲಭ್ಯ.

UNTAS.BRT.3.1611

ಜರ್ಮನ್ ಸೈನಿಕರ ಜೀವಂತ ಸಮಾಧಿ

'ಸವ್ಯಸಾಚಿ'

ಮೊದಲ ಮಹಾಯುದ್ಧದ ಕಾಲ. ಬೆಲ್ಜಿಯಮ್ಮಿನ ಮೆಸಾಯಿನ್ ಬೆಟ್ಟ ಪ್ರದೇಶದಲ್ಲಿ ಹೋರಾಟ ನಡೆಯುತ್ತಿತ್ತು. ತೋಪುಗಳ ಗುಂಡುಗಳಿಂದ ನೆಲ ಬಿರಿಯುತ್ತಿತ್ತು. ಎಲ್ಲೆಲ್ಲೂ ಮಣ್ಣಿನ ರಾಶಿ ಹರಡಿತ್ತು. ಕೆಲವೆಡೆ ದೊಡ್ಡ ದೊಡ್ಡ ಹೊಂಡಗಳು ಕಾಣಿಸುತ್ತಿದ್ದವು.

ಬ್ರಿಟಿಶ್ ಸೈನಿಕ ನೆಲೆಯಿಂದ ತುಸು ದೂರದಲ್ಲಿ ಸಣ್ಣದೊಂದು ಜನವಸತಿ. ಅದು ದೊಡ್ಡ ದೊಡ್ಡ ಮಣ್ಣಿನ ರಾಶಿಗಳ ನಡುವೆ ಮರೆಯಾಗಿತ್ತು. ಅಲ್ಲಿಂದ ಮಂದ ಬೆಳಕು ಹೊರಸೂಸುತ್ತಿತ್ತು. ಆ ಬೆಳಕು ಕಂದಕಗಳಲ್ಲಿನ ಆಂಗ್ಲ ಸಿಪಾಯಿಗಳಿಗೆ ದಾರಿ ತೋರುತ್ತಿತ್ತು. ಮೆಸಾಯಿನ್ ಬೆಟ್ಟದ ಮೇಲೆ ಜನ ಸಂಚಾರವೇ ಇರಲಿಲ್ಲ. ನೂರನೂರದವರೆಗೂ ಮನುಷ್ಯನ ಸುಳಿವಿಲ್ಲ. ಯುದ್ಧ ಮುಗಿದು ಹೋದಂತೆ ಅನಿಸುತ್ತಿತ್ತು. ಆದರೆ ಈ ರಂಗದಲ್ಲಿ ಬ್ರಿಟಿಶ್ ಸಿಪಾಯಿಗಳು ತಮ್ಮ ಬದುಕು ಸಾವುಗಳ ಹೋರಾಟವನ್ನು ನಡೆಸುತ್ತಿದ್ದರು. ನೆಲದೊಳಗೇ ಈ ಸಿದ್ಧತೆ ಸಾಗಿತ್ತು. ಈ ಕ್ಷೇತ್ರದಿಂದ ಜರ್ಮನ್ ಸಿಪಾಯಿಗಳೆಂದೂ ಜೀವಂತ ಮರಳಬಾರದೆಂದೂ ಅವರಿಗೆ ಅಪ್ಪಣೆ ಕೊಡಲಾಗಿತ್ತು. ಈ ಸುರಂಗವನ್ನು ಮಿತ್ರ ಸೈನಿಕರು ಜರ್ಮನ್ ಸೈನಿಕ ನೆಲೆಯ ಕೆಳಭಾಗದಲ್ಲಿ ತೋಡುತ್ತಿದ್ದರು. ಸುರಂಗ ತೋಡಿಸುವ ತಂಡಕ್ಕೆ ಆಸ್ಟ್ರೇಲಿಯಾದ ಒಬ್ಬ ಕಪ್ತಾನ ಅಧಿಕಾರಿಯಾಗಿದ್ದ.

ಸುರಂಗ ಅಗೆಯುವ ಈ ಅತಿ ಗುಪ್ತ ಯೋಜನೆಯ ಮೇಲೆ ಮಿತ್ರರಾಷ್ಟ್ರಗಳ ಪರಿಯಿಂದ, ಆಸ್ಟ್ರೇಲಿಯಾ ಇಂಗ್ಲೆಂಡ್ ಹಾಗೂ ಸ್ಕಾಟ್ಲೆಂಡಿನ ಸೈನಿಕರು ಪೂರ್ತಿ ಒಂದು ವರ್ಷದಿಂದ ಹಗಲಿರುಳೂ ಕೆಲಸ ಮಾಡುತ್ತಿದ್ದರು. ೬೦ ಸಾವಿರ ಜರ್ಮನ್ ಸೈನಿಕರನ್ನು ಸಿಡಿಮದ್ದಿನಿಂದ ಹಾರಿಸಿಬಿಡಬೇಕೆಂಬ ಉದ್ದೇಶದಿಂದ ಈ ಕೆಲಸ ಬಲು ರಹಸ್ಯವಾಗಿ ಸಾಗಿತ್ತು. ಈ ಉದ್ದ ಸುರಂಗ ತೋಡಲು ಕಠೋರ ಪರಿಶ್ರಮ, ಭಾರೀ ಶಕ್ತಿ, ಅದಮ್ಯ ಸಾಹಸ, ಹಾಗೂ ನಿರಂತರ ಧೈರ್ಯದ ಅಗತ್ಯವಿತ್ತು. ಬೆಟ್ಟದ ಹೆಬ್ಬಂಡೆಗಳನ್ನು ಒಡೆದು ಸಿಡಿಮದ್ದಿನಿಂದ ಸಿಡಿಸಿಯೇ ಆ ಅಗಾಧ ಸುರಂಗ ನಿರ್ಮಿಸಲಾಗುತ್ತಿತ್ತು. ಈ ನಡುವೆ ಸಾವಿರಾರು ಸೈನಿಕರು ಕಠೋರ ಶ್ರಮ ಹಾಗೂ ಆಕಸ್ಮಿಕ ಅಪಘಾತದಿಂದ ಅಸುನೀಗಿದ್ದರು. ಈ ಸುರಂಗವನ್ನು ಬೆಟ್ಟದ ಕೆಳಗೆ ಆಳದಲ್ಲಿ ತೋಡುತ್ತ ಜರ್ಮನ್ ಸೇನೆಯ ೨೪ನೇ ಡಿವಿಜನ್ ತಳವೂರಿದ್ದ ಮೆಸಾಯಿನ್ ಹಳ್ಳಿಯ ತನಕ ಒಯ್ಯಬೇಕಿತ್ತು. ಜರ್ಮನ್ ಸೇನೆಯ ಈ ಡಿವಿಜನ್ ಬಲು ಸಾಹಸಿಯಾಗಿತ್ತು. ಅದರ ವ್ಯೂಹ ರಚನೆ ಹಾಗೂ ಕಂದಕಗಳು ಸಶಕ್ತವೂ ಸುರಕ್ಷಿತವೂ ಆಗಿದ್ದವು. ಅವುಗಳ ಮೇಲೆ ಗುಂಡುಗಳ ಪ್ರಭಾವವೇ ಉಂಟಾಗುತ್ತಿರಲಿಲ್ಲ. ಕಾಂಕ್ರೀಟ್ ನಿರ್ಮಿತ ಕಂದಕಗಳಲ್ಲಿ ತಾವು ಸುರಕ್ಷಿತರೆಂದು ಜರ್ಮನ್ ಸೈನಿಕರು ಭಾವಿಸಿದ್ದರು. ಅಂತಹವರನ್ನು ಸಿಡಿಮದ್ದಿನಿಂದ ಹಾರಿಸಿಬಿಡಲು ಅವರ ನೆಲದ ಅಡಿಯೇ ಕಳೆದ ಒಂದು ವರ್ಷದಿಂದ ಸುರಂಗ ನಿರ್ಮಾಣ ನಡೆದಿತ್ತು. ಈ ಯೋಜನೆ ಕೈಗೂಡಲು ಇಡೀ ಒಂದು ಬಟಾಲಿಯನ್ ಹಗಲಿರುಳೂ ಕಾರ್ಯ ಕೈಗೊಂಡಿತ್ತು.

ಜೂನ್ ೧೯೧೭ರಲ್ಲಿ ಬ್ರಿಟಿಶ್ ನೆಲೆಯಿಂದ ಹೊರಟು ಜರ್ಮನ್ ನೆಲೆಯ ಕೆಳ ಭಾಗದವರೆಗೆ ೫ ಮೈಲು ಉದ್ದದ ಸುರಂಗ ತೋಡುವುದರಲ್ಲಿ ಮಿತ್ರರಾಷ್ಟ್ರಗಳ ಸೈನಿಕರು ಸಫಲರಾದರು. ಇನ್ನು ಹಿಮದ ಪ್ರದೇಶದಲ್ಲಿ ಸಿಡಿ

ಜರ್ಮನ್ ನೆಲೆಯ ಕೆಳಭಾಗದಲ್ಲಿ ಸುರಂಗ ತೋಡಲ್ಪಟ್ಟಾಗ ಭೂಗತ ಶಬ್ದಗಳನ್ನು ಕೇಳಿ ಜರ್ಮನ್ನರು ಜಾಗ್ರುತರಾದರು. ತಮ್ಮ ನೆಲೆಯ ಕೆಳಗೆ ಯಾವುದೋ ಸುರಂಗ ನಿರ್ಮಾಣವಾಗುತ್ತಿರಬೇಕೆಂಬ ಸಂದೇಹ ಅವರಿಗಾಯಿತು. ಎಂತಲೇ ಆ ಸುರಂಗವನ್ನು ನಾಶಗೊಳಿಸಲು ಜರ್ಮನ್ ಇಂಜಿನೀಯರ್ ಹಾಗೂ ಸೈನಿಕರು ತಾವೂ ಒಂದು ಸುರಂಗ ತೋಡಲು ನಿರ್ಧರಿಸಿದರು. ಇಕ್ಕಡೆಯಿಂದಲೂ ಕಣ್ಣು ಮುಚ್ಚಾಲೆಯಾಟ ಆರಂಭವಾಯಿತು. ತಮ್ಮ ಸಪ್ಪಳ ವೈರಿಗಳಿಗೆ ಕೇಳಿಸಬಾರದೆಂದು ಇಬ್ಬರೂ ಎಚ್ಚರ ವಹಿಸುತ್ತಿದ್ದರು. ಮಿತ್ರ ಸೈನಿಕರು ಪಿಸುಮಾತಾಡುತ್ತ ಅಗೆತದ ಕಾರ್ಯವನ್ನು ಭರದಿಂದ ನಡೆಸುತ್ತಿದ್ದರು. ನಡುನಡುವೆ ತುಸು ಹೊತ್ತು ದಣಿವಾರಿಸಿಕೊಂಡು ಮತ್ತೆ ಕಾರ್ಯೋನ್ಮುಖರಾಗುತ್ತಿದ್ದರು. ಇತ್ತ ಮೇಲ್ಭಾಗದಲ್ಲಿ ಜರ್ಮನರ ಗಮನವನ್ನು ಬೇರೆಡೆಗೆ ಹರಿಸಲು ಮಿತ್ರರಾಷ್ಟ್ರಗಳು ಭಯಂಕರ ಬಾಂಬ್ ದಾಳಿ ನಡೆಸಿದ್ದವು.

ಆಸ್ಟ್ರೇಲಿಯಾದ ಕಪ್ತಾನ ಮನ್ರೋ ತನ್ನ ತಂಡದೊಂದಿಗೆ ಸುರಂಗದ ಕಾರ್ಯ ಪೂರ್ಣಗೊಳಿಸುವುದರಲ್ಲಿ ತನ್ಮಯನಾಗಿದ್ದ. ಆಗಲೇ ಇದ್ದಕ್ಕಿದ್ದಂತೆ ಆವನ ಸುರಂಗ ಜರ್ಮನ್ ಸುರಂಗಕ್ಕೆ ಹೋಗಿ ಸೇರಿತು. ಗಂಡಾಂತರದ ಅರಿವಾಗುತ್ತಲೇ ಆತ ತನ್ನ ಸುರಂಗದ ಸ್ವಲ್ಪ ಭಾಗದಲ್ಲಿ ಸಿಡಿಮದ್ದು ಹಾಸಿ ಉರಿ ಹಚ್ಚಿಬಿಟ್ಟ. ತುಸು ಹೊತ್ತಿನಲ್ಲೇ ಒಂದು ವಿಸ್ಫೋಟ ನಡೆದು ಅಲ್ಲಿ ಕೆಲಸ ಮಾಡುತ್ತಿದ್ದ ಎಷ್ಟೋ ಜರ್ಮನ್ ಸೈನಿಕರು ಸುಟ್ಟು ಹೋದರು. ಆ ಸುರಂಗವೂ ಪೂರ್ತಿ ನಷ್ಟವಾಯಿತು.

ಈಗ ಮಿತ್ರರಾಷ್ಟ್ರಗಳ ಯೋಜನೆ ಸಫಲವಾಗಿತ್ತು. ೫ ಮೈಲುಗಳ ಸುರಂಗ ಸಿದ್ಧವಾಗಿತ್ತು. ಅದರ ಮೇಲೆ ಜರ್ಮನರ ಇಡೀ ಡಿವಿಜನ್ ನೆಲೆ ನಿಂತಿತ್ತು. ಅವನ್ನು ಹಾರಿಸಿಬಿಡಲು ಬರೀ ಮೂರು ದಿನ ಉಳಿದಿತ್ತು. ವಿಸ್ಫೋಟಕಾರ್ಯವನ್ನು ನೆರವೇರಿಸಲು ೨೦ ಪದರುಗಳಲ್ಲಿ ೧೦ ಲಕ್ಷ ಪೌಂಡ್ ಸಿಡಿ ಮದ್ದನ್ನು ಸುರಂಗದೊಳಗೆ ಹಾಸಲಾಯಿತು. ಮತ್ತು ದಾರದ [illegible] ತಲುಪಿಸಲಾಯಿತು. ಅಲ್ಲಿ ಕುಶಲ ತಜ್ಞರು ಮೇಲಿನವರ ಆಜ್ಞೆಗಾಗಿ ಕಾದಿದ್ದರು. ಆ ವೇಳೆ ಜರ್ಮನ್ ಸೈನಿಕರಿಗೆ ಇದರ ಸುಳಿವೂ ಹತ್ತಿರಲಿಲ್ಲ. ತಮ್ಮನ್ನು ಜೀವಂತ ಸಮಾಧಿಗೊಳಿಸಲು ಒಳಗೊಳಗೇ ಏರ್ಪಾಡಾಗಿದೆಯೆಂದು ಅವರು ಕನಸಿನಲ್ಲೂ ಯೋಚಿಸಿರಲಿಲ್ಲ. ದಾರಕ್ಕೆ ಉರಿ ಹಚ್ಚುವ ಮೊದಲು, ಪ್ರತಿ ಸುರಂಗ ತೋಡುತ್ತಿರುವ ಜರ್ಮನ್ ಚಟುವಟಿಕೆಗಳ ಪ್ರಗತಿ ನೋಡಲು ಕಪ್ತಾನ ಮನ್ರೋ ಅವರ ಸುರಂಗ ನಿರ್ಮಾಣದ ಸಪ್ಪಳ ಬರುವತ್ತ ಸಾಗಿದ. ಆಗಲೇ ಒಂದೆಡೆ ಮೇಲ್ಭಾಗ ಜರಿದುದರಿಂದ ಮನ್ರೋ ತನ್ನ ತಂಡದೊಂದಿಗೆ ಮಣ್ಣಿನೊಳಗೆ ಹೂತು ಹೋದ. ಅವನ ಫೋನ್ ಸಂಪರ್ಕವೂ ಕಡಿದು ಹೋಯಿತು. ಇತ್ತ ಜರ್ಮನ್ ಸೈನಿಕರು ತಮ್ಮ ಸುರಂಗ ತೋಡುತ್ತ ಕ್ಷಣಕ್ಷಣವೂ ಬ್ರಿಟಿಶರ ಸುರಂಗದ ಬಳಿಗೆ ತಲುಪುತ್ತಿದ್ದರು. ಕಪ್ತಾನ ತನ್ನ ದುರ್ದೈವವನ್ನು ಹಳಿಯ ತೊಡಗಿದ. ಜರ್ಮನ್ ಅಗೆತಗಾರರಿಗೆ ತಾವು ಶತ್ರುಗಳಿಂದ ಕೆಲವೇ ಗಜ ದೂರದಲ್ಲಿದ್ದೇವೆಂಬುದು ತಿಳಿದಿರಲಿಲ್ಲ. ಮಿತ್ರ ರಾಷ್ಟ್ರಗಳ ಸುರಂಗವನ್ನು ಪತ್ತೆ ಹಚ್ಚುವವರಿಗೆ ಒಂದು ಲಕ್ಷ ಪೌಂಡ್ ಬಹುಮಾನ ಕೊಡಲಾಗುವುದೆಂದು ಜರ್ಮನ್ ಹೈಕಮಾಂಡ್ ಘೋಷಿಸಿತ್ತು. ಎಂತಲೇ ಜರ್ಮನ್ ಸೈನಿಕರು ಉತ್ಸಾಹದಿಂದ ಅಗೆತದ ಕಾರ್ಯ ಮುಂದುವರಿಸಿದ್ದರು. ಈ ವೇಳೆ ಜರ್ಮನರನ್ನು ತಡೆಯುವ ಯಾವ ಸಾಧನವೂ ಮನ್ರೋನ ಬಳಿ ಇರಲಿಲ್ಲ.

ಮಣ್ಣಿನಡಿ ಹೂತು ಹೋಗಿದ್ದುದರಿಂದ ಮನ್ರೋನಿಗೆ ಉಸಿರಾಟಕ್ಕೆ ಕಷ್ಟವಾಗುತ್ತಿತ್ತು. ಇತ್ತ ಜರ್ಮನರ ಅಗೆತದ ಸಪ್ಪಳ ಸಮೀಪ ಸಮೀಪಕ್ಕೆ ಹತ್ತಿರವಾಗುತ್ತಿತ್ತು. ಮಿತ್ರ ಸೈನಿಕರು ಮನ್ರೋನ ಮೇಲೆ ಬಿದ್ದ ಮಣ್ಣನ್ನು ಸರಿಸ ತೊಡಗಿದ್ದರು.

ಕಪ್ತಾನ ಮನ್ರೋ ಸುರಂಗದ ಮಣ್ಣಿನಡಿ ಹೂತು ೪೦ ತಾಸುಗಳು ಕಳೆದಿದ್ದವು. ಕಟ್ಟಕಡೆಗೆ ಒದ್ದೆ ಮಣ್ಣಿನಡಿ ಸಿಲುಕಿದ್ದ ಅವನನ್ನು ಸಂಗಾತಿಗಳು ಹೊರತೆಗೆದರು. ಕಡಿದು ಹೋದ ಟೆಲಿಫೋನ್ ಸಂಪರ್ಕವನ್ನು ಸರಿಪಡಿಸಲಾಯಿತು.

೧೯೧೭ರ ಜೂನ್ ೭ನೇ ತಾರೀಖು ನೆಲದ ಮೇಲೆ ಮಿತ್ರರಾಷ್ಟ್ರಗಳ ತೋಫುಗಳು ಜರ್ಮನರತ್ತ ಗುಂಡು ಹಾರಿಸುತ್ತಿದ್ದುವು. ಈಗ ಭೂಗತ ವಿಸ್ಫೋಟ ಯೋಜನೆಗೆ ಅಂತಿಮ ರೂಪ ನೀಡಲು ಬರೀ ೩ ತಾಸು ಉಳಿದಿತ್ತು. ಈ ಸಮಯ ಜರ್ಮನರಿಗೆ ಸುರಂಗದ ಪತ್ತೆ ಹತ್ತಿದ್ದರೆ ಅವರು ಈ ಭೀಕರ ಮೃತ್ಯುವಿನಿಂದ ಪಾರಾಗಬಹುದಿತ್ತು.

ಕಿಪ್ಪಾನ ಮೆಸೊಲ್ಲೀ ಸುರಂಗದಿಂದ ಹೊರ ಬಂದಾಗ ಜರ್ಮನರು ತಮಗೆ ತುಂಬಾ ಹತ್ತಿರದಲ್ಲಿದ್ದಾರೆಂದು ತಿಳಿದ. 'ನಾವು ನಿಶ್ಚಿತ ಸಮಯಕ್ಕೆ ವಿಸ್ಫೋಟ ನಡೆಸಿದರೆ ನಾವು ಯಶಸ್ವಿಯಾಗುವೆ'ವೆಂದು ಮೆಸೊಲ್ಲೀ ಫೋನ್ ಮೂಲಕ ಅಧಿಕಾರಿಗಳಿಗೆ ಸೂಚಿಸಿದ.

ಸಿಡಿಮದ್ದು ತುಂಬಿದ ಸುರಂಗದೊಳಗಿಂದ ಕೊನೆಯ ಸಿಪಾಯಿಯೂ ಹೊರ ಬಂದು ಸುರಕ್ಷಿತ ಸ್ಥಾನಕ್ಕೆ ತಲುಪಿದಾಗ, ಮಿತ್ರರಾಷ್ಟ್ರಗಳು ಜರ್ಮನ್ ನೆಲೆಯ ಮೇಲೆ ಬಾಂಬ್ ಹಾಕುವುದನ್ನು ಒಮ್ಮೆಲೇ ನಿಲ್ಲಿಸಿಬಿಟ್ಟುವು. ಜರ್ಮನ್ ನೆಲೆಯಲ್ಲಿ ಪೂರ್ಣ ಶಾಂತಿ ಆವರಿಸಿತು.

ಬೆಳಗ್ಗೆ ೩ ಗಂಟೆ. ಆಕಾಶದಲ್ಲಿ ಬೆಳಗಿನ ತಾರೆ ಮಿನುಗುತ್ತಿತ್ತು. ಆ ವೇಳೆ ಮಿತ್ರ ರಾಷ್ಟ್ರದ ತೋಫುಗಳು ಬಹುದೂರದಲ್ಲಿ ಜರ್ಮನ್ ನೆಲೆಗಳತ್ತ ಗುಂಡು ಹಾರಿಸಲು ಸನ್ನದ್ಧವಾಗಿದ್ದುವು. ಅಲ್ಲಿ ವ್ಯಾಪಿಸಿದ್ದ ಭೀಕರ ಮೌನವನ್ನು ದೂರದ ನವಿಲೊಂದು ಮೋಹಕ ಕೊರಳಿಂದ ಕೂಗಿ ಭೇದಿಸಿತು. ಆ ವೇಳೆ ಸುರಂಗದ ಸಿಡಿಮದ್ದಿನ ದಾರಕ್ಕೆ ಉರಿ ಹಚ್ಚಲು ಬ್ರಿಟಿಷ್ ಅಧಿಕಾರಿ ಬೆಟ್ಟು ಸಿದ್ಧಗೊಳಿಸಿದ್ದ. ಮುಂದೆ ಆತ ತನ್ನ ಮನೆಗೆ ಬರೆದ ಪತ್ರದಿಂದ ಆಗಿನ ಅವನ ಮನಃಸ್ಥಿತಿಯನ್ನು ಊಹಿಸಬಹುದು.

"ಕೊನೆಯ ೨೦ ನಿಮಿಷದ ಸಮಯದ ತುಂಬಾ ಘಾತಕವಾಗಿತ್ತು. ಅದೆಂದೂ ಮುಗಿಯದೆಂಬಂತೆ ಅನ್ನಿಸುತ್ತಿತ್ತು. ಕಟ್ಟಕಡೆಯ ೩೦ ಸೆಕೆಂಡ್ ವೇಳೆ ಒಂದು ಶತಮಾನವೋ ಎಂಬಷ್ಟು ಉದ್ದವಾಯಿತು. ಗಡಿಯಾರದ ಮುಳ್ಳುಗಳು ನಡೆದು ದಣಿದಂತೆ ಭಾಸವಾಗುತ್ತಿತ್ತು. ಕಟ್ಟಕಡೆಗೆ ಸೆಕೆಂಡ್ ಮುಳ್ಳಿನ ಕೊನೆಯ ಸುತ್ತು ಪೂರ್ಣಗೊಂಡಿತು. ಆಗ ಬೆಳಗಿನ ೩-೧೦ರ ಸಮಯ."

ಭಯಂಕರ ಸ್ಫೋಟ ನಡೆಯಿತು. ಅದರ ಸಪ್ಪಳ ೨೦೦ ಮೈಲಿಗೂ ಹೆಚ್ಚು ದೂರದ ಲಂಡನ್ನಿಗೂ ಕೇಳಿಸಿತು. ಒಮ್ಮೆಲೇ ಭೂಕಂಪದಂತಹ ಆಘಾತವುಂಟಾಗಿ ಆ ವೇಳೆ ಪ್ರಧಾನಮಂತ್ರಿಯಾಗಿದ್ದ ಲಾಯ್ಡ್ ಜಾರ್ಜ್ ತಮ್ಮ ಕಿಟಕಿಯ ಬಾಗಿಲುಗಳು ಅದುರುತ್ತಿರುವುದನ್ನು ಗಮನಿಸಿದರು. ಆದರೆ ಅವರಿಗೆ ಆ ಭಯಂಕರ ವಿಸ್ಫೋಟದ ಬಗ್ಗೆ ತಿಳಿದಿತ್ತು. ವಾಯುಮಂಡಲದಲ್ಲಿ ದೊಡ್ಡದೊಂದು ಬೆಂಕಿಯ ಗುಂಡು ಸಿಡಿಯಿತು. ಮೆಸಾಯಿನ್ ಬೆಟ್ಟದಿಂದ ಮೆಸಾಯಿನ್ ಹಳ್ಳಿಯವರೆಗೆ ಹತ್ತು ಮೈಲು ಉದ್ದದ ಜ್ವಾಲಾಮುಖಿ ಸಾವಿರಾರು ಅಡಿ ಎತ್ತರದಿಂದ ಬೆಂಕಿ ಉಗುಳುತ್ತಿರುವುದು ಕಾಣಿಸಿತು. ಬೆಟ್ಟದಲ್ಲಿ ಅಲ್ಲಲ್ಲಿ ದೊಡ್ಡ ದೊಡ್ಡ ಬಿರುಕುಗಳು ಉಂಟಾಗಿದ್ದುವು. ಬಂಡೆಗಳೆಲ್ಲ ಉರಿಯುವ ಕೆಂಡಗಳಂತಾಗಿದ್ದುವು. ಕಲ್ಲು ಗುಂಡುಗಳು ಚಟಚಟನೆ ಸಿಡಿದು ದೂರ ದೂರ ಹೋಗಿಬೀಳುತ್ತಿದ್ದುವು. ದೇವತೆಗಳು ಸಿಟ್ಟಾಗಿ ಭೂಮಿಯ ಮೇಲೆ ಸಿಡಿಲುಗಳನ್ನು ಮಳೆಗರೆಯುತ್ತಿದ್ದಂತೆ ಭಾಸವಾಗುತ್ತಿತ್ತು.

ಆ ಪ್ರಳಯಕಾರಿ ವಿಸ್ಫೋಟಕ್ಕೆ ೧೦ ಸಾವಿರ ಜರ್ಮನರು ಬಲಿಯಾದರು.

ಮೆಲ್ಲಮೆಲ್ಲನೆ ಕೆಲವು ದಿನಗಳ ಬಳಿಕ ಬೆಂಕಿ ನಂದಿದಾಗ ಕೆಲವು ಅರೆಸತ್ತ ಜರ್ಮನ್ ಸೈನಿಕರು ಕಾಣಿಸಿಕೊಂಡರು. ಅವರನ್ನು ತಕ್ಷಣ ಗುಂಡಿಕ್ಕಿ ಕೊಲ್ಲಲಾಯಿತು.

ಮಿತ್ರರಾಷ್ಟ್ರಗಳ ಸೈನಿಕರು ಆ ಉಧ್ವಸ್ತ ಪ್ರದೇಶಕ್ಕೆ ತಲುಪಿದಾಗ ಸುಮಾರು ೭ ಸಾವಿರ ಜೀವಂತ ಜರ್ಮನರು ಅಲ್ಲಲ್ಲಿ ಎಚ್ಚರ ತಪ್ಪಿ ಬಿದ್ದಿರುವುದನ್ನು ಕಂಡರು. ಅವರೆಲ್ಲರನ್ನೂ ಸೆರೆ ಹಿಡಿಯಲಾಯಿತು.

(ಹಿಂದಿಯಿಂದ)

ಪ್ರೇಮಿಗಳು




(ಕೊಣಾರ್ಕ ಶಿಲ್ಪ

ಸ್ವರ್ಣಮೃಗದ ಪ್ರಸಂಗ

ಅವನೇಕೆ ಮೌನಿಯಾಗಿದ್ದಾನೆ? ಬಹಳ ಹೊತ್ತಿನಿಂದ ಅಂತರ್ಮುಖಿಯಾಗಿರುವನಲ್ಲ.

ಕತ್ತಲಾವರಿಸುತ್ತಿರುವ ಆಕಾಶದೆದುರು ಕುದುರೆಗಳು, ರಥ, ಸಾರಥಿ...... ಎಲ್ಲ ಕನಸಿನಲ್ಲಿ ಮೂಡಿದ ಚಿತ್ರದಂತೆ ಕಾಣುತ್ತಿದೆ. ಪಕ್ಷಿಗಳು ಗೂಡು ಸೇರಿ ಸರಿಮಾಡಿಕೊಳ್ಳುವ ಸೂಕ್ಷ್ಮ ಶಬ್ದದ ವಿನಾ ವಾತಾವರಣ ಸ್ತಬ್ಧವಾಗುತ್ತಿತ್ತು. ಪಾದಗಳಡಿಯಲ್ಲಿ ಹರಿಯುತ್ತಿರುವ ನದಿ ಮೌನದ ಮೋಡಿಯಲ್ಲಿ ಸಿಕ್ಕಿ ನಿಶ್ಶಬ್ದವಾಗಿ ಜಾರಿಹೋಗುತ್ತಿದೆ.

ಏನಾದರೂ ನಿಷೇಧವೇ? ಇದ್ದೇನು ಪ್ರಮಾಣ ಮಾಡಿ ಹೇಳಬಲ್ಲೆ. ಆದರೂ, ಈ ಅಶುಭಸೂಚಕ ಮೌನ...? ಅದರಿಂದಾಗಿ ಭೀತಿ ನನ್ನನ್ನು ಅಪಚಿ ಹಿಡಿದಿದೆ.



ಇಂಗ್ಲಿಷ್ ಕಥೆ

ಮೂಲ: **ಶಶಿ ದೇಶಪಾಂಡೆ**

ಕನ್ನಡಕ್ಕೆ: **ಗೋಪಿಕಾ ವೆಂಕಟರಾಂ**

ಮೌನ... ಕೊನೆಗೂ ಒಡೆಯಿತು...

"ನಾನು ಮಾತಾಡಲೇ ಬೇಕು"...

ದುಃಖದಿಂದಾವೃತವಾದ ಒಡಕು ದನಿ ಗಕ್ಕನೆ ನಿಂತಿತು. 'ಬೇಡ' ಎಂದು ಕಿರುಚಬೇಕೆಂದು ನನಗನಿಸಿತು. "ಬೇಡವೇ ಬೇಡ... ನಾನೇನೂ ಕೇಳಬಯಸುವುದಿಲ್ಲ..." ಆದರೆ ಕಾಲ ಮಿಂಚಿತ್ತು. ಸ್ವಲ್ಪ ಮಾತ್ರ ಹೇಳುವುದು [illegible]. ಆದರೆ... ಅದರಿಂದಾದ ಅರ್ಥ...! ನದಿಯ ಮಹಾ ಪ್ರವಾಹದಂತೆ ನನ್ನನ್ನು ಕೊಚ್ಚಿಕೊಂಡು... [illegible] ಸಿತು.

ಇಂಥದೇ ಘೋರ ಸ್ವಪ್ನವನ್ನು ಹಿಂದೊಮ್ಮೆ ನಾನು ಅನುಭವಿಸಿದ್ದೆನಲ್ಲವೆ? ಆ ಸ್ವಪ್ನ ವಾಸ್ತವಕ್ಕೆ ಮಾರುಹೋದ ದಿನ... [illegible]ವಂತೆ ತೆರೆದ ಸನ್ಯಾಸಿಯ ಕೈಗಳು ಉಕ್ಕಿನ ಹಿಡಿತದಿಂದ ನನ್ನ ಸೆಳೆದೊಯ್ದಾಗ... ಅದೇ [illegible] ವಾಗಿ ಘಾತಿಸುವ ಹಿಡಿತವೇ ಮತ್ತೆ ನನ್ನ ಒಡ[illegible] [illegible] ಪಟ್ಟ ಪ್ರಯತ್ನದಿಂದ ನನ್ನ ಸಂಯಮ ಕಾಪಾಡಿಕೊಳ್ಳಬೇಕಾಯಿತು. [illegible]ವೆನಿಸಿದ ದನಿಯಲ್ಲಿ. ಅತಿ ಕಷ್ಟದಿಂದ [illegible] ಗುಟ್ಟಿದೆ.

"ಹಾಗೇಕೆ...? ಏಕೆ ಲಕ್ಷ್ಮಣಾ...?"

ಪಾಪ... ಜರ್ಝರಿತನಾ[illegible] ಕೊಡದಾದ. ಉತ್ತರವಾಗಿ ಬಹಳ [illegible]... [illegible]...

"ಇಷ್ಟು ಮಾತ್ರವೇನಾ...? [illegible] ಸಂದೇಶ... ಕೇವಲ ಇಷ್ಟೇನಾ...?"

[illegible] ತ್ತಿದ್ದವ ಒಮ್ಮೆಲೇ ತಲೆಯೆತ್ತಿ ನನ್ನ ಮುಖ ನೋಡಿದ. ನಾನು ಪ್ರಯಾಣಕ್ಕೆ ಸಿದ್ಧವಾಗಿ [illegible].

*

[illegible] ನಾನು [illegible]. [illegible] ಸೂಕ್ಷ್ಮವಾಗಿ ನನ್ನ [illegible] ತ್ತಿತ್ತು. [illegible] [illegible].

"[illegible]?" [illegible]. [illegible] ... "[illegible]..." [illegible]. ಆಗ ಎಷ್ಟು [illegible]!! [illegible] ಮಗುವನ್ನೇ ನೆನಪಿಸಿಕೊಳ್ಳುತ್ತಿರುವಂತೆ ನನ್ನ ಮನಸ್ಸು ಆ ದಿನಗಳನ್ನೇ ಧ್ಯಾನಿಸುತ್ತಿದೆ. ಆದರೆ, ಲಕ್ಷ್ಮಣ ನನ್ನಂತೆ [illegible] ತಾಳ್ಮೆಗೆಟ್ಟಂತೆ ಕಂಡಿತ್ತು. ಅದನ್ನು ಕಂಡು [illegible].

"ನಿನ್ನನ್ನು ಬಹಳ ಹೊತ್ತು ಕಾಯಿಸಿದೆನೆ? ಬೇಗ ಬರುವೆ... ನನ್ನ ಪತಿದೇವರು ಬರುವುದಿಲ್ಲವೇ?"

"ಇಲ್ಲ... ಅವರಿಗೆ ಬಹಳ ಕೆಲಸ."

"ನನಗಾಗಿ ಸ್ವಲ್ಪ ಸಮಯ ಕಳೆಯಲಾಗದಷ್ಟು ಕೆಲಸವೆ?" ಲಘುಹಾಸ್ಯ ಬೆರೆಸಿ ಕೇಳಿದ್ದೆ. ಆದರೆ [illegible] ಮುಖ [illegible]. ಕೋಪವಿರಬಹುದೇ...? ಅಲ್ಲ... ಮತ್ತೇನು?

"ಅವರು ರಾಜರೆಂಬುದನ್ನು ಮರೆಯಬಾರದು, ರಾಜಾಧಿರಾಜರು."

ನನಗೆ ಹೇಳುವುದಕ್ಕಿಂತ ತನಗೇ ಹೇಳಿಕೊಳ್ಳುವವನಂತೆ ಹೇಳಿದ. ಆದರೆ ಅವನಿಗೂ ಅದರಿಂದ ಸಮಾಧಾನವಾದಂತಿಲ್ಲ. ಮರು ಹೇಳಿಕೆಯಿಂದ ಧ್ವನಿ ನಡುಗುತ್ತ, ತೊದಲುತ್ತ ತಾನು

ಕಲಿತ ಶ್ಲೋಕಗಳನ್ನು ಬೇಗ ಬೇಗನೇ ಬೇಕ ಮಾಗಿಸುವಂತೆ ಹೇಳಬೇಕಾದ್ದನ್ನು ಹೇಳಿ ಮುಗಿಸಿದ್ದ ಲಕ್ಷ್ಮಣ.

× × ×

"ದೊಡ್ಡ ರಾಜರಾದವರು ವಂದಿಸಿಂದ ಸಾಧಾರಣ ಮಾತು ಕೇಳತೊಡಗಿದ್ದಾರೆ ಲಕ್ಷ್ಮಣ? ರಾಜಾಧಿರಾಜ ಒಬ್ಬ ಅಗಸನಿಂದ ನೀತಿಯ ಪಾಠ ಕಲಿಯಬೇಕೆ?"

"ಓ! ಮಹಾರಾಣೀ!!"

ಕಳೆದುಕೊಂಡ ನನ್ನ ಸ್ಥಾನಮಾನಗಳು ನೆನಪಿಸುತ್ತಿತ್ತು ಆತನ ಕರೆ. ಅಸಹನೆಯಿಂದ ಕೂಗಿದೆ.

"ಮಹಾರಾಣಿ! ರಾಜನೇ ನನ್ನನ್ನು ಅಟ್ಟಿದಾಗ ನಾನು ರಾಣಿಯಲ್ಲ... ಮತ್ತೆ ಜನಕಪುತ್ರಿಯಾಗಬಯಸುತ್ತೇನೆ...ಇಲ್ಲ......ಅದೂ ಅಲ್ಲ. ನಾನು ಕೇವಲ ಸೀತೆ..."

ನನ್ನ ರೋಷ ಅವನಲ್ಲಿ ಆಶ್ಚರ್ಯ ಉಂಟು ಮಾಡಿತು. ಆತ ನಿರೀಕ್ಷಿಸಿದ್ದೇನು? ನನ್ನ ಕಣ್ಣೀರು.. ಹೀಗೆ ತ್ಯಜಿಸಬಾರದೆಂಬ ಬೇಡಿಕೆ...... ಈ ದೋಷಾರೋಪಣೆಯ ಖಂಡನೆ... ಹೌದು, ಇವೆಲ್ಲಾ ನನ್ನೊಳಗೇ ಇದ್ದುವು. ಹೊರ ಬರಲು ಕಾತರಿಸುತ್ತಾ. ಅಳಲು ನನ್ನನ್ನು ಪ್ರೇರೇಪಿಸುತ್ತಲೂ ಇದ್ದವು. 'ನಾನು ಮುಗ್ಧೆ... ನಾನು ನಿರ್ದೋಷಿ... ನನಗಿಷ್ಟು ಅನ್ಯಾಯ ನೀವೇ ಹೇಗೆ ಮಾಡಬಲ್ಲಿರಿ... ನನ್ನ ಗರ್ಭದಲ್ಲಿ ನಿಮ್ಮ ಕುಡಿ ಬೆಳೆಯುತ್ತಿದೆ...'

'ಓ ನನ್ನ ಮಗು...'

ಇದೆಲ್ಲವನ್ನೂ ಹೇಗೆ ಧರಿಸಬೇಕೆಂದು ಆ ಕ್ಷಣದಲ್ಲೇ ಕಂಡುಕೊಂಡೆ. ದುಃಖಿಸಿದರೆ, ಬೇಡಿಕೊಂಡರೆ, ಆಕ್ಷೇಪಿಸಿದರೆ ಅಥವಾ [illegible]ಗೊಂಡರೆ ನಾನು ನಾಶವಾದಂತೆಯೇ. ಇವು ಯಾವುವೂ ನನ್ನನ್ನು ಎತ್ತಿ ನಿಲ್ಲಿಸಲಾರವು. ನನ್ನ ಸ್ವಾಭಿಮಾನ ಮತ್ತು ಧೈರ್ಯ ಮಾತ್ರವೇ ನನ್ನನ್ನು ಉಳಿಸಬಲ್ಲವು.

ಆದರೆ...ದೋಷ, ಸ್ವಾಭಿಮಾನ, ಧೈರ್ಯಗಳೊಂದೂ ಇನ್ನೂ ನನ್ನಲ್ಲಿರಲಿಲ್ಲ. ಕೇವಲ ಶೂನ್ಯ ತುಂಬಿಕೊಂಡಿತ್ತು.

"ಬೇಡ... ಬೇಡ ..."

ಲಕ್ಷ್ಮಣ ಉದ್ವೇಗದಿಂದ ಬಡಬಡಿಸಿದ. ಅತಿ ಕಷ್ಟದಿಂದ ಕೂಡಿಸಿಟ್ಟಿದ್ದ ಅವನ ಚಿತ್ತಶಾಂತಿ ಚೂರುಚೂರಾಗಿತ್ತು. ನನ್ನ ಮುಖದಲ್ಲಿ ಆತ ಕಂಡದ್ದೇನು?

"ಬೇಡ!... ಯಾವುದು ಬೇಡ?" [illegible]ಯುತ್ತ ಕೇಳಿದೆ.

"ನೀವು ಅವರನ್ನು ದ್ವೇಷಿಸಬೇಡಿ. ಅವರಿಗೂ ನೋವಾಗುತ್ತಿದೆ. ಅವರ ಕಣ್ಣೀರನ್ನು ನಾನೇ ನೋಡಿದೆ."

"ಆದರೆ...? ನಾನು ನೋಡಲಿಲ್ಲ...! ಅವರಾಗಿಯೆ... ಸ್ವತಃ ಅವರಾಗಿಯೇ ನನಗೆ ಈ ವಿಷಯ ಏಕೆ ತಿಳಿಸಲಿಲ್ಲ?"

"ನಿಮ್ಮ ನೋವನ್ನು ಅವರಿಂದ ನೋಡಲಾಗುವುದಿಲ್ಲ."

ತತ್ಕ್ಷಣವೇ ನನಗೆ ಕಾಡುವ ಭೂತದಂತಹ ಆ ನೆನಪು... ಇಷ್ಟು ವರ್ಷಗಳು ಸುಪ್ತವಾಗಿದ್ದು ಈ ಕ್ಷಣವೇ ಸೇಡುತೀರಿಸಿಕೊಳ್ಳಲು ನನ್ನ ಮೇಲೆರಗಿದೆ. ನನ್ನ ಸ್ವಾಮಿ ಅವಿತಿಟ್ಟುಕೊಂಡು ವಾಲಿಯನ್ನು ಸಂಹರಿಸಿದ್ದು... ನನ್ನ ಸ್ವಾಮಿಯೇ ನನಗೆ ಹೇಳಿದ್ದ ವಿಷಯ. ದ್ವಂದ್ವ ಯುದ್ಧದ ಹಿಂದಿದ್ದ ಮೋಸವರಿಯದೆ, ತಮ್ಮನಾದ ಸುಗ್ರೀವನ ಜೊತೆ ಕಾಳಗದಲ್ಲಿ ಮಗ್ನನಾಗಿದ್ದಾಗ, ಮರೆಯಿಂದ ಬಾಣ ಪ್ರಯೋಗ ಮಾಡಿ ಅವನನ್ನು ಕೊಂದದ್ದು...!

"ಲಕ್ಷ್ಮಣಾ, ನಿನಗೂ ನೆನಪಿದೆಯಲ್ಲವೇ... ನಿನ್ನ ಅಣ್ಣ ವಾಲಿಯನ್ನು ಹೇಗೆ ಕೊಂದರು ಎಂದು?"

ಅವನ ಕಣ್ಣುಗಳಲ್ಲಿ ಅವಮಾನದ ಛಾಯೆ ಸುಳಿಯಿತು.

"ಹೌದು... ಅದು ತಪ್ಪು... ಆದರೂ, ಅದು ನಿಮ್ಮ ಸಲುವಾಗಿ ಮಾತ್ರ."

"ಈಗ ಅವರು ನನಗೆ ಮಾಡುತ್ತಿರುವುದು? ಇದು ಯಾರ ಸಲುವಾಗಿ?"

ಸುಸ್ವಭಾವದ ವ್ಯಕ್ತಿಗೆ ಎಲ್ಲವೂ ನ್ಯಾಯಪರವೇ.

ಒಬ್ಬ ವ್ಯಕ್ತಿ, ಕೇವಲ ತನ್ನ ಜನಗಳ ಸಂತೋಷಕ್ಕಾಗಿ, ಹೆಂಡತಿಯನ್ನೂ ತೊರೆಯಬಲ್ಲನೇ? ಯಾಕಾಗಬಾರದು...? ಇವರ ಜಾಯಮಾನವನ್ನು ನಾನು ಹಿಂದೆಯೇ ಗಮನಿಸಬೇಕಿತ್ತು. ಅಯೋಧ್ಯೆಗೆ ಪಟ್ಟವಾಗಿ ಬಂದ ದಿನ. ಜನ ಅವರನ್ನು ಪದೇ ಪದೇ ಹೊಗಳಿ ಕೂಗುತ್ತಿದ್ದರು. ಜನರ ನಿರಂತರ ಘೋಷದಿಂದ ಉಬ್ಬಿದ ಅವರು ಏನೋ ಗೆದ್ದವರಂತೆ, ಹೊಳೆಯುವ ಕಂಗಳಿಂದ ನನ್ನ ಮುಖ ನೋಡಿದ್ದರು. ತುಟಿಗಳು ಅಲುಗಾಡದಿದ್ದರೂ ಅವರ ಆ ನೋಟವೇ ಕೇಳಿತ್ತು— ತಿಳಿದೆಯಾ? ನನ್ನನ್ನು ಅವರು ಎಷ್ಟು ಪ್ರೀತಿಸುತ್ತಾರೆ ಎಂದು ... ಆಗಲೇ ಅವರ ಸ್ವಭಾವ ನಾನು ಅರಿಯಬೇಕಿತ್ತು. ಆದರೆ ನಾನಾಗ ಇನ್ನೂ ಮುಗ್ಧೆ, ಚಿಕ್ಕವಳು; ಅರ್ಥಮಾಡಿಕೊಳ್ಳುವಷ್ಟು ತಿಳುವಳಿಕೆ ಬಂದಿರಲಿಲ್ಲ. 'ಹೊಗಳಿಕೆ ಎಂಬ ಸೋಮರಸದಿಂದ ಒಬ್ಬ ಎಷ್ಟೊಂದು ಮತ್ತನಾಗಬಲ್ಲ!' ಈಗ ಆ ತಿಳುವಳಿಕೆ ಇದ್ದೂ ನನಗೆ ಉಪಯೋಗಕ್ಕಿಲ್ಲ. ಈ ಮತ್ತತೆಯೂ ಒಂದು ರೀತಿಯ ಚಟ. ಸದಾ ಪ್ರೀತಿಯ ಪಾತ್ರರಾಗಿರಬೇಕೆಂದುಕೊಳ್ಳುವುದು, ಹೊಗಳಿಕೆಗೆ ಮರುಳಾಗುವುದು ಕೂಡ ಹೆಣ್ಣಿನ ಮೇಲಿನ ಅತಿ ವ್ಯಾಮೋಹದಂತೆಯೇ ವಿನಾಶಕಾರಿಯಾಗಬಲ್ಲದು.

"ನಾನೀಗ ಬಲಿಪಶು."

ನನ್ನ ಯೋಚನೆಗಳಿಗೆ ಶಬ್ದ ತುಂಬಿ ಕೇಳಿದೆ. ಇಬ್ಬರು ಪುರುಷರ ವ್ಯಾಮೋಹದ ನಡುವೆ?

ನನ್ನ ಮಾತಿನಿಂದ ಆತನ ಮುಖ ಕೋಪದಿಂದ ಪ್ರಜ್ವಲಿಸಿತು. ಅದರೂ ಒಂದು ರೀತಿಯ ಸಮಾಧಾನದ ಸೂಚನೆ ಇತ್ತು. ನನ್ನ ಅಭಿಪ್ರಾಯ ತಪ್ಪು ಎನ್ನುವುದು ಆತನ ಎಣಿಕೆ. ನನ್ನ ಅನಿಸಿಕೆಗಳೆಲ್ಲ ತಪ್ಪು ಎಂದು ಸಮರ್ಥಿಸಬಲ್ಲ, ಸೋದರನನ್ನು ರಕ್ಷಿಸಬಲ್ಲ.

"ವ್ಯಾಮೋಹ!?... ಅವರಿಗೆ ವ್ಯಾಮೋಹವೇ ಇಲ್ಲ," ರೋಷದಲ್ಲಿ ಅದ್ದಿದ ಶಬ್ದಗಳು. ಮೆಲುನಕ್ಕು ಹೇಳಿದೆ..

"ಅಂತಹ ವ್ಯಾಮೋಹವಲ್ಲ... ತೀರ ಸಾಧಾರಣವಾದ ವ್ಯಾಮೋಹ. 'ಎಂದೆಂದಿಗೂ ಸರಿಯಾಗಿಯೇ ನಡೆದುಕೊಳ್ಳುತ್ತೇನೆ,' ಎನ್ನುವ ವ್ಯಾಮೋಹ. 'ತಪ್ಪು ಎಂದೂ ಮಾಡುವುದಿಲ್ಲ' ಎಂಬ ಭಾವ. ಈ ವ್ಯಾಮೋಹಕ್ಕೆ ನಾನು ಜೀವಮಾನವಿಡೀ ನನ್ನ ಪಾವಿತ್ರ್ಯವನ್ನು ಒರೆಹಚ್ಚುವ ಪರೀಕ್ಷೆಗಳನ್ನೆದುರಿಸಬೇಕು. ಒಮ್ಮೆ ಅದರೆ ಸಾಲದು. ನಾನು ಪರಿಶುದ್ಧಳು ಎಂದು ನಮ್ಮಿಬ್ಬರಿಗೂ ಗೊತ್ತಿದ್ದು ಕೂಡ. ಪ್ರಿಯಕರ ನಂಬಬಲ್ಲನಾದರೂ ರಾಜ ಒರೆಹಚ್ಚಿ ಪ್ರಮಾಣಿಸಬೇಕು. ಅದಕ್ಕಾಗಿ ರಾಣಿ ಕೋಟಲೆ ಅನುಭವಿಸಬೇಕು. ಆದರೆ ನಾನು... ರಾಣಿಯಲ್ಲ... ಪ್ರಿಯತಮನೊಂದಿಗೆ ಸಮಾಧಾನದಿಂದ ಜೀವಿಸಬೇಕೆನ್ನುವ, ಆತನ ಮಗುವಿಗೆ ತಾಯಿಯಾಗುವ, ಆ ಮಗುವನ್ನು ಆತನೂ ಮುದ್ದಿಸಿ ಲಾಲಿಸುವುದನ್ನು ಕಂಡು ಸುಖಿಸಬೇಕೆನ್ನುವ ಒಬ್ಬ ಸ್ತ್ರೀ."

ಅದಕ್ಕೆ ಬದಲಾಗಿ...

ನನ್ನೊಳಗಿನ ಅಳಲು ಉಕ್ಕಿ ಬಂತು. ಆಳವಾದ ಗಾಯದಿಂದ ರಕ್ತ ಚಿಮ್ಮುವಂತೆ. ಕಾರುಣ್ಯದಿಂದ ಅದನ್ನು ಒಳಕ್ಕೆ ಅದುಮಿ ಇಲ್ಲವಾಗಿಸಿದೆ–'ಈಗಲೇ ಅಲ್ಲ... ಇದು ಸಕಾಲವಲ್ಲ...' ಅತ್ಯುಗ್ರವಾದ ಆ ವೇದನೆಯಿಂದ ಕಷ್ಟಪಟ್ಟು ಹೊರಬಂದೆ, ಆತ ಹೇಳುವುದನ್ನು ಕೇಳಲು.

"ಅವರು ಶಂಕಿಸುತ್ತಿಲ್ಲ. ನೀವು ಎಂಥವರೆಂದು ಅವರಿಗೆ ಗೊತ್ತು. ಆದರೆ... ಅವರ ಕರ್ತವ್ಯ... ಪ್ರಜೆಗಳಿಗಾಗಿ ಅವರು ಮಾಡಲೇ ಬೇಕಾದದ್ದು ಅದು."

ಇಂಥ ಗಳಿಗೆಯಲ್ಲಿ ನನಗೆ ನಗು ಬರಲಾದರೂ ಸಾಧ್ಯವೇ? ಆದರೆ ನಕ್ಕಿರಲೇ ಬೇಕು. ಅದರಿಂದಾತ ಬೆಚ್ಚಿದ. ಈ ಯುದ್ಧಕ್ಕೆ ಕಳಿಸುವ ಮುನ್ನ ಆತನ ಅಣ್ಣ ತೊಡಿಸಿ ಕಳಿಸಿದ ರಕ್ಷಾಕವಚ, ನಗುವಿನ ಮೃದು ಶಬ್ದಗಳಿಂದ ಛೇದಿಸಲ್ಪಟ್ಟಿತೆಂದು ಹೆದರಿರಬೇಕು.

"ಕರ್ತವ್ಯ! ಧರ್ಮಶೀಲತೆ!! ಓ...ಹೌದು. ಅವರು ಕರ್ತವ್ಯಪರಾಯಣರು, ಧರ್ಮಿಷ್ಠರು. ಇಲ್ಲವೆನ್ನಲಾರೆ. ಆದರೆ... ಅವರ ಧರ್ಮರಥ ಚಕ್ರಕ್ಕೆ ಎಷ್ಟು ಜನರ ಬಲಿಯಾಗಿದೆ, ಗೊತ್ತೇ ಲಕ್ಷ್ಮಣಾ?"

ಕಂಗಣ್ಣಿನ ನನ್ನೆದೆ ನೋಡಿದ. [illegible] [illegible] ಇಷ್ಟವಿತ್ತು ಆತನಿಗೆ. ಆದರೆ [illegible] ಪ್ರತಿಕ್ರಿಯೆ [illegible] ಅವನಿಗೆ ಅರ್ಥವಾಗಿರಲಿಲ್ಲ. ಒಬ್ಬನ ಕರ್ತವ್ಯಪಾಲನೆ–ಧರ್ಮನಿಷ್ಠೆಗಳು ಹೇಗೆ ದೂಷಣೆಗೊಳಗಾದಾವು? ಆದರಿಂದ ಆತನನ್ನು ಮುಕ್ತಮಾಡುವುದಾದರೂ ಹೇಗೆ?

“ಹೊಸ ಬಗೆಯಾಗಿ ಮಾತಾಡುತ್ತಿರುವಿರಲ್ಲ!” ತನ್ನ ವಿಚಾರ ಶಕ್ತಿಗೆ ಅಂಟಿದ ಧೂಳನ್ನು ಒರೆಸಿ ತೆಗೆಯುವವನಂತೆ ಹಣೆಯನ್ನೊರೆಸಿಕೊಳ್ಳುತ್ತಾ ಹೇಳಿದ. “ನಾನು ನಿಮ್ಮನ್ನು ಅರಿತಿದ್ದೇನೆಯೆ ಎನಿಸುತ್ತಿದೆ. ಅರ್ಥ ಮಾಡಿಕೊಳ್ಳಬಾರದೆಂದು ನೀವು ಹಟ ಹಿಡಿದಿರುವಂತೆ ಅನಿಸುತ್ತಿದೆ. ನಿಮ್ಮದೇ ದುಃಖದಲ್ಲಿ ನನ್ನ ಅಣ್ಣನ ನೋವನ್ನು ಮರೆತಿರುವಿರಲ್ಲ! ನಿಮ್ಮಷ್ಟೇ ಅವರೂ ಪರಿತಪಿಸುತ್ತಿದ್ದಾರೆ. ಕರ್ತವ್ಯಲೋಪವಾಗಬಾರದೆಂಬುದೊಂದೇ ಅವರ ದೃಷ್ಟಿ.”

‘ಕರ್ತವ್ಯನಿಷ್ಠೆಗಾಗಿ ಮಾತ್ರ ಅವರು ನನ್ನನ್ನು ತ್ಯಜಿಸಿದ್ದಾರೆ’ ಎನ್ನುವುದರಿಂದ ನನ್ನ ನೋವು ಶಮನವಾಗಬಲ್ಲುದೇ? ಯುದ್ಧಾನಂತರ ನನ್ನನ್ನು ತಿರಸ್ಕರಿಸಿ ಆಡಿದ ಮಾತುಗಳಿಂದಾದ ಗಾಯವೇ ಇನ್ನೂ ಆರಿಲ್ಲ. ನಂತರ ಕ್ಷಮಾಯಾಚನೆ ಮಾಡುವವರಂತೆ ಹೇಳಿದ್ದಾದರೂ ‘ಹಾಗೆ ನಾನು ಹೇಳಲೇ ಬೇಕಿತ್ತು. ಇಲ್ಲದಿದ್ದರೆ ಕರ್ತವ್ಯಚ್ಯುತನಾಗುತ್ತಿದ್ದೆ’ ಎಂದು. ಆದರೆ ಆ ಮಾತುಗಳು ನನ್ನ ಹೃದಯ ತಟ್ಟಿರಲಿಲ್ಲ. ‘ನಿನ್ನನ್ನು ನಾನು ಬಹಳ ಪ್ರೀತಿಸುವುದರಿಂದ ಇನ್ನೊಬ್ಬನ ಅಧಿಕಾರದಲ್ಲಿ ನೀನಿದ್ದೆ ಎಂಬುದನ್ನು ಸಹಿಸಿಕೊಳ್ಳದಾದೆ. ಅಸೂಯೆಯಿಂದ ಹುಚ್ಚನಂತಾಗಿ ನಾನಷ್ಟು [illegible]’ [illegible] [illegible]. ಈಗ [illegible] ಆದರೆ ವಿಷಯ [illegible]. [illegible] ಅವರು [illegible]ಪಿಸುತ್ತಿರುವುದನ್ನು ನಾನು ನೋಡಿದ್ದರೆ, ನನ್ನ ಅಳಲನ್ನು ಮರೆತು ಅವರನ್ನು ಸಮಾಧಾನಗೊಳಿಸುತ್ತಿದ್ದೆ. ಸ್ತ್ರೀಗಾಗಿ ಒಬ್ಬ ಪುರುಷ ತಾಪ ಪಡುತ್ತಿದ್ದರೆ ಆತನ ವಿಲಕ್ಷಣ [illegible]ಯೊಂದು ಆಕೆಯನ್ನು [illegible]. ಆ ಶಕ್ತಿ ಆಕೆಯ ಅರಿವಿಗೆ ಬರದಿರಲು ಸಾಧ್ಯವೇ ಇಲ್ಲ. ನನ್ನ ಜೀವನವನ್ನೇ ಹಾಳುಗೆಡವಿದ ವ್ಯಕ್ತಿ [illegible]. [illegible] ನನ್ನೆದೆಗೆ ಬಂದ ದಿನ ಇದರ ಅರಿವಾಗಿತ್ತು. ನಾನು... ನಾನು, ಅವನ ದುರ್ವಿಧಿಗಾಗಿ ಕಣ್ಣೀರಿಟ್ಟಿದ್ದೆ.

ಆತನ ಕೊನೇ ಕ್ಷಣಗಳು ತೀರ ಹತ್ತಿರ ಬಂದಿದ್ದವು. ಆತನ ಕೆಂಗಣ್ಣು, ಕೆದರಿದ ತಲೆ, ಅಸ್ಥಿರ ಹೆಜ್ಜೆಗಳನ್ನು ನೋಡಿ ‘ಕುಡಿದವ’ ಎಂದು ಭಾವಿಸಿದ್ದೆ. ಆದರೆ ಭಯವಾಗಿರಲಿಲ್ಲ. ಆತ ಕುಡಿದಿಲ್ಲವೆಂದು ಕೂಡಲೇ ಅರಿವಾಗಿತ್ತು.

“ನೀನು” ನನ್ನ ತಿವಿಯುವಂತೆ ಬೆರಳು ಚಾಚಿ ಕಿರುಚಿದ. ಅವನ [illegible] ಸಿಕ್ಕ ಬಳ್ಳಿಯಂತಾಗಿತ್ತು. “ನೀನು...ನೀನೇ– ನನ್ನ ವಿನಾಶಕ್ಕೆ ಕಾರಣ...ನನ್ನ ನನ್ನ ಇಂದ್ರಜಿತು... ಸತ್ತು ಹೋದ...” ಪ್ರಜ್ವಲಿಸುತ್ತಿದ್ದ ಕೆಂಗಣ್ಣುಗಳು ಕೂಡಲೇ ಮಂಜಾಗಿದ್ದವು. ಕಣ್ಣೀರಿನಿಂದ. ಆದರೆ ಕಣ್ಣೀರನ್ನು ತಡೆಹಿಡಿಯುವಲ್ಲಿ ಸಫಲನಾಗಿದ್ದ. ಸತ್ತ ಮಗನಿಗಾಗಿ ನನ್ನೆದುರು ಅಳಬಾರದು. ಅಳಲಾರ ಎನ್ನುವಂತೆ ತನ್ನ [illegible] ಕತ್ತಿಯಂತೆ ಬೀಸುತ್ತ ನನ್ನೆದೆಗೆ ಛಾಪಿಸುತ್ತಿದ್ದ. ನಾನು ಹಿಂದೆ ಸರಿದಿರಲಿಲ್ಲ. ಸರಿದು ತಪ್ಪಿಸಿಕೊಳ್ಳಲು ಸಾಧ್ಯವೆಲ್ಲಿತ್ತು?

“[illegible],” [illegible] ಮಾಡಿಕೊಂಡ. “ನಿನ್ನ ಪ್ರಾಣ ಹೀರಿಹಾಕಲೇ. ಬೇಕು. ನೀನು ನನ್ನ ಸರ್ವನಾಶವನ್ನೇ ಮಾಡಿದೆ. ಆದರೆ...” [illegible] ನಿಂತು ಬಿಟ್ಟಿದ್ದ. “ಇಲ್ಲ...! ನನ್ನಿಂದ ಸಾಧ್ಯವಿಲ್ಲ...!!”

[illegible] ನನ್ನ ಆತನ ಮಧ್ಯೆ ಎಂದೂ ಇರಲಿಲ್ಲ.’ ಈಗ [illegible]. ಆಗ ಇದ್ದುದು– ನನ್ನ ದೃಢ ಸಂಕಲ್ಪ ಮಾತ್ರ, ಆತನ ಅಸಹಾಯಕತೆ.

ಆದರೆ... ಈಗ...

“ಕರ್ತವ್ಯ”... ನನ್ನ ಮನಸ್ಸು [illegible]

ಭಾರವಾಗಿತ್ತು. "ಹೌದು, ಅವರ ಕರ್ತವ್ಯವೊಂದೇ ಎಂದೆಂದಿಗೂ ನನ್ನ ಶತ್ರುವಾಗಿದೆ."

"ಆದರೆ... ಅವರು ರಾಜಾಧಿರಾಜರು," ಲಕ್ಷ್ಮಣನ ಶಾಂತ ಧ್ವನಿ ಕ್ಷೀಣವಾಗಿದ್ದರೂ ಪಟ್ಟು ಹಿಡಿದ ಮಗುವಿಗೆ ವಿವೇಕ ಹೇಳಿ ಅರ್ಥ ಮಾಡಿಸುವಂತಿತ್ತು. "ಅಂತಿಂತಹ ರಾಜರಲ್ಲ! ಎಷ್ಟೋ ವರ್ಷಗಳಿಗೊಮ್ಮೆ ಮಾತ್ರ ಸಿಗುವಂಥವರು."

"ಹೌದು"–ನನ್ನ ದನಿಯಲ್ಲಿ ಅಣಕವಿತ್ತು "ಬಹಳ ದೊಡ್ಡ ರಾಜರು... ಒಬ್ಬರು ಬೃಹತ್ತಾಗಿ ಬೆಳೆಯಲು ಎಷ್ಟು ಜನ ಕುಬ್ಜರಾಗಬೇಕಾಗುತ್ತದೆ, ಗೊತ್ತಿದೆಯೆ ಲಕ್ಷ್ಮಣ?"

ಆತನಿಗೆ ಕೋಪ ಬರದಿದ್ದುದು ಆಶ್ಚರ್ಯ. ಅನುಕಂಪದಿಂದ ನನ್ನೆಡೆ ನೋಡಿದ.

ಬೇಡ... ಏನನ್ನಾದರೂ ಸಹಿಸಬಲ್ಲೆ. ಆದರೆ ಅನುಕಂಪವನ್ನಲ್ಲ... ಬಳುಕಬಲ್ಲ ಹುಲ್ಲಿಗರಿ ನಾನು. ಮುರಿದು ಹೋಗುವುದಿಲ್ಲ! ಆದರೆ ಅನುಕಂಪ ನನ್ನನ್ನು ಬುಡಮೇಲು ಮಾಡಿ ಬಿಡುತ್ತದೆ.

"ಅದು ಯಾರ ತಪ್ಪು ಅಲ್ಲ. ನಿಮ್ಮಿಬ್ಬರನ್ನೂ ದುಃಖವಿಮುಕ್ತರಾಗಿ ಮಾಡಲು ಏನು ಬೇಕಾದರೂ ಮಾಡಬಲ್ಲೆ... ನನ್ನಿಂದಾಗುವುದಾದರೆ."

ಲಕ್ಷ್ಮಣ ಅಸಹಾಯಕನಾಗಿ ಕೈಗಳನ್ನು ನೋಡಿಕೊಂಡ. ಗಿಡ ಮರಗಳನ್ನು ಸವರಿ ನಮಗಾಗಿ ದಾರಿ ಮಾಡಿದ ಕೈ... ನಮಗಾಗಿ ಪರ್ಣಕುಟೀರ ರಚಿಸಿದ್ದ ಕೈ... ಯುದ್ಧದಲ್ಲಿ ಹೋರಾಡಿ ನಮ್ಮನ್ನು ರಕ್ಷಿಸಿದ್ದ ಆ ಕೈಗಳು... ಆದರೆ, ಯಾವ ಕೈ ಯಾರ ಕೈಗಳು ನಮ್ಮನ್ನು ನಮ್ಮಿಂದಲೇ ಆದ ತೊಂದರೆಯಿಂದ ರಕ್ಷಿಸಬಲ್ಲವು???

ದೀರ್ಘ ಚಿಂತನೆಯಿಂದ ಭಾರವಾದ ದನಿಯಲ್ಲಿ ಹೇಳಿದ... "ವಿಧಿ! ಈ ವಿಧಿಯನ್ನು ಎದುರಿಸಿ ನಿಲ್ಲಲು ಮನುಷ್ಯನಾದ ನಾನೆಷ್ಟರವನು? ದೇವತೆಗಳು ಕೂಡ ನಮ್ಮನ್ನು ವಿಧಿಯಿಂದ ಪಾರುಮಾಡಲಾರರು. ಇದು, ನಮ್ಮಿಬ್ಬರ ವಿಧಿ."

ವಿಧಿ!?... ಅದರ ಪ್ರಸ್ತಾಪ ಬರುವುದೆನಿಸಿತ್ತು. ಆದರೆ ಅದರಿಂದೇನೂ ಆಗಬೇಕಿರಲಿಲ್ಲ. ನಮ್ಮ ತಪ್ಪುಗಳಿಂದ ಹುಟ್ಟಿಬಂದ ಕರ್ಮಫಲಗಳಿಂದ ಅಷ್ಟು ಸುಲಭವಾಗಿ ನುಣುಚಿಕೊಳ್ಳಲಾರೆವು. 'ವಿಧಿ' ಎಂದು ತಪ್ಪನ್ನು ಜಾರಿಸಿ ಬಿಡುವುದು ಸುಲಭ. ನಮ್ಮ ಬದುಕನ್ನು ವಿಧಿ ರೂಪಿಸಲಾರದು. ಕೇವಲ ನಮ್ಮ ಪ್ರಯತ್ನದಿಂದ ಅದು ಸಾಧ್ಯ. ಸ್ವರ್ಣಮೃಗ ಕಂಡ ದಿನ ಅರಕ್ಷಿತಳಾಗಿ ಉಳಿದಿದ್ದು ವಿಧಿಯಿಂದಲ್ಲ... ನನ್ನ ಅವಿವೇಕ, ಗರ್ವ, ಕ್ರೂರ ಮಾತುಗಳು ಲಕ್ಷ್ಮಣನನ್ನು ದೂರ ಓಡಿಸಿದ್ದವು. "ವಿಧಿ ನನ್ನ ಅತ್ಯಂತ ಪ್ರೀತಿಯ ಮಗನನ್ನು ಅಗಲುವಂತೆ ಮಾಡಿತು" ಎಂದರು ನನ್ನ ಮಾವ.



ಆಗಲೂ ನಾನು ಪ್ರತಿಭಟಿಸಿದ್ದೆ. ಅದು ವಿಧಿಯಲ್ಲ. ತರುಣಿ ಸುಂದರ ಪತ್ನಿಯಲ್ಲಿ ವೃದ್ಧ ಪತಿಗೆ ಇರುವ ಅತಿ ಮೋಹ... ಅವರದೇ ದೌರ್ಬಲ್ಯತೆ.

ಈಗಿನ ನನ್ನ ಪರಿಸ್ಥಿತಿಗೆ ವಿಧಿಯನ್ನು ದೂಷಿಸಲು ಹೇಗೆ ಸಾಧ್ಯ? ಆ ವ್ಯಕ್ತಿ ನನ್ನನ್ನು ಬಲಾತ್ಕಾರದಿಂದ ಕೊಂಡೊಯ್ದಾಗ – ಅತೀವ ಮನೋಕ್ಷೋಭೆಯಲ್ಲೂ – 'ತಪ್ಪು ನನ್ನದೇ' ಎಂಬ ಅರಿವಾಗಿತ್ತು. [illegible] ಹಿಂದೆ [illegible] ಯನ್ನು ಅಟ್ಟಿದವಳು ನಾನೇ. ಲಕ್ಷ್ಮಣನನ್ನು ದೂರ ಕಳಿಸಿದವಳೂ ನಾನೇ. ಆದರೆ ಈಗ...? ನನ್ನ ನೋವು ಮೀರಿಸಲ್ಲಬಲ್ಲಂತಹ ಪಶ್ಚಾತ್ತಾಪವಿಲ್ಲ. ಇದರಲ್ಲಿ ನನ್ನ ಪಾತ್ರವೇ ಇಲ್ಲ. ನನ್ನ ತಪ್ಪಾದರೂ ಎಂತಹದು? ಈಗಿನ ತಪ್ಪು ನನ್ನದಲ್ಲವೇ ಅಲ್ಲ. ಅವರದು...ಕೇವಲ ಅವರದು ಮಾತ್ರ. ಅವರ ದೌರ್ಬಲ್ಯತೆ, ತಾನು ತಪ್ಪು ಮಾಡುವುದೇ ಇಲ್ಲ ಎಂಬ ಭ್ರಮೆ, ತಪ್ಪು ಮಾಡಕೂಡದೆಂಬ [illegible]. 'ಧರ್ಮ ಪ್ರಭು'ವೆಂಬ ಹೆಸರು ಎಂದೂ [illegible] ಬಾರದು ಎನ್ನುವ ಗೀಳು. ಇವುಗಳೆಲ್ಲ ಅವರು ನಂಬಿದ ದೇವರು. ಆ ದೇವರಿಗೆ ಅವರು ಅರ್ಪಿಸಿದ 'ಬಲಿ' ನಾನು.

ಪ್ರಜೆಗಳು ನಮ್ಮನ್ನು ಕುರಿತು ಆಡಿಕೊಳ್ಳುವುದು ಅವರ ಜೀವನಕ್ಕಿಂತ ರಾಜ–ರಾಣಿ [illegible]. ಈ ದುರ್ಘಟನೆ ಮರೆಯಲು ಅವರು ಪ್ರಯತ್ನಿಸಬಹುದು. ಹೀಗೆ ನಡೆದಿರಲಾರದು. ನಮ್ಮ ಧರ್ಮಪ್ರಭು ಈ ಹೀನ ಕೃತ್ಯ ಮಾಡಿರಲಾರರು [illegible] ಕ್ಕಾಗಿ ಸ್ವಸುಖ— ಸ್ವಾರ್ಥ ಸಾಧನೆಗಳನ್ನು ಬಲಿಗೊಟ್ಟ ರಾಜಾಧಿರಾಜ ಎಂದು ಉಚ್ಚ ಪಟ್ಟಕ್ಕೇರಿಸಲೂಬಹುದು. ನಾನು ಮೌನದಿಂದಿರುವುದರಿಂದ ಶರಣಾದಳು, ಸಹಿಸಿಕೊಂಡಳು ಅಥವಾ ಕ್ಷಮಿಸಿದಳು ಎನ್ನಬಹುದು. ಅವರನ್ನು ನಾನು ಕ್ಷಮಿಸಲೂಬಹುದು... ಆದರ್ಶ ಪತ್ನಿ [illegible], ಕ್ಷಮಾಶೀಲೆ [illegible]. ಸುಖ–ದುಃಖ ಜೀವನಾನುಭವಗಳನ್ನು ಹಂಚಿಕೊಂಡವರೆಂದೂ ಅಲ್ಲ... ಕೇವಲ, ನಾನು ಅವರಿಗಾಗಿ ಮರುಕಪಡುವುದರಿಂದ. ಅವರು ಬೆಳೆಸಿಕೊಂಡ ಭಾವನೆಗಳಿಗೆ ಅವರೇ ತುತ್ತಾಗಿ ನರಳುತ್ತಿಲ್ಲವೆ? ಇನ್ನೂ ಅದರ ಬೆನ್ನು ಹತ್ತಿ [illegible]... [illegible] ಸ್ವರ್ಣ ಮೃಗವೆಂದು, ನನಗೆ...? ಸ್ವರ್ಣ ಮೃಗಕ್ಕೆ ಮಾರು [illegible]. ಅದು 'ಭ್ರಮೆ' ಎಂದು ಅರಿವಾಗಿದೆ.

ಹಿಂದೊಮ್ಮೆ ನಾವು ಪ್ರವೇಶಿಸಿದ ಕಗ್ಗಾಡು ನದಿಯಾಚೆ ಕಾಣುತ್ತಿದೆ. ಅದರೊಳಗೆ ನಾನು ಮತ್ತೆ [illegible]. [illegible] ಕಾದ ರಾಕ್ಷಸರು ಹಿಂದೆ ಕಂಡವರಿಗಿಂತ ಭಯಂಕರ... [illegible]. ಇವುಗಳನ್ನು ಜಯಿಸಿ [illegible] ಮತ್ತೆ [illegible] ಬರುವೆ.

ಆದರೆ, ನಾನು ಹೋಗುವ ಮುನ್ನ ಹೇಳಬೇಕಾದುದೊಂದು ಉಳಿದಿದೆ. ಹೇಳದೆ ಅವರನ್ನೇಕೆ ವಂಚಿಸಲಿ?

ಎದ್ದು ನಿಂತೆ. ನದಿ ತನ್ನ ಪ್ರವಾಹ [illegible] ವನ್ನು ಅಡಗಿಸಿ ಸ್ತಬ್ಧವಾಗಿತ್ತು, ಎಲ್ಲ 'ಮುಗಿದ ಕಥೆ' ಎಂದು ಗೊತ್ತಿರುವಂತೆ.

"[illegible]," ಅವರ [illegible] ಸಲ್ಲಬೇಕಾದ ಗೌರವ ಸೂಚಿಸಿ ಹೇಳಿದೆ. ನನ್ನ– ಅವರ [illegible]. "[illegible] ರುವುದಕ್ಕಿಂತ ಇನ್ನೂ ಕಠಿಣರಾಗಬಹುದಿತ್ತು [illegible]..."

[illegible] ದಿಂದ ನನ್ನೆಡೆ ನೋಡಿದ. [illegible] ತಂದಂತೆಯೋ ನನ್ನ ಸಂದೇಶವನ್ನು ಕೊಂಡೊಯ್ಯುವ ಭಾವದಿಂದ, ನನ್ನ ಮಾತು ಮುಗಿಯುವುದನ್ನೇ ಕಾಯುತ್ತಿದ್ದ.

"ಅವರು ನನ್ನನ್ನು ಕ್ಷಮಿಸಬಹುದಾಗಿತ್ತು."

ನಾನು ಪ್ರವಾಸ ಮಾಡುವಾಗಲೆಲ್ಲ, ಒಂದು ಪೈಜಮಾ ಹಾಗೂ ಕೊಟು ಧರಿಸಿರುತ್ತೇನೆ. ನಾನು ಹೊಂದಿದ್ದ ಸ್ಥಾನಕ್ಕೂ ಮತ್ತು ನನ್ನ ವಯಸ್ಸಿಗೂ ಈ ವೇಷ ಭೂಷಣ ಶಿಷ್ಟವಾದುದಲ್ಲ ಎಂದು ನನಗೂ ಅನಿಸುತ್ತಿರುತ್ತದೆ. ಆದರೆ, ಅದು ಅನಿವಾರ್ಯವಾಗಿದೆ. ಶಿಷ್ಟತೆಗೆ ಮರ್ಯಾದೆ ಕೊಡಬೇಕಾದವರು ಹೀಗೆ ಪೈಜಮಾ ಧರಿಸಿ ಓಡಾಡುವುದು ಸೂಕ್ತವಲ್ಲ. ಆದರೆ ನಾನು ಈ ವೇಷ ಧರಿಸಲು ಒಂದು ಕಾರಣವುಂಟು.

ನಾನು ಸೇವೆ ಸಲ್ಲಿಸುತ್ತಿದ್ದ ಕಾಲೇಜಿನ ಪ್ರಾಧ್ಯಾಪಕರೆಲ್ಲ ಖಾದಿ ಧರಿಸಬೇಕೆಂದು ನಮ್ಮ ಆಡಳಿತ ಮಂಡಳ ಅಪೇಕ್ಷಿಸಿತು. ಎಂಥ ಸೂಟು ಹೊಲಿಸಬೇಕೆಂದು ನನಗೆ ವಿಚಾರಕ್ಕಿಟ್ಟುಕೊಂಡಿತು. ಇದು ೧೯೫೭ ರ ಸುಮಾರಿಗೆ ಇರಬಹುದು. ಆಗ ನಮ್ಮ ಕಾಲೇಜಿಗೆ ಪ್ರಾಧ್ಯಾಪಕರಾಗಿ ಬಂದಿದ್ದವರೊಬ್ಬರು ಖಾದಿ ಬಿಳಿ ಕ್ಲೋಸ್ ಕಾಲರ್ ಕೋಟು, ಬಿಳಿ ಪ್ಯಾಂಟು ಧರಿಸಿರುತ್ತಿದ್ದರು. ನಾನೂ ಇಂಥ ಸೂಟನ್ನೇ ಆರಿಸುವುದು ಸೂಕ್ತವೆಂದು ನನಗೆನಿಸಿತು. ನಾನೂ ಅಂಥ ಬಿಳಿ ಖಾದಿ ಕ್ಲೋಸ್ ಕಾಲರ್ ಕೋಟು ಹಾಗು ಬಿಳಿ ಪ್ಯಾಂಟು ಧರಿಸಹತ್ತಿದೆ... ನನಗೆ ಆಗ ಆ ಈ ಅಭ್ಯಾಸ ಮಂಡಲದ ಸಭೆ, ಕಾಲೇಜ್ ಕೆಲಸ, ಭಾಷಣ ಮೊದಲಾದವುಗಳ ಸಲುವಾಗಿ ಮೇಲಿಂದ ಮೇಲೆ ಬೆಂಗಳೂರು, ಮೈಸೂರು, ಕೊಲ್ಹಾಪುರ, ಪುಣೆಗಳಿಗೆ ಹೋಗಬೇಕಾಗುತ್ತಿತ್ತು. ಸ್ವಾಭಾವಿಕವಾಗಿಯೇ, ನಾನು ರೈಲು ಒಡಿಯಲು ೧೫-೨೦ ನಿಮಿಷ ಮೊದಲೇ ಸ್ಟೇಶನ್ನಿಗೆ ಹೋಗಿ ಪ್ಲಾಟ್‌ಫಾರ್ಮ ಮೇಲೆ ಅಡ್ಡಾಡುತ್ತಿರುತ್ತಿದ್ದೆ. ಆಗ, ಎಷ್ಟೋ ಜನ ಅಪರಿಚಿತ ಪ್ರಯಾಣಿಕರು ಬಂದು, "ಎಕ್ಸ್‌ಕ್ಯೂಸ್ ಮಿ ಸರ್, ಈ ಡೆಕ್ಕನ್ ಪುಣೆ ಯಾವಾಗ ಮುಟ್ಟುತ್ತದೆ? ಇದಕ್ಕೆ ಕನೆಕ್ಶನ್ ಯಾವಾಗ ಸಿಗುತ್ತದೆ?" ಎಂದು ಕೇಳಿದರೆ, ಮತ್ತೆ ಹಲವರು ಬಂದು "ಎಕ್ಸ್‌ಕ್ಯೂಜ್ ಮಿ ಸರ್, ಈ ಗಾಡಿ ಎಷ್ಟು ಗಂಟೆಗೆ ಬಿಡುತ್ತದೆ?" ಎಂದೋ ಇಲ್ಲವೆ ಪುನಃ "ಎಕ್ಸ್‌ಕ್ಯೂಜ್ ಮಿ ಸರ್, ಸ್ಲೀಪರಿನಲ್ಲಿ ನನ್ನ ಹೆಸರು ವೇಟಿಂಗ್ ಲಿಸ್ಟಿನಲ್ಲಿದೆ. ನನಗೊಂದು ಬರ್ಥ್ ಕೊಡಿರಿ," ಎಂದೋ ಬರುತ್ತಿದ್ದರು. ಈ ರೀತಿ ಜನ ನನನ್ನೇ ಬಂದು ಕೇಳುವುದನ್ನು ಕಂಡು ಪ್ರಾರಂಭದಲ್ಲಿ ನನಗೂ ತುಂಬಾ ಅಭಿಮಾನವೆನ್ನಿಸುತ್ತಿತ್ತು. ಬಹುಶಃ ನಾನು ಮೇಲಿಂದ ಮೇಲೆ ಪ್ರವಾಸ ಮಾಡುತ್ತಿರುವುದರಿಂದ ನನಗೆ ಈ ಬಗ್ಗೆ ಮಾಹಿತಿಯೆಲ್ಲ ಇದೆಯೆಂದು ತಿಳಿದು ಇವರು ನನ್ನ ಕಡೆಗೆ ಮಾರ್ಗದರ್ಶನಕ್ಕಾಗಿ ಬರುತ್ತಿದ್ದಾರೆ ಎಂದು ನನ್ನ ಅಹಂಕಾರಕ್ಕೆ ರೆಕ್ಕೆಯೂ ಮೂಡಿತ್ತು. ಆದರೆ, ಇವರು ನನ್ನ ಹಾಗೇ ವಿಪುಲವಾಗಿ ಪ್ರವಾಸಮಾಡುತ್ತಿರಬಹುದಾದ ಇತರ ಯಾರ ಕಡೆಗೂ ಹೋಗುತ್ತಿಲ್ಲವಲ್ಲ, ನನ್ನ ಕಡೆಗೆ ಬರುತ್ತಾರಲ್ಲಾ ಏನು ಇದರ ಗೂಢ ಎಂದು ಆಶ್ಚರ್ಯವೂ ಆಯಿತು. ಕೊನೆಗೆ ಹೀಗೆ ಎರಡು ಮೂರು ವರುಷ ನಡೆದ ಮೇಲೆ ಒಂದು ಸಲ ನನಗೆ ಜ್ಞಾನೋದಯವಾಯಿತು. ಒಬ್ಬರು "ಎಕ್ಸ್‌ಕ್ಯೂಜ್ ಮಿ ಸರ್, ಈ ಗಾಡಿಗೆ ಕನೆಕ್ಶನ್ನು......" ಎಂದ ಕೂಡಲೆ, ನಾನು "ನನಗೆ ಗೊತ್ತಿಲ್ಲ ಸ್ವಾಮಿ, ದಯವಿಟ್ಟು ಗಾಡಿ ಕಂಡಕ್ಟರನ್ನು ಕೇಳಿರಿ" ಅಂದಾಗ, ಅವರು "ಓಹೋ! ಹೀಗೋ!! ನೀವು ಈ ಗಾಡಿ ಕಂಡಕ್ಟರ್ ಅಲ್ಲವೋ ? ನಿಮ್ಮ ಡ್ರೆಸ್ ನೋಡಿ ನಾವು ಈ ಕಂಡಕ್ಟರ್ ನೀವೇ ಇರಬೇಕೆಂದು ಭಾವಿಸಿದ್ದೆವು," ಅಂದರು. ಆಗ ನಾನು ಸುತ್ತಲೂ

ನೋಡಿದಾಗ, ಗಾಡಿಯ ಕಂಡಕ್ಟರುಗಳೆಲ್ಲ ನನ್ನ ಹಾಗೆಯೇ ಬಿಳಿ ಕ್ಲೋಜ್ ಕಾಲರ್ ಕೋಟು, ಬಿಳಿಪ್ಯಾಂಟು ಧರಿಸಿದ್ದನ್ನು ಕಂಡೆ. ಇನ್ನು ಪ್ರವಾಸದಲ್ಲಿ ಈ ಡ್ರೆಸ್ ಉಪಯೋಗವಿಲ್ಲ ಎಂದು ಭಾವಿಸಿ, ಅಂದಿನಿಂದ ಈ ಹಂಡಬಂಡ ವೇಷ, ಪೈಜಮಾ ಮತ್ತು ಯಾವುದಾದರೂ ಬಣ್ಣದ ಕೋಟು ಧರಿಸಲು ಪ್ರಾರಂಭಿಸಿದೆ. ಅವಾಗಿನಿಂದ ನನಗೆ ಈ 'ಎಕ್ಸ್‌ಕ್ಯೂಜ್ ಮಿ'ಗಳ ಹಾವಳಿ ತಪ್ಪಿದೆ. ವೇಷ ಮೂಕವಾದರೂ, ಅದಕ್ಕೂ ನಾಲಗೆಯಿದೆಯೆಂಬುದು ನನಗೆ ಆಗ ಅರ್ಥವಾಯಿತು.

—ರಾ. ಯ. ಧಾರವಾಡಕರ

ನಮ್ಮ ಅಕ್ಕನನ್ನು ಮೊದಲ ಹೆರಿಗೆಗೋಸ್ಕರ ಒಂದು ಖಾಸಗಿ ನರ್ಸಿಂಗ್ ಹೋಮಿಗೆ ಸೇರಿಸಿದ್ದೆವು. ಡಾಕ್ಟರರು, ನಾರ್ಮಲ್ ಹೆರಿಗೆ ಆಗಲಿಕ್ಕಿಲ್ಲವೆಂದೂ ಅದಕ್ಕಾಗಿ ಸಿಸೇರಿಯನ್ ಆಪರೇಶನ್ ಅನಿವಾರ್ಯವೆಂದೂ ಹೇಳಿದಾಗ ನಾವೆಲ್ಲ ವಿವಂಚನೆಗೊಳಗಾದೆವು. ನಮ್ಮ ಅಕ್ಕನಂತೂ ಎದೆಗೆಟ್ಟುಬಿಟ್ಟಳು. ಮರುದಿನ ಮುಂಜಾನೆಯ ವರೆಗೆ ಮನೆಯಲ್ಲಿ ದೇವರುಗಳಿಗೆಲ್ಲ ಹರಕೆ ಹೊರುವುದೂ ಆಸ್ಪತ್ರೆಯಲ್ಲಿ ನಾವು ಅಕ್ಕನಿಗೆ ಧೈರ್ಯ ಹೇಳುವುದೂ ನಡೆದೇ ಇತ್ತು.

ಅಕ್ಕನ ಅಂಜಿಕೆ ನೋಡಿ ಅದೇ ವಾರ್ಡಿನಲ್ಲಿ ಪಕ್ಕದ ಬೆಡ್ಡಿನಲ್ಲಿ ಮಲಗಿದ್ದಾಕೆಯೊಬ್ಬರು (ನಮ್ಮಕ್ಕನಿಗಿಂತ ಸ್ವಲ್ಪ ದೊಡ್ಡವರು) ತುಂಬಾ ಧೈರ್ಯ ಹೇಳಿದರು. ಆಗಾಗ ಅಕ್ಕನ ಬಳಿ ಬಂದು 'ಗಾಬರಿ ಬೇಡ ಕಣಮ್ಮ, ತೊಂದರೆಯಾಗಲ್ಲ ಎಲ್ಲಾ ಸರಿ ಹೊಗ್ತದೆ' ಎಂದು ಸಂತೈಸುತ್ತಿದ್ದರು.

ಮರು ಮುಂಜಾನೆ ಆಪರೇಶನ್ ವಾರ್ಡಿಗೆ ಅಕ್ಕನನ್ನು ಕರೆದೊಯ್ದಾಗ ಹೆದರಿ ಹಾರಿಹಾರಿದ್ದ ನಮಗೆ ಕೂಡ ಆಕೆ ಧೈರ್ಯ ಹೇಳುತ್ತಲೇ ಇದ್ದರು. ಒಂದು ತಾಸಿನ ನಂತರ ದಾದಿ ಆಪರೇಶನ್ ಸಕ್ಸೆಸ್ ಎಂದೂ ಗಂಡು ಮಗುವೆಂದೂ ಹೇಳಿದಾಗ ನಮಗೋ ಆನಂದಕ್ಕೆ ಪಾರವೇ ಇರಲಿಲ್ಲ ಅಷ್ಟೇ ಅಲ್ಲ, ನಮಗಿಂತ ಹೆಚ್ಚಾಗಿ ಸಂಭ್ರಮಪಟ್ಟವಳು ಪಕ್ಕದ ಬೆಡ್ಡಿನವಳು.

ಅಲ್ಲಿಯವರೆಗೆ ಆಕೆ ಯಾರು — ಏಕೆ ಇಲ್ಲಿ ಅಡ್ಮಿಟ್ ಆಗಿದ್ದಾರೆ ಎಂಬುದನ್ನೇ ಕೇಳಲು ಮರೆತಿದ್ದ ನಾವು ಹಿರಿಯ ದಾದಿಯನ್ನು ಈ ಬಗ್ಗೆ ವಿಚಾರಿಸಿದಾಗ, ಆಕೆಗೆ ಎಂಟು ದಿನದ ಹಿಂದೆ ಸಿಸೇರಿಯನ್ ಆಗಿ ಹೊಟ್ಟೆಯಿಂದ ಸತ್ತ ಮಗುವನ್ನೇ ಹೊರತೆಗೆಯಬೇಕಾಗಿ ಬಂತೆಂಬುದನ್ನು ಕೇಳಿ ಕಸಿವಿಸಿಯೂ ಜತೆಗೆ ತನ್ನ ನೋವು ಮರೆತು ಇತರರರಿಗೆ ಧೈರ್ಯ ಹೇಳಲು ಆಕೆ ಮುಂದಾದುದನ್ನು ಕಂಡು ಅಭಿಮಾನವೂ ಆಯಿತು.

—ನಳಿನಿ ನಾಗರಾಜ

ಕೆಲ ದಿನಗಳ ಹಿಂದೆ ಒಂದು ಸಂಜೆ. ರಸ್ತೆಗಳಲ್ಲೆಲ್ಲ ಗಡಿಬಿಡಿ. ಹುಬ್ಬಳ್ಳಿಯ ಸ್ಟೇಶನ್ ರಸ್ತೆಯೆಂದ ಮೇಲೆ ಕೇಳಬೇಕೆ. ನಾನು ಕೆಲಸ ಮುಗಿಸಿಕೊಂಡು ಅದೇ ರಸ್ತೆಯ ಕಚೇರಿಯೊಂದರಲ್ಲಿ ಕೆಲಸ ಮಾಡುವ ಗೆಳೆಯನೊಂದಿಗೆ ಚಹ ಕುಡಿಯಲೆಂದು ಹೊರಟಿದ್ದೆ.

ಆಗ ಕೇಶವಾಪುರದ ಕಡೆಯಿಂದ ಸ್ಕೂಟರೊಂದು ವೇಗವಾಗಿ ಬಂತು. ಬಂದದ್ದೇ ಸ್ಟೇಶನ್ ಕಡೆ ಹೊರಳಿತು. ಆದರೆ ಹೊರಳುತ್ತಿದ್ದಂತೆಯೇ ಎದುರಿಗೊಂದು ರಿಕ್ಷಾ ಅಡ್ಡ ಬಂದು ಸ್ಕೂಟರಿನವ ಬ್ರೇಕು ಹಾಕಬೇಕಾಯಿತು. ಆಕಸ್ಮಿಕವಾಗಿ ಬ್ರೇಕ್ ಹಾಕಿದ್ದರಿಂದ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಆತನ ಹೆಂಡತಿಯ ಕೈಯಲ್ಲಿದ್ದ ಸುಮಾರು ಆರು ತಿಂಗಳಿನ ಕೂಸು ಕೈಜಾರಿತು. ಇದೆಲ್ಲವನ್ನು ನೋಡುತ್ತಿದ್ದವರು 'ಅರೆ, ಮಗು ಹೋಗಿಯೇ ಬಿಟ್ಟಿತು' ಎಂದುಕೊಂಡು ಅತ್ತ ಧಾವಿಸುತ್ತಿದ್ದವರೊಂದಿಗೆ ನಾವೂ ಹೋಗಿ ನೋಡಿದರೆ ರಸ್ತೆಯ ಪಕ್ಕದ ಹೂಗಾರನ ಹೂವಿನ ಬುಟ್ಟಿಯಲ್ಲಿ ಮಗು ಪಿಕಿ ಪಿಕಿ ನೋಡುತ್ತ 'ಗಾಬರಿಯಾಗಿ ಬಿದ್ದುಕೊಂಡಿತ್ತು!

—ಗೋಪಾ

ರಾಮಾಜೋಯಿಸರ ಭೂತ

ಎ. ಆರ್. ವಿನಾಯಕ

ಇದು ಸುಮಾರು ನಲವತ್ತು ನಲವತ್ತೈದು ವರ್ಷಗಳ ಹಿಂದೆ ನಡೆದ ಘಟನೆ.

ಶಾನುಭೋಗ ಶ್ರೀಪಾದರಾಯರು ಮಧ್ಯಮ ವರ್ಗದವರು. ಅವರ ಧರ್ಮಪತ್ನಿ ಲಕ್ಷ್ಮೀಬಾಯಿ. ಅವರ ಮದುವೆ ಆಗಿ ಎರಡು ತಿಂಗಳು ಕಳೆದಿತ್ತು. ಇಬ್ಬರಿಗೂ ತುಂಬಾ ಚಿಕ್ಕ ವಯಸ್ಸು.

ಒಂದು ದಿನ ಶ್ರೀಪಾದರಾಯರು ತಮ್ಮ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದಾಗ, ಎದುರಿಗೆ ಯಾರದೋ ಶವವನ್ನು ನಾಲ್ವರು ಹೊತ್ತುಕೊಂಡು ಹೊರಟಿದ್ದುದೂ, ಹಿಂದೆ ಕೆಲ ಜನ ಹಿಂಬಾಲಿಸುತ್ತಿದ್ದುದೂ ಕಾಣಿಸಿತು.

ಶ್ರೀಪಾದರಾಯರಿಗೆ ಸತ್ತವರು ಯಾರು ಎಂಬುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ. ಹಿಂಬಾಲಿಸುತ್ತಿದ್ದ ಒಬ್ಬರನ್ನು ಕೇಳಿದರು. "ಯಾರು ಸತ್ತವರು?"

ಅದಕ್ಕೆ ಅವನು ಅಳುತ್ತಾ, "ಏನು ಹೇಳಲಿ ರಾಯರೆ, ಈ ದಿನ ಬೆಳಗ್ಗೆ ರಾಮಾಜೋಯಿಸರು ಸ್ನಾನ ಮಾಡಲು ಹೋಗುತ್ತಿದ್ದಂತೆಯೇ ಕುಸಿದವರು ಮೇಲೇಳಲಿಲ್ಲ," ಎಂದು ಹೊರಟು ಹೋದ.

"ಓ. ಅವರಾ...?" ಎಂದು ತಿರಸ್ಕಾರದಿಂದ ಶ್ರೀಪಾದರಾಯರು ಮುನ್ನಡೆದರು.

"ಏ, ಶ್ರೀಪಾದಾ, ನಾನು ಸತ್ತರೆ ನಿನಗೆ ಇಷ್ಟೊಂದು ಇಷ್ಟವೇನೋ? ನಾನು ಸತ್ತರೂ ನಿನ್ನ ಬಿಡುವುದಿಲ್ಲ" ಎಂದು ಕಠೋರವಾದ ಧ್ವನಿ ಕೇಳಿ, ಶ್ರೀಪಾದರಾಯರು ನಡುಗಿದರು. ಹಿಂದೆ ತಿರುಗಿ ನೋಡಿದರು; ಯಾರು ಹೀಗಂದವರು? ಯಾರೂ ಕಾಣಿಸಲಿಲ್ಲ.

× × ×

ಶ್ರೀಪಾದರಾಯರಿಗೂ ಅವರ ಮನೆಯವರಿಗೂ ಅದೊಂದು ದುರ್ದಿನ. ರಾಯರ ಪತ್ನಿ ಲಕ್ಷ್ಮೀಬಾಯಿಯ ತವರು ಮನೆಯಲ್ಲಿ ಸತ್ಯನಾರಾಯಣ ಪೂಜೆ. ರಾಯರು, ಲಕ್ಷ್ಮೀಬಾಯಿಯವರೇ ಪೂಜೆಗೆ ಕುಳಿತುಕೊಳ್ಳಬೇಕಿತ್ತು.

ಪೂಜೆಗಾಗಿ ಎಲ್ಲವೂ ಸಿದ್ಧವಾಗಿದೆ. ರಾಯರು ಮಣೆಯ ಮೇಲೆ ಮಡಿಯುಟ್ಟು ಕುಳಿತಿದ್ದಾರೆ. ಪಕ್ಕದಲ್ಲಿ ಲಕ್ಷ್ಮೀಬಾಯಿ. ಇದ್ದಕ್ಕಿದ್ದಂತೆ ರಾಯರು ಭಯಂಕರವಾಗಿ ಕಿರುಚಿ, ಕೈ ಕಾಲು ಜಾಡಿಸುತ್ತ ಎದ್ದರು. ಗಟ್ಟಿಯಾಗಿ ಅರಚುತ್ತ, ಸಾಮಗ್ರಿಗಳನ್ನೆಲ್ಲ ಕಿತ್ತೆಸೆದರು. ಸುತ್ತಲಿನವರೆಲ್ಲರಿಗೆ ಗಾಬರಿ. ಲಕ್ಷ್ಮೀಬಾಯಿಯಂತೂ ಭಯದಿಂದ ನಡುಗಿ ತಾಯಿಯ ಹಿಂದೆ ಅವಿತಿಟ್ಟುಕೊಂಡರು. ಮೊದಲೇ ಪತಿ ಎಂದರೆ ಭಯ. ಈಗಂತೂ ಅವರದ್ದು ಎಂದಿಲ್ಲದ ಅರ್ಭಟ! ಅವರ ಮೈಯೆಲ್ಲಾ ಬೆವರಿನಿಂದ ಒದ್ದೆಯಾಗಿತ್ತು.

ರಾಯರು ಈ ರೀತಿ ಕಿರಿಚಾಡುತ್ತಿದ್ದುದನ್ನು ನೋಡಿದ ಲಕ್ಷ್ಮೀಬಾಯಿಯ ತಂದೆ ವೆಂಕಟರಮಣಯ್ಯ ಏನೋ ಒಂದು ನಿರ್ಧಾರಕ್ಕೆ ಬಂದವರಂತೆ, ಕೈಯಲ್ಲಿ ನೀರನ್ನು ಹಿಡಿದುಕೊಂಡು, ದೇವರನ್ನು ಧ್ಯಾನಿಸಿ, ರಾಯರ ಮೇಲೆ ಸಿಂಪಡಿಸಿದರು.

ಕೂಡಲೇ ಸುಸ್ತಾಗಿ ನೆಲದ ಮೇಲೆ ಬಿದು

ಕೊಂಡರು ರಾಯರು. ಸ್ವಲ್ಪ ಹೊತ್ತು ಉಪಚರಿಸಿದ ನಂತರ ಎಚ್ಚರಗೊಂಡರು. "ಇದೇನಿದು? ಎಲ್ಲರೂ ಹೀಗೇಕೆ ನಿಂತಿದ್ದೀರಿ? ಭಯಗೊಂಡಂತೆ ಕಾಣುತ್ತದೆ. ಅರೆ... ನಾನು ಪೂಜೆಗೆ ಕುಳಿತವನು ನೆಲದ ಮೇಲೇಕೆ ಮಲಗಿದೆ? ನನಗೊಂದೂ ಅರ್ಥವಾಗುತ್ತಿಲ್ಲವಲ್ಲ?" ಎಂದು ಬಡಬಡಿಸಿದರು.

ವೆಂಕಟರಮಣಯ್ಯ **ನಿಜಸ್ಥಿತಿಯನ್ನು** ತಿಳಿಸದೆ, "ಮೂರ್ಛೆಗೊಂಡಿದ್ರಿ. ಈಗ ಸರಿಯಿದ್ದೀರಿ ಪೂಜೆ ನಡೆಸಿ" ಎಂದರು.

ಆದರೆ ಲಕ್ಷ್ಮೀಬಾಯಿಗೆ ಪತಿಯ ಪಕ್ಕದಲ್ಲಿ ಕುಳಿತುಕೊಳ್ಳಲು ಭಯ. ವೆಂಕಟರಮಣಯ್ಯ ಧೈರ್ಯ ಹೇಳಿದ ಮೇಲೆ ಹೆದರುತ್ತಲೇ ಕುಳಿತರು.

ಇದು ನಿತ್ಯದ ಮಾತಾಗತೊಡಗಿತು. ರಾಯರ ಕಿರಿಚಾಟ, ಆರ್ಭಟಗಳಿಂದ ಮನೆ ಮುಂದೆ ಜನ ಸೇರಿ 'ಏನು ಏಕೆ, ಅಯ್ಯೋ ಪಾಪ!' ಎಂದು ಉದ್ಗರಿಸುವುದು ಸಾಮಾನ್ಯವಾಯಿತು.

ವೆಂಕಟರಮಣಯ್ಯ ಒಬ್ಬ ಮಂತ್ರವಾದಿಯನ್ನು ಕರೆತಂದರು. ಆತ ಮನೆಯ ಹತ್ತಿರ ಬರುತ್ತಲೇ, ರಾಯರು ಮತ್ತೆ ಆರ್ಭಟಿಸ ತೊಡಗಿದರು. "ನೀನ್ಯಾಕೆ ಬಂದೆ? ಹೋಗು, ಹೊರಟು ಹೋಗು."

ಮಂತ್ರವಾದಿ ಮಂತ್ರ ಪಠಿಸುತ್ತ ಬೂದಿಯನ್ನು ಅವರ ಮೇಲೆ ಎರಚಿ, "ಯಾರು ನೀನು?" ಎಂದು ಗರ್ಜಿಸಿದ.

"ಇಲ್ಲ. ಹೇಳುವುದಿಲ್ಲ," ರಾಯರು ಗುಡುಗಿದರು. ಮಂತ್ರವಾದಿ ಸಿಟ್ಟಿನಿಂದ, ಮತ್ತೆ ಮಂತ್ರಿಸಿದ ಬೂದಿ ಎರಚಿದ. ಚಟಪಟನೆ ಒದ್ದಾಡಿದ ರಾಯರು ನಂತರ, "ನಾನು ರಾಮಾಜೋಯಿಸ," ಎಂದರು.

ಅಲ್ಲಿ ನಿಂತವರ ಮುಖಗಳು ಕಪ್ಪಿಟ್ಟವು. ರಾಮಾಜೋಯಿಸರು ಒಬ್ಬ ಪ್ರಸಿದ್ಧ ಜ್ಯೋತಿಷಿ. ಹಾಗೂ ಮಂತ್ರ-ತಂತ್ರಗಳನ್ನು ಕರಗತಮಾಡಿಕೊಂಡ ಸಿದ್ಧಾಂತರು. ಅವರಿಗೆ ಕೃಷ್ಣನೆಂಬ ಒಬ್ಬ ಮಗನೂ ಇದ್ದ. ಆದರೆ ಜೋಯಿಸರು ಇನ್ನೊಂದು ಸಿದ್ಧಿಕಾರ್ಯವನ್ನು ಮಾಡದೇ ಸ್ವರ್ಗಸ್ಥರಾದರು. ಅನಂತರ ಹೊಲಸಿನಲ್ಲಿ ವಿಗ್ರಹ ಮಾಡಿ. ಅದಾ...

...ದ್ದರೆ ಯಾವ ಕೆಲಸವೇ ಆದರೂ ಜೋಯಿಸರಿಗೆ ಸುಲಭವಾಗಿಬಿಡಬಹುದಿತ್ತು.

ಮಂತ್ರವಾದಿ ವಿಭೂತಿಯನ್ನು ಮಂತ್ರಿಸಿ ಕೊಟ್ಟುಹೋದ. ಅತ್ತ ಮಂತ್ರವಾದಿ ಹೋಗುತ್ತಲೇ, ಇತ್ತ ರಾಯರು, "ಏನೋ ಮಂತ್ರವಾದಿ, ನನ್ನ ಓಡಿಸಕ್ಕೆ ಬರ್ತೀಯ? ಹ...ಹ್ಹ...ಹ್ಹ..." ಎಂದು ಕಿರಿಚಾಡಿದರು.

ಈ ಉಪಟಳಕ್ಕೆ ಯಾವ ಮಂತ್ರವೂ ನಾಟಲಿಲ್ಲ. ಅವರು ಯಾವ ಬೂದಿಗೂ ಬಗ್ಗಲಿಲ್ಲ. ಒಮ್ಮೆ ಸುಬ್ಬಾಜೋಯಿಸರೆಂಬ ಶ್ರೇಷ್ಠರು ಬಂದರು. ಒಂದು ತಾಯಿತವನ್ನು ಮಂತ್ರಿಸಿ, ರಾಯರ ರಟ್ಟೆಗೆ ಕಟ್ಟಿದರು. ಅಂದು ಸುಬ್ಬಾಜೋಯಿಸರೊಂದಿಗೆ ರಾಯರು ಸರಿಯಾಗಿಯೇ ಮಾತಾಡಿದರು.

ಆದರೆ ಮರುದಿನ ಮಲಗಿದ್ದ ರಾಯರು ಮನೆಯಲ್ಲಿ ಯಾರಿಗೂ ಕಾಣಲಿಲ್ಲ. ಎತ್ತ ಹುಡುಕಿದರೂ ಅವರ ಸುಳಿವು ಸಿಗಲಿಲ್ಲ. ಮರಳಿ ಬಂದಾರೆಂದು ಕಾದು, ಮೂರು ದಿನಗಳ ನಂತರ, ವೆಂಕಟರಮಣಯ್ಯ ರಾಯರನ್ನು ಹುಡುಕಲು ಹೊರಟರು.

ದಾರಿಯಲ್ಲಿ ಕಟ್ಟಿಗೆ ಕಡಿಯುತ್ತಿದ್ದ ಒಬ್ಬ ಬಂದು, "ಸೋಮೇರ, ರಾಯ್ರು ಮೂರ್ ದಿವಸ ಹಿಂದೆ ಹಿಂಗೇ ಹೋದ್ನ ನೋಡ್ದೆ." ಎಂದ.

ಕೂಡಲೇ ವೆಂಕಟರಮಣಯ್ಯ ಆ ದಾರಿ ಹಿಡಿದು ಹೊರಟೇ ಬಿಟ್ಟರು. ಸುಮಾರು ನಾಲ್ಕು ಫರ್ಲಾಂಗ್ ದೂರ ಹೋದಾಗ ಒಂದು ಜನಿವಾರ ತುಂಡಾಗಿ ಬಿದ್ದಿದ್ದು ಕಂಡಿತು. ಪಕ್ಕದಲ್ಲೇ ಒಂದು ತಾಯಿತ. ವೆಂಕಟರಮಣಯ್ಯ ಅದನ್ನು ಎತ್ತಿಕೊಂಡು ನೋಡಿದರು. ಸುಬ್ಬಾ ಜೋಯಿಸರು ತೊಡಿಸಿದ ತಾಯಿತ! ಇದೇ ದಾರಿಯಲ್ಲಿ ರಾಯರು ಹೋಗಿರುವುದು ಖಚಿತವೆಂದುಕೊಂಡು ಹುಡುಕುತ್ತ ಮುಂದುವರಿದರು.

ಸುಮಾರು ನಲವತ್ತೈದು ಮೈಲಿ ದೂರವನ್ನು ಎರಡು ದಿನ ನಡೆದು. ಶಿವಪುರವನ್ನು ತಲುಪಿದರು. ಶಿವಪುರದ ನದಿಯ ಸೇತುವೆಯ ಅಡಿಯಲ್ಲಿ ರಾಯರು ನಿದ್ರಿಸುತ್ತಿದ್ದರು.

ಬಲವಂತವಾಗಿ ರಾಯರನ್ನು ಮನೆಗೆ ಕರೆ

ಸಿದರು ವೆಂಕಟರಮಣಯ್ಯ.

ರಾಯರು ಕಣ್ಣಾಲಿಗಳನ್ನು ಗಿರಗಿರನೆ ತಿರುಗಿಸುತ್ತ, ಕೂದಲನ್ನು ಕಿತ್ತುಕೊಳ್ಳುತ್ತ ಭಯಂಕರವಾಗಿ ಕಿರಿಚುತ್ತಲೇ ಇದ್ದರು.

ಈ ಆರ್ಭಟದಿಂದಾಗಿ ಊರಿಗೆ ಊರೇ ಅವರ ಮನೆಯ ಮುಂಧೆ ನೆರೆದಿತ್ತು. ಲಕ್ಷ್ಮೀಬಾಯಿಯ ತಾಯಿ ರಾಯರಿಗೆ ಕಟ್ಟಿದ ಸರಪಳಿಯ ಬಿಚ್ಚಲು ಪತಿಯನ್ನು ಬೇಡಿಕೊಂಡರು. ಆದರೆ ಆ ವೇಳೆಗಾಗಲೇ ಅವರು ಪೂಜೆಗೆ ಕುಳಿತುಬಿಟ್ಟಿದ್ದರು. ಪೂಜೆ ಮುಗಿಯುವುದು ಒಂದು ಗಂಟೆಯ ನಂತರವೇ.

ಹೀಗೇ ನಡೆಯಿತು ರಾಯರ ಆರ್ಭಟ. ನಂತರ ವೆಂಕಟರಮಣಯ್ಯನವರಿಗೆ ಯಾರೋ ಒಬ್ಬರು ಶಂಕರಪಾದರೆಂಬವರ ಹೆಸರು ಹೇಳಿದರು. ವೆಂಕಟರಮಣಯ್ಯ ಶಂಕರಪಾದರನ್ನು ಕರೆದುಕೊಂಡು ಬಂದರು.

ಶಂಕರಪಾದರದು ಭೂತ, ಪಿಶಾಚಿಗಳನ್ನು ನಡುಗಿಸುವ ಮಹಾಶಕ್ತಿ ಎಂಬುದು ಜನಜನಿತವಾಗಿದ್ದ ಮಾತು. ಅವರು ಒಮ್ಮೆ ಧ್ಯಾನಿಸಿ, ಶಪಿಸಿದರೆ ಆ ದುಷ್ಟಶಕ್ತಿ ಸುಟ್ಟು ಬೂದಿಯಾಗುತ್ತಿತ್ತು.

ರಾಯರ ಹತ್ತಿರ ಬಂದ ಶಂಕರಪಾದರು, "ಯಾರು ನೀನು ?" ಎಂದು ಪ್ರಶ್ನಿಸಿದರು.

"ನಾನು ರಾಮಾಜೋಯಿಸ," ಅಂದರು ರಾಯರು.

"ಏಕೆ ಬಂದೆ?"

"ಶ್ರೀಪಾದ ನನಗೆ ಅಪಮಾನ ಮಾಡಿದ; ಅದಕ್ಕೆ."



"ಸರ್ವೇ ಜನಾಃ ಸುಖಿನೋ-ಭವಂತು..."

"ಯಾವಾಗ?"

"ನನ್ನ ಶವಯಾತ್ರೆ ನಡೆಯುವಾಗ."

"ಏನು ಹೇಳಿದ?"

"'ಓ...ಅವನಾ?' ಎಂದು ವ್ಯಂಗ್ಯ ಮಾಡಿದ."

"ಮತ್ತೇನು ಹೇಳಬೇಕಿತ್ತು ನನಗೆ?"

"ನನಗೆ ಮರ್ಯಾದೆ ಕೊಡುವವರೇ ಇರಲಿಲ್ಲ. ಈ ಶ್ರೀಪಾದ ಬಿಟ್ಟು ನನ್ನ ಮಗನ."

"ಈಗ ನೀನು ಅವನನ್ನು ಬಿಡುವುದಿಲ್ಲವೇ?"

"ಇಲ್ಲ."

"ಹಾಗಾದ್ರೆ, ಈಗ ನಾನು ನಿನ್ನ ಮಗನನ್ನೇ ಕಳ್ಸಿ ಬಿಡ್ತೀನಿ."

"ಅಯ್ಯೋ? ಬೇಡ ಬೇಡ. ನನಗೆ ಒಬ್ಬನೇ ಮಗ. ನನ್ನ ವಂಶದ ಕುಡಿ ಅವನು. ಅವನಿಗೆ ಏನೂ ಮಾಡಬೇಡ."

"ಹಾಗಾದರೆ ನೀನು ಹೊರಟು ಹೋಗು."

ಕೂಡಲೇ ರಾಯರು ಮೂರ್ಛಿತರಾದರು.

ಶಂಕರಪಾದರು ಅಲ್ಲಿ ಇರುವವರಿಗೆ ಯಾವ ಅನುಮಾನವೂ ಇರಲಿಲ್ಲ. ಯಾವಾಗ ಅವರು ಹೊರಟು ಹೋದರೋ ಆಗ ಪುನಃ ಪ್ರಾರಂಭವಾಯಿತು, ರಾಯರ ಆರ್ಭಟ.

ಮತ್ತೆ ಕರೆ ಹೋಯಿತು ಶಂಕರಪಾದರಿಗೆ. ಬಹಳ ದೂರ ಹೋಗಿರಲಿಲ್ಲ ಅವರು. ಕೂಡಲೇ ಬಂದರು. ರಾಯರ ಮುಂದೆ ಕುಳಿತು ಕೇಳಿದರು,

"ಯಾಕೆ ಬಂದೆ?"

"ಯಾಕೂ ಇಲ್ಲ. ಸುಮ್ಮನೆ ಬಂದೆ!"

"ಇನ್ನು ಮುಂದೆ ನೀನು ರಾಯರ ತಂಟೆಗೆ ಬರಕೂಡದು. ನಾನಿನ್ನು ಮತ್ತೆ ಬರುವುದಿಲ್ಲ." ಎಂದು ಹೇಳಿ ಶಂಕರಪಾದರು ಹೊರಟ



ಹೋದರು.

ಆದರೆ ಇತ್ತ ರಾಯರ ಪರಿಸ್ಥಿತಿಯೇನೂ ಸುಧಾರಿಸಲಿಲ್ಲ. ಓಡಿ ಹೋಗುವುದು. ಕೆಮ್ಮುವುದು, ಇತ್ಯಾದಿ ನಡೆದೇ ಇತ್ತು.

ರಾಮಾಜೋಯಿಸರ ಪಾಡನ್ನು ನೋಡುತ್ತಿದ್ದರು, ಕುಪಿತರಾಗಿದ್ದರು ವೆಂಕಟರಮಣಯ್ಯ. ವೆಂಕಟರಮಣಯ್ಯನವರು ಹಳೆಯ ರೀತಿ ಕಾಲ. ಸಕಲ ವಿದ್ಯಾ ಪಾರಂಗತ. ಮಂತ್ರಗಳು ಎಲ್ಲವೂ ಬಾಯಲ್ಲಿದ್ದುವು.

ಅಂದು ಮನೆಯಲ್ಲಿ ರಾಯರು ಮತ್ತು ವೆಂಕಟರಮಣಯ್ಯನವರನ್ನು ಬಿಟ್ಟರೆ ಬೇರೆ ಯಾವ ನರಪಿಳ್ಳೆಯೂ ಇರಲಿಲ್ಲ. ಮಿಕ್ಕವರೆಲ್ಲ ಮದುವೆಗೆ ಹೋಗಿದ್ದರು. ಹಿತ್ತಿಲ ಬಾಗಿಲು, ಮುಂದಿನ ಬಾಗಿಲು ಭದ್ರವಾಗಿ ಅಗಳಿ ಹಾಕಿತ್ತು.

ವೆಂಕಟರಮಣಯ್ಯ, "ಏ ರಾಮಾಜೋಯಿಸ ಇಷ್ಟು ದಿನ ನೀನು ಕೊಟ್ಟ ಕಾಟವನ್ನು ನೋಡಿದೆ. ಸಹಿಸಿ ಆಯಿತು. ಇನ್ನು ನನ್ನಿಂದ ಸಾಧ್ಯವಿಲ್ಲ. ಈ ದಿನ ನಾನು ಬದುಕಬೇಕು, ಇಲ್ಲ ನೀನು ಬಿಟ್ಟು ಹೋಗಬೇಕು. ಇಬ್ಬರೂ ಇರಲು ಸಾಧ್ಯವಿಲ್ಲ. ನಡೀ ದೇವರ ಕೋಣೆಗೆ," ಎಂದು ನಿಶ್ಚಯದ ಧ್ವನಿಯಲ್ಲಿ ಅಂದರು.

ದೇವರ ಮುಂದೆ ಎದುರು ಬದುರಾಗಿ ಇಬ್ಬರೂ ಕುಳಿತರು. ರಾಯರ ಮುಂದೆ ಗಣಪತಿಯ ವಿಗ್ರಹವಿತ್ತು. ವೆಂಕಟರಮಣಯ್ಯನವರ ಬಳಿಯೂ ಗಣಪತಿಯ ವಿಗ್ರಹವನ್ನು ಇಟ್ಟುಕೊಂಡು ಕುಳಿತಿದ್ದರು ಇಬ್ಬರೂ ಸಾಕಷ್ಟು ವಿಭೂತಿಯನ್ನು ಇಟ್ಟುಕೊಂಡಿದ್ದರು. ಅವರು ಹೀಗೆ ಕುಳಿತಾಗ ಬೆಳಿಗ್ಗೆ ಐದು ಗಂಟೆ.

ವೆಂಕಟರಮಣಯ್ಯನವರು ಒಂದೇ ಮನಸ್ಸಿನಿಂದ ಧ್ಯಾನಿಸುತ್ತ, ವಿಭೂತಿಯನ್ನು ರಾಯರ ಮೇಲೆ ಚೆಲ್ಲುತ್ತಿದ್ದರು. ರಾಯರೂ ಧ್ಯಾನಿಸುತ್ತ, ವೆಂಕಟರಮಣಯ್ಯನವರ ಮೇಲೆ ಚೆಲ್ಲುತ್ತಿದ್ದರು. ಹೀಗೆಯೇ ಗಂಟೆಗಳ ಮೇಲೆ ಗಂಟೆಗಳು ಉರುಳುತ್ತಿದ್ದುವು.

ಬರಬರುತ್ತ ವೆಂಕಟರಮಣಯ್ಯನವರ ಕೈ ಮೇಲಾಯಿತು. ರಾಯರ ಮೈಮೇಲೆ ಬಂದಿದ್ದ ರಾಮಾಜೋಯಿಸರು. "ಅಯ್ಯೋ! ಸಾಕು ಮಹರಾಯಾ, ಹೋಗ್ತೀನಿ ಕಣೋ. ಮತ್ತೆ ಬರೋದಿಲ್ಲ..." ಎಂದರು. ರಾಯರು ಕೆಮ್ಮುತ್ತ ಬಿದ್ದರು.

ಆದರೆ ವೆಂಕಟರಮಣಯ್ಯನವರು ಏಕಾಗ್ರಚಿತ್ತದಿಂದ ಮಂತ್ರಿಸಿ ವಿಭೂತಿಯನ್ನು ರಾಯರ ಮೈಮೇಲೆ ಸಿಂಪಡಿಸುತ್ತಿದ್ದಾರೆ. ಈಚೆಗಿನ ಪರಿವೆ ಇರಲೇ ಇಲ್ಲ. ಅವರಿಗೆ ಎಚ್ಚರವಾದಾಗ ಬೆಳಿಗ್ಗೆ ಐದು ಗಂಟೆ! ಇಷ್ಟೊತ್ತು ನಾಲ್ಕು ಗಂಟೆ ಒಂದೇ ಮನಸ್ಸಿನಿಂದ ಕುಳಿತು, ಅಳಿಯನಿಗೆ ಹಿಡಿದ ಭೂತವನ್ನು ತೊಲಗಿಸಿದರು.

ವೆಂಕಟರಮಣಯ್ಯನವರು ಎಚ್ಚೆತ್ತಾಗ ರಾಯರು ಮಣೆಯ ಮೇಲಿನಿಂದ ಉರುಳಿ ಬಿದ್ದಿದ್ದರು. ವೆಂಕಟರಮಣಯ್ಯನವರು ಶೈತ್ಯೋಪಚಾರ ನಡೆಸಿದ ನಂತರ ರಾಯರು ಎದ್ದರು.

ಎದ್ದ ಕೂಡಲೇ "ಮಾವ..." ಎನ್ನುತ್ತಾ ಕಾಲಿಗೆ ಬಿದ್ದರು. ನಂತರ ದೇವರಿಗೆ ನಮಸ್ಕರಿಸಿ ಹೊರಗೆ ಬಂದರೆ, ಸುತ್ತಲೂ ಜನ ನೆರೆದಿದ್ದರು.

ವೆಂಕಟರಮಣಯ್ಯನವರ ಪತ್ನಿ, "ಸದ್ಯ. ಇಬ್ಬರೂ ಚೆನ್ನಾಗಿದ್ದೀರಲ್ಲಾ. ಇನ್ನೊಂದು ನಿಮಿಷ ತಡವಾಗಿದ್ದರೂ ಬಾಗಿಲು ಒಡೆಸುತ್ತಿದ್ದೆ. ಏಕೆ ಹೀಗೆ ಬಾಗಿಲಿಕ್ಕಿಕೊಂಡಿದ್ದಿರಿ? ಎಷ್ಟು ಕೂಗಿದರೂ ಬಾಗಿಲು ತೆಗೆಯಲಿಲ್ಲ. ನಮ್ಮ ಕೂಗು ಕೇಳಿ ಮಲಗಿದ್ದ ಜನರೆಲ್ಲ ಎದ್ದು ಬಂದರು," ಎಂದರು.

ನಡೆದುದನ್ನೆಲ್ಲ ತಿಳಿದ ಮೇಲೆ, ಮನೆಯವರಿಗೂ ಹೊರಗಿನ ಜನಕ್ಕೂ ವೆಂಕಟರಮಣಯ್ಯನವರ ಬಗ್ಗೆ ಅತಿಯಾದ ಗೌರವ ಮೂಡಿತು. ✡

[ಕಾಲ್ಪನಿಕ ಹೆಸರುಗಳ ನೈಜ ಘಟನೆ]

ನೀರೋನ ಮೊದಲ ರೋಮನ್ ಅರಮನೆಯಾದ 'ಡೋಮಸ್ ಟ್ರಾನ್ಸಿ-ಸ್ಟೋರಿಯಾ'ದ ಭಗ್ನಾವಶೇಷಗಳಲ್ಲಿ ಏಕಕಾಲದಲ್ಲಿ ೬೦ ಜನ ಕುಳಿತು ಬಳಸಬಹುದಾದಂಥ 'ಸಾಮೂಹಿಕ ಕಕ್ಕಸ'ನ್ನು ಈಗಲೂ ನೋಡಬಹುದಾಗಿದೆ!

—ಸಂಗ್ರಹ: ಎಸ್. ವಿಶ್ವನಾಥ

ರೆಕ್ಸೋನಾ ನಿಮ್ಮ ಚರ್ಮದ ಆರೈಕೆ ಮಾಡುತ್ತದೆ...






ಅದನ್ನು ನಯವಾಗಿ, ಕಾಂತಿಯುಕ್ತವಾಗಿ ಇಡುತ್ತದೆ.

ರೆಕ್ಸೋನಾದಲ್ಲಿ ನಾಲ್ಕು ನೈಸರ್ಗಿಕ ತೈಲಗಳ ಮಿಶ್ರಣವಿದೆ—

ಹಪುಶ್ (ದೇವದಾರು ಜಾತಿ), ಲವಂಗದ ತೊಗಟೆ, ಲವಂಗ ಮತ್ತು ಸರಳವ್ (ಇನ್ನೊಂದು ದೇವದಾರು ಜಾತಿ).
ರೆಕ್ಸೋನಾದಿಂದ ಸ್ನಾನ ಮಾಡಿರಿ—ಅದು ನಿಮ್ಮ ಚರ್ಮವನ್ನು ಕೋಮಲ ಹಾಗೂ ಕಾಂತಿಯುಕ್ತವಾಗಿಡುತ್ತದೆ.
ನಿಮ್ಮ ಪ್ರೀತಿ ಪಾತ್ರವಾದ, ಹೆಚ್ಚು ಸಮಯ ಉಳಿಯುವ ಪರಿಮಳವಿರುವ ರೆಕ್ಸೋನಾ ನಿಮ್ಮ ಚರ್ಮಕ್ಕೆ ಅತ್ಯಂತ ಸ್ವಾಭಾವಿಕವಾದ ರಕ್ಷಣೆಯ ಸಾಧನವಾಗಿದೆ.



ರೆಕ್ಸೋನಾ ನಿಮ್ಮ ಚರ್ಮಕ್ಕೆ ಹಿತಕರ

ನೇತಾಜಿಯೊಂದಿಗೆ ನಾನು

ಎಸ್. ಆರ್. ದೇಶಪಾಂಡೆ

ನೇತಾಜಿ ಸುಭಾಷಚಂದ್ರ ಬೋಸರನ್ನು ನಾನು ಮೊದಲ ಸಲ ಕಂಡದ್ದು ೧೯೨೯-೩೦ ರಲ್ಲಿ, ಲಾಹೋರಿನಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ. ಆಗ ನನಗೆ ಮೂವತ್ತೊಂದು ವರ್ಷ ವಯಸ್ಸು. ಅವರ ಆ ಅಜಾನುಬಾಹು ದೇಹ, ತೇಜೋಮಯ ಮುಖ, ಅಸ್ಖಲಿತ ವಾಗ್ವೈಖರಿ ನನ್ನನ್ನು ಬೆರಗುಗೊಳಿಸಿತಷ್ಟೇ ಅಲ್ಲ. ನಾನು ಅವರತ್ತ ಆಕರ್ಷಿತನಾಗುವಂತೆಯೂ ಮಾಡಿತು. ಆಳರಸರಾಗಿದ್ದ ಬ್ರಿಟಿಷರಿಗೆ ಸಿಂಹಸ್ವಪ್ನರಾಗಿದ್ದ ನೇತಾಜಿ ನನ್ನೊಂದಿಗೆ ನಡೆದುಕೊಂಡ ರೀತಿ ಮಾತ್ರ ನನ್ನ ಜೀವನಕ್ಕೊಂದು ಹೊಸ ನೀತಿಯೇ ಆಯಿತೆನ್ನಬಹುದು.

ರಾವಿ ನದಿಯ ದಡದಲ್ಲಿ ಲಾಲಾಜಿನಗರದಲ್ಲಿ ನಡೆದ ಈ ಅಧಿವೇಶನ ಸಮಗ್ರ ಭಾರತದ ಗಮನ ಸೆಳೆದಿತ್ತು. ವೇದಿಕೆಯ ಮೇಲೆ ಸ್ವಾತಂತ್ರ್ಯಾಂದೋಲನದ ಸೂತ್ರಧಾರಿಗಳಾದ ಮಹಾತ್ಮ ಗಾಂಧಿ, ಜವಾಹರಲಾಲ ನೆಹರೂ, ಮೋತಿಲಾಲ ನೆಹರೂ, ಸರದಾರ ಪಟೇಲ, ಹಾಗೂ ಇವರೆಲ್ಲರ ನಡುವೆ ನೇತಾಜಿ ಸುಭಾಷಚಂದ್ರ ಬೋಸರು ಕುಳಿತಿದ್ದರು, ಆದರೆ ಬೋಸರು ಬಹಳ ಗಂಭೀರವಾಗಿದ್ದರು. ಅಧಿವೇಶನದ ಅಧ್ಯಕ್ಷ ಜವಾಹರಲಾಲರು, "ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ" ಎಂದು ಹೇಳಿದರೆ, ನೇತಾಜಿ, "ನಾವು ಪ್ರತಿ ಸರಕಾರ ರಚಿಸೋಣ. ಅದೇ ಸರಿಯಾದ ದಾರಿ," ಎಂದು ವಾದಿಸತೊಡಗಿದರು. ನೇತಾಜಿಯವರ ವಾದಸರಣಿ ಎಲ್ಲರೂ ತಲೆ ತೂಗುವಂತೆ ಮಾಡಿತಾದರೂ ಗಾಂಧೀಜಿಯ ಅನುಯಾಯಿಗಳ ಕೈಯೇ ಮೇಲಾಯಿತು. ನೇತಾಜಿಯ ಆ ದಿಟ್ಟತನ ನನ್ನಲ್ಲಿ ಅವರ ಸಾಮೀಪ್ಯದ ಹಂಬಲ ಹುಟ್ಟಿಸಿತು.

ಎರಡನೆಯ ದುಂಡು ಮೇಜಿನ ಪರಿಷತ್ತು ಫಲಕಾರಿಯಾಗದ್ದರಿಂದ ಪುನಃ ಚಳವಳಿ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ನಾನು ಮುಂಬಯಿಯಲ್ಲಿ ಭೂಗತನಾಗಿದ್ದುಕೊಂಡು ಡಾಕ್ಟರ್ ಹರ್ಡೀಕರರ ಆದೇಶದಂತೆ ಕೆಲಸ ಮಾಡುತ್ತಿದ್ದೆ. ಕಾಂಗ್ರೆಸ್ಸಿನ ಕಾರ್ಯಕ್ರಮ ವಿವರಗಳನ್ನು ಪ್ರತಿ ಪ್ರಾಂತಕ್ಕೂ ತಲುಪಿಸಿ, ಅಲ್ಲಿಯ ಕಾರ್ಯಗಳ ವರದಿಯನ್ನು ತರುವುದು ನನಗೆ ಹಾಗೂ ನನ್ನ ಸಂಗಡಿಗರಿಗೆ ಹರ್ಡೀಕರರು ಒಪ್ಪಿಸಿದ ಕೆಲಸವಾಗಿತ್ತು.

ನಾನು ಈ ಕೆಲಸಕ್ಕಾಗಿ ಮಧ್ಯ ಪ್ರದೇಶಕ್ಕೆ ಹೋಗಿ ಬರುತ್ತಿದ್ದೆ—ಮುಖ್ಯವಾಗಿ ಜಬಲಪುರಕ್ಕೆ—ಪೋಲೀಸರ ಕಾಟದಿಂದ ಮುಂಬೈಯಲ್ಲಿ ಇರುವುದು ನನಗೆ ಅಸಾಧ್ಯವಾಯಿತು. ಜಬಲಪುರಕ್ಕೆ ಬಂದರೆ ಅಲ್ಲಿಯೂ ಅದೇ ಸ್ಥಿತಿ. ಅಲ್ಲಿಯ ಮುಖಂಡರಾದ ಡಿ. ಪಿ. ಮಿಶ್ರರನ್ನಾಗಲೇ ಬಂಧಿಸಿ ಸೆರೆಮನೆಗೆ ಅಟ್ಟಿದ್ದರು. ಮಿಶ್ರರ ಬಂಧುಗಳು ನನಗೆ 'ಶಿವನಿ'ಗೆ ಹೋದರೆ ಒಳ್ಳೆಯದೆಂದು ಸಲಹೆ ಮಾಡಿದರು. ನಾನು ಹಾಗೆಯೇ ಮಾಡಿದೆ.

ಶಿವನಿ ಜಿಲ್ಲಾ ಸ್ಥಳ. ಇಲ್ಲಿಯ ಜೇಲಿನಲ್ಲಿ ಸುಭಾಷಚಂದ್ರ ಬೋಸ ಮತ್ತು ಅವರ ಬಂಧು



ಶರಚ್ಚಂದ್ರರನ್ನು ಇಟ್ಟಿರುವುದಾಗಿ ತಿಳಿಯಿತು. ನನಗೆ ಬಲು ಸಂತೋಷವಾಯಿತು, ಮತ್ತೆ ನೇತಾಜಿಯ ಸಾಮೀಪ್ಯ ದೊರೆತುದಕ್ಕಾಗಿ. ನಾನು ಅವತ್ತಾಗಲೇ ಒಂದು ಶಿಬಿರದಲ್ಲೇ ತಳ್ಳಲ್ಪಟ್ಟಿದ್ದೆ. ಅಲ್ಲಿ ಎನ್. ಎನ್. ಶೀಲರೆಂಬ ವಕೀಲರ ಸ್ನೇಹವಾಯಿತು. ಅವರು ಬೋಸರ ನಿಕಟವರ್ತಿಗಳಲ್ಲೊಬ್ಬರು. ನಾನು ಶೀಲರೊಂದಿಗೇ ಉಳಿದುಕೊಂಡೆ.

ನನಗೆ ಬೋಸರ ಅಗಾಧ ಕರ್ತೃತ್ವ ಶಕ್ತಿಯ ಅರಿವಾದದ್ದು ಇದೇ ಸಂದರ್ಭದಲ್ಲಿ. ಅವರು ಜೇಲಿನಲ್ಲಿದ್ದುಕೊಂಡೇ ದೇಶ ವಿದೇಶಗಳೊಡನೆ ಪತ್ರವ್ಯವಹಾರ ನಡೆಸುತ್ತಿದ್ದರು. ಇಂಗ್ಲೆಂಡ್, ಜರ್ಮನಿ, ಇಟಲಿ ಮೊದಲಾದೆಡೆಗೆ ಅವರ ಪತ್ರಗಳು ನಿತ್ಯ ಹೋಗುತ್ತಿದ್ದವು. ನಾನು ಅವರನ್ನು ಅಲ್ಲಿ ಕಂಡಾಗ ಬೋಸರಿಗೆ ನನ್ನ ಮೇಲೆಯೇ ಸಂಶಯ. ಯಾರೋ ಪೋಲೀಸಿನವನಿರಬೇಕೆಂದು ಅವರು ಹಾಗೆ ನೋಡುತ್ತಿದ್ದಂತೆ. ಆದರೆ ನಾನೂ ಒಬ್ಬ ಕಾಂಗ್ರೆಸ್ ಕಾರ್ಯಕರ್ತನೆಂದು ಅರಿತಾಗ ಅವರು ತಮ್ಮ ಕಾರ್ಯದಲ್ಲಿ ನನ್ನನ್ನು ತೊಡಗಿಸಿಕೊಂಡರು.

ಅದೊಂದು ಸಣ್ಣ ಸೆರೆಮನೆ. ಇವರಿಬ್ಬರೇ ರಾಜಕೀಯ ಕೈದಿಗಳು. ಇವರಿಬ್ಬರಿಗೂ ಪ್ರತ್ಯೇಕ ಬರಾಕುಗಳು. ಊಟ-ತಿಂಡಿಗಳ ವ್ಯವಸ್ಥೆಯೂ ಪ್ರತ್ಯೇಕವಾಗಿತ್ತು. ಪ್ರತಿದಿನ ಮುಂಜಾನೆ-ಸಂಜೆಗೆ ಅವರ ಬಳಿ ಬರುತ್ತಿದ್ದ ಕ್ಷೌರಿಕನೇ ಗುಪ್ತ ಪತ್ರವಾಹಕನಾಗಿದ್ದ. ಜೇಲಿನ ಅಧಿಕಾರಿಗಳಿಗೆ ಸುಭಾಷರೆಂದರೆ ಭಯ. ಇವರ ಬರಾಕಿನಲ್ಲಿ ಪ್ರವೇಶಿಸಲೂ ಆ ಅಧಿಕಾರಿಗಳು ಪೂರ್ವಾನುಮತಿ ಪಡೆಯಬೇಕಾಗುತ್ತಿತ್ತು. ಹದಿನೈದು ದಿನಗಳಿಗೊಮ್ಮೆ ಸುಭಾಷರ ಮಿತ್ರರು ಸಂಬಂಧಿಕರು ಭೇಟಿಗ ಬರುತ್ತಿದ್ದರು. ಆಗೆಲ್ಲ ನಾನು ಈ ಭೇಟಿಯ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಅಂದರೆ ಯಾವುವರ ಕುರಿತು ಮಾತುಕತೆ, ಬಳಸಬೇಕಾದ ಸಂಕೇತ ಶಬ್ದಗಳು ಮುಂತಾದವು. ಯಾಕೆಂದರೆ ಈ ಮಾತುಕತೆಯ ಕಾಲಕ್ಕೆ ಜೇಲಿನ ಅಧಿಕಾರಿಗಳು ಎದುರಿಗೇ ಇದ್ದರೂ ಮಾತಿನ ಅರ್ಥ ಅವರಿಗೆ ತಿಳಿಯದಂತೆ ಗುಪ್ತಪದಗಳನ್ನು ಬಳಸುವುದು ಅನಿವಾರ್ಯವಾಗಿತ್ತು.

ಈ ರೀತಿ ನಾನು ಅವರೊಂದಿಗೆ ಮೂರು ತಿಂಗಳು ಕೆಲಸಮಾಡುವುದರಲ್ಲಿಯೇ ನನ್ನನ್ನೂ ಶೀಲ ವಕೀಲರನ್ನೂ ಬಂಧಿಸಿದರು. ದಂಡ-ಶಿಕ್ಷೆಗಳೂ ವಿಧಿಸಲ್ಪಟ್ಟವು. ಈಗಂತೂ ಸುಭಾಷಚಂದ್ರರ ಸಂಪರ್ಕ ಅತ್ಯಂತ ನಿಕಟವಾಯಿತು.

ನಮ್ಮನ್ನು ಬಂಧಿಸಿದ ಮರುದಿನ ಬೆಳಗಿನ ಉಪಹಾರ-ಚಹಗಳು ಸುಭಾಷರಿಂದಲೇ ಕಳಿಸಲ್ಪಟ್ಟವು. ಬಂಧನದ ರಾತ್ರಿಯನ್ನುಳಿದು ಬೇರಾವ ದಿನವೂ ಅವರನ್ನು ಭೇಟಿಯಾಗದೆ ಇರಲಿಲ್ಲ. ಆ ದಿನ (ಮರುದಿನ) ರಾತ್ರಿ ೮-೯ ರ ಸಮಯ. ನಾನು ವಕೀಲರೊಂದಿಗೆ ಮಾತನಾಡುತ್ತ ಕುಳಿತಿದ್ದೆ. ಅದು ಬೆಳದಿಂಗಳ ರಾತ್ರಿ. ನಾಲ್ಕೂ ನಿಟ್ಟಿನಲ್ಲಿ ನೀರವತೆ ಹಬ್ಬಿತ್ತು. ಅಷ್ಟರಲ್ಲಿ ಆಚೆಯಿಂದ ಗರ್ಜನೆಯೊಂದು ಕೇಳಿ ಬಂತು, "ಕೌನ್ ಹೈಂ?" ಅದಕ್ಕುತ್ತರವಾಗಿ ಪಹರೆದಾರ, "ಜೀ ಹುಜೂರ್. ನಾನಿದ್ದೇನೆ," ಎಂದ. ಹಾಗೇ ಧ್ವನಿ ಬಂದತ್ತ ಹೋದ. "ನಿನ್ನೆ ಬಂದ ಬಾಬೂಜಿಯವರು ಯಾವ ಬರಾಕಿನಲ್ಲಿದ್ದಾರೆ? ಅವರ ಬಾಗಿಲು ತೆಗೆ" ಎಂದು ಮತ್ತೆ ಅದೇ ಗಡಸು ಧ್ವನಿ. ಪಹರೆದಾರ ಓಡಿಬಂದವನೆ ನಮ್ಮ ಬರಾಕಿನ ಬಾಗಿಲು ತೆಗೆದ. ನಾವು ಹೊರ ಬಂದರೆ ಎದುರು ನೇತಾಜಿ ಮತ್ತು ಶರಚ್ಚಂದ್ರರು ನಿಂತಿದ್ದರು. ನಮ್ಮಿಬ್ಬರನ್ನೂ

ಮಾಗಾಳ್ಳಿಕ್ಕೆ ಸ್ವಾಗತಿಸಿದರು. ನಂತರ ನಾವು ನಾಲ್ವರೂ ಅವರ ಹೂದೋಟದಲ್ಲಿ ಕುಳಿತು ಕೊಂಡೆವು. ಕುಶಲ ಸಮಾಚಾರಗಳಾದವು. ಆಗ ನನಗೆ ಯಾವುದನ್ನೂ ಚಿಂತಿಸದೇ ನಿರ್ಭಯ ದಿಂದ ಇರಲು ಹೇಳಿ ತಮ್ಮ ಬರಾಕಿಗೆ ತೆರಳಿದರು. ನಂತರ ಇದೇ ತರಹದ ರಾತ್ರಿ ಭೇಟಿಗಳು ನಿತ್ಯದ ಮಾತಾದವು.

ಮೊದಮೊದಲು ಅವರೊಂದಿಗೆ ಮಾತಾಡು ವುದಕ್ಕೆ ನನಗೆ ಭಯವಾಗುತ್ತಿತ್ತು. ಆದರೆ ಅವ ರಿಗೆ ನನ್ನ ಮೇಲೇನೋ ವಾತ್ಸಲ್ಯ. ಹೀಗಾಗಿ ಭೀತಿ ಮಾಯವಾಗಿತ್ತು. ಪ್ರತಿ ಭೇಟಿಯಲ್ಲೂ ಅನೇಕ ವಿಷಯಗಳ ಚರ್ಚೆಮಾಡುತ್ತಿದ್ದೆವು. ಹೀಗಾಗಿ ಅವರ ವ್ಯಕ್ತಿತ್ವದ ಕೆಲ ಮುಖಗಳ ಪರಿಚಯ ನನಗಾಯಿತು. ಮಹಾತ್ಮಾಜಿಯ ಬಗ್ಗೆ ಇವರಿಗೆ ಪೂಜ್ಯಭಾವವೇ ಇತ್ತು. ಆದರೂ ಅಹಿಂಸಾ ಮಾರ್ಗದಲ್ಲಿ ಇವರಿಗೆ ನಂಬಿಕೆಯಿರಲಿಲ್ಲ. ಉಗ್ರ ಗಾಮಿಯಾಗಿದ್ದ ಸುಭಾಷರಲ್ಲಿ ಕ್ರಾಂತಿ ಪ್ರಜ್ವಲಿ ಸುತ್ತಿತ್ತು. "ಅಹಿಂಸಾ ಮಾರ್ಗದಿಂದ ಬಾಪೂಜಿ ನಮ್ಮ ಕ್ರಾಂತಿಕಾರರನ್ನು ಬುದ್ಧನ ಯುಗಕ್ಕೆ ಕರೆ ದೊಯ್ಯುತ್ತಿದ್ದಾರೆ" ಎಂದಿದ್ದರು ಒಂದು ಸಲ. ಕೆಲವು ಸಲವಂತೂ ಮುಖಂಡರ ಗುಣಾವಗುಣಗಳ ವಿಮರ್ಶೆ ನಡೆಯುತ್ತಿತ್ತು. "ಒಳ್ಳೆಯ ಕೆಲಸ ಗಾರರು ಬೇಕಷ್ಟು ಜನ ಸಿಗುತ್ತಾರೆ. ಆದರೆ ಒಳ್ಳೆಯ ಮುಂದಾಳು ಸಿಗುವುದು ಬಲು ದುಸ್ತರ," ಎಂದು ಅವರು ಹೇಳಿದ ಮಾತು ನನಗಿಂದಿಗೂ ನಿಜ ಅನ್ನಿಸುತ್ತಿದೆ.

ನಾನು ಅವರನ್ನು ಕೇವಲ ರಾಜಕೀಯ ಮುಂದಾಳು ಎಂದು ತಿಳಿದಿದ್ದೆ. ಆದರೆ ಅರ ವಿಂದ ಘೋಷರು ರಾಜಕೀಯದಿಂದ ಆಧ್ಯಾ ತ್ಮಿಕ ಮಾರ್ಗಕ್ಕಿಳಿದಂತೆ ನೇತಾಜಿ ಆಧ್ಯಾತ್ಮಿಕ ದಿಂದ ರಾಜಕೀಯ ಅದರಲ್ಲೂ ಕ್ರಾಂತಿಯ ಮಾರ್ಗಕ್ಕಿಳಿದಿದ್ದರೆಂಬುದನ್ನು ಅರಿತ ಮೇಲೆ ಬಹಳ ಅಚ್ಚರಿಪಟ್ಟೆ. ಯಾಕೆಂದರೆ ಎಲ್ಲ ಮುಗಿದ ಮೇಲೆ ಆಧ್ಯಾತ್ಮಿಕ್ಕಿಳಿಯುವುದು ವಾಡಿಕೆ. ಇಲ್ಲಿ ನೋಡಿದರೆ ನೇತಾಜಿ ಮೊದಲೇ ಆ ಅವಸ್ಥೆಯನ್ನು ದಾಟಿ ಬಂದವರಾಗಿದ್ದರು! "ಸತ್ತು ಸ್ವರ್ಗ ಸೇರುವುದಕ್ಕಿಂತ ಇದ್ದು ಸ್ವಾತಂತ್ರ್ಯ ಪಡೆಯುವುದು ಶ್ರೇಯಸ್ಕರ"ವೆಂಬುದು ಅವರು ಆಗಾಗ ಹೇಳುತ್ತಿದ್ದ ಮಾತು.

ಸಹಕಾರಿಗಳ ಬಗ್ಗೆ ಅವರು ತುಂಬ ಸಹೃದ ಯತೆಯಿಂದ ವರ್ತಿಸುತ್ತಿದ್ದರು. ಅಕೋಲಾ ಜೇಲಿನಿಂದ ಇಲ್ಲಿಗೆ (ಶಿವನಿ) ತರಲಾಗಿದ್ದ ಮಧ್ಯ ಪ್ರದೇಶದ ಮುಖಂಡರಲ್ಲಿ ಪೂನಮಚಂದ ರಾಕಾ ಎಂಬ ಒಬ್ಬ ಶ್ರೀಮಂತ ವ್ಯಾಪಾರಿ ಯಿದ್ದರು. ಈ ತಾತ್ವಿಕ-ಸಾತ್ವಿಕರನ್ನು 'ಬಿ' ದರ್ಜೆ ಕೈದಿಯನ್ನಾಗಿಸಿದ್ದರೂ ಪೂನಮಚಂದರು ಸ್ವಾತಂತ್ರ್ಯಯೋಧರಲ್ಲಿ ಯಾವುದೇ ಭೇದ ಭಾವವಿರಕೂಡದೆಂದು 'ಸಿ' ದರ್ಜೆಯ ಕೈದಿ ಗಳಿಗೆ ನೀಡಲಾಗುತ್ತಿದ್ದ ಆಹಾರ ಮತ್ತು ಸನ



"ಎಲ್ಲಾ ಪಕ್ಷಗಳಲ್ಲೂ ಸೇವೆ ಸಲ್ಲಿಸೋ ಮೂಲಕ ಸ್ವಾತಂತ್ರ್ಯವನ್ನ ಸದುಪಯೋಗಪಡಿಸಿಕೊಂಡ್ರೂ ಜನಾ 'ಪಕ್ಷಾಂತರಿ' ಇನ್ನಿಗೆ ಅಂತ ಕೆಟ್ಟ ಹೆಸ್ರು ಕೊಟ್ಟು ಬಿಟ್ಟಿದ್ದಾರೆ."



"ಉದ್ಘಾಟನೆಗಾಗಿ ನ್ಯಾಯ ಸಚಿವರು ಆಗಮಿಸ ಬೇಕಿತ್ತು. ಆದರೆ ಪ್ರಮಾದವಶಾತ್ ಅವರಿಂದು ಬಾತ್‌ರೂಮಲ್ಲಿ ಜಾರಿ ಬಿದ್ದು ಸೊಂಟ ಮುರಿ ಕೊಂಡಿದ್ದರಿಂದ..."

ಲತ್ತುಗಳನ್ನೇ ತೆಗೆದುಕೊಳ್ಳುತ್ತಿದ್ದರು. ಒಮ್ಮೆ ಅವರಿಗೆ ವಿಷಮ ಜ್ವರ ಬಂದವು. ಇದು ಬೋಸ ರಿಗೆ ತಿಳಿಯಿತು. ಜೇಲಿನ ಅಧಿಕಾರಿಗಳಿಗೆ ತಿಳಿದರೂ ಸರಿಯಾದ ಔಷಧೋಪಚಾರವಾಗಲಿಲ್ಲ. ಹೀಗಾಗಿ ಬೋಸರು ಅಧಿಕಾರಿಗಳನ್ನು ಕರೆಯಿಸಿ ತರಾ ಟೆಗೆ ತೆಗೆದುಕೊಂಡರು. ಮರುನಿಮಿಷದಲ್ಲಿಯೇ ಪೂನಮುಚಂದರಿಗೆ ಪ್ರತ್ಯೇಕ ಕೋಣೆ, ಔಷ ಧೋಪಚಾರ ಮತ್ತು ಡಾಕ್ಟರುಗಳ ವ್ಯವಸ್ಥೆ ಯಾಯಿತು. ಬೋಸರು ನಿತ್ಯ ಸಂಜೆ–ಮುಂಜಾನೆ ಪೂನಮುಚಂದರ ಬಳಿ ಹೋಗಿ ಸ್ವಲ್ಪ ಹೊತ್ತು ಮಾತಾಡಿ ಹೋಗುತ್ತಿದ್ದರು.

ನೇತಾಜಿ ಒಂದು ನಿಮಿಷವನ್ನೂ ವ್ಯರ್ಥ ಕಳೆ ಯುತ್ತಿರಲಿಲ್ಲ. ಸದಾ ಸ್ವಾಧ್ಯಾಯ ಇಲ್ಲದೆ ದೇಶದ ಬಗ್ಗೆ ಚಿಂತನೆಯಲ್ಲಿಯೇ ಕಳೆಯುತ್ತಿದ್ದರು. ಅಕೋಲಾ ಜೇಲಿನಿಂದ 'ಬಿ' ದರ್ಜೆಯ ರಾಜಕೀಯ ಕೈದಿಗಳ ಗುಂಪು ಇಲ್ಲಿಗೆ ಬಂದ ನಂತರವಂತೂ ಜೇಲಿನ ಸ್ವರೂಪವೇ ಬದಲಾಗಿತ್ತು. ಎಲ್ಲರೂ ಬೋಸರ ಕೊಠಡಿಯಲ್ಲಿ ಒಂದೆಡೆ ಸೇರಿ ನಿತ್ಯ ಚರ್ಚೆ ನಡೆಸುತ್ತಿದ್ದರು.

ನನ್ನ ಜತೆಗಿದ್ದ ಶೀಲ ವಕೀಲರ ದಂಡದ ಹಣ ವಸೂಲಾದ್ದರಿಂದ ಅವರನ್ನು ಅವಧಿಗೆ ಮುಂಚೆಯೇ ಬಿಟ್ಟು ಬಿಟ್ಟರು. ನಾನು ಏಕಾಕಿಯಾದೆ ಈಗ ಬೋಸರೆ ನನಗೆ ಆಸರೆಯಾದರು. ನಿತ್ಯದ ವರ್ತಮಾನಪತ್ರ ಓದಲು. ನಾನು ಅವರ ಬಳಿ ಹೋಗುತ್ತಿದ್ದೆ. ಅವರು ತಮ್ಮ ಬರಾಕಿನೆದುರು ಒಂದು ಪುಟ್ಟ ಮೈನಾ ಹಕ್ಕಿಯನ್ನು ಸಾಕಿದ್ದರು. ಸಂಜೆಯ ವೇಳೆಯಲ್ಲಿ ಅದರೊಂದಿಗೆ ಆಟವಾ ಡುತ್ತಿದ್ದರು. ಆ ವೇಳೆಗೆ ನಾನೂ ಅವರೊಂದಿಗಿರು ತ್ತಿದ್ದೆ. ಬಂಗಾಲಿ ಭಾಷೆಯ ಕೆಲ ಶಬ್ದಗಳನ್ನು ಮೈನಾಕ್ಕೆ ಕಲಿಸುತ್ತಿದ್ದರು. ಒಂದು ದಿನ ಎಷ್ಟು ಪ್ರಯತ್ನಿಸಿದರೂ ಅದು ಮಾತಾಡಲೇ ಇಲ್ಲ. ಹತ್ತಿರವೇ ಕುಳಿತಿದ್ದ ಶರಚ್ಚಂದ್ರರು ಚೇಷ್ಟೆಗೆ "ಬದ್ಮಾಷ್" ಎಂದರು. ಕೂಡಲೇ ಮೈನಾ ಅದನ್ನೇ ಪುನರುಚ್ಚರಿಸಿದಾಗ ಬೋಸರು ಮನದಣಿ ನಕ್ಕು ಬಿಟ್ಟರು.

ನನ್ನ ಕೈಗಡಿಯಾರವನ್ನು ಲಿಲಾವು ಮಾಡಿ ಬಂದ ಹಣವನ್ನು ದಂಡದ ಹಣವೆಂದು ಭರ್ತಿ ಮಾಡಿಕೊಂಡು ನನ್ನನ್ನೂ ಅವಧಿಗೆ ಮುನ್ನ ಬಿಡು ಗಡೆ ಮಾಡಿದರು. ಬೋಸರು ಬಿಡುಗಡೆಯಾಗುವ ಮುನ್ನ ತಮ್ಮನ್ನು ಭೇಟಿಯಾಗಲು ನನಗೆ ಹೇಳಿ ದ್ದರಾದರೂ–ಜೇಲಿನ ಅಧಿಕಾರಿಗಳು ಬಿಡುಗಡೆಯ ವಿಷಯವನ್ನು ನನಗೆ ಉಪಾಯದಿಂದ ಹೊರ ಕರೆ ತಂದ ನಂತರವೇ ತಿಳಿಸಿದ್ದರಿಂದ–ಭೇಟಿಯಾಗಲು ಆಗಲೇ ಇಲ್ಲ. ನಂತರ ಅವರನ್ನು ಕಾಣುವ ಯೋಗವೇ ಬರಲಿಲ್ಲ.

✡



ಆಲ್ಬರ್ಟ್ ಐನ್‌ಸ್ಟೈನರ ಮಾನವೀಯ ಮುಖ

ಆಯ್ಕೆ ಮತ್ತು ಸಂಪಾದನೆ : ಹೆಲನ್ ಡ್ಯೂಕಾಸ್
ಮತ್ತು ಬನೇಶ್ ಹಾಫ್‌ಮನ್
ಅನುವಾದ ಸಂಗ್ರಹ : ಜಿ. ಟಿ. ನಾರಾಯಣರಾವ್

ಆಲ್ಬರ್ಟ್ ಐನ್‌ಸ್ಟೈನರ ಮಾನವೀಯ ಮುಖ*

ಆಲ್ಬರ್ಟ್ ಐನ್‌ಸ್ಟೈನರನ್ನು ಈ ಯುಗದ ವಿಜ್ಞಾನಿಯೆಂದು ಜಗತ್ತೆಲ್ಲ ಗುರುತಿಸುತ್ತದೆ. ಆದರೆ ಈ ಮಹಾವಿಜ್ಞಾನಿಗೆ ಇನ್ನೊಂದು ಮುಖವೂ ಇದೆ. ಅದುವೇ ಅವರಲ್ಲಿಯ ಮಾನವೀಯತೆ. ವಿಶ್ವವನ್ನು ಅವರು ಕಂಡುದು ಬರಿ ಭೌತ ವಿಜ್ಞಾನಿಯ ಕಂಗಳಿಂದಲ್ಲ. ಮನುಷ್ಯ ಸಹಜವಾದ ಕುತೂಹಲ, ದಯೆ, ಹೃದಯ ವೈಶಾಲ್ಯ, ಮೊದಲಾದ ಶ್ರೇಷ್ಠ ಗುಣಗಳ ಸಾಕಾರ ಮೂರ್ತಿಯಾಗಿದ್ದ ಅವರು ತಮ್ಮ ಜೀಮಾನವಿಡಿ ಮಾಡಿದ ಪತ್ರವ್ಯವಹಾರದ ಸಂಗ್ರಹವೇ ಅಮೂಲ್ಯವಾದದ್ದಿದೆ. ಐನ್‌ಸ್ಟೈನ್ ಜನ್ಮಶತಾಬ್ದಿಯ ಸಂದರ್ಭದಲ್ಲಿ ಹೆಲೆನ್ ಡ್ಯೂಕಾಸ್ ಮತ್ತು ಡಾ. ಬನೆಶ್ ಹಾಫ್‌ಮನ್ ಅವರು ALBERT EINSTEIN–THE HUMAN SIDE ಎಂಬ ಗ್ರಂಥವನ್ನು ಐನ್‌ಸ್ಟೈನರ ಆಯ್ದ ಪತ್ರಗಳ ಸಂಗ್ರಹರೂಪದಲ್ಲಿ ಹೊರತಂದರು. ಅದರ ಕನ್ನಡ ಅನುವಾದವನ್ನು ಜಿ. ಟಿ. ನಾರಾಯಣರಾಯರು 'ಆಲ್ಬರ್ಟ್ ಐನ್‌ಸ್ಟೈನರ ಮಾನವೀಯ ಮುಖ' ಎಂಬ ಪುಸ್ತಕ ರೂಪದಲ್ಲಿ ೧೯೮೧ರಲ್ಲಿ ಪ್ರಸಿದ್ಧಿಸಿದ್ದಾರೆ. ಅದರ ಸಂಗ್ರಹವೇ ಈ ಸಲದ ಪುಸ್ತಕ ವಿಭಾಗ.

ಆಲ್ಬರ್ಟ್ ಐನ್‌ಸ್ಟೈನ್ ಬರೆದ ಪತ್ರಗಳ ಪೈಕಿ ಒಂದರಲ್ಲಿ ಈ ಮಾತಿದೆ "ಒಬ್ಬ ಏನಾಗಿದ್ದಾನೆ ಮತ್ತು ಇತರರು ಒಬ್ಬನ ಬಗ್ಗೆ ಏನು ಯೋಚಿಸುತ್ತಾರೆ– ಅಥವಾ ಕನಿಷ್ಠ ಪಕ್ಷ ತಾವು ಏನು ಯೋಚಿಸುತ್ತೇವೆಂದು ಹೇಳುತ್ತಾರೆ ಇವುಗಳ ನಡುವಿನ ಅಗಲು ಬಲು ಅಗಲವಾದದ್ದು. ಆದರೆ ಇದನ್ನ ಆತ ಸುಹಾಸಪ್ರಜ್ಞೆಯಿಂದ ಸ್ವೀಕರಿಸಬೇಕಾಗುತ್ತದೆ." ಐನ್‌ಸ್ಟೈನರ ಲೇಖನಗಳಿಂದ ಉದ್ಧರಿಸಿರುವ ಪ್ರಕೃತ ಸಂಚಯದಲ್ಲಿ ಅವರ ವಿನಯಶೀಲತೆ ಮತ್ತು ಸುಹಾಸಪ್ರಜ್ಞೆ ಮಾತ್ರವಲ್ಲ, ದಯಾರ್ದ್ರತೆ, ಸಂವೇದನಶೀಲತೆ ಮತ್ತು ಧೀಶಕ್ತಿ ಕೂಡ ಎದ್ದು ಕಾಣುತ್ತವೆ. ಈ ವಿಜ್ಞಾನೇತರ ಉದ್ಧರಣೆಗಳ ಪೈಕಿ ಹೆಚ್ಚಿನವು ಈ ತನಕ ಪ್ರಕಟವಾಗದವು. ಇವು ನಮ್ಮನ್ನು ಸಾಚಿಸಿದ್ಧ ವಿಜ್ಞಾನಿಯ (stereotyped scientist) ತೋರ್ಕೆ ಪ್ರತಿಬಿಂಬದಿಂದ ಇಲ್ಲವೆ ಆತನ ಸುತ್ತ ಮನಸೋಇಚ್ಛೆ ಕಂಚಿಸಲಾದ ಐತಿಹ್ಯದ ಮಿಥ್ಯಾಚಿತ್ರದಿಂದ ಬಲು ದೂರ ಒಯ್ದು ನೈಜ ಮಾನವನ ಸಮೀಪಕ್ಕೆ ತರುತ್ತವೆ.

ಪ್ರಪಂಚಪ್ರಸಿದ್ಧ ವ್ಯಕ್ತಿಗಳಿಗೆ ಐನ್‌ಸ್ಟೈನ್ ಎಷ್ಟು ಲವಲವಿಕೆಯಿಂದ ಕಾಗದ ಬರೆದರೋ ಅಷ್ಟೇ ಲವಲವಿಕೆಯಿಂದ ಸಾಧಾರಣ ಜನರಿಗೆ ಕೂಡ ಬರೆದರು. ಇವರ ಪತ್ರಗಳು ಅಪಾರ ವಿಷಯವೈವಿಧ್ಯಯುತವಾಗಿವೆ. ರಟ್ಜರ್ಸ್ ವಿಶ್ವವಿದ್ಯಾಲಯದ ಹತ್ತೊಂಬತ್ತು ವರ್ಷ ವಯಸ್ಸಿನ ವಿಷಣ್ಣ ಮನಸ್ಕ ವಿದ್ಯಾರ್ಥಿಗೆ ಮಾನವ ಜನ್ಮದ ಉದ್ದೇಶ ಕುರಿತು ಬರೆಯುತ್ತಾರೆ. ಮನೋವಿಜ್ಞಾನದ ಸ್ನಾತಕ ವಿದ್ಯಾರ್ಥಿಗೆ ಅಂತರಪಂಥ ವಿವಾಹ ಕುರಿತು ಸಲಹೆ ನೀಡುತ್ತಾರೆ. ವೈಯಕ್ತಿಕ ದೇವರ ಅಸ್ತಿತ್ವದ ಬಗ್ಗೆ ಇವರಿಗೆ ನಂಬಿಕೆ ಇದೆಯೇ ಎಂಬುದಾಗಿ ಕೊಲರ‍್ಯಾಡೋದಿನ ಒಬ್ಬ ಬ್ಯಾಂಕರ್ ಕೇಳುವ ಪ್ರಶ್ನೆಗೆ ಯುಕ್ತ ಅನುಕ್ರಿಯೆ ವ್ಯಕ್ತಪಡಿಸುತ್ತಾರೆ. ಮತ್ತು ಭೂಮ್ಯಾವರ್ತನೆಯ ದೆಸೆಯಿಂದ ವ್ಯಕ್ತಿ ತಾತ್ಕಾಲಿಕವಾಗಿ ತಲೆಕೆಳಗಾಗುವುದ

*ಪ್ರಕಾಶಕರು : ಡಿ. ವಿ. ಕೆ. ಮೂರ್ತಿ, ಮೈಸೂರು ೫೭೦೦೦೪, ಬೆಲೆ ರೂ. ೮ (೧೯೮೧)

ರಿಂದ ಆತ ಪ್ರೇಮಪಾಶಬಂಧಿತನಾಗುವುದಾಗಿರಬಹುದೇ ಎಂಬ ಗೊಂದಲದಿಂದ ಬಾಧಿತನಾದ ಒಬ್ಬ ಪತ್ರಕರ್ತನ ಊಹೆಗೆ ಟೀಕು ಬರೆಯುತ್ತಾರೆ. ಮನುಷ್ಯಜೀವಿಗಳನ್ನು ಪ್ರಾಣಿವರ್ಗಕ್ಕೆ ಸೇರಿಸಿದೆ ಎಂಬುದನ್ನು ತಿಳಿದು ಗಾಬರಿಗೊಂಡ ಓಹಿಯೊ ಶಾಲೆಯ ಐದನೇ ಇಯತ್ತೆಯ ವಿದ್ಯಾರ್ಥಿಗಳನ್ನು ಸಮಾಧಾನಪಡಿಸುತ್ತಾರೆ. ಮತ್ತು ವಿಜ್ಞಾನಿಗಳು ಪ್ರಾರ್ಥನೆ ಸಲ್ಲಿಸುವರೇ ಎಂಬುದಾಗಿ ಪ್ರಶ್ನಿಸುವ ನ್ಯೂ ಯಾರ್ಕಿನ ಆರನೇ ದರ್ಜೆಯ ಒಂದು ಮಗುವಿಗೆ ಮನಂಬುಗುವ ಮಾರ್ದರೀತಿ ಬರೆಯುತ್ತಾರೆ.

ಐನ್‌ಸ್ಟೈನರ ಹಲವಾರು ಓಲೆಗಳು, ಮತ್ತು ವಿಶೇಷ ಸಂದರ್ಭಗಳಿಗೋಸ್ಕರ ಬರೆದ ಪ್ರಾಸಪಂಕ್ತಿಗಳು ಅವರ ತುಂಬು ಹೃದಯವನ್ನೂ ರಸಿಕ ಮನೋಧರ್ಮವನ್ನೂ ಹೇಗೆ ತೆರೆದು ತೋರಿಸುವುವೋ ಹಾಗೆ ಹಿಟ್ಲರನ ಜರ್ಮನಿಯಲ್ಲಿ ಸಂಕಟಕ್ಕೀಡಾದ ಜನರಿಗೆ ಅವರು ಬರೆದ ಕಾಗದಗಳು ನಾಟ್ಸೀ ದುಷ್ಕೃತ್ಯಗಳ ಬಗ್ಗೆ ಅವರ ಮನದುಮ್ಮಳವನ್ನೂ ಸಮಂಜಸವಾದ ಕಾರಣದ ಬಗ್ಗೆ ವಿಸ್ಮಯವನ್ನೂ ಎತ್ತಿ ಕಾಣಿಸುತ್ತವೆ. ಬೆಲ್ಜಿಯಮ್ಮಿನ ರಾಣಿ ಎಲಿಸಬೆತ್‌ಳಿಗೆ ಮನಕರಗುವಂತೆ ಬರೆಯಲಾದ ಪತ್ರಮಾಲೆಯಲ್ಲಿ ಸಂಗೀತದ ಬಗ್ಗೆ ಅವರಿಗಿದ್ದ ಒಲವು ಮತ್ತು ಅರಿವು ಪ್ರಧಾನ ಪಾತ್ರ ವಹಿಸುತ್ತವೆ.

ಅದೇ ವೇಳೆಗೆ ತಂಗಿಗೆ ಬರೆದ ಓಲೆಗಳು ಅಣ್ಣನಾಗಿ ಮತ್ತು ಮಗನಾಗಿ ಅವರ ವ್ಯಕ್ತಿತ್ವ ಹೇಗಿತ್ತೆಂಬುದರ ಬಗ್ಗೆ ಸುಳಿವು ನೀಡುತ್ತವೆ.

ಈ ಪುಸ್ತಕದಲ್ಲಿ ಉಲ್ಲೇಖಿಸಿರುವ ಹೆಚ್ಚಿನ ವಸ್ತು ಐನ್‌ಸ್ಟೈನ್ ಪತ್ರಾಗಾರದ ಕೊಡುಗೆ. ಅದನ್ನಿಲ್ಲಿ ಆವಶ್ಯಕ ಹಿನ್ನೆಲೆ ಮಾಹಿತಿಯನ್ನು ಆಗತ್ಯವೆನಿಸುವಷ್ಟು ಒದಗಿಸುವ ಮತ್ತು ಐನ್‌ಸ್ಟೈನ್ ವ್ಯಕ್ತಿತ್ವದ ವಿವಿಧ ಎಳೆಗಳನ್ನು ಒಟ್ಟುಗೂಡಿಸಿ ಆ ಅಸಾಧಾರಣ ಮಾನವಪುಂಗವನ ಬಗ್ಗೆ ಅಪೂರ್ವ ಒಳನೋಟವೀಯಬಲ್ಲ ಒಂದು ಉಲ್ಲಾಸದಾಯಕ ಮತ್ತು ಚಿಂತನಪ್ರೇರಕ ಪುಸ್ತಕವಾಗಿ ರೂಪಿಸುವ ನಿರೂಪಣಾತ್ಮಕ ಕಸೂತಿಯಾಗಿ ನೇಯಲಾಗಿದೆ.

ಐನ್‌ಸ್ಟೈನರ ಮೊದಲ ಜೀವನ ಚರಿತ್ರಕಾರರ ಪೈಕಿ ಒಬ್ಬರಾದ ಕಾರ್ಲ್ ಸೀಲಿಗ್ ೧೯೫೨ರ ಬೇಸಗೆಯಲ್ಲಿ ಅವರಿಗೊಂದು ಕಾಗದ ಬರೆದು ಅವರ ಪ್ರಥಮ ಗೌರವ ಡಾಕ್ಟೊರೇಟ್ ಪದವಿ ಬಗ್ಗೆ ವಿವರ ಕೇಳಿದ್ದರು. ಇದಕ್ಕೆ ಉತ್ತರ ಬರೆಯುತ್ತ ಐನ್‌ಸ್ಟೈನ್ ೧೯೦೯ರಲ್ಲಿ ಸಂಭವಿಸಿದ ಘಟನೆಗಳನ್ನು ಪ್ರಸ್ತಾವಿಸಿದರು. ವಿಶೇಷ ಸಾಪೇಕ್ಷತಾಸಿದ್ಧಾಂತವನ್ನು ಇವರು ಅದೇ ನಾಲ್ಕು ವರ್ಷಗಳಷ್ಟು ಹಿಂದೆ ಪ್ರತಿಪಾದಿಸಿದ್ದರೂ ಹೊಟ್ಟೆ ಹೊರೆಯಲು ಇನ್ನೂ ಬರ್ನಿನಲ್ಲಿಯ ಸ್ವಿಸ್ ಏಕಸ್ವ ಕಛೇರಿಯಲ್ಲಿ ದುಡಿಯುತ್ತಿದ್ದರು. ೧೯೦೯ರ ಬೇಸಗೆ. ಕ್ಯಾಲ್ವಿನ್ ಮಹಾಶಯ ಜಿನೀವಾ ವಿಶ್ವವಿದ್ಯಾಲಯವನ್ನು ಸಂಸ್ಥಾಪಿಸಿದುದರ ೩೫೦ನೆಯ ವಾರ್ಷಿಕೋತ್ಸವಾಚರಣೆಯ ಸಂದರ್ಭ. ಆಗ ಆ ವಿಶ್ವವಿದ್ಯಾಲಯ ನೂರಕ್ಕೂ ಮಿಕ್ಕಿ ಗೌರವ ಪದವಿಗಳನ್ನು ಪ್ರದಾನಿಸಿತು. ಐನ್‌ಸ್ಟೈನ್ ಹೀಗೆ ಬರೆದಿದ್ದಾರೆ:

“ಬರ್ನಿನಲ್ಲಿಯ ಏಕಸ್ವ ಕಛೇರಿಯಲ್ಲಿದ್ದ ನನಗೆ ಒಂದು ದಿನ ಹಿರಿ ಲಕೋಟೆಯೊಂದು ಬಂದಿತು. ಅದರೊಳಗಿಂದ ಒಂದು ಸಂಭಾವಿತ ಪತ್ರ ಹೊರಬಿದ್ದಿತು. ಅದರ ಮೇಲೆ ಚಿತ್ರಲಿಪಿಯಲ್ಲಿ (ಇದು ಲ್ಯಾಟಿನ್ನೆಂದೇ* ನನ್ನ ನಂಬಿಕೆ) ಏನೋ ಅಂಕಿತವಾಗಿತ್ತು. ಅದು ನನಗೆ ಸಂಬಂಧಿಸಿದ್ದಲ್ಲ ಮತ್ತು ಏನೂ ಕುತೂಹಲಕಾರಿ ಆದದ್ದಲ್ಲ ಎಂದನಿಸಿದ್ದರಿಂದ ಅದನ್ನು ನೇರ ಕಸದ ಬುಟ್ಟಿಗೆಸೆದೆ. ಮುಂದೆ ತಿಳಿಯಿತು ಅದು ಕ್ಯಾಲ್ವಿನ್ ಉತ್ಸವಗಳಿಗೆ ಬಂದ ಆಮಂತ್ರಣ ಮತ್ತು ನನಗೆ ಜಿನೀವಾ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್ ಪದವಿ ಪ್ರದಾನಿಸಲಿರುವುದರ ಬಗೆಗಿನ ಪ್ರಕಟಣೆ ಎಂದು. **ವಿಶ್ವ

---

* ವಾಸ್ತವವಾಗಿ ಅದು ಚಿತ್ರಲಿಪಿಯಲ್ಲಿ ಮುದ್ರಿಸಿದ್ದ ಫ್ರೆಂಚ್

** ಈ ಆಕರ್ಷಕ ದಾಖಲೆಯಲ್ಲಿ ಗಮನಾರ್ಹ ಮುದ್ರಣ ದೋಷವೊಂದು ನುಸುಳಿತ್ತು. ಇದು ಐನ್‌ಸ್ಟೈನರ ಸುಪ್ತಪ್ರಜ್ಞೆಯ ಮೇಲೆ ಅಚ್ಚೊತ್ತಿ ಅವರ ವರ್ಣನೆಯನ್ನು ಪ್ರಭಾವಿಸಿರಬಹುದು. ಪದವಿ ಆದಾನಕಾರನ ಹೆಸರು Monsieur Einstein ಎಂಬುದರ ಬದಲಾಗಿ Monsieur Tinstein ಎಂದಿತ್ತು.

ವಿದ್ಯಾಲಯದ ಅಧಿಕಾರಿಗಳು ನನ್ನ ಮೌನವನ್ನು ಸರಿಯಾಗಿ ಅರ್ಥಮಾಡಿಕೊಂಡರೆಂಬುದು ಸ್ಪಷ್ಟ. ಹೀಗಾಗಿ ಅವರು ನನ್ನ ಸ್ನೇಹಿತ ಮತ್ತು ವಿದ್ಯಾರ್ಥಿ ಲ್ಯೂಸಿಯನ್ ಚವಾನ್ ಎಂಬಾತನನ್ನು ಆಹ್ವಾನಿಸಿದರು. ಜಿನೀವಾದವನಾದ ಈತ ಆಗ ಬರ್ನಿನಲ್ಲಿ ವಾಸಿಸುತ್ತಿದ್ದ.

"ವಸ್ತುತಃ ನಾನು ಜಿನೀವಾಕ್ಕೆ ತೆರಳುವುದು ಅನಿವಾರ್ಯವೆಂಬ ಕಾರಣವನ್ನು ಈತ ಮುಂದೊಡ್ಡಿ, ಆದರೆ ಇದನ್ನು ಇನ್ನಷ್ಟು ಬಿಡಿಸಿ ಹೇಳದೆ ನನ್ನನ್ನು ಒಪ್ಪಿಸಿದ.

"ಸರಿ, ನಿಶ್ಚಿತ ದಿನದಂದು ನಾನಲ್ಲಿಗೆ ಪಯಣಿಸಿದೆ. ನಾವು ತಂಗಿದ್ದ ಪ್ರವಾಸಿಧಾಮದ ಉಪಾಹಾರಮಂದಿರದಲ್ಲಿ ಅಂದು ಸಂಜೆ ನನಗೆ ಜ್ಯೂರಿಕ್ಕಿನ ಕೆಲವು ಪ್ರಾಧ್ಯಾಪಕರ ಭೇಟಿ ಆಯಿತು... ಅವರ ಪೈಕಿ ಪ್ರತಿಯೊಬ್ಬನೂ ಯಾವ ಘನ ಅರ್ಹತೆಯಿಂದಾಗಿ ತಾನಲ್ಲಿಗೆ ಆಗಮಿಸಿದ್ದೇನೆ ಎನ್ನುವುದನ್ನು ವಿಶದೀಕರಿಸಿದ. ನಾನು ಮೌನಿ ಆಗಿದ್ದೆ. ನನಗೂ ಪ್ರಶ್ನೆ ಎಸೆದರು. ಆದರ ಕಿಂಚಿತ್ತು ಸುಳುಹೂ ತಿಳಿಯದೆಂದು ಅರುಹಿದೆ. ಅಚ್ಚರಿ! ಇತರರಿಗೆ ಅದರ ಬಗ್ಗೆ ಎಲ್ಲವೂ ಗೊತ್ತಿತ್ತು! ಅವರು ಗುಟ್ಟು ರಟ್ಟು ಮಾಡಿದರು. ಮರುದಿನ ನಾನು ಸಾಲಂಕೃತ ವಿದ್ವನ್ಮಣಿಗಳ ಮಹಾಮೆರವಣಿಗೆಯಲ್ಲಿ ಮೆರೆಯಬೇಕಾಗಿತ್ತು. ಆದರೆ ನನ್ನಲ್ಲಿದ್ದುದು ಒಂದು ಸಾದಾ ಮಟ್ಟಾಳೆ ಮತ್ತು ಮಾಮೂಲಿ ಉಡುಪು. ನಾನು ಮೆರವಣಿಗೆಯಿಂದ ಹೊರಗೆ ಉಳಿದಿರುವೆನೆಂಬ ನನ್ನ ಸೂಚನೆಯನ್ನು ಮರು ಮಾತಿಗೆ ಇಂಬು ಇಲ್ಲದಂತೆ ತಳ್ಳಿಹಾಕಿದರು. ಇನ್ನು ಆ ಉತ್ಸವ ಸಮಾರಂಭಗಳು! ನನ್ನ ದೃಷ್ಟಿಯಿಂದ ನಗೆ ತರಿಸುವಂತಿದ್ದುವು.

"ಇಡೀ ಬದುಕಿನಲ್ಲಿ ನಾನೆಂದೂ ಕಂಡರಿಯದಂಥ ಅದ್ದೂರಿ ಗ್ರಾಸಭಕ್ಷಣೆಯೊಂದಿಗೆ ಸಮಾರಂಭ ಕೊನೆಗೊಂಡಿತು. ನನ್ನ ಪಕ್ಕದಲ್ಲಿ ಸುಖಾಸೀನನಾಗಿದ್ದ ಜಿನೀವಾದ ಒಬ್ಬ ಕುಲೀನನನ್ನು ಪ್ರಶ್ನಿಸಿದೆ. 'ಕ್ಯಾಲ್ವಿನ್ ಈಗಲೂ ಇಲ್ಲಿದ್ದಿದ್ದರೆ ಏನು ಮಾಡುತ್ತಿದ್ದ ಗೊತ್ತೇ?' ಆತ ಗೋಣಾಡಿಸಿ ನನ್ನತ್ತ ಕೌತುಕಮಯ ದೃಷ್ಟಿ ಬೀರಿದ. ನಾನೆಂದೆ, 'ಈ ಹೇಯ ಬಕಾಸುರತ್ವಕ್ಕೆ ಶಿಕ್ಷೆಯಾಗಿ ಭೀಕರ ಚಿತೆಯನ್ನು ಭುಗಿಲೆಬ್ಬಿಸಿ ಅದರಲ್ಲಿ ನಮ್ಮೆಲ್ಲರನ್ನೂ ದಹಿಸಿಬಿಡುತ್ತಿದ್ದ.' ಆ ವ್ಯಕ್ತಿ ಚಕಾರ ಉಸುರಲಿಲ್ಲ. ಇದರೊಂದಿಗೆ ಆ ಅವಿಸ್ಮರಣೀಯ ಸಮಾರಂಭದ ಬಗೆಗಿನ ನನ್ನ ನೆನಪು ಮಸುಳುತ್ತದೆ."

*

ಆರೌ ಶಾಲೆಯಲ್ಲಿ ಐನ್‌ಸ್ಟೈನ್ ಫ್ರೆಂಚ್ ಕಲಿತರು. ಆ ಭಾಷೆಯಲ್ಲಿ ಇವರು 'ಅಭ್ಯಾಸ'ವಾಗಿ ಬರೆದ (ಮತ್ತು ಫ್ರೆಂಚ್ ಅಧ್ಯಾಪಕನಿಂದ ತಿದ್ದಲ್ಪಟ್ಟ) ಒಂದು ಪ್ರಬಂಧದ ಹೆಚ್ಚು ಕಡಿಮೆ ಅಕ್ಷರಶಃ ಅನುವಾದವನ್ನು ಇಲ್ಲಿ ಕೊಟ್ಟಿದೆ. ಆಗ ಇವರ ಪ್ರಾಯ ಸುಮಾರು ಹದಿನಾರು ವರ್ಷ. ಪ್ರಬಂಧದ ಶೀರ್ಷಿಕೆ "ಭವಿಷ್ಯದ ಬಗೆಗೆ ನನ್ನ ಯೋಜನೆಗಳು." ಪ್ರಾಯಶಃ ಅಧ್ಯಾಪಕನೇ ಇದನ್ನು ಇಡೀ ತರಗತಿಗೆ ಸೂಚಿಸಿರಬಹುದು:

"ಸುಖಿಯಾದ ಒಬ್ಬ ವ್ಯಕ್ತಿ ವರ್ತಮಾನಕಾಲದ ಬಗೆಗೆ ಅದೆಷ್ಟು ಸಂತುಷ್ಟನಾಗಿರುವನೆಂದರೆ ಅವನೆಂದೂ ಭವಿಷ್ಯವನ್ನು ಕುರಿತು ಹೆಚ್ಚಿನ ಚಿಂತೆಯನ್ನೇ ಹಚ್ಚಿಕೊಳ್ಳುವುದಿಲ್ಲ. ತರುಣರಾದರೋ ದಿಟ್ಟ ಯೋಜನೆಗಳ ಬೆಂಬತ್ತಿ ಸಾಗುವುದೇ ಸದಾ ಅವರ ಪ್ರವೃತ್ತಿ. ತನ್ನ ಆಸೆ ಆಕಾಂಕ್ಷೆಗಳ ಲಕ್ಷ್ಯವೇನು ಎಂಬುದರ ಬಗೆಗೆ ಸಾಧ್ಯವಾಗುವಷ್ಟೂ ನಿಷ್ಕೃಷ್ಟ ಚಿತ್ರ ರೂಪಿಸಿಕೊಳ್ಳಬೇಕಾದದ್ದು ನಿಷ್ಠಾವಂತ ತರುಣನಿಗೆ ಸಹಜವಾದುದೂ ಹೌದು.

"ಪರೀಕ್ಷೆಗಳನ್ನು ಜಯಪ್ರದವಾಗಿ ಅದ್ದು ಮಾಡುವ ಸೌಭಾಗ್ಯ ನನ್ನದಾದರೆ ಆಗ ನಾನು ಜ್ಯೂರಿಕ್ಕಿನ ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ದಾಖಲಾಗುತ್ತೇನೆ. ಅಲ್ಲಿ ನಾಲ್ಕು ವರ್ಷಗಳ ಕಾಲ ತಂಗಿದ್ದು ಗಣಿತವನ್ನೂ ಭೌತವಿಜ್ಞಾನವನ್ನೂ ವ್ಯಾಸಂಗಿಸುತ್ತೇನೆ. ನೈಸರ್ಗಿಕ ವಿಜ್ಞಾನಗಳ ಈ ವಿಭಾಗದಲ್ಲಿ ಇವುಗಳ ಸೈದ್ಧಾಂತಿಕ ಶಾಖೆಗಳನ್ನು ಆಯ್ದುಕೊಂಡು, ಪ್ರಾಧ್ಯಾಪಕನಾಗುವ ಆಸೆ ಇಟ್ಟುಕೊಂಡಿದ್ದೇನೆ.

"ನಾನು ಈ ಯೋಜನೆಯನ್ನು ಆಯಲು ಕಾರಣಗಳಿವು. ಎಲ್ಲಕ್ಕಿಂತ ಮುಖ್ಯವಾದದ್ದೆಂದರೆ ಅಮೂರ್ತ ಮತ್ತು ಗಣಿತೀಯ ಚಿಂತನೆ...

ನನಗಿರುವ ವೈಯಕ್ತಿಕ ಒಲವು, ಮತ್ತು ಕಲ್ಪನಾ ವಿಹಾರ ಹಾಗೂ ಪ್ರಾಯೋಗಿಕ ಕೌಶಲ ಇವುಗಳ ಅಭಾವ. ಇನ್ನು ನನ್ನ ಅಪೇಕ್ಷೆಗಳೂ ಇವೆ. ಅವಾದರೂ ನನ್ನಲ್ಲಿ ಇದೇ ನಿರ್ಧಾರವನ್ನು ಪ್ರಚೋದಿಸಿವೆ. ಇದು ತೀರ ಸಹಜವಾದದ್ದು. ಒಬ್ಬನ ಒಲವು ಸದಾ ಇರುವುದು ಆತ ಉತ್ತಮತೆಯಿಂದ ನಿರ್ವಹಿಸಬಲ್ಲ ಕಾರ್ಯಗಳನ್ನು ಮಾಡುವುದರತ್ತ. ಅಲ್ಲದೆ ವೈಜ್ಞಾನಿಕ ವೃತ್ತಿಯಲ್ಲಿ ಒಂದು ಬಗೆಯ ಸ್ವಾತಂತ್ರ್ಯವಿದೆ. ಇದು ನನಗೆ ಅತಿ ಪ್ರಿಯವಾದದ್ದು."

•

ಐನ್‌ಸ್ಟೈನ್ ಜ್ಯೂರಿಕ್ಕಿನಲ್ಲಿ ವಿದ್ಯಾರ್ಥಿ ಆಗಿದ್ದಾಗ ತಮ್ಮ ತಂಗಿಗೆ ಬರೆದ ಒಂದು ಕಾಗದದಿಂದ (೧೮೯೮) ಆಯ್ದ ಒಂದು ಉದ್ಧರಣೆ:


"ನನ್ನ ಬಡ ತಂದೆತಾಯಿಯರ ದುರವಸ್ಥೆ ನನ್ನನ್ನು ಕಡುವಾಗಿ ಪೀಡಿಸುತ್ತಿದೆ. ಅಲ್ಲದೆ ಪ್ರಾಯಕ್ಕೆ ಬಂದಿರುವ ನಾನು ಅವರಿಗೆ ಯಾವುದೆ ತೆರನಾದ ನೆರವನ್ನೂ ಒದಗಿಸಲಾಗದೆ ನಿಷ್ಕ್ರಿಯಾವಂತನಾಗಿ ನಿಂತಿರುವಂತಾಯಿತಲ್ಲ ಎಂಬುದು ನನ್ನನ್ನು ಇನ್ನಷ್ಟು ಕಟುವಾಗಿ ಕುಟುಕುತ್ತಿದೆ. ನಾನು ನಮ್ಮ ಕುಟುಂಬಕ್ಕೆ ಹೊರೆ ಮಾತ್ರ, ಬೇರೇನೂ ಅಲ್ಲ... ನಿಜಕ್ಕೂ ನಾನು ಹುಟ್ಟದೆ ಇದ್ದಿದ್ದರೆ ಚೆನ್ನಾಗಿತ್ತೋ ಏನೋ. ಕೆಲ ವೇಳೆ ನನಗೆ ನೆಮ್ಮದಿ ನೀಡುವ ಒಂದೇ ಒಂದು ಸಂಗತಿ ಎಂದರೆ ನಾನು ಯಾವಾಗಲೂ ನನ್ನ ಅಲ್ಪ ಸಾಮರ್ಥ್ಯದ ಪರಿಮಿತಿಯಲ್ಲಿ ಸಾಧ್ಯವಾದದ್ದೆಲ್ಲವನ್ನೂ ಮಾಡಿದ್ದೇನೆ, ಮತ್ತು ನನ್ನ ಅಧ್ಯಯನಗಳು ನನಗೆ ನೀಡಬಲ್ಲ ವಿನೋದಗಳ ಹಾಗೂ ವಿಹಾರಗಳ ವಿನಾ ಬೇರೆ ಯಾವುದರಲ್ಲಿಯೂ ಲೋಲುಪನಾಗಲಿಲ್ಲ ಎಂಬ ಅರಿವು ಮಾತ್ರ."

•

ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ಪೂರ್ಣಗೊಂಡ ಅನಂತರದ ದಿನಗಳಲ್ಲಿ, ೧೯೧೮, ಜ್ಯೂರಿಕ್ಕಿನ ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಐನ್‌ಸ್ಟೈನ್ ಬರ್ಲಿನ್ನನ್ನು ತೊರೆದು ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಟಿಗೆ ಪ್ರಾಧ್ಯಾಪಕರಾಗಿ ಮರಳಿಯಾರೇ ಎಂದು ತಿಳಿಯಲು ಸಂಧಾನ ಹೂಡಿತು. ಆಗ ಐನ್‌ಸ್ಟೈನ್ ತಮ್ಮ ತಂಗಿಗೆ ಹೀಗೆ ಬರೆದರು:

"ಬರ್ಲಿನ್ನನ್ನು ಪೂರ್ಣವಾಗಿ ತೊರೆದು ಹೋಗುವಂಥ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳಲಾರೆ. ಇಲ್ಲಿ ಜನ ವರ್ಣನಾತೀತವೆನಿಸುವಷ್ಟು ಕರುಣಾಮಯಿಗಳು ಮತ್ತು ಉಪಕಾರಿಗಳು. ಹದಿನೆಂಟು ವರ್ಷಗಳ ಹಿಂದೆ ನಾನು ಫೆಡರಲ್ ಇನ್‌ಸ್ಟಿಟ್ಯೂಟಿನಲ್ಲಿ ಕನಿಷ್ಠ ದರ್ಜೆಯ ಸಹಾಯಕನಾಗಿ ನೇಮಕ ಪಡೆಯುವುದಾದರೂ ಅದೆಷ್ಟು ಹಿಗ್ಗುತ್ತಿದ್ದೆ! ಆದರೆ ನಾನು ಜಯಶೀಲನಾಗಲಿಲ್ಲ. ಈ ಪ್ರಪಂಚವೊಂದು ಹುಚ್ಚಾಸ್ಪತ್ರೆ. ಇಲ್ಲಿ ಖ್ಯಾತಿಯೇ ಸರ್ವಸ್ವ. ನಿಜ ಸಂಗತಿ ಎಂದರೆ ಇತರ ಮಂದಿ ಕೂಡ ಚೆನ್ನಾಗಿಯೇ ಉಪನ್ಯಾಸವೀಯುತ್ತಾರೆ. ಆದರೆ..."

*



"ಸಭಿಕರಲ್ಲೊಂದು ವಿನಂತಿ. ನನ್ನ ಜೇಬಿನಿಂದ ಪರ್ಸನ್ನು ಅದೃಶ್ಯ ಮಾಡಿದವನು ಅದನ್ನು ಪುನಃ ಜೇಬಲ್ಲಿ ಪ್ರತ್ಯಕ್ಷ ಮಾಡಬೇಕು......"

೧೯೩೫ ಆಗಸ್ಟ್ ೩೧ರಂದು ಪ್ರಿನ್ಸ್‌ಟನ್ನಿನಿಂದ ಐನ್‌ಸ್ಟೈನ್ ತಮ್ಮ ತಂಗಿಗೆ ಬರೆದ ಕಾಗದ. ಭೌತವಿಜ್ಞಾನದ ಸಮಸ್ಯೆಗಳಲ್ಲಿಯೇ ಇವರು ಪೂರ್ಣ ಮಗ್ನರಾಗಿದ್ದರಾದರೂ ಬಾಹ್ಯ ಪ್ರಪಂಚದಲ್ಲಿ ಏನು ಸಂಭವಿಸುತ್ತಿತ್ತು ಎನ್ನುವುದರ ಬಗೆಗೆ ಕುರುಡರೇನೂ ಆಗಿರಲಿಲ್ಲ:

"ನನ್ನ ಸಂಶೋಧನೆಯನ್ನು ಕುರಿತು ಹೇಳುವುದಾದರೆ ಅದರ ಪ್ರಾರಂಭ ಆಶಾದಾಯಕವಾಗಿದ್ದರೂ ಪ್ರಗತಿ ಮಾತ್ರ ಮಂದವಾಗಿದೆ, ಜಿಗುಟಾಗಿದೆ. ಭೌತವಿಜ್ಞಾನದಲ್ಲಿ ನಡೆಯುತ್ತಿರುವ ಮೂಲಭೂತ ಸಂಶೋಧನೆಗಳಲ್ಲಿ ನಾವಿನ್ನೂ ಪರದು ಸ್ಥಿತಿಯಲ್ಲಿಯೇ ಇದ್ದೇವೆ. ಒಬ್ಬಾತ ಅಧಿಕ ಆಶಾಭಾವನೆಯಿಂದ ಪ್ರಯತ್ನಿಸುತ್ತಿರುವ ವಿಷಯದ ಬಗ್ಗೆ ಇತರ ಯಾರಿಗೂ ವಿಶ್ವಾಸವಿರದಂಥ ಪರಿಸ್ಥಿತಿ. ಒಬ್ಬಾತ ಆತನ ಸಮಸ್ತ ಜೀವನವನ್ನು, ಆತ ತೊಲಗಿಹೋಗಲು ಕಾಲ ಕೂಡಿ ಬರುವತನಕವೂ, ನಿರಂತರ ಕರ್ಷಣದಲ್ಲಿಯೇ (tension) ತಳ್ಳುತ್ತಿರುತ್ತಾನೆ. ಆದರೆ ನಾನು ಮಾಡಿರುವ ಕೆಲಸದ ಸಾರಭೂತಾಂಶ ನಮ್ಮ ವಿಜ್ಞಾನದ ಸ್ವೀಕೃತ ಆಧಾರ ವಿಷಯವಾಗಿದೆಯೆಂಬ ಒಂದು ಸಮಾಧಾನ ಮಾತ್ರ ನನಗಿದೆ.

"ವರ್ತಮಾನ ಕಾಲದ ಭಾರೀ ರಾಜಕೀಯ ವ್ಯವಹಾರಗಳು ಎದೆ ಒಡೆಯುವಂತಿವೆ. ಇವುಗಳ ನಡುವೆ ನಮ್ಮ ತಲೆಮಾರಿನ ಒಬ್ಬಾತನಿಗೆ ತಾನು ಪೂರ್ತಿ ಒಂಟಿಗನಾಗಿದ್ದೇನೆಂಬ ಭಾವ ಮೂಡುವುದು ಸಹಜ. ಜನರು ನ್ಯಾಯ ಮತ್ತು ಘನತೆ ಬಗೆಗಿನ ಗಾಢಾಸಕ್ತಿಯನ್ನು ಕಳೆದುಕೊಂಡಿರುವರೋ ನಮ್ಮದಕ್ಕಿಂತ ಮೇಲಣವಾಟ್ಟದ ತಲೆಮಾರುಗಳು ಅಸಾಧಾರಣ ತ್ಯಾಗ ತಪಸ್ಸುಗಳಿಂದ ಗಳಿಸಿದ ಮೌಲ್ಯಗಳನ್ನು ಕಡೆಗಣಿಸಿರುವರೋ ಎಂಬಂತೆ ತೋರುತ್ತಿದೆ...ನಿಜಕ್ಕೂ ಮಾನವೀಯ ಮೌಲ್ಯವೆಲ್ಲವುಗಳ ಅಡಿಪಾಯವಾದರೂ ಏನು? ನೈತಿಕತೆ. ಅಂದಿನ ಆ ಆದಿಮ ದಿನಗಳಲ್ಲಿ ಈ ಸತ್ಯವನ್ನು ಸ್ಪಷ್ಟವಾಗಿ ಗುರುತಿಸಿದ್ದು ನಮ್ಮ ಮೋಸೆಸನ ವಿಶಾಲ ಮಹಾನುಭಾವತೆ. ಇದಕ್ಕೆ ವೈದೃಶ್ಯವಾಗಿ ಇಂದಿನ ಮಂದಿಯನ್ನು ನೋಡು..."

*

ಐನ್‌ಸ್ಟೈನರ ವೈಜ್ಞಾನಿಕ ಅಭಿಪ್ರೇರಣೆಯ (scientific motivation) ಬಗ್ಗೆ ಪ್ರಶ್ನೆ ಕೇಳಿಬಂದಿದ್ದ ಕಾಗದಕ್ಕೆ ಅವರು ೧೯೪೯ ಆಗಸ್ಟ್ ೨೦ ರಂದು ಉತ್ತರವಿತ್ತರು:

"ನಿಸರ್ಗದ ರಹಸ್ಯಗಳನ್ನು ಗ್ರಹಿಸಬೇಕೆಂಬ ಅದಮ್ಯ ದಾಹದಿಂದ ನನ್ನ ವೈಜ್ಞಾನಿಕ ಕಾರ್ಯ ಅಭಿಪ್ರೇರಿತವಾಗಿದೆಯೇ ವಿನಾ ಬೇರಾವ ಭಾವನೆಗಳಿಂದಲೂ ಅಲ್ಲ. ನ್ಯಾಯದ ಬಗೆಗಿನ ನನ್ನ ಪ್ರೇಮ, ಮತ್ತು ಮಾನವನ ಸ್ಥಿತಿಗತಿಗಳ ಬಗ್ಗೆ ಕೊಡುಗೆ ಸಲ್ಲಿಸಲು ನಾನು ನಡೆಸುವ ಹೋರಾಟ ನನ್ನ ವೈಜ್ಞಾನಿಕ ಆಸಕ್ತಿಗಳಿಗಿಂತ ಪೂರ್ತಿ ಸ್ವತಂತ್ರವಾದವು."

*

ಐನ್‌ಸ್ಟೈನ್ ೧೯೨೨ ನವೆಂಬರ್ ೧೧ರಂದು ಬರೆದ ಟಿಪ್ಪಣಿ:

"ವೈಜ್ಞಾನಿಕ ಸಿದ್ಧಾಂತಿಯನ್ನು ಅಸೂಯೆಯಿಂದ ನೋಡಬಾರದು. ಏಕೆಂದರೆ ನಿಸರ್ಗ, ಅಥವಾ ಹೆಚ್ಚು ಸ್ಪಷ್ಟವಾಗಿ ಪ್ರಯೋಗ, ಆತನ ಕಾರ್ಯದ ಬಗೆಗೆ ದಯಾಶೂನ್ಯವಾದ ಮತ್ತು ಅಷ್ಟೇನೂ ಸ್ನೇಹಪರವಲ್ಲದ ನಿಕಷ. ಅದೆಂದೂ ಒಂದು ಸಿದ್ಧಾಂತವನ್ನು 'ಸರಿ' ಎಂದೊಪ್ಪದು. ಅತ್ಯಂತ ಅನುಕೂಲ ಸಂದರ್ಭಗಳಲ್ಲಿ 'ಇರಬಹುದು' ಎನ್ನುತ್ತದೆ. ಹೆಚ್ಚಿನ ಎಲ್ಲ ಸಂದರ್ಭಗಳಲ್ಲಿಯೂ ನೇರವಾಗಿ 'ಇಲ್ಲ' ಎಂದುಬಿಡುತ್ತದೆ. ಯಾವುದೇ ಪ್ರಯೋಗ ಒಂದು ಸಿದ್ಧಾಂತದೊಡನೆ ಹೊಂದಿಕೆಯಾದರೆ ಸಿದ್ಧಾಂತವನ್ನು ಕುರಿತಂತೆ ಇದರ ಅರ್ಥ 'ಇರಬಹುದು,' ಹೊಂದಿಕೆ ಆಗದಿದ್ದರೆ 'ಇಲ್ಲ', ಪ್ರಾಯಶಃ ಪ್ರತಿಯೊಂದು ಸಿದ್ಧಾಂತವೂ ಒಂದಲ್ಲ ಒಂದು ದಿವಸ ಅದರ 'ಇಲ್ಲ'ವನ್ನು ಅನುಭವಿಸಲಿದೆ— ಹೆಚ್ಚಿನ ಸಿದ್ಧಾಂತಗಳು ಧಾರಣೆಯಾದ ತರುಣದಲ್ಲೇ."

*

ಫಿಲಿಪ್ ಫ್ರ್ಯಾಂಕ್ ಎಂಬವರು ಬರೆದಿರುವ ಐನ್‌ಸ್ಟೈನರ ಉತ್ಕೃಷ್ಟ ಜೀವನ ಚರಿತ್ರೆಯನ್ನು ವಿಮರ್ಶಿಸುವ ಸಂದರ್ಭದಲ್ಲಿ ಒಬ್ಬ ವಿಮರ್ಶಕ, ಮ್ಯಾಕ್ಸ್ ಬಾಂಡ್ ಎಂಬ ಲೇಖಕ ಇದೇ ವಿಷಯದ ಮೇಲೆ ಬರೆದಿದ್ದ ಒಂದು ಪುಸ್ತಕದ ಬಗೆಗೆ,

ಮೋಷಯುಕ್ತ ಟೀಕೆ ಎಸೆದಿದ್ದ. ಇದರಿಂದ ಕುಪಿತರಾದ ಬ್ರಾಡ್ ಅವರಿಗೆ ಐನ್‌ಸ್ಟೈನ್ ೧೯೪೯ ಫೆಬ್ರುವರಿ ೨೨ರಂದು ಈ ಮುಂದಿನ ಕಾಗದ ಬರೆದರು:

"The [London] Times Literary Supplement ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಮರ್ಶಾವಲೋಕನದ ಬಗೆಗಿನ ನಿಮ್ಮ ಸಾತ್ವಿಕಾಕ್ರೋಶ ನನ್ನಲ್ಲಿ ಸ್ನೇಹಮಯ [illegible]. ಯಾರೊ ಒಬ್ಬ ವಿಮರ್ಶಕ ತುಣುಕು ಕಾಸಿನ ಆಸೆಗಾಗಿ ಕೇವಲ ಹೊರಚಕ್ಕಳ ಮಾತ್ರ ಕೆರೆದು ಅದರ, ಆಧಾರದ ಮೇಲೆ ಅರ್ಧ ಸತ್ಯವೆಂಬ ಭ್ರಮೆ ತರಿಸುವಂಥ ಏನನ್ನೊ ಗೀಚುತ್ತಾನೆ. ಇದನ್ನು ಯಾರೂ ವಿಶೇಷವಾಗಿ ಗಮನಿಸುವುದಿಲ್ಲ. ಇಂಥ ಕ್ಷುದ್ರ ವಿಷಯವನ್ನು ನೀವಾದರೂ ಗಂಭೀರವಾಗಿ ಪರಿಗಣಿಸಬೇಕೇ? ನನ್ನನ್ನು ಕುರಿತಂತೆ ಈಗಾಗಲೇ ರಾಶಿ ರಾಶಿ ಸುಳ್ಳು ಕಂತೆಗಳೂ ಕುಹಕ ಕೊಂಕುಗಳೂ ಪ್ರಕಟವಾಗಿವೆ. ಕವಡೆ ಕಿಮ್ಮತ್ತನ್ನಾದರೂ ಅವುಗಳಿಗೆ ನಾನು ಕೊಟ್ಟಿದ್ದಿದ್ದರೆ [illegible] ಪಾಲಾಗಿಹೋಗಿರುತ್ತಿದ್ದೆ. ಕಾಲವೆಂಬ ಜಂದರಿ ಮೂಲಕ ಜರಡಿಸಿದಾಗ ಹೆಚ್ಚಿನ ಈ ಮುಖ್ಯ ಸಂಗತಿಗಳು ಕೆಳಸೋರಿ ಕಡಲಿನಾಳದಲ್ಲಿ ಮರೆಯಾಗಿ ಹೋಗುತ್ತವೆ. ಈ ಆಯ್ಕೆಯ ಅನಂತರವಾದರೂ ಉಳಿಯುವುದು ಬಹುತೇಕ ನವಕಲು ನಾಣ್ಯ ಮತ್ತು ಹಳಸಲು ವಸ್ತು!"

•

೧೯೨೦ರ ಅಂದಾಜಿಗೆ ಬರೆಸ ಮಾತು:

"ವಸ್ತುನಿಷ್ಠವಾಗಿ ಅಳೆಯುದಾದರೆ ಒಬ್ಬ ವ್ಯಕ್ತಿ ಅವಿರತ [illegible] ದಿಂದ ಕಸಿದುಕೊಳ್ಳಬಹುದಾದದ್ದು ಅದರ [illegible]. ಆದರೆ ಈ [illegible] ಪ್ರಯತ್ನ ನಮ್ಮನ್ನು ಸ್ವಾರ್ಥಬಂಧನದಿಂದ ವಿಮೋಚನೆಗೊಳಿಸಿ ಪರಮೋತ್ಕೃಷ್ಟ ಹಾಗೂ ಮಹೋನ್ನತ ಪುರುಷರ ಸಂಗಾತಿಗಳಾಗಿ ಮಾಡುತ್ತದೆ."


•

ಪ್ರಿನ್‌ಸ್ಟನ್ನಿನಲ್ಲಿದ್ದ ಐನ್‌ಸ್ಟೈನರಿಗೆ, ೧೯೫೦ರ ಡಿಸೆಂಬರ್ ತರುಣದಲ್ಲಿ, ಹಸ್ತಲಿಖಿತ ಸುದೀರ್ಘ ಪತ್ರವೊಂದು ಬಂದಿತು. ಬರೆದವ ರಟ್ಜರ್ಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿ, ಹತ್ತೊಂಬತ್ತರ ಹರೆಯದವ. "ಮಾನ್ಯರೇ! ನನ್ನ ಪ್ರಶ್ನೆ ಇದು: ಭೂಮಿಯಲ್ಲಿ ಮಾನವನ ಗುರಿ ಏನು?" ಹಣಗಳಿಕೆ, ಕೀರ್ತಿ ಕಾಮನೆ, ಪರೋಪಕಾರ ಮುಂತಾದ ಸಾಧ್ಯ ಉತ್ತರಗಳನ್ನು ನಿರಾಕರಿಸುತ್ತ ಆತ ಬರೆದ "ಪ್ರಾಮಾಣಿಕವಾಗಿ ಹೇಳಬೇಕೇ, ಸ್ವಾಮಿ? ನಾನೇಕೆ ಕಾಲೇಜಿಗೆ ಹೋಗುತ್ತಿದ್ದೇನೆ ಮತ್ತು ಎಂಜಿನಿಯರಿಂಗನ್ನು ವ್ಯಾಸಂಗಿಸುತ್ತಿದ್ದೇನೆ ಎಂಬುದು ಕೂಡ ನನಗೆ ತಿಳಿದಿಲ್ಲ." ಆತನ ಅಭಿಪ್ರಾಯದಂತೆ ಭೂಮಿಯಲ್ಲಿ "ಮಾನವನ ಅಸ್ತಿತ್ವಕ್ಕೆ ಯಾವುದೇ ಗುರಿ ಇಲ್ಲ" ಎಂದಿತ್ತು... ಈ ಕಾಗದ [illegible] ಒಡನೆ ಐನ್‌ಸ್ಟೈನ್ [illegible] ಬರೆದಿದ್ದರು:

"ವ್ಯಕ್ತಿಯ ಅಂತೆಯೇ ಒಟ್ಟಾರೆ ಮಾನವ ಸಮುದಾಯದ ಜೀವನೋದ್ದೇಶವನ್ನು ಅರಸುವ [illegible] ರುವ ಶ್ರದ್ಧೆಯನ್ನು ಮೆಚ್ಚುತ್ತೇನೆ. ನನ್ನ ಅಭಿಪ್ರಾಯದಲ್ಲಿ ಪ್ರಶ್ನೆಯನ್ನು ಈ ರೀತಿ ಕೇಳಿದ್ದಾದರೆ ಅದಕ್ಕೆ [illegible] ಯದು. ಒಂದು ಕ್ರಿಯೆಯ ಉದ್ದೇಶ ಮತ್ತು ಗಮ್ಯದ ಬಗ್ಗೆ ನಮ್ಮ ಮನಸ್ಸಿನಲ್ಲಿರುವ ಅರ್ಥ ಸರಳವಾಗಿ ಈ ಮುಂದಿನ ಪ್ರಶ್ನೆ: ಆ ಕ್ರಿಯೆ [illegible] ನಾಗಿರುವ [illegible] ಕೂಡ [illegible] ಕ್ರಿಯೆಯ 'ಗಮ್ಯ', [illegible] ಗಿಯಾದರೂ, ಸಮಾಜವನ್ನು [illegible] ವ್ಯಕ್ತಿಗಳಿಗಿರುವ ಅಪೇಕ್ಷೆಗಳ ಈಡೇರಿಕೆಯ ಜೊತೆಗೆ ಕೂಡ ಸಂಬಂಧ ಹೊಂದಿದೆ.

"ಒಟ್ಟಾರೆ ಪರಿಗಣಿಸಿದಾಗ ಸಮಾಜದ ಇಲ್ಲವೇ

ಈಗ!
ನಿಮ್ಮ ಉಳಿತಾಯವನ್ನು 6 ವರ್ಷಗಳಲ್ಲಿ ಇಮ್ಮಡಿಗೊಳಿಸಿ



ಅಂಚೆ ಕಚೇರಿ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳು

6ನೇಯ ಮತ್ತು 7ನೇಯ ಮಾಲಿಕೆ

- [illegible] ಬಡ್ಡಿ : ಸರಕಾರ [illegible] ಅತ್ಯಂತ ಹೆಚ್ಚಿನ ದರ ; 6 ವರ್ಷಗಳಲ್ಲಿ ನಿಮ್ಮ ಉಳಿತಾಯವನ್ನು ಇಮ್ಮಡಿಗೊಳಿಸುತ್ತದೆ.
- ಆದಾಯ ತೆರಿಗೆ ವಿನಾಯಿತಿ : ವರ್ಷಕ್ಕೆ ರೂ. 3000 ದವರೆಗೆ ಬಡ್ಡಿಯ ಮೇಲೆ.
- ಸಂಪತ್ತು ತೆರಿಗೆ ವಿನಾಯಿತಿ : ರೂ 1,50,000 ದವರೆಗಿನ ಮೊತ್ತದ ಮೇಲೆ
- [illegible] : [illegible] ಆಧಾರ ಪತ್ರವನ್ನಾಗಿ [illegible]

ವ್ಯಕ್ತಿಯ ಉದ್ದೇಶ ಅಥವಾ ಗಮ್ಯ ಏನೆಂಬು ದಾಗಿ ನೀವು ಕೇಳಿದ್ದಾದರೆ ಈ ಪ್ರಶ್ನೆ ಅರ್ಥ [illegible]ವಾಗುತ್ತದೆ. ಇನ್ನು ಸಾಮಾನ್ಯವಾಗಿ ಜೀವನದ ಉದ್ದೇಶ ಅಥವಾ ಅರ್ಥ ಏನೆಂದು ಕೇಳಿದ್ದಾದರೆ ಈ ಪ್ರಶ್ನೆ ಇನ್ನಷ್ಟು ಅರ್ಥಹೀನವಾಗುತ್ತದೆಂ ಬುದು ಸ್ಪಷ್ಟ. ಏಕೆಂದರೆ ಇವೆಲ್ಲ ಸಂದರ್ಭಗಳ ಲ್ಲಿಯೂ ಈ ಘಟನೆಗಳಿಗೆ ಸಂಬಂಧಿಸಿದಂಥ ಅಪೇಕ್ಷೆಗಳಿರುವ ಒಬ್ಬಾತನನ್ನು ಕಲ್ಪಿಸಿಕೊಳ್ಳು ವುದು ಕಾರಣರಹಿತವಲ್ಲವಾಗಿದ್ದರೆ ಪೂರ್ತಿ ಸ್ವೇಚ್ಛೆ ಆಗಿರುವುದಂತೂ ನಿಜ.

"ಹೀಗಿದ್ದರೂ ನಮ್ಮ ಬದುಕನ್ನು ನಾವು ಹೇಗೆ ಬಾಳಲು ಪ್ರಯತ್ನಿಸಬೇಕು ಎಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳುವುದು ಸಾಮಾನ್ಯ ಯವಾದದ್ದು ಮತ್ತು ಮುಖ್ಯವಾದದ್ದು ಎಂಬು ದನ್ನು ನಮಗೆಲ್ಲರಿಗೂ ಅನ್ನಿಸುತ್ತದೆ. ನನ್ನ ಅಭಿ ಪ್ರಾಯದಲ್ಲಿ ಉತ್ತರವಿದು. ಸಾಧ್ಯವಾಗುವಷ್ಟರ ಮಟ್ಟಿಗೆ ಸಕಲ ಜನರ ಅಪೇಕ್ಷೆ ಮತ್ತು ಅವಶ್ಯ ಕತೆಗಳ ಈಡೇರಿಕೆ ಮತ್ತು ಮಾನವಸಂಬಂಧಗಳಲ್ಲಿ ಸಾಂಗತ್ಯ ಮತ್ತು ಸೌಂದರ್ಯ ಸಂಪಾದನೆ. ಸಾಕಷ್ಟು ಪ್ರಜ್ಞಾಪೂರ್ವಕ ಚಿಂತನೆ ಮತ್ತು ಸ್ವಶಿಕ್ಷಣದಿಂದಲ್ಲಿ ಮಾತ್ರ ಇವು ಕೈಗೂಡು ವುವು, ಅಷ್ಟೆ. ಜ್ಞಾನಿಗಳಾಗಿದ್ದ ಗ್ರೀಕರು ಪ್ರಾಚೀನ - ಪೌರಸ್ತ್ಯ ಋಷಿಗಳೂ ಈ ಅತಿ ಮುಖ್ಯ ಕ್ಷೇತ್ರದಲ್ಲಿ ಇಂದು ನಮ್ಮ ಶಾಲೆ ಮತ್ತು ವಿಶ್ವವಿದ್ಯಾಲಯಗಳಲ್ಲಿ ಜೀವಂತವಾಗಿರು [illegible] ನಿರಾಕರಿಸಲಾಗದ ಸತ್ಯ."

*

ವಿಜಾತೀಯ ತರುಣಿಯಲ್ಲಿ ಅನುರಕ್ತನಾಗಿದ್ದ ಒಬ್ಬ ತರುಣ ಸ್ವಂತ ಗೃಹದಲ್ಲಿ ವಿರೋಧವನ್ನೆದು- ರಿಸಬೇಕಾಯಿತು. ಈತನ ತಂದೆ ತಾಯಿಯರು ಆ ಮದುವೆಯನ್ನು ಮೆಚ್ಚದಿದ್ದರೂ ಸಂಕರ ವಿವಾಹದ ಬಗೆಗೆ ಆತಂಕ ತಳೆದವರಾಗಿ ತಮ್ಮ ಅಭಿಪ್ರಾಯ ಗಳನ್ನು ಖಚಿತವಾಗಿ ಸ್ಪಷ್ಟೀಕರಿಸಿದ್ದರು. ತರು ಣಿಯ ಬಗೆಗಿನ ಪ್ರೇಮ ಒಂದು ಕಡೆ, ತಂದೆ ತಾಯಿಯರನ್ನು ಒಪ್ಪಿಸಿ, ಅವರಿಗೆ ಮನಸ್ಸಿನ ವೇದನೆ ಉಂಟು ಮಾಡಬಾರದೆಂಬ ಅಪೇಕ್ಷೆ ಇನ್ನೊಂದು ಕಡೆ—ಇವೆರಡು ವಿರುದ್ಧ ಬಲಗಳಿಂದ [illegible] ಆ ತರುಣ ಐನ್‌ಸ್ಟೈನರಿಗೆ [illegible] ಬರೆದ([illegible]): [illegible] ಬಾಳಿಗೆ ಕಾಲಿಡಲು ಹಂಬಲಿಸುತ್ತಿರುವಾಗ ಆಸ್ಯ [illegible] ಮೊದಲು ಹೆಂಡತಿಗೆ ಸ್ಥಾನ ಸಲ್ಲಬೇಕೆಂದು ನಂಬುವುದು ಸರಿಯಾದ ಕ್ರಮವಲ್ಲವೆ ? ಐನ್‌ಸ್ಟೈನ್ ಉತ್ತರ ಬರೆದರು:

"ತಮ್ಮ ಮಕ್ಕಳ ಬದುಕಿನ ಸ್ವರೂಪವನ್ನೇ ಬದಲಾಯಿಸಬಲ್ಲ ನಿರ್ಧಾರಗಳ ಮೇಲೆ ತಂದೆ ತಾಯಿಯರು ಪ್ರಭಾವ ಬೀರುವುದನ್ನು ನಾನು ಸ್ವಾಗತಿಸಲಾರೆ. ಇದು ನನ್ನ ಪ್ರಾಮಾಣಿಕ ಅನಿಸಿಕೆ. ಇಂಥ ಸಮಸ್ಯೆಗಳನ್ನು ಒಬ್ಬಾತ ಖುದ್ದು ತಾನೇ ಪರಿಹರಿಸಬೇಕಾಗುತ್ತದೆ. ಈಗ, ನಿಮ್ಮ ತಂದೆ ತಾಯಿಯರಿಗೆ ಪ್ರಿಯವಲ್ಲದ ಒಂದು ನಿರ್ಧಾರ



'ಬಾಡಿ ಬಿಲ್ಡಿಂಗ್'ನ ವಿಚಾರವೋ? ಸ್ಪಷ್ಟ- ವಾಗಿದೆಯಲ್ಲಾ! ಇಲ್ಲಿ ಸೇರಿದ್ಮೇಲೆ ಇಂಪ್ರೂವ್ ಮಾಡ್ಕೊಂಡೆ !

ಈ ಪ್ರಶ್ನೆ ಹಾಕಿಕೊಳ್ಳಬೇಕು. ನಾನು ನನ್ನ ಆಂತರಿಕ ಸಮತೋಲನವನ್ನು ಕಳೆದುಕೊಳ್ಳದೆ ತಂದೆ ತಾಯಿಯರ ಇಚ್ಛೆಗಳಿಗೆ ವಿರೋಧವಾಗಿ ವರ್ತಿಸಬಲ್ಲಷ್ಟು ದೃಢ ಮತ್ತು ಸ್ವತಂತ್ರ ಮನೋಭಾವ ಉಳ್ಳವನೇ? ಇದಕ್ಕೆ ನೀವು ಗಟ್ಟಿ ಉತ್ತರ ಕೊಡಲಾರದವರಾಗಿದ್ದರೆ ನೀವು ಮುಂದಿಡಬೇಕೆಂದಿರುವ ಹೆಜ್ಜೆ ಆ ಹುಡುಗಿಯ ದೃಷ್ಟಿಯಿಂದ ಕೂಡ ಅನಪೇಕ್ಷಣೀಯ. ಇದೊಂದರ ಮೇಲೆಯೇ ನಿಮ್ಮ ನಿರ್ಧಾರ ನಿಂತಿರಬೇಕಾಗಿದೆ."

*

ಐನ್‌ಸ್ಟೈನರಿಗೆ ಪೂರ್ತಿ ಅಪರಿಚಿತನಾಗಿದ್ದ ಆದರೆ ಇವರ ಅಸೀಮ ಅಭಿಮಾನಿಯಾಗಿದ್ದ ಇಪ್ಪತ್ತು ವರ್ಷ ವಯಸ್ಸಿನ ಒಬ್ಬ ವಿದ್ಯಾರ್ಥಿ ಇವರಿಗೊಂದು ಪತ್ರ ಬರೆದು (೮-೧೨-೧೯೫೨) ತನಗೊಂದು ಸಂದೇಶವನ್ನು ಕಳಿಸಬೇಕೆಂದು ಕೋರಿದ್ದ. ಐನ್‌ಸ್ಟೈನ್ ಮರುದಿನವೇ ಉತ್ತರ ಬರೆದರು:

"ಋತದ ಒಂದಿಷ್ಟು ತುಣುಕನ್ನು ಗ್ರಹಿಸುವ ದಿಶೆಯಲ್ಲಿ ಜೀವಮಾನವಿಡೀ ಶ್ರಮಿಸಿದ ಖ್ಯಾತನಿಗೆ ದೊರೆಯಬಹುದಾದ ಅತ್ಯಂತ ಸಂತೃಪ್ತಿದಾಯಕ ಬಹುಮಾನವೆಂದರೆ ಇತರ ಜನ ಆತನ ಕಾರ್ಯವನ್ನು ಸರಿಯಾಗಿ ಅರ್ಥವಿಸಿದ್ದಾರೆ ಹಾಗೂ ಅದರಿಂದ ಸಂತೋಷಪಡೆದಿದ್ದಾರೆ ಎಂದು ತಿಳಿಯುವುದು... ಅನುಭವಜನ್ಯಜ್ಞಾನದ ಆಧಾರವಿಲ್ಲದೆ ಋತದ ಗ್ರಹಿಕೆ ಸಾಧ್ಯವಾಗದೆಂಬುದು ನಿಜ. ಆದರೆ ನಾವು ಇನ್ನಷ್ಟು ಆಳಹೊಕ್ಕು ನಮ್ಮ ಸಿದ್ಧಾಂತಗಳು ಅಧಿಕ ವಿಸ್ತಾರ ಮತ್ತು ಪರಿವ್ಯಾಪ್ತಿ ಗಳಿಸಿದಂತೆಲ್ಲ ಆ ಸಿದ್ಧಾಂತಗಳನ್ನು ನಿರ್ಧರಿಸಲು ಕಡಿಮೆ ಅನುಭವಜನ್ಯಜ್ಞಾನ ಸಾಕಾಗುತ್ತದೆ."

*

ಬರ್ಲಿನ್ ಸಮೀಪದ ಕಾಪುತ್ ಗ್ರಾಮದಲ್ಲಿ ಐನ್‌ಸ್ಟೈನ್ ದಂಪತಿಗಳ ಬೇಸಗೆ ಬಿಡಾರವಿತ್ತು. ಇವರಿಗೆ ಅತಿಪ್ರಿಯವಾದ ನಿವಾಸವಿದು. ಭವಿಷ್ಯದಲ್ಲಿ ನಾಟ್ಸಿಗಳು ಇದನ್ನು ಮುಟ್ಟುಗೋಲು ಹಾಕಿ ವಶಪಡಿಸಿಕೊಳ್ಳುವವರಿದ್ದರು. ಬರಲಿದ್ದ ದುರ್ಘಟನೆಗಳ ಕರಾಳ ಛಾಯೆ ೧೯೩೨ರ ದಿನಗಳಂದೇ ವಿದಿತ್ತು. ಕಾಪುತ್‌ನಲ್ಲಿ ಇವರ ನೆರೆಮನೆಯವರೊಬ್ಬರ ಮಗಳು ಒಂದು ಆಲ್ಬಮನ್ನು ಇಟ್ಟುಕೊಂಡಿದ್ದಳು. ಐನ್‌ಸ್ಟೈನ್ ಅದರಲ್ಲೇನಾದರೂ ಬರೆಯಬೇಕೆಂಬುದು ಅವಳ ಅಪೇಕ್ಷೆ. ೧೯೩೨ರಲ್ಲಿ ಇವರು ಬರೆದ ಸಾಲುಗಳು:

"ಅಯ್ಯಾ, ಯೌವನವೇ, ಸೌಂದರ್ಯ ಮತ್ತು ಸ್ವಾತಂತ್ರ್ಯ ಸಹಿತವಾದ ಜೀವನಕ್ಕಾಗಿ ಹಾತೊರೆದ ಮೊದಲ ತಲೆಮಾರು ನಿನ್ನದಲ್ಲವೆಂಬುದು ನಿನಗೆ ಗೊತ್ತೇ? ನಿನ್ನ ಎಲ್ಲ ಪೂರ್ವಜರೂ ನಿನ್ನಂತೆಯೇ ಭಾವಿಸಿದ್ದರೆಂಬುದು ಮತ್ತು ಆ ಕಾರಣಕ್ಕಾಗಿ, ಕಷ್ಟ ಮತ್ತು ದ್ವೇಷಗಳಿಗೆ ಬಲಿ ಆಗಿದ್ದರೆಂಬುದೂ ನಿನಗೆ ಗೊತ್ತೇ?

"ನೀನು ಮಾನವರನ್ನು ಪ್ರಾಣಿಗಳನ್ನು ಮತ್ತು ಸಸ್ಯಗಳನ್ನು, ಮತ್ತು ನಕ್ಷತ್ರಗಳನ್ನು ಕುರಿತ ಒಲ್ಮೆ ಮತ್ತು ತಿಳಿವಳಿಕೆ ಗಳಿಸಲು ಯಶಸ್ವಿಯಾಗಿ, ಜಗತ್ತಿನ ಪ್ರತಿಯೊಂದು ನಲಿವೂ ನಿನ್ನ ನಲಿವಾದಾಗ, ಮತ್ತು ಪ್ರತಿಯೊಂದು ನೋವೂ ನಿನ್ನ ನೋವಾದಾಗ ಮಾತ್ರ ನಿನ್ನ ಉತ್ಕಟೇಚ್ಛೆಗಳು ಪೂರೈಕೆಯಾಗಬಲ್ಲವು ಎಂಬುದು ಕೂಡ ನಿನಗೆ ಗೊತ್ತೇ? ತೆರೆ ನಿನ್ನ ಕಣ್ಣುಗಳನ್ನು, ಬಿಚ್ಚು ನಿನ್ನ ಹೃದಯವನ್ನು, ಚಾಚು ನಿನ್ನ ಸ್ನೇಹ ಹಸ್ತವನ್ನು ಮತ್ತು ದೂರವಿಡು ನಿನ್ನ ಪೂರ್ವಜರು ಇತಿಹಾಸದಿಂದ ಕಡುದಾಹಿಗಳಂತೆ ಹೀರಿಕೊಂಡ ನಂಜನ್ನು. ಆಗ ಮಾತ್ರ ಸಮಸ್ತಭೂಮಂಡಲವೂ ನಿನ್ನ ಮಾತೃಭೂಮಿ ಆದೀತು, ನಿನ್ನ ಕಾರ್ಯ ಮತ್ತು ಪ್ರಯತ್ನ ಶ್ರೇಯಸ್ಸನ್ನು ಪಸರಿಸಿಯಾವು."

*

ನ್ಯೂ ಯಾರ್ಕ್ ನಗರದ ಸಂಡೇ ಸ್ಕೂಲಿನ ಆರನೆಯ ತರಗತಿಯಲ್ಲಿದ್ದ ಪುಟ್ಟ ಹುಡುಗಿ, ಆಗ ಪ್ರಿನ್ಸ್‌ಟನ್ನಿನಲ್ಲಿದ್ದ ಐನ್‌ಸ್ಟೈನರಿಗೆ, ಕಾಗದ ಬರೆದು (೧೯-೧-೧೯೩೬) ವಿಜ್ಞಾನಿಗಳು ಪ್ರಾರ್ಥನೆ ಸಲ್ಲಿಸುವರೇ ಮತ್ತು ಸಲ್ಲಿಸುವುದಾದಲ್ಲಿ ಯಾವುದನ್ನು ಕುರಿತು ಸಲ್ಲಿಸುವರು ಎಂದು ಕೇಳಿದಳು. ಐನ್‌ಸ್ಟೈನರ ಉತ್ತರ (೨೪-೧-೧೯೩೬):

"ನಿನ್ನ ಪ್ರಶ್ನೆಗೆ ನನ್ನ ಅನ್ನಿಸಿಕೆಗಳನ್ನು ಸಾಧ್ಯವಾದಷ್ಟೂ ಸರಳವಾಗಿ ಬರೆಯಲು ಪ್ರಯತ್ನಿಸಿ

ದ್ದೇನೆ. ಇಲ್ಲಿದೆ ನನ್ನ ಉತ್ತರ. ಪ್ರತಿಯೊಂದು ಘಟನೆಯೂ ನಿಸರ್ಗನಿಯಮಗಳಿಂದ ನಿರ್ಧರಿತವಾಗುವುದೆಂಬ ಭಾವನೆಯನ್ನು ಆಧರಿಸಿ ವೈಜ್ಞಾನಿಕ ಸಂಶೋಧನೆ ನಿಂತಿದೆ. ಏನೇ ಇರಲಿ ಮನುಷ್ಯ ವರ್ತನೆಗಳನ್ನು ಕುರಿತು ಕೂಡ ಅಷ್ಟೇ ನಿಜವಾಗಿದೆ. ಪರಿಸ್ಥಿತಿ ಹೀಗಿರುವಾಗ ಪ್ರಾರ್ಥನೆ ಸಲ್ಲಿಸಿ ಪರಾತ್ಪರ ವಸ್ತುವೊಂದಕ್ಕೆ ನಮ್ಮ ಇಚ್ಛೆಯನ್ನು ನಿವೇದಿಸಿ ಘಟನೆಗಳ ಮೇಲೆ ಪ್ರಭಾವ ಬೀರಬಹುದೆಂಬುದನ್ನು ಒಬ್ಬ ಸಂಶೋಧಕ ವಿಜ್ಞಾನಿ ಗಂಭೀರವಾಗಿ ಏನೂ ಪರಿಗಣಿಸಲಾರ.

"ಆದರೆ ಈ ನಿಯಮಗಳನ್ನು ಕುರಿತ ನಮ್ಮ ವಾಸ್ತವ ಜ್ಞಾನ ಕೇವಲ ಪರಿಪೂರ್ಣ ಮಾತ್ರ ಆಂಶಿಕ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಹೀಗಾಗಿ, ವಸ್ತುತಃ ಮೂಲಾಧಾರವಾದ ಸರ್ವಪರಿಗ್ರಾಹಿ ನಿಸರ್ಗ ನಿಯಮಗಳ ಅಸ್ತಿತ್ವದ ಬಗೆಗಿನ ವಿಶ್ವಾಸವಾದರೂ ಒಂದು ತರಹದ ಭರವಸೆಯ ಮೇಲೆಯೇ ನಿಂತಿರುವುದಾಗಿದೆ. ಇಂತಿದ್ದರೂ ವೈಜ್ಞಾನಿಕ ಸಂಶೋಧನೆಗೆ ಈ ತನಕ ದೊರಕಿರುವ ಯಶಸ್ಸು ಈ ಭರವಸೆಯನ್ನು ಬಲು ಮಟ್ಟಿಗೆ ಸಮರ್ಥಿಸಿದೆ.

"ಇತ್ತ ವಿಜ್ಞಾನದ ಅನ್ವೇಷಣೆಯಲ್ಲಿ ಗಾಢವಾಗಿ ಮಗ್ನನಾಗಿರುವ ಪ್ರತಿಯೊಬ್ಬನಿಗೂ ವಿಶ್ವದ ನಿಯಮಗಳ ಹಿಂದೆ ಒಂದು ಚೇತನ ಸ್ಫುರಿಸುತ್ತಿದೆಯೆಂಬ ಭಾವ ದೃಢಪಡುತ್ತದೆ. ಅದೆಂಥ ಚೇತನ? ಮಾನವನದ್ದಕ್ಕಿಂತ ಅದೆಷ್ಟೋ ಅಧಿಕ ತ್ರಾಣಿ ಚೇತನ! ತೀರ ಪರಿಮಿತ ಸಾಮರ್ಥ್ಯವಂತರಾದ ನಾವು ಮನುಷ್ಯರು ಅದರ ಸಾನ್ನಿಧ್ಯದಲ್ಲಿ ವಿನೀತರಾಗುವುದೊಂದೇ ಶರಣು. ಹೀಗೆ ವಿಜ್ಞಾನದ ಅನ್ವೇಷಣೆ ವಿಶಿಷ್ಟ ಬಗೆಯ ಒಂದು ಧಾರ್ಮಿಕ ಭಾವನೆಯತ್ತ ನಮ್ಮನ್ನು ಒಯ್ಯುತ್ತದೆ. ಈ ಭಾವನೆ ಮುಗ್ಧ ವ್ಯಕ್ತಿಯೊಬ್ಬನ ಧಾರ್ಮಿಕ ಶ್ರದ್ಧೆಗಿಂತ ಪೂರ್ತಿ ಬೇರೆಯೇ ಆದದ್ದು."

▪

ಪ್ರಿನ್ಸ್‌ಟನ್ನಿನಿಂದ ಐನ್‌ಸ್ಟೈನ್ ೧೯೩೫ ಡಿಸೆಂಬರ್ ೨೦ರಂದು ರವಾನಿಸಿದ ಈ ಮುಂದಿನ ಸಂದೇಶ ಸ್ವಯಂಸ್ಪಷ್ಟವಾಗಿದೆ:

"ಪ್ರಿಯ ಮಟ್ಟಾಣಿಗಳೇ! ಕ್ರಿಸ್ಮಸ್ ಜ್ಯೋತಿಯ ಉಜ್ವಲ ವಾತಾವರಣದಲ್ಲಿ ಆನಂದಮಯ ಉತ್ಸವಗಳನ್ನು ಸಂಭ್ರಮದಿಂದ ಆಚರಿಸಲು ಒಂದುಗೂಡಿರುವ ಮಟ್ಟಾಣಿಗಳಾದ ನಿಮ್ಮನ್ನು ಚಿತ್ರಿಸಿಕೊಳ್ಳುವುದು ನನಗೆ ತುಂಬ ಸಂತೋಷದ ಅನುಭವ. ಈ ಉತ್ಸವಗಳ ಮೂಲಕ ನೀವು ಯಾವಾತನ ಜನನವನ್ನು ಆಚರಿಸುತ್ತಿರುವಿರೋ ಆತನ ಬೋಧನೆಗಳನ್ನು ಕೂಡ ಸ್ಮರಿಸಿಕೊಳ್ಳಿ. ಅವು ಅತಿ ಸರಳವಾದವಾದರೂ, ಹೆಚ್ಚು ಕಡಿಮೆ ಈ ಎರಡು ಸಾವಿರ ವರ್ಷಗಳಲ್ಲಿ ಮನುಷ್ಯರ ನಡುವೆ ಅನುಷ್ಠಾನಕ್ಕೆ ಬರುವುದರಲ್ಲಿ ಮಾತ್ರ ವಿಫಲವಾಗಿವೆ. ನಿಮ್ಮ ಒಡನಾಡಿಗಳ ಸಂತೋಷ ಸಂತುಷ್ಟಿಗಳಲ್ಲಿ — ಮನುಷ್ಯನ ವಿರುದ್ಧ ಮನುಷ್ಯನ ಮಾರಕ ಘರ್ಷಣೆಗಳಲ್ಲಿ ಅಲ್ಲ — ಸಾತೃಪ್ತಿ ತಳೆಯಲು ಕಲಿಯಿರಿ. ಈ ಸಹಜ ಮನೋಭಾವವನ್ನು ನಿಮ್ಮೊಳಗೆ ನೀವು ಕಂಡುಕೊಳ್ಳುವಿರಾದರೆ ಆಗ ಬದುಕಿನಲ್ಲಿ ನಿಮಗೆದುರಾಗುವ ಒಂದೊಂದು ಹೆಣ ಹೊರೆಯೂ ಹೂಹಗುರವಾಗಿರುತ್ತದೆ, ಅಥವಾ ಕನಿಷ್ಠ ಸಹ್ಯವಾದರೂ ಆಗಿರುತ್ತದೆ, ಮತ್ತು ನೀವು ನಿಮ್ಮ ಹಾದಿಯನ್ನು ಭಯರಹಿತರಾಗಿ ಸಹನೆಯಲ್ಲಿ ಕಂಡುಕೊಳ್ಳುವಿರಿ, ಮತ್ತು ಎಲ್ಲೆಡೆಗಳಲ್ಲಿಯೂ ಆನಂದವನ್ನು ಪಸರಿಸುವಿರಿ."

•

ನವಜಾತ ಕಲೆಗೆ ಮೀಸಲಾಗಿದ್ದ ಜರ್ಮನ್ ನಿಯತಕಾಲಿಕೆಯೊಂದರ ಸಂಪಾದಕ, ಬರ್ಲಿನ್ನಿನಲ್ಲಿದ್ದ ಐನ್‌ಸ್ಟೈನರಿಗೆ, ೧೯೨೧ ಜನವರಿ ೨೦ರಂದು ಪತ್ರ ಬರೆದು ಯಾವುದೇ ದತ್ತಯುಗಕ್ಕೆ ಸೇರಿದ ಕಲಾಭಿವರ್ಧನೆಗಳಿಗೂ ವೈಜ್ಞಾನಿಕ ಫಲಿತಾಂಶಗಳಿಗೂ ನಡುವೆ ನಿಕಟ ಸಂಬಂಧವಿದೆಯೆಂದು ತನಗೆ ಖಚಿತವಾಗಿ ಮನವರಿಕೆ ಆಗಿದೆಯೆಂದು ತಿಳಿಸಿದ. ಈ ವಿಷಯದ ಮೇಲೆ ತನ್ನ ನಿಯತಕಾಲಿಕೆಯಲ್ಲಿ ಪ್ರಕಟಿಸಲೋಸ್ಕರ ಕೆಲವು ಪರಿಚ್ಛೇದಗಳನ್ನು ಬರೆದು ಕಳಿಸಬೇಕೆಂದು ಅವರನ್ನು ಪ್ರಾರ್ಥಿಸಿದ. "ಕಲಾತ್ಮಕ ಮತ್ತು ವೈಜ್ಞಾನಿಕ ಅನುಭವಗಳಿಗೆ ಸಾಮಾನ್ಯವಾಗಿರುವುದೇನು?" ಎಂಬ ಶೀರ್ಷಿಕೆಗೆ ಉತ್ತರವಾಗಿ ಈ ಮುಂದಿನ ಸೂಕ್ತಿಯನ್ನು ಐನ್‌ಸ್ಟೈನ್



M. K. Publicity

೧೯೨೧ ಜನವರಿ ೨೭ ರಂದು ಬರೆದು ತಿಳಿಸಿದರು:

"ಎಲ್ಲಿ ಪ್ರಪಂಚ ನಮ್ಮ ವೈಯಕ್ತಿಕ ಆಸೆ ಆಕಾಂಕ್ಷೆಗಳ ರಂಗಭೂಮಿ ಆಗುವುದು ಕೈದಾಗುವುದೊ, ಎಲ್ಲಿ ನಾವು ಇದರೆದುರು ಮುಕ್ತ ಜೀವಿಗಳಾಗಿ ಇದನ್ನು ಮೆಚ್ಚುತ್ತ ಪ್ರಶ್ನಿಸುತ್ತ ಮತ್ತು ವೀಕ್ಷಿಸುತ್ತ ನಿಲ್ಲುವೆವೊ ಅಲ್ಲಿ ನಾವು ಕಲೆಯ ಮತ್ತು ವಿಜ್ಞಾನದ ಪ್ರಪಂಚವನ್ನು ಪ್ರವೇಶಿಸುತ್ತೇವೆ. ನೋಡಿದ್ದನೂ ಅನುಭವಿಸಿದ್ದನ್ನೂ ತರ್ಕಶಾಸ್ತ್ರದ ಪರಿಭಾಷೆಯಲ್ಲಿ ಚಿತ್ರಿಸಿದ್ದಾದರೆ ಆಗ ನಾವು ವಿಜ್ಞಾನದಲ್ಲಿ ಉದ್ಯುಕ್ತರಾಗಿರುತ್ತೇವೆ. ಜಾಗೃತ ಮನಸ್ಸಿಗೆ ಅಪ್ರವೇಶ್ಯವಾಗುವ ಅಂತರ್ಬೋಧೆಯಿಂದ ಅರ್ಥಪೂರ್ಣವಾದದ್ದೆಂಬುದಾಗಿ ಪರಿಗಣಿಸಲ್ಪಡುವ ರೂಪಗಳ ಮೂಲಕ ಅದನ್ನು ಸಂವಹಿಸಿದ್ದಾದರೆ ಆಗ ನಾವು ಕಲೆಯಲ್ಲಿ ಉದ್ಯುಕ್ತರಾಗಿರುತ್ತೇವೆ. ವೈಯಕ್ತಿಕ ಕಾಳಜಿ ಮತ್ತು ಸಂಕಲ್ಪಗಳಿಗೆ ಅತೀತವಾದ ಆ ಯಾವುದೋ ಒಂದರ ಬಗೆಗೆ ಸಪ್ರೇಮ ನಿಷ್ಠೆಯೇ ಇವೆರಡಕ್ಕೂ ಸಾಮಾನ್ಯವಾದದ್ದು."

•

ಈ ಮುಂದಿನ ಎರಡು ಸೂಕ್ತಿಗಳನ್ನು ಐನ್‌ಸ್ಟೈನ್ ನ್ಯೂ ಯಾರ್ಕ್ ರಾಜ್ಯದ ಹಟ್ಟಿಂಗ್ಟನ್ನಿನಲ್ಲಿ ಗುರುತು ಹಾಕಿದರು(೧೯೩೭):

"ದೇಹ ಮತ್ತು ಆತ್ಮ ಎರಡು ವಿಭಿನ್ನ ವಸ್ತುಗಳಲ್ಲ, ಬದಲು ಒಂದೇ ವಸ್ತುವನ್ನು ಅರಿಯಲು ಎರಡು ವಿಭಿನ್ನ ಮಾರ್ಗಗಳು ಮಾತ್ರ. ಇದೇ ರೀತಿ ಭೌತವಿಜ್ಞಾನ ಮತ್ತು ಮನೋವಿಜ್ಞಾನ ನಮ್ಮ ಅನುಭವವನ್ನು ವ್ಯವಸ್ಥಿತ ಚಿಂತನೆಯ ಮೂಲಕ ಒಟ್ಟಾಗಿ ಸಂಯೋಜಿಸಲು ಎರಡು ವಿಭಿನ್ನ ಪ್ರಯತ್ನಗಳು ಮಾತ್ರ."

"ರಾಜಕೀಯ ಒಂದು ಲೋಲಕ. ಅನಾಯಕತೆ ಮತ್ತು ದಬ್ಬಾಳಿಕೆ ನಡುವಿನ ಇದರ ತೊನೆತಗಳಿಗೆ ಉರುವಲು ಪೂರೈಕೆ ಆಗುವುದು ಅವಿಚ್ಛಿನ್ನವಾಗಿ ಪುನರುಜ್ಜೀವಿತವಾಗುತ್ತಿರುವ ಭ್ರಮೆಗಳಿಂದ."

•

ಇನ್ನೊಂದು ಸಂದರ್ಭದಲ್ಲಿ ಹೀಗೆ ಬರೆದರು:

"ರಾಷ್ಟ್ರೀಯತೆ ಒಂದು ಶಿಶುರೋಗ. ಇದು ಮಾನವಕುಲದ ದಡಾರ."

"ವ್ಯಕ್ತಿಯ ಅಮರತ್ವದಲ್ಲಿ ನನಗೆ ನಂಬಿಕೆ ಇಲ್ಲ. ನೀತಿಶಾಸ್ತ್ರ ಮಾನವಕುಲಕ್ಕೆ ಮಾತ್ರ ಸಂಬಂಧಿಸಿದ ಕಾಳಜಿ. ಇದಕ್ಕೆ ಬೆಂಬಲವಾಗಿ ಯಾವ ಅತಿಮಾನವ ಅಧಿಕಾರವೂ ಇಲ್ಲವೆಂಬುದಾಗಿ ಭಾವಿಸಿದ್ದೇನೆ."

•

ಅಮೆರಿಕದ ಮೆಕ್‌ಗ್ರಾಹಿಲ್ ಎಂಬ ಹೆಸರಿನ ಪ್ರಕಟಣ ವ್ಯವಸ್ಥೆಯ ಪರವಾಗಿ ಒಬ್ಬ ಅಧಿಕಾರಿ ೧೯೪೮ ಏಪ್ರಿಲ್ ೧ ರಂದು ಐನ್‌ಸ್ಟೈನರಿಗೊಂದು ಕಾಗದ ಬರೆದು, ಸಾಮಾನ್ಯ ವಾಚಕನಿಗಾಗಿ ರಚಿಸಲಾದ ವಿಜ್ಞಾನ ಪುಸ್ತಕಗಳ, ಅಂದರೆ ಜನಪ್ರಿಯ ವಿಜ್ಞಾನ ವಾಙ್ಮಯದ, ಬಗೆಗೆ ಸಾರ್ವತ್ರಿಕವಾಗಿ ಕುದಿಯುತ್ತಿದ್ದ ಆಸಕ್ತಿಯಿಂದ ಹೇಗೆ ಗ್ರಂಥಪಾಲರೂ ಪ್ರಕಾಶಕರೂ ವಿಹ್ವಲರಾಗಿದ್ದರೆಂದು ವಿವರಿಸಿ ಈ ನಿಟ್ಟಿನಲ್ಲಿ ಐನ್‌ಸ್ಟೈನರ ಸಲಹೆ ಕೋರಿದ. ಅದೇ ೩ ರಂದು ಇವರು ಹೀಗೆ ಬರೆದರು:

"ನನ್ನ ಅಭಿಮತದಲ್ಲಿ ಪರಿಸ್ಥಿತಿ ಹೀಗಿದೆ: ಸಾಮಾನ್ಯ ವ್ಯಕ್ತಿಗಾಗಿ ಬರೆಯಲಾದವು ಎನ್ನಲಾದ ಹೆಚ್ಚಿನ ವಿಜ್ಞಾನ ಪುಸ್ತಕಗಳು ಉದ್ದೇಶಿಸುವುದು ಓದುಗನ ಮೇಲೆ ವಿಶೇಷ ಅಚ್ಚೊತ್ತುವುದೇ ವಿನಾ ('ಪರಮಾದ್ಭುತ!' 'ನಾವೆಂಥ ಗಹನ ಪ್ರಗತಿ ಸಾಧಿಸಿದ್ದೇವೆ!' ಇತ್ಯಾದಿ) ಆತನಿಗೆ ವಿಜ್ಞಾನದ ಪ್ರಾಥಮಿಕ ಗುರಿ ಹಾಗೂ ವಿಧಾನಗಳನ್ನು ಸ್ಪಷ್ಟವಾಗಿಯೂ ಸರಾಗವಾಗಿಯೂ ವಿವರಿಸುವುದನ್ನಲ್ಲ. ಬುದ್ಧಿಶಾಲಿಯಾದ ಸಾಮಾನ್ಯ ವ್ಯಕ್ತಿಯೊಬ್ಬ ಇಂಥ ಕೆಲವು ಪುಸ್ತಕಗಳನ್ನು ಓದಲು ಪ್ರಯತ್ನಿಸಿದಾಗ ಆತನಿಗೆ ಪೂರ್ತಿ ಭ್ರಮನಿರಸನವಾಗುತ್ತದೆ. ಆತನ ತೀರ್ಮಾನವಿದು: ನಾನು ಅತಿ ದುರ್ಬಲ ಮನಸ್ಕ, ಅಂದ ಮೇಲೆ ಈ ಪ್ರಯತ್ನವನ್ನು ತೊರೆದುಬಿಡುವುದೇ ಕ್ಷೇಮ. ಇದರ ಜೊತೆಗೆ, ಒಟ್ಟು ವಿವರಣೆ ಬಹುತೇಕ ಭಾವೋದ್ರೇಕಕಾರಿ ಧಾಟಿಯಲ್ಲಿರುವುದಾಗಿ ಇದು ಕೂಡ ಒಬ್ಬ ಸಂವೇದನಶೀಲ ಸಾಮಾನ್ಯ ಮನುಷ್ಯನಲ್ಲಿ ಜುಗುಪ್ಸೆ ಹುಟ್ಟಿಸುತ್ತದೆ.

"ಒಂದು ಮಾತಿನಲ್ಲಿ ಹೇಳುವುದಾದರೆ ತಪ್ಪು ಓದುಗರದಲ್ಲ, ಬದಲು, ಲೇಖಕರದು ಮತ್ತು ಪ್ರಕಾಶಕರದು. ನನ್ನ ಸೂಚನೆ ಇದು: ಬುದ್ಧಿಶಾಲಿ ಹಾಗೂ ವಿವೇಚನಸಾಮರ್ಥ್ಯಯುತ ಸಾಮಾನ್ಯ ವಾಚಕನೊಬ್ಬ ವಿಜ್ಞಾನದ ಮೇಲಿನ ಯಾವುದೇ 'ಜನಪ್ರಿಯ' ಪುಸ್ತಕವನ್ನು ಓದಿ ಮೆಚ್ಚಬಲ್ಲ ಎಂದು ಸ್ಥಾಪನೆ ಆಗುವ ತನಕ ಅದನ್ನು ಪ್ರಕಟಿಸಬಾರದು."

•

ಅತಿಗಹನ ವೈಜ್ಞಾನಿಕ ಪ್ರಾಮುಖ್ಯವಿರುವ ಒಂದು ಭಾವನೆ ತಮಗೆ ಸ್ಫುರಿಸಿದೆ ಎಂದು ಪ್ರಾಮಾಣಿಕವಾಗಿ ನಂಬುತ್ತಿದ್ದ ಅನೇಕ ಮಂದಿಯಿಂದ ಐನ್‌ಸ್ಟೈನರಿಗೆ ರಾಶಿ ರಾಶಿ ಕಾಗದಗಳು ಬರುತ್ತಿದ್ದುವು. ಒಮ್ಮೆ ಇವರ ಸಹನೆಯು ಕೋಡಿ ಬಿರಿದಾಗ ಹೀಗೆ ಮಾರೋಲೆ ಬರೆದರು (೧೦-೭-೧೯೫೨):

"ಜುಲೈ ೭ರ ನಿಮ್ಮ ಕಾಗದಕ್ಕಾಗಿ ವಂದನೆ. ಈ ದೇಶದ ಬುದ್ಧಿವಂತ ಮಂದಿಯಲ್ಲಿ ಪ್ರಚಲಿತವಿರುವ ಎಲ್ಲ ಟೊಳ್ಳು ನಂಬಿಕೆಗಳ ಜೀವಂತ ತೊಟ್ಟಿ ನೀವಾಗಿರುವಂತೆ ತೋರುತ್ತದೆ. ನಾನೇನಾದರೂ ಒಬ್ಬ ನಿರಂಕುಶ ಪ್ರಭುವಾಗಿದ್ದ ಪಕ್ಷ ಈ ಎಲ್ಲ ಮತಿವಿಕಲ್ಪ ಅವಿವೇಕಗಳ ಬಳಕೆಯನ್ನು ರದ್ದುಗೊಳಿಸಿಬಿಡುತ್ತಿದ್ದೆ."

ಐನ್‌ಸ್ಟೈನರ ದೂರ ಸಂಬಂಧಿಯೊಬ್ಬ ಪ್ಯಾರಿಸ್ಸಿನಿಂದ ೧೯೫೦ ಏಪ್ರಿಲ್ ೧೨ರಂದು ಇವರಿಗೊಂದು ಕಾಗದ ಬರೆದು ತನ್ನ ಮಗ ಭೌತ ಮತ್ತು ರಸಾಯನ ವಿಜ್ಞಾನಗಳನ್ನು ವ್ಯಾಸಂಗಿಸುವ ಸಲುವಾಗಿ ಇನ್ನೇನು ವಿಶ್ವವಿದ್ಯಾಲಯವನ್ನು ಪ್ರವೇಶಿಸಲಿರುವನೆಂದೂ ತಮ್ಮ ಕುಟುಂಬದ ಅತ್ಯಂತ ಪ್ರಸಿದ್ಧ ವ್ಯಕ್ತಿಯಾಗಿರುವ ಐನ್‌ಸ್ಟೈನರಿಂದ ನಾಲ್ಕು ಹಿತವಚನ ಪಡೆಯಲು ಉತ್ಸುಕನಾಗಿರುವನೆಂದೂ ತಿಳಿಸಿದ. ಇದಕ್ಕೆ ಮಾರೋಲೆಯನ್ನು ಐನ್‌ಸ್ಟೈನ್ ೧೯೫೦ ಮೇ ೧೮ರಂದು ಬರೆದರು. ಆರಂಭದಲ್ಲಿ ಅಂತ್ಯಪ್ರಾಸವಿರುವ ಒಂದು ಪದ್ಯ:

"ವಸ್ತುಸ್ಥಿತಿಯಂ ಗಮನಿಸಿದೊಡೆ ಬಲು
[illegible]
ನಾನು ಪುರೋಹಿತನಾಗಿರೆ ಕೀಡಿರ್ಪೆನ್
ಮುದದಿಂ ಮಂಗಳ ವಚನಂ.

"ಇದು ಹಾಗಿರಲಿ. ನಿಮ್ಮ ಸಮಾಚಾರ ತಿಳಿದು ನನಗೆ ಸಂತೋಷವಾಗಿದೆ. ಭೌತವಿಜ್ಞಾನದ ಅಧ್ಯಯನ ನಿಮ್ಮ ಮಗನ ಆಸಕ್ತ ಕ್ಷೇತ್ರವೆಂದು ತಿಳಿಯಿತು. ಆದರೆ ಒಬ್ಬಾತ ತೀರ ಮೇಲು ಪದರದ ಫಲಿತಾಂಶಗಳಿಂದ ತೃಪ್ತನಾಗುವುದಿಲ್ಲವಾದಲ್ಲಿ ಇದೊಂದು ಕಠಿಣ ಮಾರ್ಗವೆಂಬುದಾಗಿ ತಿಳಿಸದಿರಲಾರೆ. ಒಬ್ಬನ ಆಂತರಿಕ ತುಮುಲಗಳನ್ನು ಆತನ ಜೀವನವೃತ್ತಿಯಿಂದ ಸಾಧ್ಯವಾಗುವಷ್ಟರ ಮಟ್ಟಿಗೂ ಬೇರ್ಪಡಿಸುವುದು ಅತ್ಯುತ್ತಮವೆಂದು ನನಗನ್ನಿಸುತ್ತದೆ. ಒಬ್ಬನ ದೈನಂದಿನ ಅನ್ನವನ್ನು ಭಗವಂತನ ವಿಶೇಷ ಅನುಗ್ರಹಕ್ಕೆ ಗಂಟು ಹಾಕುವುದು ಒಳ್ಳೆಯದಲ್ಲ."

•

ಇಡಾಹೋ ರಾಜ್ಯದ ಒಬ್ಬ ರೈತ ೧೯೪೭ ಜುಲೈ ೧೬ರಂದು ಐನ್‌ಸ್ಟೈನರಿಗೊಂದು ಕಾಗದ ಬರೆದು ತನ್ನ ಮಗನಿಗೆ ಆಲ್ಬರ್ಟ್ ಎಂದು ಹೆಸರಿಟ್ಟಿರುವುದಾಗಿ ತಿಳಿಸಿದ. ಈ ಅಣುಗ ಬೆಳೆದು ದೊಡ್ಡವನಾಗುತ್ತಿದ್ದಂತೆ ಇವನಿಗೆ ಪ್ರೋತ್ಸಾಹದಾಯಕ 'ತಾಯಿತಿ' ಯಾಗಿ ಉಪಯೋಗಿಸಲು ಅನುಕೂಲವಾಗುವಂತೆ ಐನ್‌ಸ್ಟೈನ್ ನಾಲ್ಕು ನುಡಿಗಳನ್ನು ಬರೆದು ಆಶೀರ್ವದಿಸಬೇಕೆಂದು ಕೋರಿದ. ಇವರು ಬರೆದ ಸಾಲು (೩೦-೭-೧೯೪೭):

"ನಿಜಮೌಲ್ಯವಿರುವ ಯಾವುದೂ ಮಹತ್ವಾಕಾಂಕ್ಷೆಯಿಂದ ಇಲ್ಲವೇ ಕೇವಲ ಕರ್ತವ್ಯಪ್ರಜ್ಞೆಯಿಂದ ಉದ್ಭವಿಸದು, ಬದಲು, ಮನುಷ್ಯರ ಮತ್ತು ವಸ್ತುಗಳ ಬಗೆಗಿನ ಪ್ರೀತಿ ಮತ್ತು ನಿಷ್ಠೆಗಳಿಂದ ಮಾತ್ರ ಹೊಮ್ಮೀತು."

•

ಭಾಗಶಃ ಬ್ರಸ್ಸೆಲ್ಸಿನಲ್ಲಿ ಜಮಾಯಿಸುತ್ತಿದ್ದ ಇತಿಹಾಸಪ್ರವರ್ತಕ ಸಭಾ ಪರಂಪರೆಗಳ ದೆಸೆಯಿಂದಲೂ ಭಾಗಶಃ ಸಂಗೀತ ಸುಖದಲ್ಲಿ ಪಾಲುಗಾರರಾಗಿದ್ದುದರಿಂದಲೂ ಎಲ್ಲವುಗಳಿಗಿಂತ ಮಿಗಿಲಾಗಿ ಪರಸ್ಪರ ಗೌರವಭಾವವಿದ್ದವರಾಗಿದ್ದುದರಿಂದಲೂ ಐನ್‌ಸ್ಟೈನ್, ಮತ್ತು ಬೆಲ್ಜಿಯಮ್ಮಿನ ರಾಜ ಆಲ್ಬರ್ಟ್ ಹಾಗೂ ರಾಣಿ ಎಲಿಜಬೆತ್

ಇವರ ನಡುವೆ ಗಾಢ ಸ್ನೇಹ ಪ್ರವರ್ಧಿಸಿತು.

೧೯೩೩ರ ಪ್ರಥಮ ಪಾದ. ಐನ್‌ಸ್ಟೈನ್ ದಂಪತಿಗಳು ಅಮೆರಿಕದಿಂದ ಯೂರೋಪಿಗೆ ಮರಳಿದರು. ಅದೇ ಸುಮಾರಿಗೆ ನಾಟ್ಸಿಗಳು ಜರ್ಮನಿಯಲ್ಲಿ ಅಧಿಕಾರ ಕಸಿದುಕೊಂಡರು. ಆಗ ಐನ್‌ಸ್ಟೈನ್ ದಂಪತಿಗಳು ಸ್ವಲ್ಪ ಕಾಲ ಬೆಲ್ಜಿಯಮಿನಲ್ಲಿ ತಂಗಿದ್ದು ತಮ್ಮ ಭವಿಷ್ಯವನ್ನು ನಿರ್ಧರಿಸಿದರು. ಮುಂದೆ ಅವರು ಅಮೆರಿಕದ ಪ್ರಿನ್ಸ್‌ಟನ್ನಿನಲ್ಲಿ ಶಾಶ್ವತವಾಗಿ ನೆಲಸಿದರು (೧೯೩೩ ಅಕ್ಟೋಬರ್).

೧೯೩೪ರ ವಸಂತ. ದೊರೆ ಆಲ್ಬರ್ಟ್ ಗಿರಿ ಏರುತ್ತಿದ್ದಾಗ ಕಾಲುಜಾರಿ ಮೃತ್ಯುಕೂಪದಲ್ಲಿ ಸಮಾಧಿಗೊಂಡಿದ್ದ. ಹೊಸ ರಾಣಿ ಆ್ಯಸ್ಟ್ರಿಡ್— ಈಕೆ ಎಲಿಜಬೆತ್‌ಳ ಸೊಸೆ— ಅದೇ ಮುಂದಿನ ವರ್ಷದ ಬೇಸಗೆಯ ಕೊನೆ ದಿನಗಳಂದು ವಾಹನಾಪಘಾತದಲ್ಲಿ ಮಡಿದಿದ್ದಳು. ಬರಸಿಡಿಲಿನಂತೆ ಬಡಿದೆರಗಿದ ಇವೆರಡು ಆಘಾತಗಳು ಎಲಿಜಬೆತ್‌ಳನ್ನು ಪೂರ್ತಿ ಹದಗೆಡಿಸಿ ಭಾವ ಶೂನ್ಯ ಸ್ಥಿತಿಗೆ ಕೆಡೆದುಬಿಟ್ಟಿದ್ದುವು. ಪ್ರಿನ್ಸ್‌ಟನ್ನಿನಿಂದ ಐನ್‌ಸ್ಟೈನ್ ಈಕೆಗೊಂದು ಸಾಂತ್ವನ ಪತ್ರ ಬರೆದರು (೨೦–೩–೧೯೩೬):

"ಪ್ರಿಯ ರಾಣಿ! ಇಂದು ಮೊದಲ ಬಾರಿಗೆ ಎಳೆ ವಸಂತದ ಹೂಬಿಸಿಲು ಎಲ್ಲೆಲ್ಲೂ ನಳನಳಿಸತೊಡಗಿದೆ. ನನ್ನಂಥವರು ವೈಜ್ಞಾನಿಕ ಕಾರ್ಯದಲ್ಲಿ ಪೂರ್ಣ ಮಗ್ನರಾಗಿರುವಾಗ ಲೀನವಾಗುವ ಸ್ವಪ್ನಸದೃಶ ಸಮಾಧಿಸ್ಥಿತಿಯಿಂದ ಈ ಬಿಸಿಲು ನನ್ನನ್ನು ಪ್ರೇರಿದಡವಿ ತಿಳಿದೆಬ್ಬಿಸಿದೆ. ಸಂದ ದಿನಗಳ ಅಧಿಕ ವರ್ಣಮಯ ಮಧುರ ಸ್ಮರಣೆಗಳು ಮರುಕಳಿಸುತ್ತಿವೆ. ಜೊತೆಗೆ ಬ್ರಸ್ಸೆಲ್ಸಿನಲ್ಲಿ ಕಳೆದ ಸವಿ ಗಳಿಗೆಗಳ ಮೃದು ನೆನಪುಗಳು ಕೂಡ.

"ಸ್ವತಃ ಬದುಕುವುದೇ ಹೇಗೆ ನಿಮಗೆ ನರಕಸದೃಶವಾಗಿದೆ ಮತ್ತು ವರ್ಣನಾತೀತ ಕಠೋರ ಕುಠಾರಾಘಾತಗಳಿಂದ ತಾಡಿತರಾಗಿರುವ ನೀವು ಹೇಗೆ ಭಾವಶೂನ್ಯಸ್ಥಿತಿಗೆ ಕೆಡೆದಿರುವಿರಿ ಎಂಬ ಸಂಗತಿಗಳನ್ನು ಶ್ರೀಮತಿ ಬರ್ಜಾನ್ಸ್ಕೀ ತಿಳಿಸಿದ್ದಾರೆ.

"ಪರಿಸ್ಥಿತಿ ಅತಿ ದಾರುಣ ನಿಜ. ಹೀಗಿದ್ದಾಗ್ಯೂ ಚಟುವಟಿಕೆಯ ಮತ್ತು ಸಂತಸದ ಬದುಕುಬಾಳಿ, ತಮ್ಮ ಜೀವನದ ಕರ್ತವ್ಯವನ್ನು ಪೂರ್ತಿಗೊಳಿಸಿ, ಅವರ ಉಚ್ಛ್ರಾಯದ ದಿನಗಳಂದೇ ನಮ್ಮನ್ನು ಅಗಲಿಹೋದ ಆ ಸಫಲ ಜೀವಿಗಳಿಗಾಗಿ ನಾವು ಮರುಗಬಾರದು.

"ಇಳಿವಯಸ್ಸಿನವರಿಗೆ ಉಲ್ಲಾಸ ನೀಡಿ ಅವರಿಗೆ ಪುನಶ್ಚೈತನ್ಯ ಊಡಬಲ್ಲ ವಿಶೇಷ ಒಂದುಂಟು. ಅದೇ ತರುಣ ಪೀಳಿಗೆಯವರ ಚಟುವಟಿಕೆಗಳಲ್ಲಿ ಮುದ ಕಾಣುವುದು. ನಿಜ ಹೇಳುವುದಾದರೆ ಇಂದಿನ ಅಸ್ಥಿರ ದಿನಗಳಂದು ಕರಾಳ ಮೇಘಗಳಿಂದ ಆವೃತವಾಗಿರುವ ಮುದವಿದು. ಹೀಗಿದ್ದರೂ ಯಾವಾಗಲೂ ಸಂಭವಿಸುವ ಹಾಗೆ ವಸಂತ ಋತುವಿನ ಸೂರ್ಯ ಹೊಸ ಬಾಳನ್ನು ತಂದೇ ತರುತ್ತಾನೆ. ಈ ನವ ಚೈತ್ರಾಗಮನದ ಕಾರಣವಾಗಿ ಸಂತಸ ತಳೆಯಬಹುದು. ಮತ್ತು ಇದರ ಅನಾವರಣವನ್ನು ತ್ವರಿತಗೊಳಿಸಬಹುದು. ಇನ್ನು ಮೊರ್ಝಾರ್ಟ್ ಆದರೋ ಸದಾ ಹೀಗೆಯೇ ಸುಂದರ, ಸುಕುಮಾರ. ವಿಧಿಯ ಕಬಂಧ ಬಾಹುಗಳ ಮತ್ತು ಮಾನವನ ಸಕಲ ಭ್ರಮೆಗಳ ಹೊರಗೆ ಶಾಶ್ವತವಾಗಿ ನೆಲಸಿರುವ ಏನೋ ಒಂದು ಉಂಟೆಂಬುದಂತೂ ಕಂಡಂತೆಯೇ ಇದೆ. ಇಂಥ ಶಾಶ್ವತ ಮೌಲ್ಯಗಳು ಭಯ ಮತ್ತು ಆಶಯಗಳ ನಡುವೆ ಆಂದೋಳಿಸುತ್ತಿರುವ ಒಬ್ಬ ತರುಣನಿಗಿಂತ ವೃದ್ಧನಿಗೆ ಹತ್ತಿರದವಾಗಿರುತ್ತವೆ. ಸೌಂದರ್ಯ ಮತ್ತು ಸತ್ಯ ಇವನ್ನು ಇವುಗಳ ಪರಿಶುದ್ಧ ರೂಪದಲ್ಲಿ ಅನುಭವಿಸುವ ಸೌಭಾಗ್ಯ ನಮ್ಮದಾಗಿದೆ… ಪ್ರಸಕ್ತ ವಸಂತ ನಿಮ್ಮಲ್ಲಿ ಪ್ರಶಾಂತ ಹರ್ಷ ತುಂಬಿ ನಿಮ್ಮನ್ನು ಚಟುವಟಿಕೆಯ ಬಾಳು ನಡೆಸುವತ್ತ ಉದ್ದೀಪಿಸಲೆಂದು ಹಾರ್ದಿಕವಾಗಿ ಆಶಿಸುತ್ತೇನೆ. ನಿಮಗೆ ನನ್ನ ಹಾರ್ದಿಕ ಶುಭಾಶಯಗಳು."

●

ಐನ್‌ಸ್ಟೈನ್ ಒಬ್ಬ ಉತ್ಸಾಹಿ ಪಿಟೀಲುವಾದನಕಾರ. ಪಿಟೀಲು ಇವರ ಅವಿಭಾಜ್ಯ ಸಂಗಾತಿ. ಹದಿನೆಂಟನೆಯ ಶತಮಾನದ ಕೃತಿಕಾರರು ಇವರಿಗೆ ಅಚ್ಚುಮೆಚ್ಚು. ತರುವಾಯದ ಕೃತಿಕಾರರ ಬಗ್ಗೆ ಇವರು ಹೆಚ್ಚಿನ ಆಸಕ್ತಿಯನ್ನೇನೂ ಬೆಳೆಸಿಕೊಳ್ಳಲಿಲ್ಲ. ಸಂಗೀತವನ್ನು ಕುರಿತ ಒಂದು ಪ್ರಶ್ನಾ-

ವಳಿಗೆ ಇವರು ೧೯೪೯ರಲ್ಲಿ ಸೂತ್ರವಾಕ್ಯದಲ್ಲಿ ಉತ್ತರ ಬರೆದರು:

"ಸಂಗೀತದಲ್ಲಿ ಬಾಕ್, ಮೊಝಾರ್ಟ್ ಮತ್ತು ಇಟಲಿಯ ಹಾಗೂ ಇಂಗ್ಲೆಂಡಿನ ಕೆಲವು ಕೃತಿಕಾರರು ನನಗೆ ಅಚ್ಚುಮೆಚ್ಚಿನವರು. ಬೀಟೋವನ್ ಇವರಿಗಿಂತ ಎಷ್ಟೋ ಕಡಿಮೆ. ಆದರೆ ಖಂಡಿತವಾಗಿಯೂ ಶೂಬರ್ಟ್.

"ಬಾಕ್ ಅಥವಾ ಮೊಝಾರ್ಟ್ ಇವರಿಬ್ಬರ ಪೈಕಿ ಯಾರು ನನಗೆ ಹೆಚ್ಚು ಅರ್ಥವೀಯುತ್ತಾರೆಂದು ಹೇಳುವುದು ಅಸಾಧ್ಯ. ಸಂಗೀತದಲ್ಲಿ ನಾನು ತರ್ಕವನ್ನು ನಿರೀಕ್ಷಿಸುವುದಿಲ್ಲ. ಒಟ್ಟಾರೆ ಹೇಳುವುದಾದರೆ ನಾನು ಅಂತರ್ಬೋಧಾತ್ಮಕವಾಗಿ ವರ್ತಿಸುತ್ತೇನೆ. ಸಿದ್ಧಾಂತಗಳು ನನಗೆ ತಿಳಿದಿಲ್ಲ. ಯಾವುದೇ ಕೃತಿಯ ಆಂತರಿಕ ಏಕತೆಯನ್ನು (ವಾಸ್ತುಶಿಲ್ಪ) ಅಂತರ್ಬೋಧಾತ್ಮಕವಾಗಿ ಗ್ರಹಿಸಲಾಗದಿದ್ದರೆ ಅದು ನನಗೆ ಪ್ರಿಯವಾಗದು."

■

ಬರ್ಲಿನ್ನಿನಲ್ಲಿದ್ದ ಒಬ್ಬ ಪತ್ರಕರ್ತ ಅಕ್ಟೋಬರ್ ೧೯೨೮ರಲ್ಲಿ ಕಾಗದ ಬರೆದು ಹಲವು ಪ್ರಶ್ನೆಗಳನ್ನು ಎತ್ತಿದ. ಆ ಪೈಕಿ ಒಂದು ಇದು: ಇವರ ಸಂಗೀತ ಚಟುವಟಿಕೆ, ಇದರಿಂದ ಪೂರ್ತಿಯಾಗಿ ಬೇರೆಯೇ ಆದ ಇವರ ಪ್ರಧಾನ ಕಾರ್ಯಕ್ಷೇತ್ರದ ಮೇಲೆ ಏನಾದರೂ ಪ್ರಭಾವಬೀರಿತ್ತೇ? ೧೯೨೮ ಅಕ್ಟೋಬರ್ ೨೩ರಂದು ಐನ್‌ಸ್ಟೈನ್ ಮಾರೋಲೆ ಬರೆದರು:

"ಸಂಗೀತ ಸಂಶೋಧನ ಕಾರ್ಯವನ್ನು ಪ್ರಭಾವಿಸದು. ಆದರೆ ಎರಡೂ ಪೋಷಿತವಾಗುವುದು ಹಂಬಲಿಕೆಯ ಅದೇ ಸೆಲೆಯಿಂದ. ಇವು ಒದಗಿಸುವ ವಿಮೋಚಕ ಸುಖದ ಕಾರಣವಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿದೆ."

●

ದೆಹಲಿಯಲ್ಲಿದ್ದ ಭಾರತೀಯನೊಬ್ಬ ೧೯೫೩ ಜುಲೈ ೧೪ರಂದು ಐನ್‌ಸ್ಟೈನರಿಗೊಂದು ಕಾಗದ ಬರೆದು ಇವರ ಸಹಾಯ ಯಾಚಿಸಿದ. ಪತ್ರ ಲೇಖಕ ಏಕಾಂಗಿ, ವಯಸ್ಸು ಮೂವತ್ತೆರಡು. ಗಣಿತ ಮತ್ತು ಭೌತ ವಿಜ್ಞಾನಗಳಲ್ಲಿ

ವಾಗಿ 'ಭಯಂಕರ ದುರ್ಬಲಿ' ಆಗಿದ್ದರೂ ಶೇಷಾಯುಷ್ಯವನ್ನು ಅನ್ಯಕಾರ್ಯದಲ್ಲಿ ವ್ಯರ್ಥಗೊಳಿಸದೆ ಇವುಗಳ ಸಂಶೋಧನೆಯಲ್ಲಿಯೇ ವಿನಿಯೋಗಿಸಬೇಕೆಂಬುದು ಆತನ ಹಂಬಲ. ಆದರೆ ದುರ್ದೈವ — ಒಡಲು ಮತ್ತು ಅಸು ಬೇರ್ಪಡದಂತೆ ಕಾಪಾಡಿಕೊಳ್ಳಲು ತಕ್ಕ ಸಂಪಾದನೆ ಆತನಿಗಿರಲಿಲ್ಲ. ನೆರವು ಒದಗಲಿ ಒದಗದಿರಲಿ ತಾನಂತೂ ಸಾವು ಬರುವ ತನಕವೂ ದುಡಿಯುವುದು ಖಂಡಿತ. ಇದು ಆತನ ಅಚಲ ನಿರ್ಧಾರ. ಆರ್ಥಿಕ ಸಹಾಯ ಕೂಡಿ ಬಂದರೆ ಜೀವನ ಸುಗಮವಾದೀತು. ಈ ದಿಶೆಯಲ್ಲಿ ಐನ್‌ಸ್ಟೈನ್ ತನಗೆ ನೆರವು ನೀಡಿಯಾರೆಂದು ಆತ ಆಶಿಸಿದ್ದ. ೧೯೫೩ ಜುಲೈ ೨೮ರಂದು ಐನ್‌ಸ್ಟೈನ್ ಸಾಕಷ್ಟು ಉದ್ದವಾದ ಮಾರೋಲೆ ಬರೆದರು. ಕೇವಲ ಸೌಜನ್ಯ ಪ್ರದರ್ಶನಕ್ಕಿಂತಲೂ ಹೆಚ್ಚಿನ ಒಂದು ನಿಲುವು ಇದರಲ್ಲಿ ಕಾಣಬರುವುದರಿಂದ ಇದು ಕುತೂಹಲಕಾರಿ ಆಗಿದೆ:

"ನಿಮ್ಮ ಪತ್ರ ಬಂದಿದೆ. ಭೌತವಿಜ್ಞಾನವನ್ನು ಅಭ್ಯಸಿಸುವುದರ ಬಗೆಗೆ ನಿಮಗಿರುವ ಗಾಢ ಅಭಿಲಾಷೆಯಿಂದ ನಾನು ಪ್ರಭಾವಿತನಾಗಿದ್ದೇನೆ. ಆದರೆ ನಿಮ್ಮ ನಿಲುವನ್ನು ಮಾತ್ರ ಯಾವ ತೆರದಲ್ಲೂ ಒಪ್ಪಲಾರೆ ಎಂಬುದಾಗಿ ಹೇಳಬೇಕಾಗಿದೆ. ನಮ್ಮೆಲ್ಲರಿಗೂ ನೆಲೆ ಒದಗಿಸಿ ಪೋಷಿಸುತ್ತಿರುವುದು ನಮ್ಮ ಬಾಂಧವರ ದುಡಿಮೆ. ಇದನ್ನು ನಾವು ಆತ್ಮತೃಪ್ತಿಗೋಸ್ಕರವಾಗಿ ಆಯ್ದ ವೃತ್ತಿ ಒಂದರಿಂದಲೇ ಅಲ್ಲ, ಪ್ರಚಲಿತ ಅಭಿಮತದ ಪ್ರಕಾರ ಅವರಿಗೆ ಉಪಯೋಗವಾಗಬಲ್ಲ ದುಡಿಮೆಯಿಂದ ಕೂಡ ಪ್ರಾಮಾಣಿಕವಾಗಿ ಮರುಸಲ್ಲಿಸಬೇಕು. ಇಲ್ಲವಾದರೆ ನಮ್ಮ ಅಗತ್ಯಗಳು ಎಷ್ಟೇ ಸರಳ ಮತ್ತು ಸೀಮಿತವಾದರೂ ನಾವು ಬಂದಿಳಿಕೆಗಳಾಗುವುದು ದಿಟ. ಆರ್ಥಿಕ ಸುಧಾರಣೆಗಾಗಿ ನಿಮ್ಮ ದೇಶದಲ್ಲಿ ನಡೆಯುತ್ತಿರುವ ಹೋರಾಟದ ಈ ದಿನಗಳಂದು ಸುಶಿಕ್ಷಿತ ವೃತ್ತಿಗಳ ಸೇವೆ ಅತ್ಯಧಿಕವಾಗಿ ಬೇಕಾಗಿರುವುದರಿಂದ ಇದು ಇನ್ನಷ್ಟು ನಿಜವಾದ ಮಾತಾಗಿದೆ.

"ಇದು ವಸ್ತುಸ್ಥಿತಿಯ ಒಂದು ಮುಖ. ಈಗ,

ಅನುಕೂಲಪಟ್ಟ ಸೌಕರ್ಯಗಳು ನಿಮಗಿರುವುದಾದ ಪಕ್ಷದಲ್ಲಿ ಆಗ ವಸ್ತುಸ್ಥಿತಿಯ ಇನ್ನೊಂದು ಮುಖವನ್ನು ಕೂಡ ಪರಿಗಣಿಸಬೇಕಾದೀತು. ವೈಜ್ಞಾನಿಕ ಕಾರ್ಯವನ್ನು ಎಸಗಲು ಪ್ರಯತ್ನಿಸುವಲ್ಲಿ—ಅತ್ಯಂತ ಪ್ರತಿಭಾವಂತ ವ್ಯಕ್ತಿಗಳಿಗೆ ಕೂಡ—ನಿಜ ಮೌಲ್ಯವಿರುವ ಫಲಿತಾಂಶವನ್ನು ಸಾಧಿಸಬಹುದಾದ ಯೋಗ ತೀರ ಕಮ್ಮಿ. ಹೀಗಾಗಿ ನಿಮ್ಮ ಜೀವನದಲ್ಲಿ ಕಾರ್ಯನಿರ್ವಹಣೆಯ ಗರಿಷ್ಠ ಸಾಮರ್ಥ್ಯದ ಅವಧಿ ಮುಗಿದು ಹೋದಾಗ ನಿಮಗೆ ಹತಾಶೆ ಎದುರಾಗುವ ಸಂಭಾವ್ಯತೆಯೇ ಅತ್ಯಧಿಕ.

"ಯೋಗ್ಯ ಮಾರ್ಗ ಒಂದೇ. ನಿಮ್ಮ ಹೆಚ್ಚಿನ ವೇಳೆಯನ್ನು ಯಾವುದೇ ಪ್ರಾಯೋಗಿಕ ಕಾರ್ಯಕ್ಕೆ—ಉಪಾಧ್ಯಾಯರಾಗಿ ಅಥವಾ ನಿಮ್ಮ ಸ್ವಭಾವಕ್ಕೆ ಒಗ್ಗುವ ಇನ್ನೊಂದು ಕ್ಷೇತ್ರದಲ್ಲಿ ದುಡಿಮೆಗಾರರಾಗಿ—ಮೀಸಲಿಟ್ಟು ಉಳಿಕೆ ಕಾಲವನ್ನು ಅಧ್ಯಯನದಲ್ಲಿ ವಿನಿಯೋಗಿಸಿ. ಆಗ ನೀವು ಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗದೆಯೂ, ಯಾವುದೇ ಸಂದರ್ಭವಲ್ಲಾದರೂ, ಹಸನಾದ ಮತ್ತು ಸುಸಂಗತವಾದ ಬದುಕನ್ನು ಬಾಳಬಲ್ಲಿರಿ."

•

ಭಾವೀ ವಿಜ್ಞಾನಿ ಅಥವಾ ವಿದ್ವಾಂಸ ತನ್ನ ಅನ್ನವನ್ನು ಮೋಚಿಯಂಥ ಫಲಾಪೇಕ್ಷೆರಹಿತವಾದ ದಂಧೆಯಿಂದ ಗಳಿಸುವಂತಾಗಬೇಕೆಂದು ಐನ್‌ಸ್ಟೈನ್ ಪದೇ ಪದೇ ಹೇಳುತ್ತಿದ್ದರು. ಹೀಗಾದಾಗ ಮಾತ್ರ ಸೃಷ್ಟಿಶೀಲ ಕಾರ್ಯದಿಂದ ಒಬ್ಬಾತನಿಗೆ ಲಭಿಸುವ ಆನಂದಕ್ಕೆ ಕುಠಾರಪ್ರಾಯವಾಗಿ ತೀರ ಜಳ್ಳಾದ ಫಲಿತಾಂಶಗಳ ಪ್ರಕಟಣೆಗೆ ಕಾರಣವಾಗಿರುವ 'ಉತ್ಪಾದನೆ ಯಾ ಉತ್ಪಾಟನೆ' ಘೋಷಣೆ ಹೇರುವ ಒತ್ತಡ ಹಿಂಗೀತು, ಅಷ್ಟೆ. ಉತ್ಪಾದಿಸಲೇಬೇಕೆಂಬುದಾಗಿ ಹೇರಲಾಗುತ್ತಿದ್ದ ಬೌದ್ಧಿಕ ಸಂಮರ್ದದ ಬಗೆಗೆ ಐನ್‌ಸ್ಟೈನರಿಗಿದ್ದ ತಿರಸ್ಕಾರ, ಹುದ್ದೆ ಬಡ್ತಿಗಾಗಿ ನಡೆಯುತ್ತಿದ್ದ ಕೋಳಿ ಕಟ್ಟಕ್ಕೂ ಅನ್ವಯವಾಗುತ್ತಿತ್ತು. ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪ್ಲಾಂಕ್ ಅಲಂಕರಿಸಿದ್ದ ಪ್ರಾಧ್ಯಾಪಕ ಪೀಠಕ್ಕೆ ಯಾರು ಉತ್ತರಾಧಿಕಾರಿಗಳಾಗುತ್ತಾರೆ

ಕುರಿತು ವೈಜ್ಞಾನಿಕ ಪ್ರಪಂಚದಲ್ಲಿ ತೀವ್ರ ಜಿಜ್ಞಾಸೆ ನಡೆಯುತ್ತಿದ್ದಾಗ, ೧೯೨೭ ಮೇ ೫ರಂದು ಐನ್‌ಸ್ಟೈನ್, ಹಾಲೆಂಡಿನಲ್ಲಿದ್ದ ಅವರ ಮಿತ್ರ ಪಾಲ್ ಎರೆನ್‌ಫೆಸ್ಟ್ ಅವರಿಗೆ ಈ ಮುಂದಿನಂತೆ ಬರೆದರು:

"ಭಗವತ್ಕೃಪೆ! ಸದ್ಯ ನಾನಿದರಲ್ಲಿ ಪಾತ್ರಿ ಆಗಿಲ್ಲವಲ್ಲ! ಮಹಾ ಮಿದುಳುಗಳ ಈ ಪಂದ್ಯದಲ್ಲಿ ಭಾಗವಹಿಸುವುದು ಇನ್ನೆಂದೂ ಅಗತ್ಯವಾಗಿಲ್ಲವಲ್ಲ! ಈ ತೆರನಾಗಿ ಪೈಪೋಟಿ ನಡೆಸುವುದು ಹಣಕ್ಕಾಗಿ ಇಲ್ಲವೇ ಅಧಿಕಾರಕ್ಕಾಗಿ ಹಾತೊರೆಯುವ ದುರಾಸೆಯಂತ ಒಂದಿಷ್ಟೂ ಕಡಿಮೆ ಅಲ್ಲದ ಹೀನ ಸ್ವರೂಪದ ದಾಸ್ಯವೆಂಬುದಾಗಿ ನನಗೆ ಯಾವಾಗಲೂ ಅನ್ನಿಸಿದೆ."

•

ಕೊಲೊರ್‍ಯಾಡೊವಿನ ಒಬ್ಬ ಬ್ಯಾಂಕರ್ ೧೯೨೭ ಆಗಸ್ಟ್ ೫ರಂದು, ಆಗ ಬರ್ಲಿನ್ನಿನಲ್ಲಿದ್ದ ಐನ್‌ಸ್ಟೈನರಿಗೆ, ಒಂದು ಪತ್ರ ಬರೆದ. ದೇವರೆಂಬುವನು ದೇವತೆಗಳಿಂದ ಪರಿವೇಷ್ಟಿತನೂ ಸ್ತೋತ್ರಭೂಷಿತ ಕೃಪಾಮಯಿಯೂ ಆದ ಪುರುಷ ಎಂಬ ಭಾವನೆಯನ್ನು ಹೆಚ್ಚಿನ ವಿಜ್ಞಾನಿಗಳು ಮತ್ತು ಅವರ ತೆರನಾಗಿ ಯೋಚಿಸುವವರು ತೊರೆದುಬಿಟ್ಟಿರುವರಾದರೂ ಅನೇಕ ಮಂದಿ ನಿಷ್ಠಾವಂತರು ಅಂಥ ದೇವರನ್ನೇ ಮನ್ನಿಸಿ ಪೂಜಿಸುತ್ತಿರುವರೆಂಬುದಾಗಿ ಆ ಬ್ಯಾಂಕರ್ ಬರೆದಿದ್ದ. ಐನ್‌ಸ್ಟೈನರ ಅಭಿಪ್ರಾಯಬೇಕೆಂದು ಆತ ಬಯಸಿದ್ದ. ಅವರು ಬರೆದ ಟಿಪ್ಪಣಿ:

"ವ್ಯಕ್ತಿಗಳ ಕ್ರಿಯೆಗಳನ್ನು ಪ್ರತ್ಯಕ್ಷವಾಗಿ ಪ್ರಭಾವಿಸಬಲ್ಲ ಅಥವಾ ತನ್ನದೇ ಸೃಷ್ಟಿಯ ಜೀವಿಗಳ ಕರ್ಮದ ಮೇಲೆ ನಿರ್ಣಾಯಕ ಸ್ಥಾನದಲ್ಲಿ ಪ್ರತ್ಯಕ್ಷವಾಗಿ ಕುಳಿತಿರಬಲ್ಲ ವೈಯಕ್ತಿಕ ದೇವರನ್ನು ಕಲ್ಪಿಸಿಕೊಳ್ಳಲಾರೆ. ಆಧುನಿಕ ವಿಜ್ಞಾನದ ಪರಿಣಾಮವಾಗಿ ಯಂತ್ರ ವಿಧ್ಯಾತ್ಮಕ ಕಾರಣತೆ (mechanistic causality) ಸ್ವಲ್ಪ ಮಟ್ಟಿಗೆ ಸಂದೇಹಕ್ಕೆ ಎಡೆ ಆಗಿರುವುದು ನಿಜವಾಗಿದ್ದರೂ ನಾನು ಮಾತ್ರ ನನ್ನ ನಿಲವನ್ನು ಬದಲಾಯಿಸಲಾರೆ. ನನ್ನ ಧಾರ್ಮಿಕ ಶ್ರದ್ಧೆ

ಗ್ರಹಣಸಾಮರ್ಥ್ಯ ಅತ್ಯಲ್ಪವಾಗಿ ಮಾತ್ರ ಗ್ರಹಿಸಬಲ್ಲ ವಾಸ್ತವತೆಯ ರೂಪದಲ್ಲಿ ಪ್ರಕಟವಾಗುವ ಆ ಮಹೋನ್ನತ ಮತ್ತು ಅನಂತ ಸತ್ತ್ವವನ್ನು ಕುರಿತ ವಿನೀತ ಗೌರವವಾಗಿದೆ. ನೈತಿಕತೆ ಅತಿ ಮುಖ್ಯವಾದದ್ದು—ಆದರೆ ನಮಗೆ, ದೇವರಿಗಲ್ಲ."

*

"ಸಾಪೇಕ್ಷತಾ ಸಿದ್ಧಾಂತದ ಧಾರ್ಮಿಕ ನಿಬಂಧಿತಗಳು" ಎಂಬುದರ ಮೇಲೆ ಉಪನ್ಯಾಸ ಸಿದ್ಧಪಡಿಸುತ್ತಿದ್ದ ಶಿಕಾಗೊವಿನ ಒಬ್ಬ ರಬ್ಬಿ ಪ್ರಿನ್ಸ್‌ಟನ್ನಿನಲ್ಲಿದ್ದ ಐನ್‌ಸ್ಟೈನರಿಗೆ ೧೯೩೯ ಡಿಸೆಂಬರ್ ೨೦ ರಂದು ಕಾಗದ ಬರೆದು ಆ ವಿಷಯದ ಬಗ್ಗೆ ಕೆಲವು ಪ್ರಶ್ನೆ ಎತ್ತಿದ. ಐನ್‌ಸ್ಟೈನ್ ಈ ಮುಂದಿನಂತೆ ಮಾರೋಲೆ ಬರೆದರು:

"ವೈಜ್ಞಾನಿಕ ಜ್ಞಾನದಿಂದ ಒಟ್ಟಾರೆ ಭಿನ್ನವಾದ ಧಾರ್ಮಿಕ ವಲಯದೊಡನೆ ಸಾಪೇಕ್ಷತಾ ಸಿದ್ಧಾಂತದ ಮೂಲಭಾವನೆಗಳಿಗೆ ಏನಾದರೂ ಸಂಬಂಧ ಸ್ಥಾಪಿಸಬೇಕೆಂಬುದನ್ನು ನಾನು ನಂಬಲಾರೆ. ಜ್ಞೇಯ ಜಗತ್ತಿನ ಪ್ರಗಲ್ಭ ಅಂತರ ಸಂಬಂಧಗಳನ್ನು ಸರಳ ತಾರ್ಕಿಕ ಪರಿಕಲ್ಪನೆಗಳ ಮೂಲಕ ಪರಿಗ್ರಹಿಸುವುದು ಸಾಧ್ಯ ಎಂಬ ಸಂಗತಿಯಲ್ಲಿ ಧರ್ಮ ಮತ್ತು ವಿಜ್ಞಾನ ಇವುಗಳ ನಡುವಿನ ಒಂದು ಕೊಂಡಿಯನ್ನು ಕಾಣುತ್ತೇವೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ವಿಶೇಷವಾಗಿ ಸಾಪೇಕ್ಷತಾ ಸಿದ್ಧಾಂತದಲ್ಲಿ ಇದು ಪೂರ್ಣ ಪ್ರಮಾಣದಲ್ಲಿ ನಿಜ.

"ಪ್ರಗಲ್ಭ ಅಂತರ ಸಂಬಂಧಗಳ ತಾರ್ಕಿಕ ಪರಿಗ್ರಹಣಶೀಲತೆಯನ್ನು ಅನುಭವಿಸುವಾಗ ಒಬ್ಬನಲ್ಲಿ ಸಂಜನಿಸುವ ಧಾರ್ಮಿಕಭಾವ ಆತ ಸಾಮಾನ್ಯವಾಗಿ ಧಾರ್ಮಿಕ ಎಂದು ಕರೆಯುವ ಭಾವಕ್ಕಿಂತ ಒಂದು ರೀತಿಯಲ್ಲಿ ಬೇರೆಯಾದದ್ದು. ಬಹುಮಟ್ಟಿಗೆ ಅದು ದ್ರವ್ಯಾತ್ಮಕ ವಿಶ್ವದಲ್ಲಿ ಪ್ರಕಟಗೊಳ್ಳುತ್ತಿರುವ ಕ್ರಮವನ್ನು ಕುರಿತ ಬೆರಗಿನ ಭಾವ. ನಮ್ಮ ಸ್ವಂತ ಪ್ರತಿಬಿಂಬದಂತಿರುವ ದೇವಸದೃಶ ವ್ಯಕ್ತಿಯನ್ನು—ಅಂದರೆ ನಮ್ಮ ಮೇಲೆ ಬೇಡಿಕೆಗಳನ್ನು ಹೇರುವ ಮತ್ತು ನಮ್ಮ ಪೈಕಿ ಒಬ್ಬೊಬ್ಬನಲ್ಲೂ ಆಸಕ್ತಿ ತಳೆಯುವ ಒಂದು

ನಮ್ಮನ್ನು ಒಯ್ಯುವುದಿಲ್ಲ. ಇದರಲ್ಲಿ ಸಂಕಲ್ಪವಿಲ್ಲ. ಗಮ್ಯವಿಲ್ಲ, ಹೀಗೆಯೇ ಆಗತಕ್ಕದ್ದೆಂಬುದೂ ಇಲ್ಲ. ಬದಲು, ಕೇವಲ ಅಸ್ತಿತ್ವವೊಂದೇ. ಈ ಕಾರಣದಿಂದಲೇ ನಮ್ಮಂಥವರು ನೈತಿಕತೆಯಲ್ಲಿ ಶುದ್ಧ ಮಾನವ ದ್ರವ್ಯವನ್ನು ಕಾಣಬಹುದಾಗಿದೆ. ಹಾಗಿದ್ದರೂ ಇದು ಮಾನವನ ವಲಯದಲ್ಲಿ ಅತಿ ಮುಖ್ಯವಾದದ್ದು."

*


ಐನ್‌ಸ್ಟೈನರ ಈ ಮುಂದಿನ ಬರೆಹದ ತಾರೀಕು ಸೆಪ್ಟೆಂಬರ್ ೧೯೩೭. ಪ್ರಚಾರ ನಿಯೋಗವೊಂದಕ್ಕೆ ಇದು ಉದ್ದೇಶಿತವಾಗಿದೆ ಎಂಬುದಕ್ಕಿಂತ ಆಚೆಗೆ ಇದರ ಬಗೆಗೆ ಉಪಯುಕ್ತ ಮಾಹಿತಿ ಏನೂ ತಿಳಿದಿಲ್ಲ:

"ವೈಜ್ಞಾನಿಕ ಅರಿವಿನ ಕ್ಷೇತ್ರಗಳಲ್ಲಿಯ ಅದ್ಭುತ ಸಿದ್ಧಿಗಳಿಂದ ಮತ್ತು ಹೀಗೆ ಲಭ್ಯವಾದ ಒಳನೋಟಗಳ ತಾಂತ್ರಿಕ ಅನ್ವಯದಿಂದ ನಮ್ಮ ಕಾಲ ಪ್ರಸಿದ್ಧವಾಗಿದೆ. ಯಾರಿಗೆ ತಾನೇ ಇದರಿಂದ ಉತ್ಸಾಹ ಹುಟ್ಟುವುದಿಲ್ಲ? ಆದರೆ ಜ್ಞಾನ ಮತ್ತು ಕೌಶಲಗಳು ಮಾತ್ರ ಜನತೆಯನ್ನು ಸಂತೋಷಭರಿತ ಮತ್ತು ಗಾಂಭೀರ್ಯಪೂರ್ಣ ಜೀವನದತ್ತ ಒಯ್ಯಲಾರವೆಂಬುದನ್ನು ಮರೆಯದಿರೋಣ... ವಸ್ತುನಿಷ್ಠ ಸತ್ಯವನ್ನು ಆವಿಷ್ಕರಿಸಿದವರಿಗಿಂತ ಮೇಲಿನ ಮಟ್ಟದಲ್ಲಿ ಉಚ್ಚ ನೈತಿಕ ಪ್ರಾಮಾಣ್ಯಗಳನ್ನೂ ಮೌಲ್ಯಗಳನ್ನೂ ಸಾರಿದ ಪ್ರವಾದಿಗಳನ್ನಿರಿಸಲು ಜನತೆಗೆ ಯೋಗ್ಯ ಕಾರಣ ಉಂಟು. ಅನ್ವೇಷಕ ಮತ್ತು ರಚನಾತ್ಮಕ ಮನಸ್ಸಿನ ಸಮಸ್ತ ಸಿದ್ಧಿಗಳಿಗಿಂತಲೂ ಹೆಚ್ಚಾಗಿ ಜನತೆ ಬುದ್ಧ, ಮೋಸೆಸ್ ಮತ್ತು ಜೀಸಸ್ ಇವರಂಥ ಮಹಾಪುರುಷರ ಕೊಡುಗೆಗಳಿಗೆ ಹೆಚ್ಚು ಋಣಿಯಾಗಿರಬೇಕೆಂದು ನನಗೆ ತೋರುತ್ತದೆ. ಜನತೆ ತನ್ನ ಗಾಂಭೀರ್ಯವನ್ನು, ತನ್ನ ಅಸ್ತಿತ್ವದ ಸುರಕ್ಷಣೆಯನ್ನು ಮತ್ತು ಬದುಕುವುದರಲ್ಲಿ ತನ್ನ ಆನಂದವನ್ನು ಕಳೆದುಕೊಳ್ಳದಿರಬೇಕಾದರೆ ಈ ಧನ್ಯಾತ್ಮರು ನಮಗೇನನ್ನು ದಯಪಾಲಿಸಿದವರೋ ಅದನ್ನು ನಾವು ಕಾಪಾಡಬೇಕು ಮತ್ತು ನಮ್ಮ ಸಮಸ್ತ ತ್ರಾಣದಿಂದ ಜೀವಂತವಾಗಿರಿಸಲು ಪ್ರಯತ್ನಿಸಬೇಕು."

ರೂ. ೫೦,೦೦೦ ಮೌಲ್ಯ ಬಹುಮಾನ ಗಳಿಸಿ

ಚಿತ್ರ ತಾರೆಯರ ಸೌಂದರ್ಯ ಸ್ಪರ್ಧೆ : ಪ್ರವೇಶ ಶುಲ್ಕ ವಿಲ್ಲ

ಮೊದಲ ಬಹುಮಾನ ರೂ. ೫೦೦೦ ನಗದು ಅಥವಾ ರೆಫ್ರಿಜರೇಟರ. ಎರಡನೇ ಬಹುಮಾನ ರೂ. ೨೫೦೦ ನಗದು ಅಥವಾ ಟೆಲಿವಿಜನ, ಮೂರನೇ ಬಹುಮಾನ ೨೮೦ ಮಿಕ್ಸರ್ಸ-ಗ್ರೈಂಡರ ಮತ್ತು ಟ್ರಾನ್ಸಿಸ್ಟರ ಅರ್ಧ ಬೆಲೆಯಲ್ಲಿ.



HEMA PARVEEN BABI

REKHA RANJEETA

ನೀವು ಮಾಡಬೇಕಾದುದು: ಇಲ್ಲಿ ಪ್ರಸಿದ್ಧ ನಾಲ್ಕು ಚಿತ್ರ ತಾರೆಯರ ಭಾವ ಚಿತ್ರ ಕಾಣಿಸಿವೆ. ನಿಮಗೆ ಅತಿ ಸುಂದರ ವೆನಿಸುವ ಮೊದಲ ಪ್ರಾಶಸ್ತ್ಯದ ತಾರೆಯ ಹೆಸರನ್ನು ಮೊದಲು ಕಾಣಿಸಿ ಅವರಂತೆ ಎರಡನೇ, ಮೂರನೇ ಹಾಗೂ ನಾಲ್ಕನೇಯ ಪ್ರಾಶಸ್ತ್ಯದ ಹೆಸರನ್ನು ಕ್ರಮವಾಗಿ ನಿಮ್ಮ ಆಯ್ಕೆಯಂತೆ ಬರೆಯಿರಿ.

ಇದೊಂದು ಮಾರಾಟಾಭಿವೃದ್ಧಿ ಯೋಜನೆ. ಸಾರ್ವಜನಿಕ ಅನುಕೂಲಹೆಚ್ಚಿಸುವ ಒಂದು ಗುರಿ ಆಗಿದೆ. ನಿಯಮಗಳು: ೧) ಒಂದು ಕುಟುಂಬದಿಂದ ಒಂದೇ ಪ್ರವೇಶವನ್ನು ಅಂಗೀಕರಿಸಲಾಗುವದು. ೨) ಪ್ರವೇಶಗಳನ್ನು ಬಿಳಿ ಕಾಗದದಲ್ಲಿ ಅಥವಾ ಅಂಚೆ ಕಾರ್ಡ ಮೇಲೆ ಬರೆಯಬೇಕು. ೩) ನೀವು ಕಳಿಸಿದ ಉತ್ತರಗಳು ನಿರ್ಣಾಯಕರ ಮನ್ನಣೆಗೆ ಒಳಪಟ್ಟು ಬಹುಮಾನ ಕೊಡಲಾಗುವದು. ೪) ತಿದ್ದು ಪಡಿ ಮಾಡಿದ ಪ್ರವೇಶಗಳನ್ನು ಅಂಗೀಕರಿಸುವುದಿಲ್ಲ. ಆದ್ದರಿಂದ ನಿಮ್ಮ ಪ್ರವೇಶಗಳನ್ನು ಸ್ವಚ್ಛವಾಗಿ ಸ್ಪಷ್ಟವಾಗಿ ಬರೆದಿರತಕ್ಕದ್ದು ೫) ವಿಜಯಿಗಳಿಗೆ ಮಾತ್ರ ಅಂಚೆಯಿಂದ ತಿಳಿಸಲಾಗುವದು. ೬) ಪ್ರವೇಶಗಳು ಹತ್ತು ದಿನಗಳೊಳಗೆ ತಲುಪಬೇಕು. ೭) ತೀರ್ಪುಗಾರರ ನಿರ್ಣಯವೇ ಅಂತಿಮ ಮತ್ತು ಬದ್ಧವಾಗಿರುತ್ತದೆ.

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಹಿಂದಿ ಅಥವಾ ಇಂಗ್ಲೀಷನಲ್ಲಿ ಬರೆಯಿರಿ.

PRIMA ELECTRICALS (PN),
8750, Shidipura, Karol Bagh, New Delhi-110005

೧೯೫೨ ಜುಲೈ ೯ರಂದು ಬರೆದ ಒಂದು ಕಾಗದದಿಂದ ಉದ್ಧರಿಸಿದ ವಾಕ್ಯ:

"ಎಮ್ಮೆಗಳ ಹಿಂಡಿನ ನಡುವೆ ಒಬ್ಬ ಹುಟ್ಟುತ್ತಾನೆ. ಆತ ತನ್ನ ಕಾಲ ಸಂದಾಯವಾಗುವ ಮೊದಲೇ ಅವುಗಳ ಕಾಲತುಳಿತದಿಂದ ಅಪ್ಪಚ್ಚಿ ಆಗದೇ ಹೋದರೆ ಅದಕ್ಕಾಗಿ ಸಂತೋಷಪಡಲೇಬೇಕು."

■

೧೯೫೩ ಫೆಬ್ರುವರಿ ೨೩ರಂದು ಬರೆದ ಒಂದು 'ಮಾತ್ರೆ':

"ಕುರಿಮಂದೆಯೊಂದರ ನಿಷ್ಕಳಂಕ ಸದಸ್ಯನಾಗಲು ಒಬ್ಬ ಎಲ್ಲದಕ್ಕಿಂತಲೂ ಮೊದಲು ಸ್ವತಃ ಕುರಿಯೇ ಆಗಿರತಕ್ಕದ್ದು."

■

ಬಲು ಚಿಕ್ಕದಾದ, ಮತ್ತು ಆ ತನಕ ತಿಳಿದಿರದಿದ್ದ, ಹೂಬಿಡುವ ಕಳ್ಳಿಯ ಹೊಸ ಪ್ರಭೇದವೊಂದನ್ನು ಸಸ್ಯವಿಜ್ಞಾನಿ ಎ. ವಿ. ಫ್ರಿಕ್ ಎಂಬವರು ಕಾರ್ಡಿಲ್ಲೆರಾ ಪರ್ವತಶ್ರೇಣಿಯ ಅತ್ಯುನ್ನತ ವಾಯುಮಂಡಲದಲ್ಲಿ ಪತ್ತೆ ಹಚ್ಚಿದರು. ತುಂಬ ನಯವಿನಯಪೂರ್ವಕವಾಗಿ ನಿರೂಪಿಸಲಾದ ವರದಿಯಲ್ಲಿ ಅವರು ಆ ಪ್ರಭೇದಕ್ಕೆ 'ಐನ್‌ಸ್ಟೈನಿಯ' ಎಂಬ ಹೆಸರಿಟ್ಟು ವರದಿಯ ಒಂದು ಪ್ರತಿಯನ್ನು ಐನ್‌ಸ್ಟೈನರಿಗೆ ರವಾನಿಸಿದರು. ೧೯೫೩ ಸೆಪ್ಟೆಂಬರ್ ೯ರಂದು ಐನ್‌ಸ್ಟೈನ್ ಲೇಕಾಕ್‌ನಿಂದ ಮಾರೋಲೆ ಬರೆದರು:

"ಮಾನ್ಯರೆ, ನಿಮ್ಮ ಗಂಭೀರ ಚಿಂತನಶೀಲ ಕ್ರಿಯೆ ನನಗೆ ಅಮಿತಮುದವಿತ್ತಿದೆ. ನೀವು ಮಾಡಿರುವ ನಾಮಕರಣ ಯುಕ್ತವಾಗಿದೆ. ಎಷ್ಟರಮಟ್ಟಿಗೆ ಎಂದರೆ ಆ ಪುಟ್ಟ ಸಸ್ಯ ಮಾತ್ರವಲ್ಲ ಖುದ್ದು ನಾನು ಕೂಡ ಆ ಸ್ವರ್ಗೀಯ ಔನ್ನತ್ಯದಲ್ಲಿ ಶಾಂತಿಯಿಂದ ಉಳಿಯುವುದು ಸಾಧ್ಯವಾಗದು. ಸಂತೃಪ್ತಿದಾಯಕವಾದ ನಿಮ್ಮ ಈ ಸದ್ವರ್ತನೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ."

●

ಅಮೆರಿಕದ ಸರಕುಸಾಗಣೆ ಹಡಗೊಂದರ ಮುಖ್ಯ ಎಂಜನಿಯರ್ ಅಮೆರಿಕದಲ್ಲಿದ್ದ ಐನ್‌ಸ್ಟೈನರಿಗೆ, ೧೯೪೬ ಅಕ್ಟೋಬರ್ ೩ರಂದು, ಒಂದು ಕಾಗದ ಬರೆದ. ಇದರಲ್ಲಿ ಆತ ಆ ಹಡಗಿನೊಳಗೆ ನಡೆದಿದ್ದ ಘಟನೆಯನ್ನು ರಂಗುರಂಗಾಗಿ ಬಣ್ಣಿಸಿದ್ದ. ಅರೆಹೊಟ್ಟೆಯಿಂದ ಬಡಕಲಾಗಿದ್ದ ಒಂದು ಮರಿಬೆಕ್ಕನ್ನು ಜರ್ಮನಿಯ ಕಡಲ ದಂಡೆಯಲ್ಲಿ ಕಂಡ ಹಡಗಿನ ಮೇಸ್ತ್ರಿಯೂ ಬಡಗಿಯೂ ಅದನ್ನು ಹಡಗಿಗ ಒಯ್ದು ದತ್ತು ಸ್ವೀಕರಿಸಿದರು ಮತ್ತು ಸಮೃದ್ಧ ಆಹಾರವಿತ್ತು ಚೆನ್ನಾಗಿ ಪೋಷಿಸಿದರು. ಬೆಕ್ಕು ಗುಂಡಗೆ ಉಬ್ಬಿಕೊಂಡಿತು. ತನ್ನ ಸಾಕು ತಂದೆಯರನ್ನು ವಿಶೇಷವಾಗಿ ಹಚ್ಚಿಕೊಂಡಿತು. ಒಮ್ಮೆ ತನ್ನೊಡನೆ ಆಟವಾಡಲು ಯತ್ನಿಸಿದ ಒಬ್ಬ ನಾವಿಕನನ್ನು ಅದು ಪರಚಿತು. ಖಂಡಿತ ಈ ಬೆಕ್ಕಿಗೆ ಪೈತ್ರ್ಯ ಬಡಿದಿದೆ ಎಂಬುದಾಗಿ ಆತ ಬೊಬ್ಬೆ ಹೊಡೆದ. ಆದರೆ ಮೇಸ್ತ್ರಿ ಈ ಆರೋಪವನ್ನು ಒಪ್ಪಲಿಲ್ಲ. ಹೌದು, ತನ್ನ ಮರಿ ಬೆಕ್ಕಿಗೆ ಪೈತ್ರ್ಯ ಬಡಿದಿರುವುದು ನಿಜ. ಜರ್ಮನಿಯನ್ನು ತೊರೆದು ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ನಿರ್ಗಮಿಸಿದ ಐನ್‌ಸ್ಟೈನರಲ್ಲಿದ್ದ ತಾರತಮ್ಯ ಪ್ರಜ್ಞೆಯಂಥ ಪೈತ್ರ್ಯವದು ಎನ್ನುತ್ತ ಅದರ ಕೀರ್ತಿಯನ್ನು ಎತ್ತಿ ಹಿಡಿದ. ಫಲಿತಾಂಶವೇನು ಗೊತ್ತೇ? 'ಸಾಪೇಕ್ಷತೆ'ಗೂ (relativity) 'ಸ್ವಪಕ್ಷತೆ'ಗೂ (kinship) ವ್ಯತ್ಯಾಸವರಿಯದ ನಾವಿಕರು ಆ ಮರಿಬೆಕ್ಕನ್ನು 'ಪ್ರೊಫೆಸರ್ ಆಲ್ಬರ್ಟ್ ಐನ್‌ಸ್ಟೈನ್' ಎಂಬುದಾಗಿ ನಾಮಕರಿಸಿದರು. ೧೯೪೬ ಆಗಸ್ಟ್ ೧೦ರಂದು ಐನ್‌ಸ್ಟೈನ್ ಮಾರೋಲೆ ಬರೆದರು:

"ನೀವು ಕಳಿಸಿದ ಪ್ರೇಮ ಪುರಸ್ಸರ ಮತ್ತು ಕುತೂಹಲಕರ ಮಾಹಿತಿಗಾಗಿ ಧನ್ಯವಾದಗಳು. ನನ್ನ ಹೆಸರು ಹೊತ್ತವನಿಗೆ ನನ್ನ ಹಾಗೂ ನನ್ನ ಕಂಟ ಬೆಕ್ಕಿನ ಹಾರ್ದಿಕ ಶುಭಾಶಯಗಳು. ಈ ವರದಿ ನನ್ನ ಕಂಟ ಬೆಕ್ಕಿಗೆ ತುಂಬ ಖುಷಿಕೊಟ್ಟಿತು. ಕೊಂಚ ಕರುಬು ಕೂಡ. ಕರುಬಿಗೆ ಕಾರಣವೇನೆಂದರೆ ಖುದ್ದು ಇವನ ನಾಮಧೇಯ 'ಟೈಗರ್' ಎಂಬುದು, ನಿಮ್ಮವನ ನಾಮಧೇಯದಂತಲ್ಲದೆ. ಐನ್‌ಸ್ಟೈನ್ ಕುಟುಂಬದ ಜೊತೆ ನಿಕಟಬಾಂಧವ್ಯವೇನನ್ನೂ ವ್ಯಕ್ತಪಡಿಸುವುದಿಲ್ಲ. ನಿಮಗೂ ನನ್ನ ಹೆಸರು ಹೊತ್ತವನ ಸಾಕುತಂದೆಯರಿಗೂ

ಸ್ವತಃ ನನ್ನ ಹೆಸರಿನವನಿಗೂ ಪ್ರೀತಿಪೂರ್ವಕ ಶುಭಾಶಯಗಳು."

■

ಶ್ರೀಮತಿ ಕಾರ್ನೀಲಿಯಾ ವೂಲ್ಫ್ ಎಂಬಾಕೆ ಐನ್‌ಸ್ಟೈನರ ಹಳೆಯ ಗೆಳತಿ. ಇವರಿಗೆ ಐನ್‌ಸ್ಟೈನ್ ೧೯೨೭ರಲ್ಲಿ ತಮ್ಮ ಛಾಯಾಚಿತ್ರವನ್ನು ಕಳಿಸಿದರು. ಅದರ ತಳದಲ್ಲಿ ಈ ಮುಂದಿನ ಸಾಲುಗಳನ್ನು ಬರೆದು ಸಹಿ ಹಾಕಿದ್ದರು:

"ಎಲ್ಲೇ ಹೋಗಲಿ ಎಲ್ಲೇ ತಂಗಲಿ
ಕಾಣ್ಬುದು ನನ್ನಯ ತಸಬೀರ್: ಮೇಜಿನ
ಮೇಗಡೆ, ಕೊಠಡಿಯ ಒಳಗಡೆ, ಕೊರಳಿನ
ಉರುಳಲಿ, ಅಥವಾ ಗೋಡೆಯ ಕೊಡಿಯುಲಿ!
ಹೆಂಗಸು ಗಂಡಸರೆಲ್ಲರಿಗಿದು ಬಲು
ಮೋಜಿನ ಆಟ
ಅಸುನಯ ವಿನಯದಿ ದಸ್ಕತ್ತನು
ಯಾಚಿಸುವೀ ಹೂಟ!
ಘನ ವಿದ್ವಾಂಸನ ನುಡಿಮುತ್ತಿವರಿಗೆ
ಆಗದು ಪಥ!
ಆತನ ಗೀತಿಕೆಯೊಂದೇ ಇವರಿಗೆ
ಶಾಶ್ವತ ತಥ್ಯ!
ಸಂತಸ ಸಂಭ್ರಮ ಪರಿವೇಷ್ಟಿತನಾಂ
ವಿಭ್ರಮೆಗೊಂಡಿದೆ
ಮತಿ ಹೊಗಳಿಕೆಯಂ ಕೇಳುತ — ಬುದ್ಧಿಗೆ
ಕಾವಳ ಕವಿಯುದ
ವೇಳೆಯೊಳಚ್ಚರಿ ಪಡುವೆಂ: ಓಡಿದಿದೆ
ನನಗುನ್ಮಾದ
ನಿಜಕೂ ಈ ಜನ ಜಂಗುಳಿ ಮನ ನೆಮ್ಮದಿ
ಭಾವದೊಳಿದೆ!"

■

ಐನ್‌ಸ್ಟೈನರ ಪತ್ರಗಳ ನಡುವೆ ದೊರೆತ ಚೌಪದಿಯೊಂದರ ಅನುವಾದವಿಲ್ಲಿದೆ. ಯಾವಾಗ ಅಥವಾ ಯಾವ ಸಂದರ್ಭದಲ್ಲಿ ಇದನ್ನುಬರೆಯಲಾಯಿತೆಂಬುದಕ್ಕೆ ಇವರಲ್ಲಿ ಸೂಚನೆ ದೊರೆಯುತ್ತಿಲ್ಲ:

"ನೋಟಕ್ಕೆ ಪುಟ್ಟಪದ 'ನಾವು'– ನಾನಿದನು
ಶಂಕಿಸುವೆ, ಕಾರಣ ಗೊತ್ತೆ?
ಇನ್ನೊಬ್ಬ ವ್ಯಕ್ತಿ ಎಂದೆಂದಿಗೂ 'ನಾನಾ'
ಗಲಾರನಿದು ಚಿರಸತ್ಯ;
ನೇರವಲ್ಲದುದೇನೊ ಹುದುಗಿಹುದು ನಂಬ
ಲಾರೆನು ನಾನೊಡಂಬಡಿಕೆ
ತೋರ್ಕೆ ಒಪ್ಪಂದ ಒಗ್ಗಟ್ಟು ಮುಸುಕಿನ
ಒಳಗೆ ಪಾತಾಳದಾಕಳಿಕೆ!"

■

ದಕ್ಷಿಣ ಆಫ್ರಿಕದ ಒಂದು ವಸತಿ ಶಾಲೆಯಲ್ಲಿದ್ದ ಶಿಕ್ಷಣಾರ್ಥಿಯಿಂದ ಪ್ರಿನ್‌ಸ್ಟನ್ನಿನಲ್ಲಿದ್ದ ಐನ್‌ಸ್ಟೈನರಿಗೆ ಸುದೀರ್ಘವೂ ಮುಗ್ಧಾಕರ್ಷಕವೂ ಆದ ಒಂದು ಪತ್ರ ಬಂತು. ಇವರ ದಸ್ಕತ್ತು ಬೇಕೆಂಬ ಬೇಡಿಕೆ ಅದರಲ್ಲಿತ್ತು. ಅದರ ಉದ್ಧೃತಾತಾಂಶವಿದು "ಪ್ರಾಯಶಃ ಹಲವು ಯುಗಗಳಷ್ಟು ಹಿಂದೆಯೇ ನಾನು ನಿಮಗೆ ಕಾಗದ ಬರೆದಿರುತ್ತಿದ್ದೆ. ನೀವಿನ್ನೂ ಜೀವಂತವಾಗಿರುವಿರೆಂಬ ಸಂಗತಿ ನನಗೆ ಗೊತ್ತಿರಲಿಲ್ಲ, ಅಷ್ಟೆ. ನನಗೆ ಇತಿಹಾಸದಲ್ಲಿ ಆಸಕ್ತಿ ಇಲ್ಲ. ಹೀಗಾಗಿ ನೀವು ಹದಿನೆಂಟನೆಯ ಶತಮಾನದಲ್ಲಿ ಅಥವಾ ಆ ಸುಮಾರಿಗೆ ಜೀವಿಸಿದ್ದಿರೆಂದು ಭಾವಿಸಿದ್ದೆ. ಸರ್ ಐಸಾಕ್ ನ್ಯೂಟನ್ನರ ಅಥವಾ ಇನ್ನಾರ ಹೆಸರಿನ ಜೊತೆಗೊ ನಿಮ್ಮ ಹೆಸರನ್ನು ನಂಟು ಹಾಕಿ ನಾನು ಈ ಗೊಂದಲಕ್ಕೆ ಸಿಕ್ಕಿ ಹಾಕಿಕೊಂಡುದಾಗಿರಬೇಕು." ಇದೇ ಕಾಗದದಲ್ಲಿ ಬರೆದಿದ್ದ ಇನ್ನೊಂದು ವಿಷಯ ಸ್ವಾರಸ್ಯಕರವಾಗಿತ್ತು. ಶಿಕ್ಷಣಾರ್ಥಿ ಮತ್ತು ಶಿಕ್ಷಣಾರ್ಥಿಯ ಮಿತ್ರ ಇಬ್ಬರಿಗೂ ಖಗೋಳವಿಜ್ಞಾನದಲ್ಲಿ ಅಪಾರ ಆಸಕ್ತಿ. ರಾತ್ರಿ ವೇಳೆ ಗ್ರಹ ನಕ್ಷತ್ರಗಳನ್ನು ವೀಕ್ಷಿಸಲೆಂದು ಅವರು ಹಿರೇಮಣಿಯ ಕಾವಲು ಕೊಠಡಿಯ ಎದುರೇ, ತಾವು ಸಿಕ್ಕಿಹಾಕಿಕೊಂಡು ಅನುಭವಿಸಬೇಕಾಗಬಹುದಾದ ಅಪಾಯವನ್ನೂ ಲೆಕ್ಕಿಸದೆ, ತೆವಳಿ ಸಾಗುತ್ತಿದ್ದರು. ವಕ್ರಾಕಾಶವನ್ನು ಅರ್ಥವಿಸುವುದು ಇನ್ನೂ ಸಾಧ್ಯವಾಗಿಲ್ಲವೆಂದು ಆ ಶಿಕ್ಷಣಾರ್ಥಿಗೆ ಚಿಂತೆ. ಉಗ್ರ ದೇಶಭಕ್ತಿಯನ್ನು ಪ್ರದರ್ಶಿಸುವ "ನೀವು ಅಮೆರಿಕದ ಪೌರರಾಗಿರುವಿರೆಂದು ತಿಳಿದು ಖೇದವಾಯಿತು. ಇಂಗ್ಲೆಂಡಿನಲ್ಲಿ ನೀವಿದ್ದಿದ್ದರೆ ನನಗೆ ಹೆಚ್ಚು ಇಷ್ಟವಾಗಿರುತ್ತಿತ್ತು." ಎಂಬ ಮಾತುಗಳಿಂದ ಆ ಕಾಗದ ಮುಕ್ತಾಯವಾಗಿತ್ತು. ಐನ್‌ಸ್ಟೈನರ ಉತ್ತರ (೨೫–೮–೧೯೫೪):

"ಪ್ರಿಯ ಕುಮಾರ! ಜುಲೈ ೧೦ರ ನಿನ್ನ ಕಾಗದಕ್ಕಾಗಿ ಅಭಿವಂದನೆಗಳು. ನಾನಿನ್ನೂ ಜೀವಂತರ ಸಾಲಿನಲ್ಲಿರುವುದಕ್ಕೆ ನಿನ್ನ ಕ್ಷಮೆ ಯಾಚಿಸಬೇಕಾಗಿದೆ. ಹೇಗೂ ಇದಕ್ಕೊಂದು ಮದ್ದುಂಟು. ವಕ್ರಪ್ರಕಾಶದ ಬಗ್ಗೆ ಚಿಂತಿಸಬೇಡ. ಅದಕ್ಕೆ ದೊರೆಯಬಹುದಾದ ಅಂತಸ್ತುಗಳ ಪೈಕಿ ಈ ಅಂತಸ್ತೇ ಅತ್ಯಂತ ಸುಲಭವಾದದ್ದೆಂದು ಮುಂದೊಂದು ದಿನ ನೀನು ತಿಳಿಯಲಿರುವೆ. ಸರಿಯಾದ ಭಾಷೆಯಲ್ಲಿ ಬಳಸಿದ್ದಾದರೆ 'ವಕ್ರ' ಪದಕ್ಕೆ ದೈನಂದಿನ ಭಾಷೆಯ ಅದೇ ಅರ್ಥವಿಲ್ಲ. ನಿನ್ನ ಮತ್ತು ನಿನ್ನ ಸ್ನೇಹಿತನ ಖಗೋಳ ವೈಜ್ಞಾನಿಕಾನ್ವೇಷಣೆಗಳು ಭವಿಷ್ಯದಲ್ಲಿ ಎಂದೂ ನಿನ್ನ ಶಾಲಾ ಸರಕಾರದ ಕಣ್ಣುಗಳಿಗೆ ಮತ್ತು ಕಿವಿಗಳಿಗೆ ಪತ್ತೆ ಆಗಲಾರವೆಂಬುದಾಗಿ ಆಶಿಸುತ್ತೇನೆ. ಒಳ್ಳೆಯ ಪೌರರ ಪೈಕಿ ಹೆಚ್ಚಿನವರು ತಮ್ಮ ಸರಕಾರದ ಬಗೆಗೆ ತಳೆಯುವ ನಿಲವು ಇದೇ—ನನ್ನ ಅಭಿಪ್ರಾಯದಲ್ಲಿ ಇದು ಸರಿಯಾದದ್ದೇ."

ಐನ್‌ಸ್ಟೈನರ ಹಸ್ತಾಕ್ಷರವನ್ನು ಒಳಗೊಂಡಿದ್ದ ಈ ಕಾಗದ ಬಂದಾಗ ಆ ಶಿಕ್ಷಣಾರ್ಥಿಗೆ ರೋಮಾಂಚನವಾಯಿತು. ಆದರೆ ಆ ಶಿಕ್ಷಣಾರ್ಥಿಯ ಹೆಸರಿನ ಮೊದಲ ಭಾಗ ತುಸು ವಿಚಿತ್ರವಾಗಿದ್ದುದರಿಂದ ಐನ್‌ಸ್ಟೈನ್ ಆಕೆಯನ್ನು ಹುಡುಗನೆಂದು ತಪ್ಪಾಗಿ ಭಾವಿಸಿದ್ದರು. ೧೯೪೬ರ ಸೆಪ್ಟೆಂಬರ್ ೧೯ರಂದು ಆಕೆ ಮಾರೋಲೆ ಬರೆದಳು, "ನಿಮಗೆ ಹೇಳಲು ಮರೆತಿದ್ದೆ......ನಾನು ಹುಡುಗಿ ಆಗಿದ್ದೇನೆಂದು. ಅಂದರೆ ನಾನು ಹುಡುಗಿ. ಇದಕ್ಕಾಗಿ ನಾನು ಯಾವಾಗಲೂ ಅತಿಯಾಗಿ ಪರಿತಪಿಸುತ್ತೇನೆ. ಆದರೆ ಈಚೆಗೆ ನಾನು ಈ ವಸ್ತುಸ್ಥಿತಿಗೆ ಹೆಚ್ಚು ಕಡಿಮೆ ಒಗ್ಗಿಕೊಂಡಿದ್ದೇನೆ." ಮುಂದುವರಿಯುತ್ತ ಇದೇ ಕಾಗದದಲ್ಲಿ ಅವಳು "ನೀವಿನ್ನೂ ಜೀವಂತರಾಗಿದ್ದೀರೆಂಬ ಸಂಗತಿ ನನ್ನ ಅರಿವಿಗೆ ಬಂದುದು ನನ್ನನ್ನು ಹತಾಶೆಗೊಳಿಸಿತೆಂಬ ಧ್ವನಿ ನನ್ನ ಕಾಗದದಲ್ಲಿ ಸ್ಫುರಿಸಬೇಕೆಂಬುದು ಖಂಡಿತ ನನ್ನ ಉದ್ದೇಶವಾಗಿರಲಿಲ್ಲ," ಎಂದಳು.

ಐನ್‌ಸ್ಟೈನರ ಮಾರೋಲೆ:

"ನೀನು ಹುಡುಗಿ ಆಗಿರುವುದಕ್ಕೆ ನನಗೇನೂ ಚಿಂತೆ ಇಲ್ಲ, ಆದರೆ ಮುಖ್ಯ ಸಂಗತಿ ಏನೆಂದರೆ ಖುದ್ದು ನೀನೇ ಇದರ ಬಗ್ಗೆ ಚಿಂತಿಸದಿರುವುದು. ಇದಕ್ಕೇನೂ ಕಾರಣವಿಲ್ಲ."

*

ಪ್ರಿನ್ಸ್‌ಟನ್ನಿನಲ್ಲಿದ್ದ ಐನ್‌ಸ್ಟೈನ್ ೧೯೩೫ರಲ್ಲಿ ಈ ಮುಂದಿನ ಬಾಬನ್ನು ಬರೆದರು. ಹಸ್ತಪ್ರತಿಯ ಮೇಲೆ 'ಪ್ರಕಟಿಸಲಿಲ್ಲ' ಎಂಬ ಷರಾ ಇದೆ......ಈ ಬರೆಹ ಅಸಾಧಾರಣವಾಗಿ ಅತಿ ಕಟುವಾಗಿರುವುದರಿಂದ ಪ್ರಾಯಶಃ ಅವರಿದನ್ನು ಪ್ರಕಟಿಸದಿದ್ದುದಾಗಿರಬಹುದು. ಆದರೆ ಇದನ್ನು ಬರೆದುದರಿಂದ ಅವರಿಗೆ ಮಾನಸಿಕ ಸ್ವಾಸ್ಥ್ಯ ಒದಗಿರಬೇಕು:

"ಯೂರೋಪಿನ ಹೃದಯಭಾಗದಲ್ಲಿ ಅನಾವರಣಗೊಳ್ಳುತ್ತಿರುವ ರುದ್ರ ದೃಶ್ಯ ಜರ್ಮನಿಗೆ ಶಾಶ್ವತ ಕಳಂಕ ಬಡಿಯುವಂತೆ ಅತಿ ಭೀಕರವಾಗಿದೆ, ಮತ್ತು ಅವಮಾನಪ್ರದವಾಗಿದೆ. ತನ್ನನ್ನು ನಾಗರಿಕವೆಂದು ಕರೆದುಕೊಳ್ಳುತ್ತಿರುವ ಜನಾಂಗಗಳ ಸಮುದಾಯಕ್ಕೆ ಇದು ಖಂಡಿತವಾಗಿಯೂ ಭೂಷಣಪ್ರಾಯವಾದುದಲ್ಲ.

"ಶಾಲಾಧ್ಯಾಪಕರ ಹಾಗೂ ಕವಾಯತಿ ಸಾರ್ಜೆಂಟುಗಳ ಅನುಸ್ಯೂತ ಪೀಳಿಗೆ ಜರ್ಮನ್ ಮಂದಿಗೆ ಶತಮಾನಗಳಿಂದಲೂ ಮತಿಭ್ರಾಂತಿಯನ್ನೂಡುತ್ತ ಬಂದಿದೆ. ಕಠಿಣ ಪರಿಶ್ರಮದ ಶಿಕ್ಷಣ ಇವರಿಗೆ ದೊರೆತಿದೆ. ಅನೇಕ ವಿಷಯ



ಜನ ಕಲ್ಯಾಣದೆಡೆಗೆ ತೀವ್ರಗತಿಯ ಮುನ್ನಡೆ

ಕರ್ನಾಟಕ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ

—ಶ್ರೀಮತಿ ಇಂದಿರಾಗಾಂಧಿ

ಪ್ರಧಾನಿಯವರ ಹೊಸ ೨೦ ಅಂಶಗಳ ಕಾರ್ಯಕ್ರಮವನ್ನು ಇನ್ನೂ ಹೆಚ್ಚಿನ ನಿಷ್ಠೆಯಿಂದ ಜಾರಿಗೊಳಿಸುವುದಾಗಿ ಕರ್ನಾಟಕ ಸರ್ಕಾರ, ಗಣರಾಜ್ಯ ದಿನಾಚರಣೆಯ ಈ ಶುಭದಿನದಂದು ಪ್ರತಿಜ್ಞೆ ಮಾಡುವುದು. ಹಿಂದಿನ ಸಾಧನೆಯ ಸಿಂಹಾವಲೋಕನ ಮುಂದಿನ ಪ್ರಗತಿಗೆ ಚೇತನ.

ಹಕ್ಕುಪತ್ರಗಳ ವಿತರಣೆ: ಉಳುವವನಿಗೇ ಭೂಮಿ ನೀಡುವ ಭೂ ಸುಧಾರಣೆ ಕಾಯ್ದೆಗೆ ಹೊಸ ಹುರುಪು ತುಂಬಿ ಶೇಕಡಾ ೯೫ ರಷ್ಟು ಗೇಣಿದಾರರ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ವಿತರಣೆ ಮಾಡಲಾದ ಹಕ್ಕು ಪತ್ರಗಳ ಸಂಖ್ಯೆ ೫೭ ಸಾವಿರದಿಂದ ೩ ಲಕ್ಷ ೭೨ ಸಾವಿರಕ್ಕೇರಿದೆ. ಇದು ಸಾಧನೆಗೆ ಸಾಕ್ಷಿ.

ನೀರಾವರಿಗೆ ಪ್ರಾಧಾನ್ಯತೆ: ಹಾರಂಗಿ, ಹೇಮಾವತಿ ಮತ್ತು ಮಲಪ್ರಭಗಳಿಂದ ನೀರು ಬಿಡುವುದರ ಮೂಲಕ ಹೆಚ್ಚಿನ ಭೂಮಿ ನೀರಾವರಿಗೆ ಒಳಪಡಿಸಲಾಗಿದೆ. ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ಇತರ ನೀರಾವರಿ ಯೋಜನೆಗಳನ್ನು ಚುರುಕುಗೊಳಿಸಿ ೮೧೩೪೮ ಹೆಕ್ಟೇರ್ ಹೆಚ್ಚಿನ ಭೂಮಿಗೆ ನೀರು ನೀಡಲು ಆದ್ಯತೆ ನೀಡಲಾಗಿದೆ.

ಒಂದು ಲಕ್ಷ ಕುಟುಂಬಗಳಿಗೆ ಮನೆ: ಜನವರಿ ೧೯೮೦ ರಿಂದ ಅಕ್ಟೋಬರ್ ೧೯೮೧ರ ವರೆಗೆ ೧.೧೮ ಲಕ್ಷ ಮನೆಗಳನ್ನು ನೀಡಲಾಗಿದೆ. ಇದೇ ಅವಧಿಯಲ್ಲಿ ೧೨೮೧೨ ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ.

ಎಲ್ಲ ಹಳ್ಳಿಗಳಿಗೆ ಶಾಲೆ: ೩೦೦ ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರತಿ ಹಳ್ಳಿಗೂ ಶಾಲೆ ಮತ್ತು ಶಾಲಾ ಕೊಠಡಿಯನ್ನು ನೀಡಲು ನಿರ್ಧರಿಸಲಾಗಿದ್ದು, ಈ ವರ್ಷ ೧೬೮೮ ಶಾಲಾ ಕೊಠಡಿಗಳ ನಿರ್ಮಾಣ ಕೈಗೊಳ್ಳಲಾಗಿದೆ.

ರೇಷ್ಮೆ ಉತ್ಪಾದನೆಯಲ್ಲಿ ಹೆಚ್ಚಳ: ಜಾಗತಿಕ ಬ್ಯಾಂಕ್ ನೆರವಿನಿಂದ ಬೃಹತ್ ರೇಷ್ಮೆ ಅಭಿವೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ೧೯೮೫ರಲ್ಲಿ ಈ ಯೋಜನೆ ಪೂರ್ಣಗೊಂಡಾಗ ರೇಷ್ಮೆ ವಾರ್ಷಿಕ ಉತ್ಪಾದನೆ ೨೩೦೦ ಟನ್‌ಗಳಿಂದ ೪೩೦೦ ಟನ್‌ಗಳಿಗೆ ಹೆಚ್ಚುತ್ತದೆ.

ಬಡತನ ನಿರ್ಮೂಲನೆಗೆ ಒಂದು ಯೋಜನೆ: ಇಡೀ ರಾಜ್ಯವನ್ನು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಂತರ್ಗತ ತರಲಾಗಿದ್ದು ಇಲ್ಲಿಯವರೆಗೆ ೧.೫ ಲಕ್ಷ ರೈತರನ್ನು ಬಡತನ ರೇಖೆಗಿಂತ ಮೇಲೆ ಬರಲು ಸಹಾಯ ನೀಡಲಾಗಿದೆ. ಈ ವರ್ಷ ೧.೦೫ ಲಕ್ಷ ರೈತರನ್ನು ಬಡತನ ರೇಖೆಗಿಂತ ಮೇಲೆತ್ತಲು ಸಹಾಯ ನೀಡುವ ಯೋಜನೆ ಇದೆ. ವಿಶೇಷ ಯೋಜನೆಯ ಪ್ರಕಾರ ಆರನೆಯ ಯೋಜನೆಯಲ್ಲಿ ೫.೭೬ ಲಕ್ಷ ಹರಿಜನ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.

'ಶ್ರಮ ಏವ ಜಯತೆ' ಎಂಬ ಪ್ರಧಾನಿಯವರ ಸಂದೇಶಕ್ಕೆ ಬದ್ಧವಾಗಿರುವ ಕರ್ನಾಟಕ ಸರ್ಕಾರ ಮುಂಬರುವ ವರ್ಷ ಕೃಷಿ, ವಿದ್ಯುಚ್ಛಕ್ತಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ರಾಷ್ಟ್ರೀಯ ಉತ್ಪಾದನಾ ವರ್ಷವನ್ನು ಯಶಸ್ವಿಗೊಳಿಸುವಲ್ಲಿ ತನ್ನ ಹಿರಿದಾದ ಕೊಡುಗೆ ನೀಡಲು ಕಂಕಣಬದ್ಧವಾಗಿದೆ.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ

ಗಳಲ್ಲಿ ಇವರು ಪರಿಣತರೂ ಆಗಿದ್ದಾರೆ. ಆದರೆ ಇವುಗಳ ಜೊತೆಯಲ್ಲೇ ಇವರನ್ನು ಗುಲಾಮಗಿರಿಯ ಕುರ್ನಿಶಾತು ಮನೋಭಾವಕ್ಕೂ ದಂಡಿನ ಮಾಮೂಲೀ ಚರ್ವಿತ ಚರ್ವಣ ಮತ್ತು ಪಾಶವೀಯತೆಗಳಿಗೂ ಪಳಗಿಸಿ ಹೊಂದಿಸಲಾಗಿದೆ. ವೈಮರ್ ಗಣರಾಜ್ಯದ ಯುದ್ಧೋತ್ತರದ ಪ್ರಜಾಪ್ರಭುತ್ವಾತ್ಮಕ ಸಂವಿಧಾನ ಜರ್ಮನರಿಗೆ ದೈತ್ಯನ ಉಡುಗೆಗಳು ಉಂಗುಷ್ಟ ಮಹಾರಾಜನಿಗೆ ಪೊದರ್ಪವಷ್ಟು ಅಡಕವಾಗಿ ಹೊಂದಿಕೊಂಡಿತು ! ಆಗ ಹಣದುಬ್ಬರ ಮತ್ತು ಮುಗ್ಗಟ್ಟು ಕವಿದು ಪ್ರತಿಯೊಬ್ಬನೂ ಭೀತ ಮತ್ತು ಉದ್ರಿಕ್ತ ವಾತಾವರಣದಲ್ಲಿ ನವೆಯುವಂತೆ ಮಾಡಿದುವು.

"ಹಿಟ್ಲರ್ ರಂಗಪ್ರವೇಶ ಮಾಡಿದ. ಸನ್ನಿವೇಶ ಹಾಗೂ ನಿಸರ್ಗ ಇವುಗಳ ಕೂಡಿಕೆಯ ಪರಿಣಾಮವಾಗಿ ಈತ ತನಗಿಂತ ಮೇಲು ಮಜಲಿನಲ್ಲಿದ್ದ ಎಲ್ಲವರ ಎದುರೂ ಅಸೂಯೆ ಮತ್ತು ಹಾಲಾಹಲ ಕಾರುತ್ತಿದ್ದ. ಬೌದ್ಧಿಕವಾಗಿ ಇವನದು ಮಿತಸಾಮರ್ಥ್ಯ. ಯಾವುದೇ ಕೆಲಸಕ್ಕೂ ನಾಲಾಯಕ್ಕು. ನಿಮ್ನ ಮಧ್ಯಮ ವರ್ಗದಿಂದ ಮೇಲಕ್ಕೆ ಜಿಗಿದ ಹಿಟ್ಲರ್ ಜೀವನ ಮಟ್ಟಗಳಲ್ಲಿ ಅಧಿಕ ಸಮತೆಗಳಿಸಲು ಹೋರಾಡುತ್ತಿದ್ದ ಕಾರ್ಮಿಕ ವರ್ಗವನ್ನು ಕೂಡ ದ್ವೇಷಿಸುವಷ್ಟು ವರ್ಗಪ್ರತಿಷ್ಠೆಯನ್ನು ತನ್ನಲ್ಲಿ ತುಂಬಿಕೊಂಡಿದ್ದ. ಅಧಿಕಾರ ಕಬಳಿಸಬೇಕೆಂಬ ತನ್ನ ಉಗ್ರ ಹಂಬಲವನ್ನು ಈಡೇರಿಸಿಕೊಳ್ಳುವ ಹಾದಿಯಲ್ಲಿ ಇವನು ಗುಡುಗುತ್ತಿದ್ದ ಭಾಷಣಗಳು ಹಗೆತನದ ಕಟ್ಟೆಬಿರಿವ ಕಾವಿನಿಂದ ಅರ್ಥರಹಿತವಾಗಿದ್ದುವಾದರೂ ಇವನ ಜೀವನ ಮತ್ತು ದೃಷ್ಟಿಗಳೊಡನೆ ಸಹಮತರಾಗಿದ್ದವರಿಗೆ ಅಪ್ಯಾಯಮಾನವಾಗಿದ್ದುವೆಂದು ಇವನಿಗೆ ತಿಳಿಯಿತು. ಓಣಿ ಮತ್ತು ಗಡಂಗುಗಳಿಂದ ಈ ತಿರುಕುಳಿ ಮಂದೆಯನ್ನು ಹೆಕ್ಕಿ ತನ್ನ ಸುತ್ತ ವ್ಯವಸ್ಥಿತವಾಗಿ ನೇಯ್ದುಕೊಂಡ. ಹಿಟ್ಲರ್ ತನ್ನ ರಾಜಕೀಯ ಜೀವನ ಆರಂಭಿಸಿದ್ದು ಹೀಗೆ.

"ಆದರೆ ಹಿಟ್ಲರನಿಗೆ ಧುರೀಣತೆಯ ಅರ್ಹತೆ

ಯೊಂದರ ಎದುರೂ ಅವನಲ್ಲಿ ತಹತಹಿಸುತ್ತಿದ್ದ ಕಟುದ್ವೇಷ. ಅವರಲ್ಲೂ ರಕ್ಷಣಾರಹಿತ ಅಲ್ಪಸಂಖ್ಯಾತ ಯೆಹೂದ್ಯರ ಬಗೆಗಿನ ತಿರಸ್ಕಾರ. ಇವರ ಬೌದ್ಧಿಕ ಸಂವೇದಶೀಲತೆ ಅವನಲ್ಲಿ ಒಂದು ವಿಧದ ಅಸಹನೆಯನ್ನು ಪ್ರೇರಿಸಿತ್ತು. ಈ ಸಂವೇದನಶೀಲತೆಯನ್ನು ಅವನು ಸ್ವಲ್ಪ ಮಟ್ಟಿಗೆ ಸಾಕರಣೀಯವಾಗಿಯೇ 'ಅಜರ್ಮನ್' ಎಂಬುದಾಗಿ ಪರಿಗಣಿಸಿದ್ದ.

"ಈ ಎರಡು ಶತ್ರುಗಳ ಎದುರು ಹಿಟ್ಲರ್ ಹೂಡಿದ ಉದ್ರೇಕಕಾರಿ ವಾಗ್ಸಮರಗಳು ಅವನಿಗೆ ಜನಜಂಗುಳಿಯ ಬೆಂಬಲ ಒದಗಿಸಿಕೊಟ್ಟವು. ಆ ಮಂದಿಗೆ ಆತ ಅದ್ಭುತ ವೈಭವಗಳನ್ನೂ ಸುವರ್ಣಯುಗವನ್ನೂ ಆಶ್ವಾಸಿಸಿದ. ಕವಾಯತಿ, ಆಜ್ಞೆ ಅಂಧವಿನೀತತೆ ಮತ್ತು ಕ್ರೌರ್ಯ ಇವುಗಳ ಬಗೆಗೆ ಜರ್ಮನಿಯಲ್ಲಿ ಶತಮಾನಗಳ ಕಾಲದಿಂದ ಬೆಳೆದು ಬಂದಿದ್ದ ಆಸಕ್ತಿ ಅಭಿರುಚಿಗಳನ್ನು ಆತ ಸ್ವಂತೋದ್ದೇಶಗಳ ಈಡೇರಿಕೆಗೆ ತುಂಬ ಮುತ್ಸದ್ದಿತನದಿಂದ ಬಳಸಿಕೊಂಡ. ಹೀಗೆ ಹಿಟ್ಲರ್ ಫ್ಯೂಹರ್ ಆದ.

"ಅವನ ಬೊಕ್ಕಸಗಳಿಗೆ ಹಣದ ಹೊಳೆಯೇ ಹರಿದು ಬಂದಿತು. ಆಸ್ತಿವಂತ ವರ್ಗಗಳು ಇದಕ್ಕೆ ಸಲ್ಲಿಸಿದ ದೇಣಿಗೆ ಕಡಿಮೆ ಏನೂ ಆಗಿರಲಿಲ್ಲ. ಜನರ ಸಾಮಾಜಿಕ ಹಾಗೂ ಆರ್ಥಿಕ ವಿಮೋಚನೆಗಾಗಿ ವೈಮರ್ ಗಣರಾಜ್ಯ ಪ್ರವರ್ತಿಸಿದ್ದ ಕ್ರಮಗಳನ್ನು ರದ್ದುಗೊಳಿಸಲು ಉಪಯುಕ್ತವಾಗಬಲ್ಲ ಒಂದು ಹತ್ಯಾರನ್ನು ಈ ವರ್ಗಗಳು ಅವನಲ್ಲಿ ಕಂಡವು. ಪ್ರಪಂಚಯುದ್ಧಕ್ಕೆ ಮೊದಲು ಜನರಿಗೆ ಅಭ್ಯಾಸವಾಗಿ ಹೋಗಿದ್ದ ಒಂದು ಬಗೆಯ ರಮ್ಯ ಮತ್ತು ಕಪಟ ಸ್ವದೇಶಾಭಿಮಾನಪೂರ್ವಕ ಶಬ್ದಜಾಲ ಮತ್ತು ಯೆಹೂದ್ಯದ್ವೇಷಿಗಳು ತಮ್ಮ ಕುಟಿಲೋದ್ದೇಶಗಳ ಈಡೇರಿಕೆಗೆಂದೇ ಉಪಜ್ಞಿಸಿದ 'ಆರ್ಯ' ಅಥವಾ ನಾರ್ಡಿಕ್ ಜನಾಂಗದ ಆರೋಪಿತ ಶ್ರೇಷ್ಠತ್ವದ ಬಗೆಗಿನ ಕಟ್ಟು ಕತೆ ಇವನ್ನು ಹಿಟ್ಲರ್ ಜನರ ಮುಂದೆ ಯಶಸ್ವಿಯಾಗಿ ಬಿತ್ತರಿಸಿದ. ಅವನು ಎಡೆಬಿಡದೆ ಗಳಹುತ್ತಿದ್ದ ಈ ಬೊಂತೆಯನ್ನು ಖುದ್ದು ಅವನೇ ಎಷ್ಟರ ಮಟ್ಟಿಗೆ ನಂಬಿದ್ದನು …


ಎದ್ದುತಿದ್ದ ವ್ಯಕ್ತಿತ್ವದ ಕಾರಣವಾಗಿ ಅಸಾಧ್ಯವೇ ಸೈ. ಆದರೆ ಒಂದಂತೂ ಖರೆ. ಅವನ ಸುತ್ತಮುತ್ತ ಜಮಾಯಿಸಿಕೊಂಡಿದ್ದವರ ಪೈಕಿ ಅಥವಾ ನಾಟ್ಸೀ ಅಲೆಯು ಪರಿಣಾಮವಾಗಿ ಮೇಲಕ್ಕೇರಿದವರ ಪೈಕಿ ಹೆಚ್ಚಿನವರು ತಮ್ಮ ಅನೈತಿಕ ವಿಧಾನಗಳ ಅಸತ್ಯವನ್ನು ಅರಿತಿದ್ದ ಕಠಿನಮನಸ್ಕ ಶೂನ್ಯವಾದಿಗಳಾಗಿದ್ದರು."

•

ಪ್ರಾಯಶಃ ಮ್ಯೂನಿಕ್ಕನಲ್ಲಿ ವಾಸಿಸುತ್ತಿದ್ದ ಒಬ್ಬ ವೃತ್ತಿ ಸಂಗೀತಗಾರನಿಂದ ೧೯೩೩ರ ತರುಣದಲ್ಲಿ, ಐನ್‌ಸ್ಟೈನರಿಗೊಂದು ಕಾಗದ ಬಂದಿತು. ಕೆಲಸ ಕಳೆದುಕೊಂಡಿದ್ದ ಅವನು ನಿಜಕ್ಕೂ ಕ್ಷುಬ್ಧ ಮನಸ್ಕನಾಗಿದ್ದ, ನಿರುತ್ಸಾಹಿಯಾಗಿದ್ದ. ಹೀಗಿದ್ದಾಗ್ಯೂ ಅವನು ಐನ್‌ಸ್ಟೈನರೊಂದಿಗ ಭಾವಸಾಮ್ಯ ಹೊಂದಿದವನಾಗಿದ್ದಿರಬೇಕು. ಅವನ ಕಾಗದ ಕಾಣೆ ಆಗಿದೆ. ಉಳಿದಿರುವುದೇನಿದ್ದರೂ ಐನ್‌ಸ್ಟೈನರ ಮಾರೋಲೆ ಮಾತ್ರ. ಇದರ ತಾರೀಕು ೫ ಏಪ್ರಿಲ್ ೧೯೩೩ ಆಗಿರುವುದರಿಂದ ಐನ್‌ಸ್ಟೈನ್ ಇದನ್ನು ಪ್ರಾಯಶಃ ಲೇಕಾಕ್‌ನಿಂದ ರವಾನಿಸಿದುದಾಗಿರಬಹುದು. ಇಲ್ಲಿ ಈ ಕಾಗದದಿಂದ ಭಾಗಶಃ ಉದ್ಧರಿಸಿದೆ. ಇದರಲ್ಲಿ ಮರುಕೊಳಿಸುತ್ತಿರುವ ನಿರಾಶೆ ಕಾಲ ರಹಿತವಾದದ್ದು. ಸ್ವತಃ ಐನ್‌ಸ್ಟೈನರೇ ತಮುಸ್ಸಿನ ವಿರುದ್ಧ ತಮ್ಮ ಕದನವನ್ನು ಎಂದೂ ನಿಲ್ಲಿಸಲಿಲ್ಲ-ವೆಂಬುದೊಂದೇ ಇದರಲ್ಲಿ ಮಿನುಗುತ್ತಿರುವ ಆಶಾಜ್ಯೋತಿ. ಮೊದಲ ವಾಕ್ಯದಲ್ಲಿ ಕಂಡುಬರುವ ಜಾಗರೂಕ ಅನಾಮಿಕತ್ವವನ್ನು ಗಮನಿಸಿ. ಹೀಗಾಗಿ ಈ ಕಾಗದ ಪಡೆವಾತ ಸುರಕ್ಷಿತನಾಗಿರುತ್ತಾನೆ:

"ಬೆಲ್ಜಿಯನ್ ಅಕ್ಯಾಡೆಮಿಯು ದ್ವಾರಾ ನೀವು ಬರೆದ ಕಾಗದದ ವಿಳಾಸದಾರ ನಾನೇ... ವೃತ್ತಪತ್ರಿಕೆಗಳನ್ನು ಓದಬೇಡಿ. ನಿಮ್ಮಂತೆಯೇ ಯೋಚಿಸಬಲ್ಲ ಕೆಲವು ಸ್ನೇಹಿತರನ್ನು ಪತ್ತೆ ಹಚ್ಚಲು ಪ್ರಯತ್ನಿಸಿ. ಗತಯುಗಗಳ ಅದ್ಭುತ ಲೇಖಕರಾದ ಕಾಂಟ್, ಗ್ಯೋಥೇ, ಲೆಸಿಂಗ್ ಮೊದಲಾದವರ ಕೃತಿಗಳನ್ನೂ ಇತರ ದೇಶಗಳ ಅಭಿಜಾತ ವಾಙ್ಮಯಗಳನ್ನೂ ಓದಿ. ಮ್ಯೂನಿಕ್ಕಿನ ಸುತ್ತಮುತ್ತಲಿನ ನೈಸರ್ಗಿಕ ಸೌಂದರ್ಯವನ್ನು ಆಸ್ವಾದಿಸಿ. ಒಂದು ಅರ್ಥದಲ್ಲಿ ಸದಾಕಾಲ ಅಂಗಾರಕದಲ್ಲಿ ಪರಕೀಯ ಜೀವಿಗಳ ಜೊತೆ ವಾಸಿಸುತ್ತಿರುವುದಾಗಿ ನಿಮ್ಮನ್ನು ನೀವೇ ನಂಬಿಸಿಕೊಳ್ಳಿ. ಆದರೆ ಆ ಜೀವಿಗಳ ಚಟುವಟಿಕೆಗಳಲ್ಲಿ ಯಾವುದೇ ಆಳವಾದ ಆಸಕ್ತಿ ತಳೆಯುವುದನ್ನು ಪೂರ್ತಿ ಅಳಿಸಿಹಾಕಿ. ಕೆಲವೇ ಪ್ರಾಣಿಗಳ ಸ್ನೇಹ ಬೆಳೆಸಿ. ಆಗ ನೀವು ಪುನಃ ಉತ್ಸಾಹ ಭರಿತರಾಗುವಿರಿ, ಮತ್ತು ಯಾವುದೂ ನಿಮ್ಮನ್ನು ಬಾಧಿಸಲು ಶಕ್ಯವಾಗಲಾರದು. ಕೋಮಲ ಹೃದಯಿಗಳೂ ಉದಾತ್ತ ಗುಣವಂತರೂ ಆದವರು ಸದಾ ಏಕಾಕಿಗಳು. ಇದು ಅವಶ್ಯವಾಗಿ ಹೀಗೆಯೇ ಎಂಬುದನ್ನು ನೆನಪಿನಲ್ಲಿಡಿ, ಮತ್ತು ಈ ಕಾರಣದಿಂದಲೇ ಅವರು ಸ್ವಂತ ವಾತಾವರಣದ ಪರಿಶುದ್ಧತೆಯಲ್ಲಿ ವಿಹರಿಸಬಲ್ಲವರಾಗಿದ್ದಾರೆ. ಹಾರ್ದಿಕ ಬಂಧುತ್ವದ ಭಾವನೆಯಿಂದ ನಾನು ನಿಮಗೆ ಹಸ್ತಾಲಿಂಗನವೀಯುತ್ತೇನೆ, E."

ಐನ್‌ಸ್ಟೈನ್ ಈ ಪ್ರಪಂಚದಲ್ಲಿದ್ದ ಸರ್ವಶ್ರೇಷ್ಠ ವಿಜ್ಞಾನಿ ಆಗಿದ್ದರು. ಆದರೆ ಪ್ರಪಂಚ ಹೇಗಿತ್ತೆಂದರೆ ಅವರು ಈ ಕಾಗದಕ್ಕೆ ಒಂಟಿ ಅಕ್ಷರದ Eಯಿಂದ ರುಜುವಿಕ್ಕಿದರೇ ವಿನಾ ಈ ಮುಂದಿನಂತಲ್ಲ



Printed & published by H. M. Kaujalgi on behalf of the Administrator, Loka Shikshna Trust, at Samykuta Karnatak Press, Koppikar Road, Hubli-580 020. Rept : Bombay; V. Satyamurthy Phone: 5224121 Calcutta: H. Majumdar Phone: 46-4233: Madras: K. A. Subramanian


ನಿಮಗೆ ಗೆಲುವಿನ ಆಹ್ಲಾದ
Liril
Liril
ಪೂರ್ತಿಯಾಗಿ ಹೊಸತು ಲಿರಿಲ್. ಹಸಿರಿನ ತರಂಗವಿದೆ. ನಿಂಬೆಯ
ಲವಲವಿಕೆಯ ಆಹ್ಲಾದವಿದೆ. ಪುಲಕಿತಗೊಳಿಸುವ ಲಿರಿಲ್
ನಿಮ್ಮನ್ನು ಆಹ್ಲಾದಕರ ನವಕನ್ಯೆಯನ್ನಾಗಿ ಇರಿಸುತ್ತದೆ.
ಲಿರಿಲ್
ಆಹ್ಲಾದಕರ ಸಾಬೂನು
ನಿಂಬೆಯ ಲವಲವಿಕೆಯ ಉಲ್ಲಾಸಯುತ್ತ
ಲಿಂಟಾಸ್-LR-27-1710 KN
ಹಿಂದುಸ್ತಾನ್ ಲೀವರ್ ಅವರ

KASTURI PRICE: 2-50 Regd. No. KRNG 43
Registered with the Registrar of Newspapers for India under No. 3533/57

